ರಾಗ ವಿರಾಗ

ನಿಗಮಕಲ್ಪತರೋರ್ಗಲಿತಂ ಫಲಂ ಶುಕಮುಖಾದಮೃತದ್ರವಸಂಯುತಂ ।
ಪಿಬತ ಭಾಗವತಂ ರಸಮಾಲಯಂ ಮುಹುರಹೋ ರಸಿಕಾ ಭುವಿ ಭಾವುಕಾಃ ॥

ಸಂಪಾದಕ :
ಪಂ. ಪಂಢರೀನಾಥಾಚಾರ್ಯ ಗಲಗಲಿ

ಸಮರ್ಪಣೆ

ಕನ್ನಡದ ಶ್ರೀ ಗಿರಿಯ ಸಾಹಿತ್ಯ ಶಿಖರದಲಿ
ಮೃದುಭಾವ ಪುಷ್ಕರಿಣಿಯಲಿ ಮಿಂದು ನಿಂದಿರುವ
ನವರಾತ್ರಿಯಲಿ ತನ್ನ ಶಿವಕೃತಿಯ ಕೌಶಲದಿ
ನವರಸಗಳೋಕುಳಿಯನಾಡಿರುವ ಹಾಡಿರುವ
ಶ್ರೀ ವೆಂಕಟೇಶ ಇತಿ ನಿಜನಾಮ ಸಾಧಿಸಿದ
ವಾಲ್ಮೀಕಿ ಮಾದರಿಯ ಮಾಧುರಿಯನರ್ಥಿಸಿದ
ಕನ್ನಡದ ಚೆನ್ನುಡಿಯ ಸಣ್ಣಕತೆ ದ್ರಷ್ಟಾರ
ಗೀತಕೃತಿಯಾಚಾರ್ಯ ರಸಲೋಕ ಸುಷ್ಟಾರ
ಕನ್ನಡದ ಮಹದಾಸ್ತಿ ಎನ್ನಿಸಿದ ಸಿರಿಮಾಸ್ತಿ
ಶ್ರೀ ಶ್ರೀನಿವಾಸರಿಗೆ
''ಕೃತಿರರ್ಪಿತೈಷಾಸ್ತಿ''

ಶಾರ್ವರಿಯ
ನವರಾತ್ರಿನವಮಿ — ಲೇಖಕ

ಶ್ರೀ ಪಂಢರಿನಾಥಾಚಾರ್ಯ ಗಲಗಲಿ ಅವರ ಕಥಾಶೈಲಿಯಲ್ಲಿ
ಲಾಲಿತ್ಯವಿದೆ. ಕಥೆ ಹೇಳುವ ರೀತಿಯಲ್ಲಿ ಸೊಗಸು
ಕಾಣುತ್ತಿದೆ. ಪೌರಾಣಿಕ ಕಥೆಗಳು ಆಧುನಿಕ
ಓದುಗನಿಗೆ ರುಚಿ ಎನಿಸುವಂತೆ
ಹಿತಮಿತವಾದ ವರ್ಣನೆ ಮನಸ್ಸನ್ನು
ಸೂರೆಗೊಳ್ಳುತ್ತದೆ.

ಕೃಷ್ಣಮೂರ್ತಿ ಪುರಾಣಿಕ

ಮುನ್ನುಡಿ

ರಾಮಾಯಣ–ಭಾರತಗಳಂಥ ಇತಿಹಾಸಗಳಿಂದಲೂ ಭಾಗವತಾದಿ ಪುರಾಣಗಳಿಂದಲೂ ನಮ್ಮ ಜನದ ಮನಸ್ಸು ಸಂಸ್ಕಾರಗೊಂಡಷ್ಟು ಬೇರೆ ಯಾವುದರಿಂದಲೂ ಆಗಿಲ್ಲ. ಆದರೂ ಅವುಗಳ ಪರಿಚಯ ಈಗಿನ ಕಾಲದವರಿಗೆ ಹೆಚ್ಚಾಗಿಲ್ಲ. ಅವುಗಳಲ್ಲಿ ಪ್ರೀತಿಯೂ ಆಧುನಿಕರೆನ್ನುವವರಿಗೆ ಕಡಮೆಯಾಗುತ್ತಿದೆ. ಆ ಕಾಲ, ಆ ಕಥೆಗಳ ಸನ್ನಿವೇಶ, ಸಮಯಗಳು ನಮ್ಮವಲ್ಲವಾದ್ದರಿಂದ. ಆದರೂ ಈಗಲೂ ರಾಮಾಯಣ ಭಾರತಾದಿಗಳ ಕಥೆ ವೀರ್ಯವತ್ತಾಗಿಯೇ ಇದೆ. ಅರ್ಥ ಮಾಡಿಕೊಂಡಷ್ಟು ಅವು ನಮಗೆ ಉಪಯುಕ್ತವಾದವು; ಸ್ಫೂರ್ತಿಯುತವಾದವು.

ಪುರಾಣ ಕಥೆಗಳಲ್ಲಿ ಅತಿಶಯದ ಭಾಗ, ನೀತಿಸಂಕೇತ, ಭಕ್ತಿಗಳ ಅತಿರೇಕ, ಅಸ್ವಾಭಾವಿಕವೆಂಬಷ್ಟಕ್ಕೆ ಹೋಗುವುದರಿಂದ ಬಹುಶಃ ಅವುಗಳಲ್ಲಿ ರಕ್ತಿ ಕಡಮೆಯಾಗಿರಬೇಕು.

ಇಂದಿನ ಮಕ್ಕಳಿಗಂತೂ ಪ್ರಾಚೀನರಾದ ಮಾಂಧಾತ, ಅಂಬರೀಷ, ಚ್ಯವನ, ಕಶ್ಯಪ, ರಂತಿದೇವ ಮುಂತಾದವರ ಕಥೆಗಳು ಬಹುಮಟ್ಟಿಗೆ ಗೊತ್ತಿಲ್ಲ. ಅವುಗಳ ಬೆಲೆ ಮನದಟ್ಟಾಗುವಂತೆ ಯಾರಾದರೂ ಅವುಗಳ ತಿಳಿವಳಿಕೆಯನ್ನು ಈ ಕಾಲಕ್ಕೆ ಕೊಡಬೇಕು.

ಅದನ್ನು ಹೊಸಕಾಲದವರಿಗೆ ಒಪ್ಪುವಂತೆ, ಮೆಚ್ಚಿಕೆಯಾಗಿ ಮನ ಮುಟ್ಟುವಂತೆ ಮಾಡಬೇಕಾದರೆ ಅವುಗಳಲ್ಲಿನ ಕೆಲವಂಶವನ್ನು ಬಿಡಬೇಕು. ಕೆಲವಂಶಗಳನ್ನು ತುಂಬಬೇಕು; ಮೂಲಕ್ಕೆ ಅಪಚಾರವಾಗದಂತೆ; ಅಪವಾದವಾಗದಂತೆ ಆ ರೀತಿ ಮಾಡುವುದು ಕಷ್ಟ.

ಇದ್ದುದನ್ನು ಇದ್ದಂತೆ ಬರೆಯುವುದು ಇನ್ನೊಂದು ಮಾರ್ಗ. ಇಲ್ಲಿ ಭಾಷಾಂತರ ತುಂಬಾ ನಿಷ್ಠವಾಗಬೇಕಾದೀತು; ಸಂಯಮದಿಂದ ನಡೆಯಬೇಕಾದೀತು. ಇಲ್ಲಿಯೂ ಕಥೆಯಲ್ಲಿನ ಕೆಲವಂಶಗಳನ್ನು ಸೇರಿಸಿಕೊಳ್ಳಬಹುದು, ಕೆಲವಂಶ ಬೇಡವೂ ಅನ್ನಿಸೀತು.

ಅಲ್ಲಲ್ಲಿ ನಾಡಿನ ಬಹುಮಂದಿಗೆ ಇನ್ನೂ ಪುರಾಣ ಪುಣ್ಯಕಥೆಗಳಲ್ಲಿ ಆಸಕ್ತಿ ಹೋಗಿಲ್ಲ. ಅವುಗಳನ್ನು ಹರಿಕಥೆ ಕೀರ್ತನೆಗಳಲ್ಲಿ, ಪುರಾಣ ವಸ್ತುವುಳ್ಳ ಚಲಚ್ಚಿತ್ರಗಳಲ್ಲಿಯೂ ನಾಟಕಗಳಲ್ಲಿಯೂ ನಮ್ಮವರು ಇಂದಿಗೂ ಸವಿಯುತ್ತಿರುವುದು ಸಾಮಾನ್ಯ ಜನತೆಯ ಒಲು ಆಕಡೆಯಿಂದ ಇನ್ನೂ ತಿರುಗಿಲ್ಲವೆಂಬುದಕ್ಕೆ ಸಾಕ್ಷಿ.

ಹೇಗೇ ಆಗಲಿ ಸತ್ಯವನ್ನು ರಂಜನೆಯಿಂದಲೊ, ಅತಿ ಪ್ರಮಾಣದಲ್ಲಿ ತೋರಿಸಿಯೊ, ನೀತಿ ಬೋಧನೆಯೊಂದೇ ಉಳ್ಳ ದೃಷ್ಟಿಯಲ್ಲಿಯೊ ತೋರಿಸುವ ಕಾರ್ಯ ಇಂತಹ ಪುರಾಣಕಥೆಗಳದು. ಇವುಗಳಲ್ಲಿ ಬಲವೂ ಉಂಟು, ದೌರ್ಬಲ್ಯವೂ ಉಂಟು.

ಶ್ರೀ ಪಂಢರೀನಾಥಾಚಾರ್ಯ ಗಲಗಲಿಯವರು ರಸಿಕರಾದ ಪಂಡಿತರು,

ಕನ್ನಡ ಸಂಸ್ಕೃತಬಲ್ಲವರು. ನಮ್ಮ ಪ್ರಾಚೀನಕಥೆಗಳನ್ನು ಶ್ರದ್ಧೆಯಿಂದ ವ್ಯಾಸಂಗ ಮಾಡಿರುವವರು. ಮಹಾಕಾವ್ಯಗಳ ಸಂಪ್ರದಾಯ ಅವರಿಗೆಷ್ಟು ಮಟ್ಟಿಗೆ ರಕ್ತಗತ ವಾಗಿದೆಯೆಂ ಎದನ್ನು ಅವರ ಅಲಂಕಾರ ಬದ್ಧವಾದ ವರ್ಣನೆ ಪ್ರತಿಯೊಂದರಲ್ಲಿಯೂ ಹೆಜ್ಜೆ ಹೆಜ್ಜೆಗೂ ಕಾಣಬಹುದು. ಅಂಥವರು 10–11 ಪುರಾಣ ಕಥೆಗಳನ್ನು 'ರಾಗವಿರಾಗ' ಎಂಬ ಈ ಪುಸ್ತಕದಲ್ಲಿ ಕನ್ನಡದಲ್ಲಿ ಒದಗಿಸಿದ್ದಾರೆ.

ಸೌಭರಿ, ಕಲ್ಮಾಷಪಾದ, ರಂತಿದೇವ, ಚ್ಯವನ–ಸುಕನ್ಯಾ, ಅಂಬರೀಷ' ಯೌವನಾಶ್ವ–ಮಾಂಧಾತ, ದಿತಿ–ಕಶ್ಯಪ, ಪೃಷಧ್ರ, ಮುಂತಾದವು ಇಲ್ಲಿನ ಕಥೆಗಳು. ಮನುಷ್ಯನಿಗಿಂತ ಬಹು ಎತ್ತರದವರ ಪುರಾಣ ಕಥೆಗಳು ಇವು. ರಾಗ, ವಿರಾಗಗಳು ನಮ್ಮಮ್ಮುಗಳಂಥವೇ ಆದರೂ ಅವುಗಳ ಗಾತ್ರ, ತೀವ್ರತೆ, ಸೆಳೆತ ಅತಿ ಮಾನುಷವೆಂಬಂತಿವೆ. ಋಷಿ, ದೇವತೆ, ಚಕ್ರವರ್ತಿ, ವಿಜಿಗೀಷುಗಳು ಇವರು.

ಕಾಮದ ಸೆಳೆತ, ಯೌವನದ ಅಗತ್ಯ, ಎಂಥವು ಎಂಬುದೂ ಚಪಲತೆ ಯಾವ ಯಾವ ಕೇಡಿಗೆ ಎಂಥವರ ಬಾಳನ್ನೂ ಈಡು ಮಾಡುತ್ತದೆಂಬುದೂ ರಾಗದ್ವೇಷಗಳ ಭಾರ ಎಂಥವರನ್ನೂ ಹೇಗೆ ಪೀಡಿಸುತ್ತದೆಂಬುದೂ ಈ ಕಥೆಗಳಲ್ಲಿ ವೇದ್ಯವಾಗುತ್ತದೆ.

ತಪಃ ಪ್ರಭಾವದ ಮಹಿಮೆ ಇದೆ. ಭಕ್ತನೂ, ನಿಷ್ಠನೂ ಹಿರಿಯನು ಆದ ಅಂಬರೀಷನ ಕಥೆ ಇದೆ. ಎಷ್ಟು ತಪೋ ನಿಯಮಗಳಲ್ಲಿದ್ದರೂ ಕಾಮ ಮೋಹ ಹುಟ್ಟಿದಾಗ ಅದು ಕದಲೀತೆಂಬುದಕ್ಕೆ ಸೌಭರಿಯ ಕಥೆ ಇದೆ. ಪುನಃ ತನ್ನ ತೃಪ್ತಿಯಿಂದ ವಿವೇಕ, ವಿರಕ್ತಿ ಹುಟ್ಟಿದ್ದಕ್ಕೂ ಅದೇ ಸಾಕ್ಷಿ.

ರಂತಿದೇವನ ನಿಃಸ್ವಾರ್ಥದಾನದ ಕಥೆ ಭಾಗವತದಲ್ಲಿ ಪ್ರಖ್ಯಾತವಾದದ್ದು. ಬೋಧಿಸತ್ವನ ಕಥೆಗಳಂಥದು ಅದು. ಹರಿಶ್ಚಂದ್ರ, ಪುರು, ರಂತಿದೇವ ಇಂಥ ಕಥೆಗಳಲ್ಲಿ ಅತಿಗೆ ತೆಗೆದುಕೊಂಡು ಹೋಗಿತತ್ವವನ್ನು ಪ್ರತಿಪಾದಿಸುವ ಗುಣ, ಲಕ್ಷಣ ಇರುತ್ತದೆ.

ಹೆಣ್ಣು ಹೇಗೆ ಕಾಮ ಸಾಧನವೊ, ಭೋಗ ಭೂಮಿಯೊ, ಹಾಗೆಯೇ ತಾಯಾಗಿ, ಮಡದಿಯಾಗಿ, ಮಗಳಾಗಿ, ಎಷ್ಟು ದೊಡ್ಡ ಔದಾರ್ಯವನ್ನೂ, ತ್ಯಾಗವನ್ನೂ, ವೀರನಿಷ್ಠೆಯನ್ನೂ ಮೆರಸಿ ತನ್ನನ್ನೂ, ತನ್ನವರನ್ನೂ ಬದುಕಿಸಬಲ್ಲಳೆಂಬುದಕ್ಕೆ ಸ್ಥವಿಷ್ಠೆ, ಮದಯಂತಿ, ಸುಕನ್ಯೆ, ಗೌರಿ, ಮಂಡೋದರಿ, ಬಿಂದುಮತಿ, ದಿತಿ, ವೇದವಲ್ಲಿ, ಎಲ್ಲರೂ ನಿದರ್ಶನವಾಗುತ್ತಾರೆ. ಅವರ ಬಾಳಿಗೆ ಬಂದ ಸಮಸ್ಯೆಗಳೇನು? ಅವನ್ನು ಅವರ ದೊಡ್ಡ ತನ ಹೇಗೆ ಪೂರೈಸುತ್ತಿದೆ ಎಂಬುದನ್ನು ಓದಿ ತಿಳಿಯಬೇಕು.

ನನ್ನ ಮನಸ್ಸಿಗೆ ಸುಕನ್ಯೆ–ಚ್ಯವನ–ಅಶ್ವಿನಿ ಕುಮಾರರ ಕಥೆ ತುಂಬಾ ಹಿಡಿಯುತ್ತದೆ. ಈ ಕಥೆಗೂ ಮಹಾಭಾರತದಲ್ಲಿನ ಕಥೆಗೂ ಭಾಗವತದಲ್ಲಿ, ಪುರಾಣಗಳಲ್ಲಿ, ಇರುವದಕ್ಕೂ ಅಲ್ಪ ಸ್ವಲ್ಪವ್ಯತ್ಯಾಸಗಳಿವೆ. ಆದರೆ ಅವುಗಳ ಗಮ್ಯಧರ್ಮ ಒಂದೇ. ಒಂದು ಕಡೆ ಸುಕನ್ಯೆಯ ಕರ್ತವ್ಯಬುದ್ಧಿ, ಪತಿಪರಾಯಣತೆ ಅನ್ಯಾದೃಶವಾದರೆ ತನಗೆ ಉಪಕಾರ ಮಾಡಿದ ಅಶ್ವಿನೀದೇವತೆಗಳಿಗೆ ಇದ್ದ

ಹೀನಾಯವನ್ನು ತಪ್ಪಿಸಿ, ಯಜ್ಞದಲ್ಲಿ ಇಂದ್ರಾದಿಗಳಿಗೆ ಸಮಾನ ಸ್ಥಾನವನ್ನು ಗಳಿಸಿಕೊಟ್ಟು ಒಂದು ಹೊಸ ಮಾನ ಕಲ್ಪಿಸಿದ ಚ್ಯವನರ ಭಾತಿಯ ಕತೆ ಅತ್ಯಾಧುನಿಕ ವೀರ್ಯವುಳ್ಳದ್ದು. ಬಹುಶಃ ಇನ್ನೊಂದು ಸ್ವರ್ಗವನ್ನು ಕಲ್ಪಿಸುವುದರಲ್ಲಿಯೂ, ಕ್ಷತ್ರಿಯನ ಹೊಟ್ಟೆಯಲ್ಲಿ ಬ್ರಾಹ್ಮಣ ಹುಟ್ಟುವಂತೆ ಅನುಗ್ರಹಿಸಿದ ಈ ಮಹಾತ್ಮ ನಮ್ಮ ನಾಡಿನ 'ಪ್ರೊಮೆಥಿಯುಸ್' ಆಗುತ್ತಾನೆ. ಚ್ಯವನ, ಕಶ್ಯಪ, ಪೃಷಧ್ರ ಮುಂತಾದವರ ಕಥೆಗಳ ಅರ್ಥ ಸಂಕೇತವನ್ನು ಆಧುನಿಕರು ಇನ್ನೂ ಬಳಸಿಕೊಂಡಿಲ್ಲ.

ಎಲ್ಲ ಕಥೆಗಳನ್ನು ಹೇಳುವುದರಲ್ಲಿಯೂ ಶ್ರೀ ಗಲಗಲಿಯವರ ಶ್ರದ್ಧೆ, ಅವರ ಕಾವ್ಯಪರಿಶ್ರಮ ವ್ಯಕ್ತವಾಗುತ್ತದೆ. ಬರವಣಿಗೆಯಲ್ಲಿ ನಮ್ಮ ಪ್ರಾಚೀನ ಕಾವ್ಯ ಸಂಪ್ರದಾಯದ ಅರಿವು ಚೆನ್ನಾಗಿ ಆಗುತ್ತದೆ. ಶೈಲಿ, ದೃಷ್ಟಿ, ಯಾವ ಬಗೆಯದೇ ಆಗಲಿ ಈ ಬರವಣಿಗೆಯಲ್ಲಿ ತನ್ನದೇ ಆದ ಒಂದು ಕಾಂತಿ ಇದೆ.

ಇದನ್ನು ನಮ್ಮ ಜನರು ಓದಿ ಪ್ರಾಚೀನ ಮಹನೀಯರಲ್ಲಿ ಕೆಲವರ ಕಥಗಳನ್ನಾದರೂ ಅರಿಯಲೆಂದು ಹಾರೈಸುತ್ತೇನೆ.

ಶಾರ್ವರಿ ನವರಾತ್ರಿ
ದಿ.26–9–1960

ವಿ. ಸೀತಾರಾಮಯ್ಯ
ಬೆಂಗಳೂರ

ಲೇಖಕನ ನಿವೇದನೆ

ಭಾಗವತ ಒಂದು ಪುರಾಣಗ್ರಂಥವಾದರೂ ರಸಗ್ರಂಥಿಯಾಗಿದೆ. ಅದರ ಗುರಿ ಕೈವಲ್ಯವಾದರೂ ಗತಿ ಸಾಹಿತಿಕವಾಗಿದೆ. ಮೋಕ್ಷೋಪಾಯವನ್ನು ಕೂಡ ದ್ರಾಕ್ಷಾಪಾಕದಲ್ಲಿಯೇ ನಿರೂಪಿಸುವ ಅದರ ವಾಚೋ ವೀಚಿಗಳಲ್ಲಿ ಮಧು ಮಾಧುರಿಯು ಮಡುಗಟ್ಟಿ ನಿಂತುಕೊಂಡಿದೆ. ಯುಗಯುಗಗಳ ಅನುಭವದ ಆಗರವೆಲ್ಲ ಇಲ್ಲಿಯ ಕಥಾಸಾಗರದಲ್ಲಿ ತುಳುಕಿ ತೆರೆ ತೆರೆದಿದೆ. ಭಾಗವತದ ಪ್ರಕೃತಿ ಪುರಾಣದ್ದಾದರೂ ಆತ್ಮ ಕಾವ್ಯಮಯವಾಗಿದೆ. ಅದರ ಮಾತಿನಲ್ಲಿ ಸಾಹಿತ್ಯವಿದ್ದರೆ ರೀತಿಯಲ್ಲಿ ಸಂಗೀತವಿದೆ. ಭಾವಸಂಭೃತವಾದ ಇದರ ಕಾವ್ಯಗಂಧಿ ಪದ್ಯಪದ್ಧತಿಯಿಂದ ಇಲ್ಲಿಯ ವೇದಾಂತವೇದಿಕೆಯಲ್ಲಿ ರಸದ ರಂಗ ಸ್ಥಲವೊಂದು ಏರ್ಪಟ್ಟಿದೆ. ಇಲ್ಲಿಯ ಅನೇಕ ದೃಶ್ಯಗಳು ನಾಟಕೀಯ ಹದಹವಣುಗಳಿಗೆ ಹೊಂದಾಣಿಕೆಯಾಗುವಷ್ಟು ಸುಸಂಬದ್ಧ ಘಟನಾಚಮತ್ಕೃತಿಗಳಿಂದ ಪೂರ್ಣವಾಗಿವೆ.

ಆ ನಾಟ್ಯ ಸಂವಿಧಾನಗಳಲ್ಲಿಯೂ ವಾಸ್ತವಿಕತೆ ಎದ್ದು ತೋರುತ್ತದೆ. ಈ ಎಲ್ಲ ನಾಟ್ಯಕಥಾ ಸಂದರ್ಭಗಳ ಜೀವಾಳವಾಗಿ ಅನುಭವ ಅನುಸ್ಯೂತವಾಗಿದೆ. ಹೀಗೆ ನಾಟಕೀಯ ಸನ್ನಿವೇಶ, ಘಟನಾಚಮತ್ಕೃತಿ, ಅನುಭೂತಿ ಪರಂಪರೆ, ಮಾತಿನ ಮೋಡಿ, ಗೀತಗುಂಜಾರವ, ಹಾಗೂ ಭಾವ ನಿರ್ಭರತೆಗಳೆಲ್ಲ ಸತ್ಯತತ್ವಗಳ ಹಿಮ್ಮೇಳವಾಗಿ ಇದರ ಒಮ್ಮೈ ಹಮ್ಮುಗೆಯಲ್ಲಿ ಹೊಂದಿಕೊಂಡು ಬಂದದ್ದರಿಂದ ಇದೊಂದು ಕಾವ್ಯಶಾಸ್ತ್ರ ವಿನೋದವಾಗಿದೆ. ವೇದಾಂತ ಕಾವ್ಯವಾಗಿದೆ. ತತ್ವಗೀತವಾಗಿದೆ. ಸತ್ಯಸಾಹಿತ್ಯವಾಗಿದೆ. ಸೌಂದರ್ಯ ಸಂಹಿತೆಯಾಗಿದೆ. ರಸದ ಉಪನಿಷತ್ತಾಗಿದೆ. ನಿರಂಕನಾಟಕವಾಗಿದೆ. ಭಾವಗೀತೆಗಳ ಸಂಗ್ರಹವಾಗಿದೆ.

ಗಹನವಾದ ತತ್ವಗಳನ್ನು ದೊಡ್ಡವರ ಭಕ್ತ ಅನುಭವದ ಸತ್ವಯುತವಾದ ಹಿನ್ನೆಲೆಯಲ್ಲಿ ಸರಸವಾಗಿ ನಿರೂಪಿಸಿದ್ದರಿಂದ ಉದ್ದೇಶವಿಲ್ಲದಿದ್ದರೂ ಕಥಾ ತಂತ್ರ ಇಲ್ಲಿ ಸಿದ್ಧಿಯನ್ನು ಪಡೆದು ನಿಂತಿದೆ. ಹಿಂದಿನ ಕಾಲದ ಜನರ ಬದುಕಿನ ವೈಚಿತ್ರ್ಯ, ತ್ಯಾಗ–ತಿತಿಕ್ಷೆ, ರಾಗ–ವಿರಾಗ, ಭೋಗ–ಯೋಗಗಳು ಆ ಪುರಾಣ ಪುರುಷರ ವಾಸ್ತವ ಜೀವನದಲ್ಲಿಯೇ ಕತೆಕಾದಂಬರಿಗಳ ಅದ್ಭುತ ರಮ್ಯತ ಸತ್ಯಾರ್ಥವಾಗಿ ತಲೆದೋರುವಂತ ಮಾಡುತ್ತವೆ. ನಮ್ಮ ಕಲ್ಪನಾ ಕೈಲಾಸದ ಯಕ್ಷಮಂದಾರಗಳೆಲ್ಲ ಅಲ್ಲಿಯದಿವ್ಯಾನುಭೂತಿಯ ಸತ್ಯಸಂಗತಿಗಳಾಗಿ ಅರಳಿ ನಿಂತಿದುದರಿಂದ ನಮ್ಮ ಮಿತಮತಿಗೆ ಅವೆಲ್ಲ ಕಟ್ಟು ಕತೆಗಳಂತೆ ಕಾಣುತ್ತವೆ.

ಅವುಗಳು ಕಟ್ಟು ಕತೆಯಂತಿದ್ದರೂ ಹುಟ್ಟು ಮಾತ್ರ ಕಾಲ್ಪನಿಕವಲ್ಲ. ಆದುದರಿಂದಲೇ ಎಷ್ಟೋ ರಚನೆಗಳು ಕಥಾಲಕ್ಷಣದ ತಂತ್ರತೂಕಗಳಿಗೆ ಹೊಂದಿಕೆಯಾಗದೆ ಉಳಿದಿರುವವು. ದಿವ್ಯ ಜೀವನದ ಬಾನಗಲವಾದ ಬದುಕನ್ನೆಲ್ಲ

ಅಪ್ಪಿ ನಿಂತಿರುವ ವಿರಾಟ್ ಸತ್ವವನ್ನು ಗುರುತಿಸುವದು ಸಂಕ್ಷೇಪ ಶಾರೀರಕ್ಕೆ ಸೆರೆಯಾಗಿ ಸೋತು ಸವೆದು ನಿಂತ, ಶೀರ್ಣಸತ್ಯಾಪರೋಕ್ಷಿಗಳಾದ ನಮ್ಮಂಥವರ ಬಡಕಲ ಬುದ್ಧಿಗೆ ಹೇಗೆ ಸಾಧ್ಯವಾದೀತು?

ಭಗವಂತನ ವಿಶ್ವರೂಪವನ್ನು ಕಾಣಲರಿಯದ ಅಂಧಪುತ್ರನಾದ ದುರ್ಯೋಧನ ಪರಮಾತ್ಮನ ಆ ಬಹು ರೂಪಗಳನ್ನೆಲ್ಲ ಇದೊಂದು ಇಂದ್ರ ಜಾಲವೆಂದು ಜರೆದಂತೆ ಮಹಾಪುರುಷರ ತ್ಯಾಗಜೀವನದ ಯೋಗ ಯಾಗಗಳ ದುರಂತದೀಪ್ತಿ ಸುಖಾಂತ ವಿರಕ್ತಿ, ತ್ಯಾಗಮುಖಭೋಗ, ರಾಗಾನುವರ್ತಿವಿರಾಗ, ಪ್ರಾಣಾರ್ಪಣೆಯ ಔದಾರ್ಯ ಮೊದಲಾದ ಸದ್ಗುಣಗಳು ಅತ್ಯುಚ್ಚತೆಯ ಚರಮ ಸೀಮೆಯಲ್ಲಿ ಸತ್ಯಾರ್ಪಿತವಾಗುತ್ತಲಿರುವದನ್ನು ಕಂಡೂಕಾಣದ ಕೇಳಿಯೂ ನಂಬಲಾರದ ನಾವು ಅದನ್ನು ''ಪುರಾಣ ಪ್ರಪಂಚ'' ಅರ್ಥಾತ್ ಸುಳ್ಳಿನ ಸಂಸಾರ ಎಂದು ಉಪೇಕ್ಷೆಯಿಂದ ನೋಡುತ್ತೇವೆ.

ಆದರೆ ಭಾವುಕ ದೃಷ್ಟಿಯಿಂದ ಆ ದೈವಿಕ ಜೀವನದ ಯಥಾರ್ಥಚಿತ್ರವನ್ನು ಹೃದಯದ್ರಾವಕವಾದ ರೀತಿಯಲ್ಲಿ ನಿರೂಪಿಸುವ ಭಾಗವತಾದಿ ಗ್ರಂಥಗಳನ್ನು ಪರಿಕಿಸಿದಾಗ ಅಲ್ಲಿಯ ಧೀರ ವೀರ, ಸಾರ ಶೃಂಗಾರ, ಅಪಾರಕರುಣೆ, ಅಸೀಮ ವಾತ್ಸಲ್ಯ, ಮಧುರಭಕ್ತಿ, ವಿನಯ ವಿರಕ್ತಿಗಳನ್ನು ಕಂಡು ಮನಸ್ಸು ಬೆಕ್ಕಸ ಬೆರಗಾಗಿ ನಿಲ್ಲುತ್ತದೆ.

ದಶಮಸ್ಕಂದದಲ್ಲಿ ಬರುವ ಕೃಷ್ಣಕಥೆಯೊಂದು ಅವಿರತರಸದ ಒರತೆ, ಆನಂದತೀರ್ಥ, ಶೃಂಗಾರ ವೈರಾಗ್ಯಗಳ ಮಧುಸಂಗಮ. ಅದನ್ನು ಓದಿದಾಗ ನಮ್ಮ ಮನದ ಕಾಮ ಕಳೆಯುತ್ತದೆ. ಕಲ್ಮಷ ತೊಳೆಯುತ್ತದೆ ಭಕ್ತಿ ಕುದುರುತ್ತದೆ. ತೃತೀಯ ಸಪ್ತಮ ಏಕಾದಶಗಳ ತತ್ವವಾದ ಚಿತ್ತಶೋಧ ಮಾಡಿ ಆತ್ಮ ಬೋಧವುಂಟಾಗುವಂತೆ ಮಾಡುತ್ತದೆ. ಇತರ ಸ್ಕಂದಗಳಲ್ಲಿಯೂ ಬರುವ ಪ್ರಾರ್ಥನೆ ವರ್ಣನೆ ಕಥಾನಿರೂಪಣೆಗಳು ತತ್ತ್ವಾರ್ಥದ ತಿರುಳನ್ನು ತಿಳಿಸಿ ಕೊಡುತ್ತವೆ. ದಿವ್ಯಜೀವನದ ಹುರುಳನ್ನು ಹೊರಗಿಡುತ್ತವೆ.

ಇಲ್ಲಿ ಹೇಳಿರುವ ತಾತ್ವಿಕ ಉಪದೇಶಕ್ಕೆ ಸಜೀವ ದೃಷ್ಟಾಂತವಾಗಿ ಬರುವ ಸಾತ್ವಿಕ ಜೀವನಗಳ ಬದುಕಿನ ಬಗೆ, ಬಾಳಿನ ಪರಿಗಳು ಧ್ಯೇಯನಿಷ್ಠವಾದ ಆದರ್ಶ ಜೀವನವನ್ನು ಬದುಕಬೇಕೆನ್ನುವವರಿಗೆ ಪ್ರೇರಣಕಾರಣವಾಗುತ್ತವೆ. ಸ್ಫೂರ್ತಿ ಪ್ರಚೋದಕವಾಗುತ್ತವೆ.

ಇಲ್ಲಿ ಬರುವ ದೈವೀಪುರುಷರ ವಿಸ್ಮಯಭರಿತವಾದ ಚಾರುಚರಿತ್ರೆಗಳು ಲೋಕೋತ್ತರವಾಗಿದ್ದರೂ, ನಮ್ಮಂತೆಯೇ ಅವರಾದರೂ ರಾಗದ್ವೇಷಗಳ ಆಕರ್ಷಣೆ ವಿಕರ್ಷಣೆಗೆ ಒಳಗಾಗಿ, ಮಮತೆ ಮೋಹಗಳ ಎಳೆತ ಸೆಳೆತಗಳಲ್ಲಿಸಿಕ್ಕು,

ಅರ್ಥಕಾಮಗಳ ಸುಳಿ ಸೆಳವುಗಳಲ್ಲಿ ಪರಿಭ್ರಮಣೆಯನ್ನು ಹೊಂದಿ, ಬವಣೆ ಬಡುವದನ್ನು ಕಂಡಾಗ ಅವರ ಎತ್ತರವೂ ನಮಗೆ ಹತ್ತಿರವೇ ಎನಿಸುವುದು. ಅವರ ಯಕ್ಷಪುರಗಳಲ್ಲಿಯೂ ನಮ್ಮ ಮನಸ್ಸು ಮೇಘದೂತವಾಗಿ ಹರಿದಾಡಿಬರುತ್ತದೆ.

ಗತಕಾಲದ ಪುಲಿನ ಪಥದಲ್ಲಿ ಎಂದೋ ನಡೆದುಹೋದ ಅವರ ಮೂಡಿದ ಹೆಜ್ಜೆಗಳು ಇಂದಿಗೂ ಗೆಜ್ಜೆ ನುಡಿಸುತ್ತವೆ. ಅವುಗಳ ಕಿಂಕಿಣಿ ನಿನಾದ ಬಾಳಿನ ದಾರಿಯಲ್ಲಿಯವ ಹಾಳು ಬೀಳುಗಳಿಂದ ಬರಬಹುದಾದ ಗೋಳು ಗಂಡಾಂತರಗಳನ್ನು ಗುರುತಿಸಿ ಮಾನವರಿಗೆ ಮುನ್ಸೂಚನೆಯನ್ನು ಕೊಡುವ ಎಚ್ಚರಿಕೆಯ ಗಂಟೆಗಳಾಗಿ ಪರಿಣಮಿಸುತ್ತವೆ. ಆ ಸಂಕಟದ ಸುಳಿಯಿಂದ ಪಾರಾಗುವ ಬಗೆಯನ್ನು ತಿಳಿಸಿ ಮುಂದಿನ ಮಾರ್ಗದಲ್ಲಿ ಬೆಳಕುಚೆಲ್ಲುವ ದಾರಿ ದೀಪವಾಗಿ ನಿಲ್ಲುತ್ತವೆ.

ಈ ದೃಷ್ಟಿಯಿಂದ ನೋಡಿದಾಗ ಭಾರತ ಭಾಗವತಾದಿ ಪೌರಾಣಿಕ ಗ್ರಂಥಗಳು ಕೂಡ ಸಾಮಾಜಿಕ ಸಾಹಿತ್ಯವೆಂದೇ ಹೇಳಬೇಕಾಗುತ್ತದೆ. ಮುಂದೆ ಇವುಗಳಿಂದ ಚಿತ್ತರಂಜನದ ಜೊತೆಗೇ ಆತ್ಮಶೋಧನವೂ ಪುಣ್ಯಸಾಧನವೂ ಆಗಿ ಅವು ಮುಕ್ತಿ ಗೀತಗಳೂ ಆಗುತ್ತವೆ. ಈ ತರಹದ ಪೌರಾಣಿಕ ಸಾಹಿತ್ಯ ವಾಟಿಕೆಯಲ್ಲಿ ಅರಳಿದ ಕಥಾ ಕುಸುಮಗಳ ಮಧುಕೋಶಗಳಿಗೆಲ್ಲ ಮಾನವೀಯ ಅನುಭವದ ಅಕ್ಷಯ ನಿಧಿಯಿಂದಲೇ ನಿರಂತರ ರಸ ಪೂರಣವಾಗುತ್ತಲಿರುವದರಿಂದ ಎಲ್ಲ ಕಾಲದ ಜನರಿಗೂ ಅವುಗಳಲ್ಲಿ ಆತ್ಮೀಯ ಭಾವ ಮೂಡಿ ರುತ್ತದೆ.

ರಸರಮ್ಯವಾದ ಇಂಥ ಭಾವಗಮ್ಯ ಕಥಾನಕಗಳನ್ನು ಶ್ರದ್ಧೆಯಿಂದಲೂ ರಸಕೌತೂಹಲದಿಂದಲೂ ಓದುತ್ತ ಹೋದಂತೆ ''ದಿವ್ಯಂದದಾಮಿ ತೇ ಚಕ್ಷುಃ'' ಎಂಬಂತೆ ವ್ಯಾಸವಾಣಿ ಒಂದು ಹೊಸದಾದ ರಸದೃಷ್ಟಿಯನ್ನೇ ಓದುಗರಿಗೆ ಒದಗಿಸಿಕೊಡುತ್ತದೆ ಆ ದೃಷ್ಟಿಪ್ರಸಾದದ ಬಲದಿಂದ ನಾವು ಚರ್ಮಚಕ್ಷುಸ್ಸಿಗೆ ಆಗೋಚರ ಆಸತ್ಯವೆನ್ನಿಸಬಹುದಾದ ವಿರಾಟ್ ಸತ್ಯದ ಮಹತೋಮಹೀಯರೂಪವನ್ನಾಗಲಿ ಅಣೋರಣೀಯವಾದ ಸುಸೂಕ್ಷ್ಮಸ್ವರೂಪವನ್ನಾಗಲಿ ಸಹಜವಾಗಿ ಕಾಣಲು ಸಮರ್ಥರಾಗುತ್ತೇವೆ. ಮಹಾತ್ಮರ ಪಾವನ ಚರಿತಗಳ ಸಶ್ರದ್ಧ ಸಮೀಕ್ಷೆಯಿಂದ ನಮ್ಮ ದೃಷ್ಟಿ ಅಲ್ಪತೆಯನ್ನು ಕಳೆದುಕೊಂಡು ಭೂಮಾನುಭೂತಿಯ ಸತ್ಯಾಪರೋಕ್ಷಕ್ಕೆ ಸಿದ್ಧವಾಗಿ ನಿಂತುಕೊಳ್ಳುತ್ತದೆ. ಸಂತ್ಯಸಂಗಿಯಾದ ಆ ದಿವ್ಯ ಸಂಸ್ಕಾರದಿಂದ ಸಾಮಾನ್ಯರ ದೃಷ್ಟಿ ಸಟೆಯೆಂದು ತೋರಬಹುದಾದ ಅತಿಮಾನುಷಕೃತಿಗಳನ್ನೂ ಮಹಚ್ಚ ಮತ್ಕೃತಿಗಳನ್ನೂ ಆ ಬೃಹತ್ಸತ್ಯದ ಆವಿಷ್ಕಾರದ ಒಂದು ಮಾದರಿಯೆಂದು ನಂಬಿ ನಿಲ್ಲುತ್ತದೆ. ಕ್ಷುದ್ರಶಂಕೆ ಛಿದ್ರದಿದೃಕ್ಷೆಗಳ ಉಚ್ಛೃಂಖಲ ವಿಮರ್ಶೆಗಳು ಆ ಸತ್ಯ ಬೋಧದಿಂದುಂಟಾದ ವಿವೇಕಾನಂದವನ್ನು ಕಳೆಯಲಿಕ್ಕಾಗಲಿ ತೊಳೆಯಲಿಕ್ಕಾಗಲಿ ಸಮರ್ಥವಾಗುವದಿಲ್ಲ ಆ ಪಾವನ ಭಾವನೆಯಲ್ಲಿ ಸೌಭರಿಯರಾಗವಿರಾಗ ಸ್ಥವಿಷ್ಠೆಯ ದೇಹತ್ಯಾಗ, ಮದಯಂತಿಯ ದಿವ್ಯಾನುಭಾವ,

ರಂತಿಯ ಆತ್ಮಸಮರ್ಪಣ, ಅಂಬರೀಷನ ಚಕ್ರಚಮತ್ಕಾರ, ಚ್ಯವನರ ಕಾಯಕಲ್ಪ, ಗೌರಿಯ ಆತ್ಮಘಾತಕ ಔದಾರ್ಯ, ಶಶಿಬಿಂದುವಿನ ಸೇಡಿನ ಶಾಂತಿ, ದಿತಿಯ ರತಿವಾಸನೆ, ಪೃಷಧ್ರನ ಅಗ್ನಿದಿವ್ಯ, ವೊದಲಾದ ಅಲೌಕಿಕ ಘಟನೆಗಳಲ್ಲಿ ಯಾವದೂ ನಮಗೆ ಅಸ್ವಾಭಾವಿಕ ಎನಿಸುವದಿಲ್ಲ.

ಇಂಥ ಹೃದಯಂಗಮವಾದ ಚಿತ್ತಪರಿಪಾಕಕ್ಕೆ ಕಾರಣೀ ಭೂತವಾದ ಭಾಗವತದ ದಿವ್ಯ ಕಥೆಗಳನ್ನು ಓದಿದಾಗಲೆಲ್ಲ ನನ್ನ ಮಾನಸದಲ್ಲಿ ಆನಂದದ ಊರ್ಮಿಗಳು ಉಕ್ಕೇರಿ ಮಾತು ಮೂಕವಾಗಿ ಮನಸ್ಸು ವಾಚಾಲವಾಗುತ್ತಿತ್ತು, ಅದರಿಂದ ನಾನು ಅದರ ಬಗೆಗೆ ಕೇಳಿದವರೆಲ್ಲರ ಎದುರು ಮೂಕ ಸಕ್ಕರೆಯ ಸವಿಯನ್ನು ಬಣ್ಣಿಸಿದಂತೆ, ಕುಂಟ ವೈಕುಂಠದ ದಾರಿ ತೋರಿದಂತೆ ''ಭಾಳ ಛಲೊ'' ''ಭಯಂಕರ ಛಂದ'' ''ಭಾರಿ ಕಥೆ'' ಎಂದಿಷ್ಟೇ ತೊದಲು ತೊದಲಾಗಿ ದೇಶಿ ನುಡಿಯಲ್ಲಿ ಹೇಳಿ ನನ್ನ ಭಾಗವತದ ಬಗೆಗಿರುವ ಅಗಾಧ ಶ್ರದ್ಧೆಯನ್ನು ವ್ಯಕ್ತಪಡಿಸುತ್ತಿದ್ದೆ.

ಆದರೆ ನನ್ನ ಗೆಳೆಯರಾದ ಶ್ರೀ ಹುಲಿಗಿಯವರು ಭಾಗವತದ ಕೆಲವು ಕತೆಗಳನ್ನು ಆಯ್ದು ಕನ್ನಡಿಸಿ ಕೊಡಬೇಕೆಂದು ಕೇಳಿದಾಗ ಕನ್ನಡದಲ್ಲಿ ಬರೆಯುವ ವ್ಯವಸಾಯವಿಲ್ಲದ್ದರಿಂದ ವೊದಲು ನಾನು ಹಿಂದು ಮುಂದು ನೋಡಿದೆ. ಆದರೆ ನನ್ನ ಮಿತ್ರರ ಒಲುಮೆ ನನ್ನನ್ನು ಬಲವಂತದಿಂದ ಬರೆಯಹಚ್ಚಿತು.

ಅವರ ಅಪೇಕ್ಷೆಯಂತೆ ಭಾಗವತದ ಕೆಲ ಕತೆಗಳನ್ನು ಹೆಚ್ಚಾಗಿ ನವಮಸ್ಕಂದದ ನಲ್ಗತೆಗಳನ್ನು ಆಯ್ದುಕೊಂಡು ಸಾಧ್ಯವಾದಷ್ಟು ಆಧುನಿಕ ಕಥಾತಂತ್ರಕ್ಕೆ ಒಗ್ಗುವಂತೆ ಹಿಗ್ಗಿಸಿ ಕೆಲವು ಕಡೆ ಮೂಲಕ್ಕೆ ಅಪಚಾರವಾಗದಂತೆ ತಗ್ಗಿಸಿ ಇಲ್ಲಿ ಕೊಡಲಾಗಿದೆ.

ಇಲ್ಲಿ ಸಂಕ್ಷಿಪ್ತವಾಗಿ ಉಲ್ಲಿಖಿತವಾದ ಕತೆಗಳಿಗೆ ಪುರಾಣಾಂತರಗಳಲ್ಲಿ ಪರಿಷ್ಕಾರ ದೊರಕಿದಾಗ ಅವೆಲ್ಲವುಗಳನ್ನು ಜೋಡಿಸಿ ಕತೆಯ ಚೌಕಟ್ಟಿನಲ್ಲಿ ಕೂಡಿಸಿ ಒಂದು ರಸರೂಪವನ್ನು ಕೊಡಲು ಯತ್ನಿಸಲಾಗಿದೆ. ಕೆಲವು ಕತೆಗಳಲ್ಲಿ ಭಾಗವತವನ್ನು ಭಿತ್ತಿಯಾಗಿ ಇಟ್ಟುಕೊಂಡು ಕಲ್ಪನೆಯ ಕುಂಚವಿಡಿದು ಒಂದು ಚಿತ್ರಕೂಟವನ್ನು ರಚಿಸಲು ಹವಣಿಸಿದ್ದಾಗಿದೆ.

ಮತ್ತೆ ಕೆಲವು ವ್ಯಕ್ತಿಗಳ ನಾಮೋಲ್ಲೇಖ ಅಥವಾ ಕಥಾಸೂಚಿ ಮಾತ್ರ ಭಾಗವತದಲ್ಲಿ ಇದ್ದರೂ ಬೇರೆ ಪುರಾಣಗಳಲ್ಲಿ ಆ ಕಥೆಗೆ ಕೌತುಕದ ಕವಲೊಡೆದು ವೃತ್ತ ವಿಸ್ತಾರಗೊಂಡಿದ್ದರೆ ಅದನ್ನು ಇಲ್ಲಿ ಹೊಂದಿಸಿಗೊಂಡು ಆ ಘಟನಾಯಷ್ಟಿಯ ಮೇಲೆಯೇ ಕತೆಯ ಲತೆಯನ್ನು ಹಬ್ಬಿಸಲಾಗಿದೆ. ಒಟ್ಟಾರೆ ಇದು ಭಾಗವತದ ಶಬ್ದಾನುವಾದ ಅಥವಾ ಸರಳಾನುವಾದವಲ್ಲ, ಇದೊಂದು ಭಾಗವತ ಪ್ರೇರಿತ ಕಥಾಸಂಕಲನ.

ಇಲ್ಲಿಯ ಪೌರಾಣಿಕ ಕತೆಗಳಲ್ಲಿ ಏನೇ ಆವಾಪ ಉದ್ವಾಪಗಳನ್ನು ಮಾಡಿದರೂ ಮೂಲದ ಉದ್ದೇಶಕ್ಕೆ ಅಪೋಹ ಬಾರದಂತೆ ಮತ್ತು ಮುಖ್ಯ ಘಟನಾ ಸನ್ನಿವೇಶಗಳು ಉತ್ಸೂತ್ರವಾಗದಂತೆ ಆ ಪವಿತ್ರ ಸಾಹಿತ್ಯವನ್ನು ಪರಿಶೀಲಿಸಿ ಬರೆಯಲಾಗಿದೆ. ಸಹೃದಯರಾದ ಕನ್ನಡಿಗರಲ್ಲಿ ಇದನ್ನು ಓದಿ ಪೌರಾಣಿಕ ಸಾಹಿತ್ಯದ ರಸರುಚಿಗಳನ್ನು ಸವಿಯಲು ಆದರ ಆತುರಗಳು ಹುಟ್ಟಿದರೆ ನನ್ನ ಶ್ರಮ ಸಾರ್ಥಕವೆಂದು ಬಗೆಯುತ್ತೇನೆ.

ಈ ಗ್ರಂಥಕ್ಕೆ ಹಾಳು ಹಂಪೆಯಲ್ಲಿ ಕಲ್ಲುಮಣ್ಣಿನಲ್ಲಿ ಮೂಲೆಗುಂಪಾದ ಕನ್ನಡಿಗರ ಸಾಮ್ರಾಜ್ಯ ಸಿರಿ ಸಂಪದಗಳ ಸೊಂಪು ಸೌಭಾಗ್ಯಗಳನ್ನು ಕಂಡರಿಸಿದ ಕನಸಿಗ ಕವಿ ಶಬ್ದ ಪ್ರಪಂಚದಂತೆ ಅರ್ಥಪ್ರಪಂಚದಲ್ಲಿಯೂ ಪರಿಣತಪ್ರತಿಭ ಧೀಮಂತ ಸಾಹಿತಿ ಶ್ರೀಮಾನ್ ವೀ.ಸೀತಾರಾಮಯ್ಯನವರು ಮುನ್ನುಡಿಯನ್ನು ಬರೆದು ಕೊಟ್ಟದ್ದಕ್ಕಾಗಿ ಅವರಿಗೂ ಮತ್ತು ಸಹೃದಯತೆಯಿಂದ ಇದನ್ನು ಓದಿ ಆನಂದಪಟ್ಟ ಹಿರಿಯ ಕವಿ ಕಥಾಚಾರ್ಯ ಶ್ರೀ ಮಾಸ್ತಿಯವರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸದಿರಲಾರೆ.

ಈ ಗ್ರಂಥವು ಹೊರಬರಲು ಮುಖ್ಯ ಕಾರಣರಾದ ನನ್ನ ಮಿತ್ರ ಶ್ರೀ ಹುಲಿಗಿ ಹಾಗು ಪದ್ಮಾಚಾರ್ಯ ಹೊಂಬಾಳಿಯವರಿಗೂ ನನ್ನ ಕೃತಜ್ಞತೆಗಳು.

ಶಾರ್ವರಿ ಸಂವತ್ಸರ
ವಿಜಯದಶಮಿ
ಗದಗ

ಇತಿ
ಪಂಢರೀನಾಥಾಚಾರ್ಯ ಗಲಗಲಿ

ಪ್ರಕಾಶಕರ ಮಾತು

ನಮ್ಮ ಮಾಲೆಯ ಎರಡನೆ ದಳ 'ರಾಗ–ವಿರಾಗ'ವನ್ನು ವಾಚಕರ ಕೈಗಿಡಲು ಪರಮಸಂತೋಷವಾಗುತ್ತದೆ. ತಡವಾಗಿಯಾದರೂ ಬಹು ಅಮೂಲ್ಯವಾದ ಪುಸ್ತಕವನ್ನು ಕನ್ನಡ ಓದುಗರಿಗೆ ಒದಗಿಸುತ್ತಿದ್ದೇವೆಯೆಂಬ ಕೃತಾರ್ಥ ಭಾವನೆ ನಮಗಾಗಿದೆ. ಕನ್ನಡಸಂಸ್ಕೃತ ಉಭಯ ಭಾಷಾಪಂಡಿತವರೇಣ್ಯರಾದ ಶ್ರೀ ಪಂಢರೀನಾಥಾಚಾರ್ಯ ಗಲಗಲಿಯವರ ಸರಸ ಲೆಕ್ಕಣಿಕೆಯಿಂದ ಹೊರಬಂದ ಈ ಭಾಗವತ ಕಥೆಗಳ ಸಂಗ್ರಹ ರಸಿಕರ ಮನ ಮೋದಿಸುವಲ್ಲಿ ಸಂಶಯವಿಲ್ಲವೆಂಬ ಆತ್ಮವಿಶ್ವಾಸ ನಮಗಿದೆ.

ನಮ್ಮ ಮಾಲೆಯಲ್ಲಿ ತಮ್ಮ 'ರಾಗ–ವಿರಾಗ'ವನ್ನು ಪ್ರಕಟಿಸಲು ಉದಾರ ಮನಸ್ಸಿನಿಂದ ಅನುಮತಿಯಿತ್ತು ಉಪಕೃತರನ್ನಾಗಿಸಿದ ಪರಮಪೂಜ್ಯ ಶ್ರೀಪಂಢರೀನಾಥಾಚಾರ್ಯ ಗಲಗಲಿಯವರಿಗೆ ಎಷ್ಟು ಕೃತಜ್ಞತಾಪೂರ್ವಕ ಪ್ರಣಾಮಗಳನ್ನು ಸಲ್ಲಿಸಿದರೂ ಕಡಿಮೆಯೇ. 'ರಾಗ–ವಿರಾಗ'ಕ್ಕೆ ಮುತ್ತಿಟ್ಟಂತೆ ಮನಂಬುಗುವ ಮುನ್ನುಡಿಯನ್ನು ಬರೆದುಕೊಟ್ಟ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ವಿ.ಸೀತಾರಾಮಯ್ಯನವರಿಗೂ, ಅದಕ್ಕೆ ಪ್ರೇರಕರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು. ಅದರಂತೆ 'ಹುಬ್ಬಳ್ಳಿ ರಾಘವೇಂದ್ರ ಪ್ರಿಂಟರಿ'ಯ ಮಾಲಕರು ಸ್ವಲ್ಪ ವೇಳೆಯಲ್ಲಿಯೇ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟದ್ದಕ್ಕಾಗಿ ಅವರಿಗೂ ನಮ್ಮ ಕೃತಜ್ಞತೆಗಳು. ಚಿತ್ರಕಾರ ಶ್ರೀ ಪಾಟೀಲರಿಗೂ ನಮ್ಮ ವಂದನೆಗಳು.

ಎಂದಿನಂತೆ ವಾಚಕವೃಂದವು ತಮ್ಮ ಉದಾರ ಸಹಾಯ ಸಹಕಾರಗಳನ್ನಿತ್ತು ಪ್ರೋತ್ಸಾಹಿಸುವಿರಾಗಿ ನಂಬಿರುವ.

ವಿಜಯದಶಮಿ
ಶಾರ್ವರಿ ಸಂವತ್ಸರ
ಗದಗ

ತಮ್ಮ ವಿಶ್ವಾಸಿಕ
ಪ್ರಕಾಶಕ
ಎನ್.ಜಿ. ಹುಲಗಿ ಎಂ.ಎ.

ಕೃತಜ್ಞತೆ

ಸುಮಾರು ನಲವತ್ತು ವರುಷಗಳಿಂದ **'Out of print'** ಎನಿಸಿದ್ದ 'ರಾಗ–ವಿರಾಗ' ಹಾಗೂ 'ಭಾರತದ ಬ್ರಹ್ಮರ್ಷಿಗಳು' ಪುಟ್ಟ ಗ್ರಂಥಗಳ ಪುನರ್ಮುದ್ರಣಕ್ಕೆ **J.K. Centre, '(ಜ್ಞಾನಕೇಂದ್ರ)' Detroit MI, USA** ಸಂಸ್ಥೆಯ ಸಂಸ್ಥಾಪಕರು ತಾವಾಗೆ ಮುಂದೆ ಬಂದು ಸಂಪೂರ್ಣ ಧನ ಸಹಾಯ ಮಾಡಿದ್ದಾರೆ.

ತಮ್ಮ ಹೆಸರನ್ನೂ ಪ್ರಕಟಿಸಬಯಸದ ಈ ಮಹನೀಯರ ಶ್ರದ್ಧೆಯು ಅಪರೂಪ ಹಾಗೂ ಅನುಸರಣೀವೆನಿಸಿವೆ.

ಇವರ ಸೇವೆ ಅವನಿಗೆ ಮುದನೀಡಲಿ.

ಮುದ್ರಣದ ಪೂರ್ಣ ಜವಾಬ್ದಾರಿಯುನ್ನು ಪ್ರೀತಿಯಿಂದ ನಿರ್ವಹಿಸಿದ ಶ್ರೀಯುತ ಅರುಣಕುಮಾರ ಉರಣಕರ ಇವರಿಗೆ;

ತಿದ್ದುಪಡಿ ಕಾರ್ಯದಲ್ಲಿ ನೆರವಾದ ಪಂ. ಮುರಳಿಧರಾಚಾರ್ಯ ಗಲಗಲಿ ಇವರಿಗೆ;

ಪ್ರೂಪ್ ರೀಡಿಂಗ್ ಕಾರ್ಯವನ್ನು ನಿರ್ವಹಿಸಿದ ಆಚಾರ್ಯರ ಮೆಚ್ಚಿನ ಶಿಷ್ಯ ಡಾ॥ ಪಂ. ನರಸಿಂಹಾಚಾರ್ಯ ಗುಡೇಬೆಲ್ಲೂರು ಇವರಿಗೆ;

ಕಂಪ್ಯೂಟರಿಕರಣ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟ ಸಂತೋಷ ಕಲಬುರ್ಗಿ ಇವರಿಗೆ;

ಸಾದರ ಕೃತಜ್ಞತೆಗಳು.

– ರುಕ್ಮಿಣೀ ತನಯ

ಪ ರಿ ವಿ ಡಿ

ಹೆಸರು		ಪುಟಸಂಖ್ಯೆ
1)	ಮೀನ ಜೋಡಿ ಕೂಡಿದಾಗ ಮುನಿಯು ಅದನ್ನು ನೋಡಿದಾಗ	1
2)	ಸತಿಯ ಹೋಗಲೆಂದು ಪತಿಯೆ ಚಿತೆಯನೇರಿದ	14
3)	ಮದಯಂತಿ	22
4)	ತ್ರೇತಾಯುಗದ ರಂತಿದೇವ	28
5)	ಕಣ್ಣು ತಿವಿದ ಹೆಣ್ಣನೊಲಿದ ಮುನಿವರ	35
6)	ಜಾರಿದ ದೇವರ ದಾರಿಗೆ ತಂದಳು ನಾರಿಯು ತಿಳಿಹೇಳಿ	44
7)	ಧಿಗ್‌ಬಲಂ ಬ್ರಹ್ಮಬಲಂ ಭಕ್ತಿತೇಜೋ ಬಲಂ ಬಲಂ	54
8)	ನಾ ಮುಡಿದ ಕೇದಿಗೆಯ ಆವಳಷ್ಟು ಮುಡಿಯಲಿ	64
9)	ಬಿಂದುಮತಿ	77
10)	ಒಂದು ಕ್ಷಣ ಗೈದ ತಪ್ಪಿಗೆ	89
11)	ಆಗ್ನಯೇ ಸ್ವಾಹಾ	104

ಮೀನ ಜೋಡಿ ಕೂಡಿದಾಗ ಮುನಿಯು ಅದನು ನೋಡಿದಾಗ

ಉತ್ತರಾಪಥದ ಪುಣ್ಯಾರಣ್ಯದಲ್ಲಿ ಒಂದು ಪವಿತ್ರ ಆಶ್ರಮ. ನೀಲ ನೀರಿನ ಭಾರದಿಂದ ಮಂದಗಮನೆಯಾದ ಯಮುನೆ ಆ ಆಶ್ರಮದ ಅಂಗಳವನ್ನು ತೊಳೆದು ತೀರ್ಥವಾಗಿದ್ದಾಳೆ. ನೀರಿನ ಕನಸು ನನಸಾದಂತೆ ಆ ಪುಣ್ಯಾಶ್ರಮದ ಪರಿಸರವೆಲ್ಲ ಹಸುರಿನಿಂದ ಕುಸುರೊಡೆದು ನಿಂದಿದೆ. ಅಲ್ಲಿಯ ಏಕಾಂತದ ಮಡಿಲಲ್ಲಿ ಮೌನವು ಮಲಗಿದಂತಿದೆ. ಶಾಂತಿ ವಿಶ್ರಾಂತಿ ಹೊಂದುತ್ತಲಿದೆ.

ಆ ಎಲೆಮನೆಯ ಎದುರು ಯಮುನೆಯ ಪ್ರವಾಹದಲ್ಲಿ ಒಂದು ಚಕ್ರತೀರ್ಥ. ಅಲ್ಲಿಯ ತರಲ-ತರಂಗಗಳ ಅಂತರಂಗದಲ್ಲಿ ಒಂದು ಉತ್ತುಂಗವಾದ ಬಂಡೆಗಲ್ಲು ತಲೆ ಎತ್ತಿ ನಿಂತಿದೆ. ತಂಗಾಳಿ ತರಂಗಗಳೊಡನೆ ಚಿನ್ನಾಟವಾಡಿದಾಗ ಹಾರಿಬಂದ ತುಂತುರ ಹನಿಗಳು ಆ ಕಗ್ಗಲ್ಲಿನ ಎದೆಯ ಮೇಲೆ ಮುತ್ತಿನ ಹಾರಗಳನ್ನು ಹರಿದು ಹರಿವಿದಂತೆ ಕಾಣುತ್ತವೆ.

ಹಿಂದೆ ಒಂದು ದಿನ ಪ್ರಭಾತ ಸಂಧ್ಯಾರಾಗದಲ್ಲಿ ಮಿಂದ ಆ ತಪೋವನವೆಲ್ಲ ಸ್ವಪ್ನಸುಂದರವಾಗಿ ನಿಂತುಕೊಂಡಿತ್ತು. ಆ ಹೊಂಬೆಳಗಿನ ರಸಲೇಪಕ್ಕೆ ನಡುನೀರಲ್ಲಿ ನಿಂತುಕೊಂಡ ಹೆಬ್ಬಂಡೆ ಕೂಡ ಕುಂಕುಮಾಂಕಿತವಾದಂತೆ ತೋರುತ್ತಿತ್ತು. ಯಮುನೆಯ ವಿಶಾಲ ಭಾಲದಂತಿರುವ ಆ ಶಿಲಾಫಲಕದ ಮೇಲೆ ಉದಯೋನ್ಮುಖವಾದ ಸೂರ್ಯಮಂಡಲಕ್ಕೆ ಅಭಿಮುಖವಾಗಿ ಋಷಿಯೊ ್ಬನು ಮಂಡಿಸಿದ್ದ.

ದೇದೀಪ್ಯಮಾನವಾದ ಅವನ ಮುಖದ ಕಾಂತಿಯನ್ನು ಕಂಡು ಕರುಬಿದ ಸೂರ್ಯಬಿಂಬದಲ್ಲಿ ಕೆಂಪು ಏರುತ್ತಲಿತ್ತು. ಎಳೆ ನೇಸರಿನ ಬಾಲ ಕಿರಣಗಳು ಆ ವರ ತಪಸ್ವಿಯ ಭಾಸುರ ಜಟಾಮಂಡಲಕ್ಕೆ ಕೇಶರ ಬಣ್ಣವನ್ನು ಬಳೆಯುತ್ತಲಿದ್ದವು. ಆ ಸಂಧ್ಯಾತಪದಲ್ಲಿ ಮತ್ತಷ್ಟೂ ಸುಂದರವಾಗಿ ತೋರುವ ಆ ಮುನೀಶ್ವರನ ಮುಖ ಶ್ರೀಯನ್ನು ಕಂಡು ಮುಗ್ಧವಾದ ಚೆಂಬೆಳಗು ಚೆಲ್ವರಿದು ಅದನ್ನು ಚುಂಬಿಸುತ್ತಲಿದೆ. ಆ ತಪೋಮೂರ್ತಿಯ ಪ್ರತಿಬಿಂಬವು ನೀಲನೀರಿನ ಆಳದಲ್ಲಿ ಪಡಿಮೂಡಿದಾಗ ಜಲದೇವತೆಯ ಆನಂದ ಉಕ್ಕಿ ತೆರೆಗಳಲ್ಲಿ ನೊರೆಯಾಗಿ ಹರಿಯುತ್ತಲಿದೆ. ಆ ಋಷಿ ಕುಳಿತ ಪಾಷಾಣಪೀಠದ ತುದಿಬದಿಗಳನ್ನು ಜಿದ್ದು ಹಾಕಿ ತೊಳೆಯುತ್ತಲಿದೆ, ತರಂಗ ಮಾಲೆ.

ಆಗ ಸೂರ್ಯಚಂದ್ರರನ್ನು ಸೆರೆಹಿಡಿದು ಮುಚ್ಚಿಟ್ಟಂತಿರುವ ತನ್ನ ನೇತ್ರ ಸಂಪುಟವನ್ನು ಆ ಮುನಿ ಮೆಲ್ಲನೇ ತೆರೆದ. ಆ ನಯನದ ಸೊಬಗನ್ನು ಕಂಡು ಅಲ್ಲಿ ಅದೇ ಬಿರಿದ ಹೊಂದಾವರೆಗಳು ತಗ್ಗಿದವು. ನವೋದಿತ ಸೂರ್ಯನಿಗೆ ದೀಪ್ತಿದಾನ

ಮಾಡುವಂತೆ ಅಪಲಕ ನೇತ್ರದಿಂದ ಮುನಿ ರವಿಯನ್ನು ನಿಟ್ಟಿಸಿದ. ಆಮೇಲೆ ಆಜಾನುಬಾಹುವಾದ ಆ ಯೋಗೀಶ್ವರನು ಎದ್ದುನಿಂತು

''ಓಂ ಭೂರ್ಭುವಸ್ವಃ ತತ್ಸವಿತುಃ ವರೇಣ್ಯಂ ಭರ್ಗೋ। ದೇವಸ್ಯ ಧೀಮಹಿ ಧಿಯೋಯೋನಃ ಪ್ರಚೋದಯಾತ್'' ಎಂದಂದು ಮೂರುಬಾರಿ ಕಮಲ ಕುಡ್ಮಲದಂತಿರುವ ತನ್ನ ಅಂಜಲಿಯಿಂದ ಅರ್ಘ್ಯವನ್ನಿತ್ತು ವಂದಿಸಿದ.

''ಸವಿತೃಮಂಡಲ ಮಧ್ಯವರ್ತೀ ನಾರಾಯಣಃ ಸರಸಿಜಾಸನಸನ್ನಿವಿಷ್ಟಃ ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ ಹಾರೀ ಹಿರಣ್ಮಯವಪುಃ ಧೃತಶಂಖ ಚಕ್ರಃ'' ಎಂದು ಕಂಚಿನ ಕಂಠದಿಂದ ಆ ಮಹರ್ಷಿಯು ಸೂರ್ಯನಾರಾಯಣನನ್ನು ಧ್ಯಾನಿಸಿದಾಗ ಆ ನೀರವ ತಪೋವನವೆಲ್ಲ ಶಾಂತಿ ಪಾಠ ಹಾಕಿ ಆ ಮಂತ್ರವನ್ನು ಮಾರ್ದನಿಸಿತ್ತು. ಆಮೇಲೆ ಮುನಿ ಸಾವಿರ ಗಾಯತ್ರಿಯ ಜಪಮಾಡಿ ಸೂರ್ಯೋಪಸ್ಥಾನಕ್ಕೆ ಎದ್ದಾಗ ರವಿ ಆಗಸದ ಅಂಗಳಕೆ ಏರಿದ್ದ.

ಸಂಧ್ಯಾಜಪತಪ ಪ್ರಾಣಾಯಾಮಗಳನ್ನೆಲ್ಲ ಮುಗಿಸಿ ಆನ್ಹಿಕವೆಲ್ಲ ಪೂರೈಸಿದಾಗ ಮುನಿಯ ಮನಸ್ಸು ಕೃತಕೃತ್ಯತೆಯನ್ನು ಪಡೆದು ಹಗುರಾಗಿತ್ತು. ತನ್ನ ಅನುಷ್ಠಾನದ ಅನಂತರ ನದಿಯ ಆಚೆಗೆ ಚಾಚಿನಿಂತ ಶೈಲಶ್ರೇಣಿಯನ್ನೂ ಯಮುನೆಯ ವೀಚೀಕದಂಬವನ್ನೂ ಪುಷ್ಪಭಾರದಿಂದ ಬಗ್ಗಿನಿಂತ ತೀರದ ತರುರಾಜಿಯನ್ನೂ ಹಸರು ಪಸರಿನಿಂತ ವಸುಂಧರೆಯ ಸಸ್ಯಶ್ಯಾಮಲ ಸೌಂದರ್ಯವನ್ನೂ ಒಮ್ಮೆ ನಿಂತು ನೋಡಿದ. ಆ ಚೆಲುವಿನ ಮಡಿಲಲ್ಲಿ ಮುನಿಯ ಮನಸ್ಸು ಬಣ್ಣದ ಚಿಟ್ಟೆಯಾಗಿ ಹಾರಾಡಿತು. ನವಿಲಾಗಿ ಕುಣಿಯಿತು. ಭೃಂಗವಾಗಿ ಗುಂಗುಣಿಸಿತು, ನಿಸರ್ಗದ ಸೌಂದರ್ಯವೆಲ್ಲ ಒಂದಾಗಿ ಆ ವಿರಾಗಿಯ ರುಕ್ಷಹೃದಯದಲ್ಲಿ ರಸಕಾರಂಜಿ ಪುಟಿಯುವಂತೆ ಮಾಡಿತು. ಪ್ರಕೃತಿ ಪ್ರಶಾಂತವಾಗಿತ್ತು ಮನಸ್ಸು ಪ್ರಸನ್ನವಾಗಿತ್ತು, ಕಣ್ಣು ಕರುಣಾರ್ದ್ರವಾಗಿತ್ತು

ಹೀಗೆ ತೃಪ್ತಿಯ ಗೆಲುವಿನಲ್ಲಿ ನಲಿವನುಂಡ ಋಷಿಯುನೀರಿನ ಒಡಲಿನಲ್ಲಿ ಸಂಸಾರ ಹೂಡಿದ ಜಲಚರಗಳ ಬಳಗದೆಡೆಗೆ ಒಮ್ಮೆ ಸಹಜವಾಗಿ ಕಣ್ಣು ಹಾಯಿಸಿದ. ಬಂಗಾರಗೆರೆಯ ಸಿರಿಗಣ್ಣುಗಳನ್ನು ಪಿಳಕಿಸುತ್ತ ಈಸುವ ಮೀನ ಮೂರುತಿಗಳು ಶೃಂಗಾರ ರಸವೇ ಜೀವದುಂಬಿ ಹರಿದಾಡುವಂತೆ ಕಾಣುತ್ತಲಿದ್ದವು. ತೀರದ ಅಂಚಿನಲ್ಲಿ ಗರಿತೆಗೆದು ಸಂಚರಿಸುವ ಆ ಮಿಂಚಿನ ಮರಿಗಳನ್ನು ಕಂಡು ತಪಸ್ವಿಯ ಕೌತುಕ ಗೊಂಚಲೊಡೆದು ಮನಸ್ಸು ಮೀನಗಳ ಹಿಂದೆ ಓಡತೊಡಗಿತು.

ಆಗ ಅಲ್ಲಿಯೇ ಸಲಿಲ ಶಯ್ಯಾರಂಗದಲ್ಲಿ ಒಂದು ರಸಿಕ ಮೀನಮಿಥುನ ರತಿಕ್ರೀಡೆಯನ್ನು ನಡೆಸಿತ್ತು. ಆ ಗಂಡು ಹೆಣ್ಣು ಮೀನಗಳು ರಾಗತುಂಬಿ ಚುಂಬಿಸಿದವು. ಒಂದನೊಂದು ರಂಬಿಸಿದವು. ಆನಂದ ಪರವಶತೆಗೆ ಹೆಣ್ಣು ಕಣ್ಣು ಪಿಳುಕಿಸಿತು ಉಲ್ಲಾಸದಿಂದ ಗರಿತಿರುವಿತು. ಕಾಮದ ಮದ ತುಂಬಿದ ಗಂಡು ಆ ತಿರುವುಗರಿಯನ್ನು ತನ್ನ ಪುಚ್ಛದಿಂದ ಹೊಚ್ಚಿತು.

ಈ ಶೃಂಗಾರ ಸನ್ನಿವೇಶವನ್ನು ಕಂಡ ಮುನಿಯ ನರನಾಡಿಗಳಲ್ಲೆಲ್ಲ ಮಿಂಚಿನ ಸಂಚಾರವಾದಂತಾಯಿತು. ಇಂದಿನವರೆಗೆ ಬಿಗಿದಿಟ್ಟ ಭಾವನೆಗಳೆಲ್ಲ ಎದೆಯೊಳಗಿಂದ ಒಮ್ಮೆಲೇ ಚಿಮ್ಮಿ ಹೊರಹೊಮ್ಮಿ ಪುಟಿಯಹತ್ತಿದವು. ಕಾಮರಾಗಗಳು ಒಮ್ಮೆಲೇ ಕೆರಳಿ ಭಾವ ಅರಳಿನಿಂತ ಆ ಮುನಿ ಹೃದಯ ರಸದ ಕಲ್ಲೋಲವಾಯಿತು.

''ಛೀ ಛೀ ! ಧಿಕ್ಕಾರವಿರಲಿ ಈ ನನ್ನ ಜನ್ಮಕ್ಕೆ? ಮನುಷ್ಯನಾಗಿ ಹುಟ್ಟಿದ ಬಳಿಕ ಈ ಮೀನ ಪಟ್ಟಷ್ಟೂ ನಾನು ಸುಖಪಡಲಿಲ್ಲ. ಸೃಷ್ಟಿಯ ಈ ನಂದನ ವನದಲ್ಲಿ ಹೆಣ್ಣು ಒಂದು ಅಮೃತದ ಹಣ್ಣು. ನಾನು ಹಣ್ಣು ಹಣ್ಣು ಮುದುಕನಾದರೂ ಆ ಸುಖವನ್ನೇ ಕಂಡಿಲ್ಲ. ಅದರ ರಸವನ್ನು ಉಂಡಿಲ್ಲ. ಈ ಮೀನ ಮುಂತಾದ ಜಲಚರಗಳಿಗಿಂತ ಸಂಗಸುಖವನ್ನು ಅನುಭವಿಸಲು ಮಾನವೀಯ ಇಂದ್ರಿಯಗಳಲ್ಲಿ ಹೆಚ್ಚಿನ ಸೌಕರ್ಯವೂ ಉಂಟು, ಶಕ್ತಿಯೂ ಉಂಟು. ಆದರೆ ನಾನೆಂಥ ಹೆಡ್ಡ ! ಭಗವಂತ ಭೋಗಮಾಡು ಎಂದು ಕೊಟ್ಟ ಯಾವ ಇಂದ್ರಿಯಕ್ಕೂ ಸ್ತ್ರೀ ಸುಖದ ನೆರಳೂ ಕೂಡ ಸೋಂಕದಂತೆ ಮಾಡಿದೆ.''

ಎದೆಯ ನೂರು ಬಯಕೆಗಳನ್ನೆಲ್ಲ ಕಣ್ಣಂಚಿನಲ್ಲಿ ತುಳಕಿಸಿ ಲಜ್ಜೆಯಿಂದ ಬಾಗಿನಿಂತ ಕುಲವಧುವನ್ನು ನಾನು ಕನಸಿನಲ್ಲಿಯೂ ಕೂಡ ಕಾಣಲಿಲ್ಲ. ಅವರ ಕಡೆನೋಟ, ಕುಡಿನೋಟಗಳ ಶೃಂಗಾರ ಸಂಕೇತವನ್ನು ತಿಳಿಯಲಿಲ್ಲ. ವಕ್ರೋಕ್ತಿಯ ಮಧುರವಾದ ಮಾತುಗಳನ್ನು ಆಲಿಸಲಿಲ್ಲ. ಗುಲಾಬಿಯ ಗಲ್ಲಗಳನ್ನು ಮುಟ್ಟಲಿಲ್ಲ. ತುಟಿಪಕಳೆಗಳಲ್ಲಿ ತುಳುಕಿನಿಂತ ತುಂಬು ನಗೆಯ ಬಗೆಯನ್ನು ಅರಿಯಲಿಲ್ಲ. ಸುಖ ಸಮಸ್ತಕ್ಕೂ ಕೇಂದ್ರವಾದ ನಾರಿಯ ಸಂಬಂಧವೇ ಬಾರದ ನನ್ನ ಜೀವನವೆಲ್ಲ ಬರಡಾಗಿ ಬಿಟ್ಟಿದೇ. ದಾರಿಯುದ್ದಕೂ ಅವನಿಗೆ ತಪಸ್ಸಿಗೆ ಹೊರಡುವಾಗ ತನ್ನ ತಾಯಿ–ತಂದೆಗಳು ಹೇಳಿದ ಮಾತು ಸ್ಮರಣಕ್ಕೆ ಬಂದು ಇರಿಯಹತ್ತಿತ್ತು. ''ಮಗು ಈ ಮುಪ್ಪಿನ ಮುದುಕರನ್ನು ಮನೆಯಲ್ಲಿ ಬಿಟ್ಟು ತಪಸ್ಸಿಗೆ ಹೋಗುವದು ಬೇಡ. ತಪೋನುಷ್ಠಾನಕ್ಕೆ ಇನ್ನೂ ನಿನ್ನ ವಯಸ್ಸು ಪಕ್ವವಾಗಿಲ್ಲ. ಮದುವೆಮಾಡಿಕೊಂಡು ಕೆಲದಿನ ಸಂಸಾರ ಮಾಡಿ ವಿಷಯ ಸುಖದಲ್ಲಿ ನಿರ್ವೇದ ಹುಟ್ಟಿದ ಬಳಿಕ ತಪಸ್ಸಿಗೆ ಹೊರಡು. ಇಂದ್ರಿಯ ವಾಸನೆ ಇಲ್ಲಿನ ವಿಷಯ ಭೋಗದಿಂದ ಜೀರ್ಣ ನಿರ್ಜಿಣ್ಣವಾದ ಬಳಿಕ ತಪಸ್ಸಿಗೆ ಅಂಜಿಕೆಯಿಲ್ಲ. ವಾಸನೆಗಳನ್ನು ಅದುಮಿ ಹಿಡಿದು ಅತೃಪ್ತೇಂದ್ರಿಯಗಳಿಂದ ತಪಸ್ಸಿಗೆ ನಿಂತರೆ ವಿಘ್ನತಪ್ಪಿದ್ದಲ್ಲ.

ಅತ್ತ ಸಿದ್ಧಿಯೂ ಇಲ್ಲ, ಇತ್ತ ಸಂಸಾರ ಸುಖವೂ ಇಲ್ಲ, ಹೀಗಾಗುವದು. ಆದ್ದರಿಂದ ಅಡವಿಗೆ ಹೋಗಲು ಅವಸರ ಮಾಡದೇ ಊರಲ್ಲಿದ್ದು ಗೃಹಸ್ಥ ಧರ್ಮಪಾಲನ ಮಾಡು. ಮುಪ್ಪಿನ ತಂದೆ ತಾಯಿಗಳನ್ನು ರಕ್ಷಿಸು. ಕುಲವಧುವನ್ನು ಕೈ ಹಿಡಿ'' ಎಂದು ಅಂಗಲಾಚಿ ಹೇಳಿದ್ದರು. ಅವರ ಮಾತು ಕೇಳಿ ಮದುವೆಯಾಗದೇ ಇದ್ದದ್ದು ಹಳ ತಪ್ಪು ಎನಿಸಿತು.

ಇನ್ನು ನನ್ನ ಈ ಮುದಿತನದಲ್ಲಿ ಸುಂದರಿ ನನಗೆ ಹೇಗೆ ದೊರೆಯಬೇಕು? ''ಏನೇ ಆಗಲಿ ಈ ಜನ್ಮದಲ್ಲಿ ಮದುವೆ ಮಾಡಿಕೊಂಡು ಸ್ತ್ರೀ ಸುಖವನ್ನು ಉಂಡೇ ತೀರಬೇಕು'' ಎಂದು ಸಂಕಲ್ಪಿಸಿ ಆ ಮುನಿಯು ಎದ್ದನು.

ಆಗ ಮಾಂಧಾತನೆಂಬ ಮಹಾ ಪರಾಕ್ರಮಿಯಾದ ಮಹಾರಾಜನು ಭೂಮಿಯನ್ನು ಆಳುತ್ತಿದ್ದನು. ಅವನಿಗೆ ಸ್ಪುರದ್ರೂಪಿಣಿಯರಾದ ಐವತ್ತು ಜನ ಹೆಣ್ಣು ಮಕ್ಕಳು ಇರುವರೆಂಬ ವಿಷಯ ಋಷಿಗೆ ಮೊದಲೇ ವಿದಿತವಿತ್ತು. ಧಾರ್ಮಿಕನಾದ ಆ ರಾಜನು ತನ್ನಂಥ ಬ್ರಹ್ಮರ್ಷಿ ಹೋಗಿ ಐವತ್ತು ಕನ್ಯೆಯರಲ್ಲಿ ಒಬ್ಬಳನ್ನಾದರೂ ನನಗೆ ಕೊಡು ಎಂದು ಕೇಳಿದರೆ 'ಇಲ್ಲ' ಎನ್ನಲಿಕ್ಕಿಲ್ಲ ಎಂದು ತಾನೇ ತರ್ಕಹಾಕಿ ರಾಜಧಾನಿಯ ದಾರಿ ಹಿಡಿದ.

ದಾರಿಯಲ್ಲಿ ಹೊಂಗೆಯ ಟೊಂಗೆಯಲ್ಲಿ ಲೀಲಾಲೋಲವಾದ ಗೆಣೆವಕ್ಕಿಗಳು ತನ್ನ ಒಂಟಿ ಬಾಳನ್ನು ಅಣಕಿಸುತ್ತಲಿದ್ದಂತೆ ಆ ಮುನಿಗೆ ತೋರಿತು. ಇಕ್ಕೆಲದ ಗಿಡಗಳ ಬರಿ ಮೈಯ್ಯನ್ನೆಲ್ಲ ಬಿಗಿದಪ್ಪಿ ಬಳಕುತ್ತ ನಿಂತ ಬಳ್ಳಿಗಳ ಬಾಳು ಅವನಿಗೆ ಒಳ್ಳೇ ಸ್ಪೃಹಣೀಯವೆನಿಸಿತು. ಬೀದಿಯ ಬದಿಯಲ್ಲಿ ಬೆಳೆದು ನಿಂತ ಶೇವಂತಿಕೆಯ ಪಕಳಿದುಟಿಯನ್ನು ಕಚ್ಚಿ ಮಧುವನ್ನು ಹೀರುವ ಭೃಂಗವನ್ನು ನೋಡಿ ಮುನಿಯ ಮನಕ್ಕೆ ಮತ್ಸರವಾಯಿತು. ಮಳ್ಳಗಾಳಿ ಬಂದು ಮಲ್ಲಿಗೆ ಬಳ್ಳಿಯನ್ನು ಒಯ್ಯನೊಯ್ಯನೆ ಅಲುಗಿಸಿದಾದ ಅದರ ತೃಪ್ತಿಯ ನರುಗಂಪಿನಿಂದ ಅವನ ಮೈನವಿರೇರಿತು. ಈ ಚರಾಚರ ಪ್ರಪಂಚದಲ್ಲಿ ಒಬ್ಬೊಂಟಿಗನೆಂದರೆ ನಾನೊಬ್ಬನೇ' ಎನಿಸಿತು ಆ ಬ್ರಹ್ಮಚಾರಿಯ ಹೃದಯಕ್ಕೆ. ಅಕಸ್ಮಾತ್ತಾಗಿ ರಾಜದರ್ಬಾರವನ್ನು ಪ್ರವೇಶಿಸಿದ ಆ ಬ್ರಹ್ಮರ್ಷಿಯ ತೇಜಸ್ಸನ್ನು ಕಂಡು ಸೂರ್ಯನೇ ಶರೀರಧಾರಿಯಾಗಿ ಬಂದಂತೆನ್ನಿಸಿತು. ಸಭಿಕರಿಗೆಲ್ಲ ಕಣ್ಣು ಕುಕ್ಕುವ ಅವನ ಆ ದಿವ್ಯದೀಧಿತಿ ಅವನ ಮೈಸುತ್ತು ಒಂದು ಪ್ರಭಾವಲಯವನ್ನೇ ಕಟ್ಟಿದಂತಿತ್ತು. ಕ್ಷಣಾರ್ಧದಲ್ಲಿ ಸಿಂಹಾಸನದಿಂದ ಇಳಿದು ಬಂದ ಮಹಾರಾಜ ಅವನ ಪಾದಮೂಲವನ್ನು ಮುಕುಟ ಮಣಿಗಳಿಂದ ಬೆಳಗಿದ. ದಿವ್ಯ ಆಸನದಲ್ಲಿ ಕೈಹಿಡಿದು ಕುಳ್ಳಿರಿಸಿ ಕೈಜೋಡಿಸಿ ಕೃತಜ್ಞತೆಯನ್ನು ಸೂಸುತ್ತ ನುಡಿದ.

''ಬ್ರಹ್ಮನ್ ನನ್ನ ಕೋಟಿ ಜನ್ಮದ ಸುಕೃತಿ ಇಂದು ಒದಗಿಬಂದಿದೆ. ಕೋಟಿ ರೂಪಾಯಿ ಕೊಡುತ್ತೇವೆಂದರೂ ಕಣ್ಣೆತ್ತಿ ಕೂಡ ನೋಡದ ತಮ್ಮಂಥ ವೀತರಾಗ ಬ್ರಹ್ಮರ್ಷಿಗಳು ಇಂದು ನನ್ನ ಮನೆಯವರೆಗೆ ನಡೆದು ಬಂದದ್ದು ನನ್ನ ಸುದೈವ, ನನ್ನ ರಾಜ್ಯದ ಸುಭಾಗ್ಯ. ಈ ರಾಜ್ಯ ಕೋಶ ನಾನು ಎಲ್ಲವೂ ತಮ್ಮ ಪಾದಕ್ಕೆ ಅರ್ಪಿತ. ಅಪ್ಪಣೆಯಿಂದ ಅನುಗ್ರಹಿಸಬೇಕು'' ಎಂದು ಮತ್ತೊಮ್ಮೆ ಶಿರಬಾಗಿ ಕೈಕಟ್ಟಿಕೊಂಡು ನಿಂತ.

ಅವನ ಈ ನಯ ವಿನಯಗಳನ್ನು ಕಂಡು ಆ ಮುನಿ ಮನದಲ್ಲಿ ಮೊಳಕೆಯೊಡೆದ ಆಶೆ ಕಣ್ಣಿನ ಕಿರಣರೇಖೆಗಳಲ್ಲಿ ತುಳುಕಿ ನಿಂತಿತು. ಋಷಿ ತನ್ನ ತಪಸ್ತೀಕ್ಷ್ಣವಾದ ಕಟಾಕ್ಷದಿಂದ ಸಭಿಕರನ್ನೆಲ್ಲ ವೀಕ್ಷಿಸಿದ. ಆ ನಾಭಿಲಂಬಿಯಾದ ತನ್ನ ಶ್ವೇತಕೂರ್ಚವನ್ನು (ಬಿಳಿಗಡ್ಡ) ತುದಿಬೆರಳುಗಳಿಂದ ತೀಡಿಕೊಳ್ಳುತ್ತ ಶ್ರೀಮದ್‌ಗಾಂಭೀರ್ಯದಿಂದ ''ಮಹಾರಾಜ–(ಅವನ ಗಂಟಲವನ್ನು ಯಾರೋ ಹಿಡಿದು ತಡೆದಂತಾಗಿ, ಮತ್ತೆ

ಸಾವರಿಸಿಕೊಂಡು) ರಾಜ ! ನಾವು ಈಗ ಅತ್ಯಂತ ಮಹತ್ವದ ಕಾರ್ಯಕ್ಕಾಗಿ ನಿನ್ನಲ್ಲಿ ಯಾಚಕರಾಗಿ ಬಂದಿದ್ದೇವೆ.''

''ಹಾಗಾದರೆ ಅನುಗ್ರಹೀತೋಸ್ಮಿ'' ಎಂದ ಮಹಾರಾಜ.

''ಹಾಗಲ್ಲ, ಮೊದಲು ನನ್ನ ಮಾತನ್ನು ಕೇಳಿ ಮಾತನಾಡು'' ಎಂದಿತು ತಪೋವಾಣಿ.

ಸಭಾಂಗಣವೆಲ್ಲ ಕಿವಿ ಕಣ್ಣಾಗಿ ನೋಡುತ್ತಿತ್ತು, ಕಣ್ಣು ಕಿವಿಯಾಗಿ ಕೇಳುತ್ತಿತ್ತು. ಅವರೆಲ್ಲರ ಉಸುರಿನ ಅಲೆಗಳೂ ಋಷಿಯ ಬಯಕೆಯನ್ನು ಆಲಿಸಲು ಕಿವಿ ಪಡೆದು ನಿಂತಿದ್ದವು.

''ಮಹದಪ್ಪಣೆ'' ಎಂದು ವಂದಿಸಿನಿಂತ ಮಾಂಧಾತ. ''ರಾಜನ್ ! ಎಲ್ಲ ಆಶ್ರಮಗಳಲ್ಲಿ ಗೃಹಸ್ಥಾಶ್ರಮವು ಸರ್ವ ಶ್ರೇಷ್ಠವೆಂದು ಶ್ರುತಿ ತತ್ವ. ಗೃಹಮೇಧಿಯಾಗದ ಮಾನವನು ಪಿತೃಗಳನ್ನು ಉದ್ಧರಿಸಲಾರ. ಆದ್ದರಿಂದ ಮದುವೆಯೊಂದು ಮೋಕ್ಷದ ಮೊದಲು ಸಾಧನ'' ಋಷಿಯ ಕಂಚಿನಕಂಠ ಮಿಂಚಿನ ಮಾತುಗಳಿಂದ ಜಾಂಗಟೆ ಬಾರಿಸುತ್ತಿತ್ತು.

ನೈಷ್ಠಿಕ ಬ್ರಹ್ಮಚರ್ಯದಲ್ಲಿಯೇ ಗಡ್ಡ ಬೆಳ್ಳಗಾಗಿ ಹೋದ ಆ ಬೈರಾಗಿಯ ವಿವಾಹೋಪನ್ಯಾಸವನ್ನು ಕೇಳಿ ಅದರ ಎಳೆಸುಳಿಗಳೆ ತಿಳಿಯದಂತಾಗಿದ್ದವು ಸಭಾಸದರಿಗೆ. ಆದರೂ ಆ ಊರ್ಧ್ವರೇತಸಿಯ ಮೇಲೆ ಇಲ್ಲದ ಶಂಕೆ ತೆಗೆದುಕೊಂಡರೆ ಉರಿದು ಹೋದೇವೆಂದು ಕುಚ್ಛಿತ ಕಲ್ಪನೆಗಳೆಲ್ಲ ಕಾಲು ಮುರಿದುಕೊಂಡು ಕುಳಿತಿದ್ದವು.

''ರಾಜನೆ ! ನಿನಗೆ ಐವತ್ತು ಜನ ಹೆಣ್ಣುಮಕ್ಕಳೆಂದು ಕೇಳಿದ್ದೇನೆ. ಒಂದು ಕನ್ಯೆಯನ್ನು ದಾನ ಮಾಡಿದರೆ ಕೋಟಿ ಧೇನು ದಾನ ಮಾಡಿದಂತೆ ಎಂದು ಹೇಳಿದೆ. ನೀನಂತೂ ಐವತ್ತು ಹೆಣ್ಣುಗಳನ್ನು ದಾನವಿತ್ತ ಬಳಿಕ ಬರುವ ಆ ಪುಣ್ಯದ ರಾಶಿಯನ್ನು ಇಡಲಿಕ್ಕೆ ನೆಲದಲ್ಲಿ ಸ್ಥಲ ಸಿಗಲಿಕ್ಕಿಲ್ಲ, ಆಕಾಶದಲ್ಲಿ ಅವಕಾಶ ಉಳಿಯಲಿಕ್ಕಿಲ್ಲ, ನೀನೆಂಥ ಪುಣ್ಯಾತ್ಮನಪ್ಪ !'' ಎಂತೆಂದು ಮುದುಕ ಮಂದಹಾಸ ಮಾಡಿದಾಗ ಆಸನದ ಮುಂದೆ ಮಂದಾರದ ಅರಳುಗಳನ್ನು ತೂರಿದಂತಾಯಿತು.

ರಾಜನ ಕಣ್ಣುಗಳು ಆನಂದದಿಂದ ಉತ್ಫುಲ್ಲವಾಗಿ ಕೃತಜ್ಞತೆಯ ಭಾರದಿಂದ ಋಷಿಯ ಶ್ವೇತಕೂರ್ಚದ ಎಳೆಗೆ ಎಳೆಗಳನ್ನೂ ಬಳಸಿ ನಿಂತವು. ಉಕ್ಕುವ ಸಂತಸದ ತೆರೆಗಳನ್ನು ನಗೆಯ ಮೇಲೆ ತೇಲಿಸಿ ಗದ್ಗದದಿಂದ ಶಬ್ದಗಳನ್ನು ಜೋಲಿಸಿ ಹೇಳಿದ ಮಹಾರಾಜ.

''ತಪೋನಿಧಿಗಳೇ ! ಐವತ್ತು ಹೆಣ್ಣು ಹಡೆದ್ದೇನೋ ನಿಜ. ಆದರೆ ಅವರಿಗೆಲ್ಲ ತಮ್ಮ ಆಶೀರ್ವಾದದಿಂದ ಯೋಗ್ಯ ಸಂಬಂಧವಾದರೆ ನಾನು ಧನ್ಯ, ನಮ್ಮ ಮನೆತನದ ಪುಣ್ಯ''.

''ರಾಜ ! ನಾನು ಈಗ ಬಂದದ್ದು ಅದಕ್ಕಾಗಿಯೇ'' ಎಂದು ಮೊಳಗಿತು ಆರ್ಷವಾಣಿ.

''ಹಾಗಾದರೆ ಇಂದಿನಿಂದ ನನ್ನ ಚಿಂತೆಯ ಸ್ಥಾನವನ್ನು ಸಂತಸಕ್ಕೆ ಇತ್ತು ಬಿಡುವೆ. ತಪೋಧನರೇ ! ನನ್ನ ಮಕ್ಕಳಿಗೆ ಯಾವ ವರಗಳನ್ನು ಆರಿಸಿರುವಿರಿ!'' ತನ್ನ ಎದೆ ಬಯಕೆಗಳನ್ನೆಲ್ಲ ಬಾಯಲ್ಲಿ ತಂದು ಕೇಳಿದ ಆ ಭೂಪ.

''ಬೇರೆ ವರವೇಕೆ ಮಹಾರಾಜ ! ನಾನೇ ವರನಾಗಿ ಕನ್ಯಾರ್ಥಿಯಾಗಿ ಬಂದಿದ್ದೇನೆ. ನನ್ನಂಥ ಬ್ರಹ್ಮರ್ಷಿಗೆ ಕನ್ಯಾದಾನ ಮಾಡಿ ಕೊಟ್ಟರೆ ನಿನ್ನ ಕುಲಕೋಟಿ ಉದ್ಧಾರವಾಗುವದು. ನೈಷ್ಠಿಕ ಬ್ರಹ್ಮಚಾರಿಗಳಾದ ನಾವು ನಿನ್ನನ್ನು ಉದ್ಧರಿಸಲಿಕ್ಕೆಂದು ಬ್ರಹ್ಮಚರ್ಯ ವೃತದ ಉದ್ಯಾಪನೆಗೆ ಸಿದ್ಧರಾಗಿದ್ದೇವೆ. ಇಂಥ ಸಂಧಿಯನ್ನು ಯಾರಾದರೂ ಬಿಡುವರೇ !''

ಹೇಳಬೇಕೆನ್ನುವದನ್ನೆಲ್ಲ ನೇರವಾಗಿ ಒಮ್ಮೆಲೇ ಹೇಳಿಬಿಟ್ಟರಾಯಿತೆಂದು ಒಂದೇ ಉಸುರಿನಲ್ಲಿ ನುಡಿದು, ರಾಜನ ಮುಖದಲ್ಲಿ ಅದರ ಪ್ರತಿಕ್ರಿಯೆಯನ್ನು ನೋಡತೊಡಗಿದ. ಆ ಕನ್ಯಾರ್ಥಿ ಮುನಿಯ ಮೋರೆ ನೋಡಿದಾಗ ಜನಮನದಲ್ಲಿ ಮೂಡಿದ ಆದರ, ಮಾತು ಕೇಳಿ ಪೂರ್ಣ ಅಳಿಸಿಹೋಯಿತು. ಅವನ ಈ ಹೆಣ್ಣಿನ ಹಂಬಲ ನೋಡಿ ಜನರಿಗೆಲ್ಲ ಹುಚ್ಚುನಗೆ ಬಂತು.

ಆದರೆ ರಾಜನಿಗೆ ಮಾತ್ರ ಮೈಯೆಲ್ಲ ಬೆವತು ನಾಲಿಗೆ ನೂರು ವರುಷ ನೀರು ಕಾಣದಿದ್ದಷ್ಟು ಒಣಗಿಹೋಯಿತು. ಋಷಿ ವಿನೋದವಾಡುವನೇನು ಎಂದು ರಾಜ ತನ್ನ ಕಣ್ಣು ತಿಕ್ಕಿಕೊಂಡು ಮತ್ತೊಮ್ಮೆ ಅವನೆಡೆಗೆ ನೊಡಿದ. ಆದರೆ ರಾಗಾಲಸವಾದ ಅವನ ಕಣ್ಣಿನಲ್ಲಿಯೂ ಹೆಣ್ಣಿನ ಆಶೆ ಬಲಿತು ನಿಂತಿತ್ತು. ಆ 'ಭೋಳಾ' ಬ್ರಾಹ್ಮಣನ ಮದುವೆಯ ಮುದಿಹುಚ್ಚನ್ನು ಕಂಡು ರಾಜನಿಗೆ ನಗೆಯೂ ಬಂದಿತು. ಅವನ ಅವಿವೇಕತನಕ್ಕೆ ಸಿಟ್ಟೂ ಬಂದಿತು. ಆದರೂ ''ತಪಸ್ಸಿದ್ಧ''. 'ಇಲ್ಲ' ಎಂದರೆ ಶಾಪವನ್ನು ಕೊಟ್ಟು ಬಿಡುವನು. ಆದ್ದರಿಂದ ''ಹೇಗಾದರೂ ಯುಕ್ತಿಮಾಡಿ ಈ ಶನಿಪೀಡೆಯನ್ನು ತೊಲಗಿಸಬೇಕು'' ಎಂದು ಮನದಲ್ಲಿಯೇ ನಿರ್ಧರಿಸಿದ ಮಹಾರಾಜ. ''ಸಾಧುಗಳೇ'' ಗಂಟಲು ಸರಿಪಡಿಸಿಕೊಂಡು ರಾಜ ಹೇಳತೊಡಗಿದ ''ತಮ್ಮ ಬೇಡಿಕೆಗೆ ನನ್ನದೇನೂ ಅಭ್ಯಂತರವಿಲ್ಲ''.

''ಈಗಲೇ ವರದಾನ ಬೇಡು'' ನಡುವೆಯೇ ಆಶೀರ್ವಾದ ಮಂತ್ರ ನಿಲ್ಲಿಸಿ ಹೇಳಿದ. ಮಹಾರಾಜ ''ಮೊದಲು ಈ ಕನ್ಯಾದಾನದ ವಿಷಯ ಇತ್ಯರ್ಥವಾಗಲಿ.

ನನಗೇನೋ ತಮ್ಮಂಥ ಸತ್‌ಪಾತ್ರದಲ್ಲಿ ಕನ್ಯಾದಾನಮಾಡಿ ಪುಣ್ಯವನ್ನು ಪಡೆದುಕೊಳ್ಳಬೇಕೆಂದಿದೆ. ಆದರೆ ನಮ್ಮ ಕ್ಷತ್ರಿಯ ರಾಜಕುಮಾರಿಯರು ಪ್ರೌಢರಿದ್ದು ಸ್ವಯಂವರಕ್ಕೆ ಯೋಗ್ಯರಾಗಿದ್ದಾರೆ. ಮದುವೆಯ ವಿಷಯದಲ್ಲಿ ನಾನೆಂದಿಗೂ ಯಾವ

ಮಕ್ಕಳಿಗೂ ಒತ್ತಾಯ ಮಾಡಹೋಗುವದಿಲ್ಲ ಆದ್ದರಿಂದ ತಮ್ಮನ್ನು ಅಂತಃಪುರಕ್ಕೆ ಕರೆದೊಯ್ಯುತ್ತೇನೆ. ತಮ್ಮನ್ನು ನೋಡಿ ಯಾವ ಕನ್ನೆಯು ವರಿಸಲು ಸಿದ್ಧಳಾಗಿರುವಳೋ ಅವಳನ್ನು ತಮಗೆ ಧಾರೆಯೆರೆದು ಕೊಡುವೆನು ನಡೆಯಿರಿ ಕನ್ಯಾಂತಃಪುರಕ್ಕೆ '' ಎಂದನು.

ಮುನಿಗೆ ಈ ಗಡ್ಡ ಮೀಶೆ ಜಟಾದಂಡಕಾಷ್ಠಗಳ ಬೈರಾಗಿಯಾದ ತನ್ನನ್ನು ಯಾವ ಕನ್ನೆಯೂ ವರೆಸುವದಿಲ್ಲವೆಂದು ಅನಿಸಿತು. ಬಾಯಿಂದ ಇಲ್ಲವೆನ್ನದೇ ಮಹಾರಾಜ ಈ ಕುತಂತ್ರವನ್ನು ಹೂಡಿದ್ದಾನೆ ಎಂದೂ ತಿಳಿದು ಹೋಯಿತು. ಅಂತಃಪುರಕ್ಕೆ ಹೋಗಿ ಆ ಹುಡುಗಾಟಿಕೆಯ ಹೆಂಗಳೆಯರಿಂದ ಉಪಹಾಸಮಾಡಿಸಿಗೊಳ್ಳುವದಕ್ಕಿಂತ ಮರಳಿ ತನ್ನ ಆಶ್ರಮಕ್ಕೆ ಮರ್ಯಾದೆಯಿಂದ ತೆರಳುವದೇ ಒಳ್ಳೆಯದೆನ್ನಿಸಿತು. **ಈ ಜನ್ಮದಲ್ಲಿ ಹೆಣ್ಣು ತನಗೆ ದೊರಕದ ಹಣ್ಣು** ಎಂದು ನಿರ್ಧರಿಸಿ ನಿರಾಶೆಯಿಂದ ಗುಡಿಸಲಿಗೆ ಹೋಗಲು ಎದ್ದು ನಿಂತ.

ಆಗ ರಾಜನು ಗಂಭೀರಧ್ವನಿಯಿಂದ ಅಂತಃಪುರ ಪರಿಚಾರಿಕೆಯನ್ನು ಕರೆದು ''ಕನ್ಯಾ ನೋಡಲಿಕ್ಕೆ ಮಹರ್ಷಿಗಳು ಬರಲಿದ್ದಾರೆಂದು ಅಂತಃಪುರದಲ್ಲಿ ತಿಳಿಸಿರಿ. ಶೀಘ್ರದಲ್ಲಿಯೇ ಅವರೆಲ್ಲ ಶೃಂಗಾರಿತವಾಗಲಿ ಅಥವಾ ಸ್ವಯಂಬಂಗಾರದ ಬೊಂಬೆಗಳಂತಿರುವ ಅವರಿಗೆ ಬಣ್ಣ ರಂಗು ವಸ್ತು ಒಡವೆಗಳ ಅವಶ್ಯಕತೆಯೇ ಇಲ್ಲ. ಆ ನಿರಾಭರಣ ಸುಂದರಿಯರು ತಮ್ಮ ಅವ್ಯಾಜಮನೋಹರವಾದ ಶರೀರದಿಂದಲೇ ವರನನ್ನು ವರಿಸಲಿ'' ಎಂದು ಅಪ್ಪಣೆ ಮಾಡಿ ಮುನಿಗಳಿಗೆ 'ನಡೆಯಿರಿ, ಎಂದು ಅಂದು ತಾನು ಮುಂದಾದನು.

ಯಾದೃಚ್ಛಿಕವಾಗಿಯಾದರೂ ರಾಜನ ಮಾತಿನಲ್ಲಿ ಮೂಡಿ ಬಂದ ಅಂತಃಪುರದ ಬಣ್ಣದ ಬೊಂಬೆಗಳ ಚೆಲುವಿನ ಚಿತ್ರ ಋಷಿಯ ಅಂತರಂಗದಲ್ಲಿ ಶೃಂಗಾರದ ತರಂಗಗಳನ್ನು ಎಬ್ಬಿಸಿತು. 'ಮದುವೆಯಾಗದಿದ್ದರೂ ಅಷ್ಟೇ ಹೋಯಿತು. ಕೊನೆಗೆ ಒಮ್ಮೆ ಈ ರಾಜಾಂತಃಪುರದ ಬೊಂಬೆ ರಂಭೆಯುಯುರನ್ನು ಕಣ್ಣು ತುಂಬ ನೋಡಿಯಾದರೂ ತೃಪ್ತಿಪಟ್ಟರಾಯಿತು ಎಂದು ತನ್ನ ನಿರ್ಣಯವನ್ನು ಬದಲಿಸಿ ರಾಜನ ಹಿಂದೆ ಹೊರಟನು.

ಅಂತಃಪುರದಲ್ಲಿ ಕಾಲಿಟ್ಟಾಗ ಅಲ್ಲಿಯ ರತ್ನಗಂಬಳಿ, ರಾಮುಗನ್ನಡಿ, ಇಂದ್ರನೀಲಕುಟ್ಟಿಮ, ಮುತ್ತಿನ ಮಂಟಪ, ಕಲೆಯ ಕುಸುರುಗಳನ್ನೆಲ್ಲ ಕಂಡು ಅವಾಕ್ಕಾಗಿ ನಿಂತುಕೊಂಡ ಆ ಗುಡಿಸಲಿನ ಗೃಹಸ್ಥ ಮಿಂಚಿಗೆ ಮೈಯೊಡೆದಂತೆ ಚಕಪಕ ಸಂಚಲಿಸುವ ಆ ಚದುರೆಯರ ಚೆಲುವು ಚಾಂಚಲ್ಯ ಬಿಂಕು ಬಿನ್ನಾಣಗಳನ್ನು ಕಂಡು ಮೂಕವಿಸ್ಮಿತನಾದ. ಋಷಿಗೆ ಅಮರಾವತಿಯ ಅಪ್ಸರೆಯರೇ ಇಳಿದು ಬಂದಂತೆ ಅನಿಸಿತು. ಹೆಣ್ಣಿಗಾಗಿ ಹಂಬಲಿಸಿದ ಅವನ ಹೃದಯ ಆ ಅರ್ಧಶತ ರಂಭೆಯರ ಗೊಂಬೆಗಳನ್ನು ಸರಸರ ತನ್ನಲ್ಲಿ ಅಚ್ಚೊತ್ತಿ ಬಿಂಬಿಸಿಗೊಂಡುಬಿಟ್ಟಿತು. ಸ್ತ್ರೀ ಸೌಂದರ್ಯದ ಈ ಐವತ್ತು ಆವೃತ್ತಿಗಳನ್ನು ನೋಡಿದಾಗ ಬ್ರಹ್ಮದೇವರ ಭಾವ ಭಾಂಡಾರದ

ಅಕ್ಷಯತೆಯ ಬಗೆಗೂ ಅವನಿಗೆ ಆಶ್ಚರ್ಯವೆನಿಸದಿರಲಿಲ್ಲ. ಹರೆಯದ ರಸ ತುಂಬಿ ತುಳುಕುತ್ತಲಿರುವ ಇಷ್ಟೆಲ್ಲ ಹೂಜೇನಿನ ಹೂಜೆಗಳನ್ನು ದುಂಬಿಯಾಗಿ ತಾನೊಬ್ಬನೇ ಹೀರಿ ಸವೆದು ಸವಿಸಬೇಕು ಎಂಬ ಪಿಪಾಸೆ ಮುನಿಮನದಲ್ಲಿ ಹೆಡೆಯೆತ್ತಿ ನಿಂತುಕೊಂಡಿತು ರಾಜ ತೋರಿದ ಆಸನದಲ್ಲಿ ಮುನಿ ಕುಳಿತ.

''ಇವರು ಬ್ರಹ್ಮರ್ಷಿಯಾದ ಸೌಭರಿ ಮುನಿಗಳು. ವಿವಾಹೇಚ್ಛುಗಳಾಗಿ ಬಂದಿದ್ದಾರೆ. ಇಷ್ಟವಿದ್ದವರು ಇವರನ್ನು ವರಿಸಬಹುದು'' ಎಂದು ಮಹಾರಾಜ ತನ್ನ ಕನ್ನೆಯರನ್ನೆಲ್ಲ ಎದುರು ಕರೆಯಿಸಿ ಹೇಳಿದ. ತಮ್ಮ ಅಜ್ಜನನ್ನೂ ಆಡಿಸಬಹುದಾದಷ್ಟು ವಯಸ್ಸಿನ ಆ ವೃದ್ಧ ವರವನ್ನು ಕಂಡು ಆ ತರಳೆಯರ ತುಂಟನಗೆ ತಾಂಡವವಾಡಲು ತುಟಿಸಾಲದೆ ಕಣ್ಣಿನಂಚಿನಲ್ಲಿಯೂ ಹಣಿಕಿ ಹಾಕಿ ಅಣಕಿಸುತ್ತಲಿತ್ತು. ಆ ಮುದುಕನೆಡೆಗೆ ವರನೆಂಬ ದೃಷ್ಟಿಯಿಂದ ಒಮ್ಮೆ ನೋಡಲೂ ಕೂಡ ಅವರಿಗೆ ಇಚ್ಛೆ ಇರಲಿಲ್ಲ. ಈ ಸ್ಥವಿರವರನ ನೆವಮಾಡಿ ಒಬ್ಬರಿಗೊಬ್ಬರು ಹಾಸ್ಯ ಮಾಡಬೇಕೆನ್ನಿಸಿದರೂ ರಾಜನ ಗಂಭೀರ ಭಾವವನ್ನು ನೋಡಿ ಅವರೆಲ್ಲ ಸುಮ್ಮನೇ ನಿಂತುಕೊಂಡಿದ್ದರು.

''ವರನನ್ನು ನೋಡಿದ್ದಾಯಿತೇ ! ಏನು ನಿಮ್ಮ ಅಭಿಪ್ರಾಯ?'' ಮೌನ ಮುರಿದು ಮಾತಿಗೆ ಮಾರ್ಗಮಾಡಿದ ಮಹಾರಾಜ.

ಆಗ ಚಾಣಾಕ್ಷಳಾದ ಓರ್ವ ರಾಜಕುಮಾರಿ ಧಿಟ್ಟತನದಿಂದ ಮುಂದೆ ಬಂದು ಮುನಿಯ ಪಾದಕ್ಕೆ ವಂದಿಸಿ ನಿಂದು ''ನಮಗೆ ಯೋಗ್ಯವಾದ ವರಸಿಗುವಂತೆ ಸಿದ್ಧವಚನರಾದ ಮಹರ್ಷಿಗಳು ಆಶೀರ್ವದಿಸಬೇಕು'' ಎಂದು ಬೇಡಿಕೊಂಡಳು ಅದನ್ನು ನೋಡಿ ಉಳಿದೆಲ್ಲ ನಲವತ್ತೊಂಬತ್ತು ಬಳ್ಳಿಗಳೂ ಬಾಗಿ ನಮಸ್ಕರಿಸಿದವು.

''ತಥಾಸ್ತು'' ಎಂದು ನುಡಿದು ಮುನಿ ಅಂತಃಪುರದಿಂದ ಹೊರಹೊರಟ. ''ಎಂಥ ವರನನ್ನು ಬಿಟ್ಟೆಯಲ್ಲೆ ಹುಚ್ಚಿ'' ಹಿರಿಯಕ್ಕ ತುಂಟ ತಂಗಿಗೆ ಚೇಷ್ಟೆ ಮಾಡಿದಳು. ''ಒಳ್ಳೇ ಪ್ರಾಯದ ವರ'' ಕೊಂಕು ನುಡಿದಳು ಮತ್ತೊಬ್ಬಳು. ''ಒಳ್ಳೇ ಹರೆಯದಲ್ಲಿ ಮದುವೆಯ ವಿಷಯವೇ ಮರೆತು ಹೋಗಿರಬೇಕು ಪಾಪ'' ಒಂದು ಹಸುರೆಲೆ ನಸುನಕ್ಕಿತು. ''ಮೊದಲು ತಪಸ್ಸಿದ್ಧಿಯನ್ನು ಪಡೆದುಕೊಂಡು ಆ ಮೇಲೆ ಮದುವೆಯ ಶಾಸ್ತ್ರ ಮುಗಿಸಲಿಕ್ಕೆ ಬಂದಿದ್ದಾರೆ'' ಮತ್ತೊಬ್ಬ ಚತುರೆ ಅಲ್ಲಿಯೇ ಉತ್ತರಿಸಿದಳು.

''ತಪಸ್ಸಿಗೆ ವಿಘ್ನ ಮಾಡಲಿಕ್ಕೆ ಬಂದ ಯಾವದಾದರೂ ಅಪ್ಸರೆಯನ್ನು ವರಿಸಬಹುದಿತ್ತಲ್ಲ'' ಮಾತಿನೆಳೆಯನ್ನು ಮುಂದೆ ಜಗ್ಗುವದಕ್ಕಾಗಿ ನುಡಿದಳು ಓರ್ವ ವಿನೋದವತಿ.

''ಹರೆಯದವರು ತಪಸ್ಸು ಮಾಡಿದರೇ ಆ ರತಿರಂಭೆಯರು ಬರುವರು. ಇಂಥ ಗೃಧ್ರಗಳ ತಪಸ್ಸಿಗೆ ವಿಘ್ನಮಾಡಲು ಅಪ್ಸರೆಯರನ್ನು ಕಳಿಸದೇ ಹಾವು ಹುಲಿಗಳನ್ನು ಕಳಿಸುವರು'' ಕಿಲಿಕಿಲಿ ನಕ್ಕಿತು ಒಂದು ಕುಹಕಕಂಠ.

''ಬಹುಶಃ ಹೆಣ್ಣಿಗಾಗಿಯೇ ಇವನು ತಪಸ್ಸಿಗೆ ಕುಳಿತಿರಬಹುದು. ಹೆಣ್ಣಿನ ಬದಲಾಗಿ ಹಾವು ಹರಿದು ಬಂದು, ಹುಲಿ ಹಾರಿನಿಂದಾಗ ಸಿಂಹ ಗುಡುಗು ಹಾಕಹತ್ತಿದಾಗ ಹೆದರಿ ಊರ ಕಡೆಗೆ ಬಂದಿರಬಹುದು'' ತರ್ಕ ವಿಲಾಸ ಹೂಡಿದಳು ಒಬ್ಬ ವಿಲಾಸಿನಿ.

''ಅಲ್ಲ ! ಇಂಥ ದಿವ್ಯವರನನ್ನು ವರಿಸಿರಿ ಎಂದು ಅಂತಃಪುರಕ್ಕೆ ಕರಕೊಂಡು ಬರಬೇಕಾದರೆ ನಮ್ಮ ತಂದೆ ತನ್ನ ಬುದ್ಧಿಯನ್ನು ಅಡವಿಗೆ ತಪಸ್ಸಿಗೆ ಕಳಿಸಿದ್ದನೋ ಏನೋ'' ತಂದೆಯ ಮೇಲೆ ಮಗಳೋರ್ವಳು ಕಿಡಿಕಾರಿದಳು.

''ವರದಕ್ಷಿಣೆ ಇಲ್ಲದೇ ಕನ್ಯಾ ಖರ್ಚು ಆದಷ್ಟಾಗಲಿ, ಐವತ್ತು ಮಂದಿಗೆ ಎಷ್ಟೆಂದು ವೆಚ್ಚ ಮಾಡಬೇಕು ಎಲ್ಲಿಂದ ತರಬೇಕು ಪಾಪ ಹಣವನ್ನು'' ಇನ್ನೊಬ್ಬ ಮಗಳು ತಂದೆಯ ರಕ್ಷಣೆಗೆ ಅಣಿಯಾದಳು.

''ಇಂಥ ಅಜ್ಜೋಬನ ಕೊರಳಿಗೆ ಕಟ್ಟುವದಕ್ಕಿಂತ ಬೆಂಕಿಯಲ್ಲಿ ಒಗೆದು ಬಿಡಬಾರದೇ ಮಕ್ಕಳು ಹೆಚ್ಚಾಗಿದ್ದರೆ'' ರೊಚ್ಚಿನಿಂದ ನುಡಿದಳು ಮೊತ್ತೊಬ್ಬಳು.

ಹೀಗೆಯೇ ಅವರೆಲ್ಲ ವ್ಯಂಗ್ಯೋಕ್ತಿ ವಿನೋದಗಳಿಂದ ಸರಸವಾಡುತ್ತ ಅರಮನೆಯ ವಸಂತೋದ್ಯಾನಕ್ಕೆ ಬಂದರು. ಅಲ್ಲಿ ಗಂಧ ಮಕರಂದಗಳ ಭಾರದಿಂದ ತೆನೆದಾಡುತ್ತಿರುವ ಹೂವಿನ ಗೊಂಚಲಗಳನ್ನು ಕಿತ್ತಿ ಹೆರಳಿಗೆ ತೂಗು ಬಿಟ್ಟರು. ಕೈಯ್ಯಲ್ಲಿ ಒಂದೊಂದು ತುಂಬು ತಾವರೆಯ ದೇಟನ ತುದಿ ಹಿಡಿದು ಲೀಲಾ ಲಾಲಿತ್ಯದಿಂದ ತೂಗಾಡುತ್ತ ಕೇಲೀ ಸರೋವರ ದಂಡೆಗೆ ಬಂದರು. ಆ ಪುಷ್ಪ ಪರಾಗದಿಂದ ಅವರ ಮೈ ಕೈಗಳಿಗೆಲ್ಲ ರಂಗು ತೀಡಿದಂತಾಗಿತ್ತು. ಕೊಳದಲ್ಲಿ ಅರಸಂಚೆಗಳು ಜಲದ ಜೋಕಾಲೆಯನ್ನು ಜೀಕುತ್ತ ಕಮಲ ದ್ವೀಪದ ಸಂಚಾರ ಕೈಕೊಂಡಿದ್ದವು. ಗಂಧದ ಭಾರದಿಂದ ಮಂದವಾದ ತಂಗಾಳಿ ಆ ರಾಜಕುಮಾರಿಯರಿಗೆ ತೆರೆಯ ತುಂತುರುಗಳಿಂದ ಪನ್ನೀರ ಚಿಮುಕಿಸುತ್ತಿತ್ತು.

ಗಾಳಿಗುಂಟ ತೇಲಿ ಬರುವ ಆ ಸುಗಂಧಕ್ಕೆ ಅವರೆಲ್ಲ ಬನದ ಬಳ್ಳಿಯಂತೆ ಆನಂದದಿಂದ ತುಳುಕಿ–ಬಳುಕುತ್ತಲಿರುವಾಗ ದೂರಿಂದ ಕುದುರೆಯ ಖುರ ಪುಟ ಧ್ವನಿ ಕೇಳಿ ಬಂತು. ಕುತೂಹಲದಿಂದ ಅವರೆಲ್ಲ ದನಿ ಬರುವ ಕಡೆಗೆ ನೋಡುವಷ್ಟರಲ್ಲಿ ಆ ಕೆಂಧೂಳಿನ ಕೋಟೆಯನ್ನು ಸೀಳಿಕೊಂಡು ರಾವುತನೊಬ್ಬ ಬರುತ್ತಲಿದ್ದ. ಕಣ್ಣು ಪಿಳುಕಿಸುವಷ್ಟರಲ್ಲಿ ಆ ಅಶ್ವಾರೋಹಿ ಕೊಳದ ತಡಿಗೆ ತಂದು ನಿಲ್ಲಿಸಿದ್ದ ತನ್ನ ಉಚ್ಚೈಶ್ರವವನ್ನು. ಅಲ್ಲಿ ಆ ಚೆಲುವೆಯರ ಬಳಗವನ್ನು ನೋಡಿ ಅವನು ಕುದುರೆ ಬಿಟ್ಟಿಳಿದ.

ಅವನ ತುಂಬು ಮೊಗದ ಚಂದ್ರಬಿಂಬವನ್ನು ಕಂಡಾಗ ಈ ಹೆಂಗಳೆಯರ ಕಂಗಳೆಲ್ಲ ಅರಳಿ ಉತ್ಪಲವಾದವು. ಮೊಗಗಳು ಉತ್ಫುಲ್ಲವಾದವು. ಗಲ್ಲ ಗುಲಾಬಿಯಾದವು. ಆಶೆ ತಳೆದ ನೂರು ಕಣ್ಣುಗಳು ಆ ರಾಜಕುಮಾರ ನನ್ನು ಮುತ್ತಿದವು.

ಅವನ ಹಣೆಯ ಮಣೆಯ ಮೇಲೆ ಮುತ್ತುಗಳನ್ನಿಟ್ಟಂತೆ ಬೆವರಿನ ಹನಿಗಳು ನಿಂತಿದ್ದವು. ಹೆಣ್ಣು ಹೃದಯದ ಹರೆಯದ ಹೊಂಗನಸೆಲ್ಲ ಅವನ ಮೈ ಮಾಟದಲ್ಲಿ ಆಕಾರವಡೆದಿತ್ತು. ಅವನ ಬೊಗಸೆಗಂಗಳಲ್ಲಿ ತುಂಬಿ ತರುವಷ್ಟು ಕಾಂತಿ ತುಳುಕುತ್ತಲಿತ್ತು. ಈ ಚೆಲುವಿನ ಚಂದ್ರಾಮನನ್ನು ಕಂಡರೆ ಕಾಮ ಶಿವನ ನೇತ್ರಾಗ್ನಿಯಿಲ್ಲದಿದ್ದರೂ ಹೊಟ್ಟೆಕಿಚ್ಚಿನಿಂದಲೇ ಉರಿದು ಹೋಗಬಹುದಾಗಿತ್ತು.

ಅವನು ಅಲ್ಲಿಯ ಅಚ್ಛೋದ ಸ್ವಚ್ಛವಾದ ಆ ಸರಸ್ತೀರದಲ್ಲಿಳಿದು ನೀರಮೇಲೆ ತೇಲುವ ಕಸಕಡ್ಡಿಗಳನ್ನು ತನ್ನ ಚಿಗುರು ಬೆರಳಿನಿಂದ ಸರಿಸಿ ಬೊಗಸೆಗೈಯಿಂದ ಯಥೇಷ್ಟವಾಗಿ ಜಲಪಾನ ಮಾಡಿದನು. ದಂಡೆಯಲ್ಲಿ ಹೆಮ್ಮರವಾಗಿ ಬೆಳೆದು ನಿಂತ ಕೆಮ್ಮಾವಿನ ನೆರಳಲ್ಲಿ ಎರಡು ನಿಮಿಷ ನಿಂತು ದಣುವಾರಿಸಿಗೊಂಡು ದೂರದಿಂದ ಎರಳೆ ಗಣ್ಣಿನಿಂದ ತನ್ನೆಡೆಗೆ ನೋಡುತ್ತಲಿರುವ ಆ ತರಳ ರಾಜಕನ್ನೆಯರ ಕಡೆಗೆ ಒಮ್ಮೆ ಕಾಮಾಲಸ ಕಟಾಕ್ಷವನ್ನು ಬೀರಿದ. ಆವರೆಲ್ಲರ ಹೃದಯಗಳು 'ಜುಮ್' ಎಂದವು. ಬುಡಹಿಡಿದು ಅಲುಗಾಡಿಸಿದ ಬಳ್ಳಿಯಂತೆ ಆ ಒಂದು ಕಟಾಕ್ಷಕ್ಕೇ ಅವರ ಸರ್ವಾಂಗವೂ ಕಂಪಿಸಿ ಹೋಯಿತು. ಅವನ ಕೊಂಕಿದ ಹುಬ್ಬು, ಕುಣಿಯುವ ಕಣ್ಣು, ಹವಳದ ತುಟಿ, ಉಬ್ಬುಗಲ್ಲು, ತೆನೆಮೂಗು, ತುಂಬುಮೊಗ, ತರುಣಮಯಅರುಣಕಾಂತಿ ಎಲ್ಲವೂ ಅವರ ಚಿತ್ತದ ಭಿತ್ತಿಯಲ್ಲಿ ಕೆತ್ತಿ ಕೊರೆದಂತಾಗಿತ್ತು, ಒತ್ತಿ ಮೂಡಿಸಿ ದಂತಾಗಿತ್ತು. ಒಂದು ಮುಗ್ಧ ಮಂದಹಾಸವನ್ನು ಬೀರಿ ಅವನು ತನ್ನ ಕುದುರೆಯನ್ನು ಏರಿ ರಾಜಭವನದೆಡೆಗೆ ತೆರಳಿದ.

ಕುದುರೆ ಕಣ್ಣು ಮರೆಯಾಗಿ ಅವನ ಬೆನ್ನು ಮರೆಯಾಗಿ ಧೂಳಿ–ಗಾಳಿ ಮರೆಯಾಗುವವರೆಗೂ ಆ ಚೆಲುವಿನ ಚಿಕ್ಕೆಗಳು ಹಾಗೇ ನಿಶ್ಚಲರಾಗಿ ನಿಂತಿದ್ದರು. ಒಬ್ಬರನ್ನೊಬ್ಬರು ಯಾರೂ ಮಾತನಾಡಿಸುವ ಸ್ಥಿತಿಯೇ ಇರಲಿಲ್ಲ. ಮಂತ್ರ ಮುಗ್ಧರಾಗಿ ತಮ್ಮ ನಿವಾಸಕ್ಕೆ ತೆರಳಿದರು.

ಆ ರಾಜಕುಮಾರನು ಮಾಂಧಾತೃನಿಗೆ ತನ್ನ ಮನೀಷೆಯನ್ನು ತಿಳಿಸಿದ. ಅವನ ವೇಷ ಭೂಷ ವರ್ಚಸ್ಸು ರೂಪ ವಿದ್ಯೆಗಳನ್ನು ಕಂಡು ಯಾರಾದರೂ ಒಬ್ಬ ಮಗಳನ್ನು ಕೊಡಬೇಕೆಂದು ಸಂಕಲ್ಪಿಸಿ ಮಹಾರಾಜನು ಅವನನ್ನು ಕರೆದುಕೊಂಡು ಅಂತಃಪುರಕ್ಕೆ ಬಂದ.

ಅಲ್ಲಿ ಈ ಮೊದಲೇ ಶೃಂಗಾರಾಗಿ ನಿಂತ ತನ್ನ ಮಕ್ಕಳ ಸೌಂದರ್ಯ ಸಿರಿಯನ್ನು ಕಂಡು ರಾಜನಿಗೇ ಅಚ್ಚರಿಯಾಯಿತು.

ಒಂದೊಂದು ಅಂಗವಿನ್ಯಾಸ ಒನಪು ಒಯ್ಯಾರಗಳಿಂದಲೂ ಒಂದೊಂದು ತರಹದ ಲಾವಣ್ಯ ಲಹರಿಗಳನ್ನೇ ಹರಿಯಿಸುತ್ತಲಿರುವ ತನ್ನ ಅಕ್ಕರೆಯ ಮಕ್ಕಳಿಗೆಲ್ಲ ಮಹಾರಾಜನು ಆ ತರುಣ ರಾಜಕುಮಾರನ ಪರಿಚಯ ಮಾಡಿಕೊಟ್ಟು 'ಇವನನ್ನು ಯಾರು ವರಿಸುವಿರಿ' ಎಂದು ಕೇಳಿದ.

ಆಗ ಹಿರಿಯ ಮಗಳು ಮುಂದಾಗಿ 'ನಾನು' ಎಂದಳು.

ಕೊನೆಯ ಮಗಳು ''ಮೊದಲು ನನ್ನ ಪಾಳಿ ಆದ್ದರಿಂದ ನಾನೇ ಇವನನ್ನು ಮದುವೆಯಾಗುವೆ'' ಎಂದು ತನ್ನ ನಿರ್ಧಾರವನ್ನು ಸಾರಿದಳು.

ನಡುವಿನವಳು ''ನಿನ್ನೆ ತೋಟದಲ್ಲಿ ನನ್ನ ಕಡೆಗೆ ಪ್ರಣಯ ಕಟಾಕ್ಷಬೀರಿ ಇವರು ನನ್ನನ್ನು ವರಿಸಿದ್ದಾರೆ. ಕಾರಣ ನಾನೇ ಇವರನ್ನು ವರಿಸುವೆ'' ಎಂದು ಹೇಳಿದಳು.

ಹೀಗೆ ಐವತ್ತೂ ಜನರು ಅವನನ್ನೇ ವರಿಸುವದಾಗಿ ಹೇಳಿದರು.

ರಾಜನು ಈ ವಿಚಿತ್ರವಾದ ಸನ್ನಿವೇಶವನ್ನು ಕಂಡು ತಬ್ಬಿಬ್ಬಾಗಿ ನಿಂತುಕೊಂಡ. ಮದುವೆಯ ವಿಷಯ ಬಂದಾಗೆಲ್ಲ ಎಂದಿಗೂ ಮೌನದ ಮುಚ್ಚಳ ತೆಗೆದು ಮಾತನಾಡದ ತನ್ನ ಶಾಲೀನ ಕನ್ನೆಯರೆಲ್ಲ ತನ್ನ ಹಾಗೂ ವರನ ಎದುರೇ ನಿರ್ಲಜ್ಜರಂತೆ ನುಡಿಯುತ್ತಿರುವರಲ್ಲ! ಇದೇನು ವಿಚಿತ್ರ ! ಇವನೇನಾದರೂ ಇವರಿಗೆ ಮಾಟಗೀಟ ಮಾಡಿರುವನೇ? ಎಂದು ದಿಗ್ಭ್ರಮೆಗೊಂಡು ಕುಳಿತುಬಿಟ್ಟನು.

ಆ ರಾಜಕುಮಾರನು ಎಲ್ಲರನ್ನೂ ಕಾಮದೃಷ್ಟಿಯಿಂದ ನೋಡುತ್ತಲಿದ್ದುದರಿಂದ ಅವರೆಲ್ಲರಿಗೂ ಅವನನ್ನು ಪಡೆದೇ ತೀರಬೇಕೆಂದು ಹಟ ಹುಟ್ಟಿತ್ತು, ಈಗ ಲಜ್ಜೆಯಿಂದ ಸುಮ್ಮನೆ ಕುಳಿತರೆ ಕೈಗೆಬಂದ ತುತ್ತು ಜಾರಿ ಹೋದೀತೆಂದು ಎಲ್ಲರೂ ಅವನನ್ನು ತಮ್ಮ ಸತೀತ್ವದ ಸೊತ್ತನ್ನಾಗಿ ಪಡೆಯಲು ಹವಣಿಸಹತ್ತಿದರು. ಕೊನೆಗೆ ಆ ಅಕ್ಕತಂಗಿಯರಲ್ಲಿ ಅವನ ಕೈ ಹಿಡಿಯುವ ಬಗ್ಗೆ ಬಡೆದಾಟವೇ ಪ್ರಾರಂಭವಾಯಿತು. ಒಬ್ಬೊಬ್ಬರು ಒಂದೊಂದು ರೀತಿಯಾಗಿ ತಮ್ಮ ಪ್ರಣಯ ಪ್ರತಿಜ್ಞೆಗಳನ್ನು ಸಾರಿ ಅವನ ಮೇಲೆ ತಮ್ಮ ತಮ್ಮ ಹಕ್ಕನ್ನು ಸ್ಥಾಪಿಸಲೆತ್ನಿಸಹತ್ತಿದರು.

ಹೀಗೆ ಎಲ್ಲರೂ ಅವನನ್ನೇ ವರಿಸುತ್ತೇವೆಂದು ಕಾದಾಡಹತ್ತಿದರು. ಕೂಡಲೇ ರಾಜಕುಮಾರನೇ ಹೀಗೆ ಹೇಳಿದ.

'' ಹಾಗಾದರೆ ನನ್ನನ್ನು ವರಿಸಬೇಕೆಂದು ಯಾರಿಗೆ ಬಲವಾದ ಬಯಕೆ ಇದೆಯೋ ಅವರು ಸ್ವಯಂವರ ಮಾಲೆಯನ್ನು ತೆಗೆದುಕೊಂಡು ಬನ್ನಿರಿ''

ತಕ್ಷಣದಲ್ಲಿ ಆವರೆಲ್ಲರೂ ಆಮ್ಲಾನವಾದ ಪುಷ್ಪಮಾಲೆಗಳನ್ನು ಹಿಡಿದು ನಾಮುಂದೆ ತಾಮುಂದೆ ಎಂದು ಬಂದು ಮಾಲೆಹಾಕಿದರು.

ರಾಜನು ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ಆ ರಾಜಕುಮಾರನ ಕೊರಳಲ್ಲಿ ಐವತ್ತು ಸ್ವಯಂವರ ಮಾಲೆಗಳು ಶೋಭಿಸುತ್ತಲಿದ್ದವು. ಹಾರಭಾರಕ್ಕೆ ಆ ಯುವಕನ ಕತ್ತುಬಗ್ಗಿತ್ತು, ಹೃದಯ ಹಿಗ್ಗಿತ್ತು.

ಕ್ಷತ್ರಿಯ ರಾಜಕುಮಾರಿಯರು ಸ್ವಯಂವರದ ಮಾಲೆಯನ್ನು ಹಾಕಿದ ಬಳಿಕ ಯಾರೂ ಎದುರು ಮಾತನಾಡುವಂತೆಯೇ ಇರಲಿಲ್ಲ, ಅದನ್ನು ಬದಲಿಸುವ ಮಾತೂ

ಕೂಡ ವಾಗತ್ಯದ್ದಾಗಿತ್ತು. ನಿರ್ವಾಹವಿಲ್ಲದೇ ರಾಜ 'ನಿಮ್ಮ ಅದೃಷ್ಟ' ಎಂದು ಅವರೆಲ್ಲರನ್ನೂ ವಿಜೃಂಭಣೆಯಿಂದ ಅವನಿಗೆ ಧಾರೆಯೆರೆದು ಕೊಟ್ಟ.

ಹಸೆಯ ಮಣೆಯ ಮೇಲೆ ಕುಳಿತಾಗ ರಾಜಕುವಮಾರ ಐವತ್ತು ಜನ ಹೆಂಡಂದಿರಿಗೂ ಹೆಸರು ಹೇಳಿ ಹಣೆಯ ಮೇಲೆ ಕುಂಕುಮತಿಲಕವನ್ನಿಟ್ಟ. ಅವರೆಲ್ಲರ ಕಡೆಯಿಂದ ಒಗಟು ಹಾಕಿಸಿ ಈ ಏಕಪತಿಯ ಹೆಸರನ್ನು ಹೇಳಿಸಬೇಕೆಂದು ಹಿರಿಯರು ಅವನ ಹೆಸರೇನೆಂದು ಪುರೋಹಿತರನ್ನು ಕೇಳಿದರು.

''ಸೌಭರಿ'' ಎಂದು ನಗುತ್ತ ನುಡಿದರು ಪುರೋಹಿತರಾದ ಭರದ್ವಾಜರು. ಆಗ ರಾಜಕುವರಿಯರೆಲ್ಲ ಕಕ್ಕಾಬಿಕ್ಕಿಯಾಗಿ ಅವನ ಮೈ ಕೈ ನಿಲುವು ಹರವುಗಳನ್ನು ಪರೀಕ್ಷಿಸಹತ್ತಿದರು. ಬೆಳ್ಳಿಯ ಗಡ್ಡವಾಗಲಿ ಜಡೆಗಟ್ಟಿದ ಕೂದಲುವಾಗಲಿ ದಂಡ, ಕಮಂಡಲ, ಕೃಷ್ಣಾಜಿನವಾಗಲೀ ಯಾವದೂ ಇರಲಿಲ್ಲ. ಇದೇನು ಗುರುತೇ ಹತ್ತುವದಿಲ್ಲವಲ್ಲ. ಆ ಮುದುಕ ಮಹರ್ಷಿ ಎತ್ತ ? ಈ ತರುಣ ತೇಜಸ್ವಿರಾಜಕುಮಾರನೆತ್ತ' ಎಂದು ಕೇಳಲು,

''ತನ್ನ ತಪಃ ಪ್ರಭಾವದಿಂದ ಇಂಥ ದಿವ್ಯದೇಹವನ್ನು ರಾಜೈಶ್ವರ್ಯವನ್ನೂ ಪಡದುಕೊಂಡು ಬಂದು ನಿಮ್ಮ ಕೈ ಹಿಡಿದು ಕಂಕಣ ಕಟ್ಟಿದ್ದಾನೆ, ನಿಜವಾಗಿಯೂ ನೀವು ''ಸೌಭಾಗ್ಯವತಿಯರು'' ಎಂದು ಎದೆ ತುಂಬಿ ಭರದ್ವಾಜರು ಆ ನವ ವಧುಗಳನ್ನೆಲ್ಲ ಆಶೀರ್ವದಿಸಿದರು.

ಮುಂದೆ ಆ ಸೌಭರಿಯು ತನ್ನ ಎಲ್ಲ ಹೆಂಡಂದಿರನ್ನೂ ಕರೆದುಕೊಂಡು ಯಮುನಾ ನದಿಯ ದಂಡೆಯಮೇಲಿರುವ ತನ್ನ ಗುಡಿಸಲಿಗೆ ಬಂದನು. ಆ ಪರ್ಣಕುಟೀರವನ್ನು ಕ್ಷಣಾರ್ಧದಲ್ಲಿ ಚಂದ್ರಚುಂಬಿ ಗಗನಲಂಬಿಯಾದ ದಿವ್ಯ ಪ್ರಾಸಾದವನ್ನಾಗಿ ಮಾರ್ಪಡಿಸಿ ಅದರಲ್ಲಿ ಎಲ್ಲ ತರಹದ ಭೋಗ ಸಾಮಗ್ರಿಗಳನ್ನು ತನ್ನ ತಪಃ ಪ್ರಭಾವದಿಂದ ತರಿಸಿ ಅವರೆಲ್ಲರನ್ನೂ ಶೃಂಗಾರ ಜೀವನದಲ್ಲಿ ತೃಪ್ತಿಪಡಿಸಿದನು ಯಾರಿಗೂ ಯಾವುದಕ್ಕೂ ಕೊರತೆಯಾಗಗೊಡದಂತೆ ಅವರು ನಿಂತಲ್ಲೇ ನಂದನವನ್ನು ಇಳಿಸಿದನು. ಕಣ್ಣೆದುರೇ ಕಲ್ಪವೃಕ್ಷವನ್ನು ಕುದುರಿಸಿದನು. ತಾನು ಒಬ್ಬನಾದರೂ ಐವತ್ತೂ ಭೋಗ ಬಟ್ಟಲಗಳಿಗೆ ತನ್ನ ದೈವೀ ಶಕ್ತಿಯಿಂದ ಮಧು ಪೂರಣ ಮಾಡಿ ಐದು ಸಾವಿರ ಸಂತಾನ ಪಡೆದು ಆದರ್ಶ ಗೃಹಸ್ಥನಾಗಿ ಸುಖಪಟ್ಟನು.

ಮುಂದೆ ಒಂದು ದಿನ ತನ್ನ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಹೆಣ್ಣು ಮಕ್ಕಳು, ಅಳಿಯಂದಿರು, ಅವರ ಅಳಿಯಂದಿರು, ಅವರ ಮಕ್ಕಳು, ಮೊಮ್ಮಕ್ಕಳು ಮೊದಲಾದ ಹಿಂಡು ಬಳಗದೊಂದಿಗೆ ಮುನಿಯು ಯಮುನೆಯ ದಂಡೆಯಲ್ಲಿ ಅದೇ ಚಕ್ರತೀರ್ಥದ ಬಳಿಯಲ್ಲಿ ಕುಳಿತಿದ್ದನು. ಅಂದಿನಂತೆ ಆಗ ಮತ್ತೆ ಎರಡು ಜೋಡಿ ಮೀನಗಳು ಕೂಡ ತರಂಗ ತಲ್ಪದಲ್ಲಿ ರತಿ ಕ್ರೀಡೆಯನ್ನು ನಡೆಯಿಸಿದವು. ರಾಗ ತುಂಬಿ ಚುಂಬಿಸಿದವು. ಒಂದನ್ನೊಂದು ರಂಬಿಸಿದವು. ಆನಂದಪರವಶತೆಗೆ ಹೆಣ್ಣು ಕಣ್ಣು ಪಿಳಕಿಸಿ

ಉಲ್ಲಾಸದಿಂದ ಗರಿತಿರುವಿತು. ಕಾಮದ ಮದ ತುಂಬಿದ ಗಂಡು ಆ ತಿರುವು ಗರಿಯನ್ನು ತನ್ನ ಪುಚ್ಛದಿಂದ ಹೊಚ್ಚಿತು.

ಅದನ್ನು ನೋಡಿದ ತಕ್ಷಣ ಸೌಭರಿಯ ಹೃದಯದಲ್ಲಿ ಸಾವಿರ ಮಿಂಚು ಹೊಡೆದಂತಾಯಿತು. ತನ್ನ ತಪೋಜೀವನದ ಕೊನೆಯ ದಿನ ಇದೇ ಚಕ್ರತೀರ್ಥದ ತೀರದಲ್ಲಿ ನಡೆದ ಈ ಮೀನಮೈಥುನದ ಇದೇ ದೃಶ್ಯ ಅವನ ಕಣ್ಣೆದುರು ಕಟ್ಟಿತು. ಅಂದಿನಿಂದ ಇಂದಿನವರೆಗೆ ನಡೆದ ಘಟನಾ ಪರಂಪರೆಯೆಲ್ಲ ಚಿತ್ತಭಿತ್ತಿಯಲ್ಲಿ ಸುರುಳಿಬಿಚ್ಚಿ ಸುಳಿದುಹೋಯಿತು. ಪವಿತ್ರವಾದ ಬ್ರಹ್ಮರ್ಷಿ ಪದದಿಂದ ಉರುಳಿ ಪ್ರಪಂಚ ಪಂಕದಲ್ಲಿ ಹೊರಳಾಡುತ್ತಲಿರುವ ತನ್ನ ಅಧಃಪಾತವನ್ನು ಕಂಡು ಅವನಿಗೆ ನಾಚಿಕೆಯೆನಿಸಿತು. ಹಿಂದೆ ಅನೇಕ ವರುಷಗಳವರೆಗೆ ಘೋರತಪವನಾಚರಿಸಿ ಬಹು ಕಷ್ಟಪಟ್ಟು ಸಂಪಾದಿಸಿದ ಪುಣ್ಯರಾಶಿಯೆಲ್ಲ ಈ ಮೀನವಿಹಾರದ ನೋಟದಿಂದ ಹಾಳಾಗಿ ತಪಃಕ್ಷಯವಾದುದಕ್ಕಾಗಿ ಬಹಳೇ ಪಶ್ಚಾತ್ತಾಪವೆನಿಸಿತು. ಬಾಳು ಬೇಸರವಾಗಿ ಮನದಲ್ಲಿ ವೈರಾಗ್ಯ ಮೂಡಿತು. ಒಮ್ಮಿಂದೊಮ್ಮೆಲೇ ಅವನು ಬಂಧುವೃಂದದಿಂದ ವೈಕೊಡೆದೆದ್ದು ನಿಂತ. ತನ್ನ ಅಧೋಗತಿಗಾಗಿ ಮಮ್ಮಲನೇ ಮರುಗಿದ. ಅಂದಿನ ತನ್ನ ಆ ತಪಃಸಿದ್ಧಿ ಇಂದಿನ ಲಂಪಟತನಗಳನ್ನು ತೂಗಿ ತಾನೇ ''**ಅಹೋ ಇಮಂ ಪಶ್ಯತ ಮೇ ವಿನಾಶಂ ತಪಸ್ವಿನಃ ಸಚ್ಚರಿತವ್ರತಸ್ಯ ಅಂತರ್ಜಲೇ ವಾರಿಚರಪ್ರಸಂಗಾತ್ ಪ್ರಸ್ರಾವಿತಂ ಬ್ರಹ್ಮಚಿರಂ ಧೃತಂ ಯತ್**'' ಎಂದಂದು ಎಲ್ಲವನ್ನೂ ಬಿಟ್ಟು ವಿರಕ್ತನಾಗಿ ಅಡವಿಗೆ ತಪಸ್ಸಿಗೆ ಹೊರಟನು. ಆಗ ಅವನ ಐವತ್ತೂ ಜನ ಸಾಧ್ವಿಯರಾದ ಹೆಂಡಂದಿರೂ ರಾಗರಹಿತರಾಗಿ ಭೋಗವಿಮುಖರಾಗಿ ಪತಿಯೊಂದಿಗೆ ತಪೋನುಷ್ಠಾನಕ್ಕೆ ಪ್ರಯಾಣವನ್ನು ಬೆಳೆಸಿದರು. ತಪಃ ಪ್ರಭಾವದಿಂದ ಮುಕ್ತರಾಗಿ ಬ್ರಹ್ಮಾಪರೋಕ್ಷವನ್ನು ಹೊಂದಿದರು.

ಸತಿಯ ಹೋಗಲೆಂದು ಪತಿಯೇ ಚಿತೆಯನೇರಿದ

''ಸತೀನಾಂ ಸ್ವೇ ಪತ್ಯೌ ಪ್ರಣಯಪರಿಪಾಕಸ್ಯ ಮಹಿಮಾ
ಕಿಮಾಖ್ಯೇಯೋ ಯಸ್ಮಿನ್ ಮೃದು-ಕುಸುಮ-ತಲ್ಪೀಯತಿ ಚಿತಾ
ಅಪಿ ಜ್ವಾಲಾ ವರ್ನ್ವೇರ್ಮಲಯಜರಸೀಯಂತಿ ವಿಧುತಾಃ
ಕೃತಾಂತೋಽಪಿ ಕ್ರೂರಃ ಕುಸುಮವಿಶಿಖೀಯನ್ ವಿಲಸತಿ||

ಮಹಾರಾಜ ಶರ್ಯಾತಿಗೆ ಬೇಟೆಯ ಹುಚ್ಚು ಬಹಳ. ಹುಲಿ, ಸಿಂಹ, ಮದ್ದಾನೆ ಮೊದಲಾದ ಹಿಂಸ್ರ ಪಶುಗಳ ಬೆನ್ನುಹತ್ತಿ ಹೊರಟನೆಂದರೆ ರಾಜ್ಯ, ಮನೆ, ಮಡದಿ, ಎಲ್ಲವೂ ಮರೆತೇ ಹೋಗುತ್ತಿತ್ತು. ಅರಸಿ ಸ್ಥವಿಷ್ಠೆ ಪತಿ ಪ್ರಾಣಳಾದ ಅಳ್ಳೆದೆಯ ಹೆಣ್ಣು. ತನ್ನ ಕಣ್ಮಣಿಯಾದ ಮಹಾರಾಜನನ್ನು ಅಗಲಿದಾಗ ಒಂದು ತ್ರುಟಿಯೂ ಯುಗವಾಗುತ್ತಿತ್ತು ಅವಳಿಗೆ, ಅದರಲ್ಲಿ ಬೇಟೆಯ ನೆವದಿಂದ ರಾಜನು ನಿತ್ಯವೂ ಸಾವಿನ ಜೊತೆಗೆ ಸೆಣಸ್ಯಾಡುವದು ಅವಳಿಗೆ ಭೀತಿಯನ್ನುಂಟುಮಾಡಿತ್ತು.

ಶರ್ಯಾತಿ ಧನುಷ್ಪಾಣಿಯಾಗಿ ಆಖೇಟಕ್ಕೆ ಹೊರಟು ನಿಂತಾಗ ರಾಣಿಯ ಕಣ್ಣು ಕಾರ್ಗಾಲದ ಹೊಂಡವಾಗಿತ್ತು. ಸಂತೈಸಲಿಕ್ಕೆಂದು ಬಂದ ರಾಜನ ವಕ್ಷಸ್ಥಳದಲ್ಲಿ ಮೃದು ಕಪೋಲವನ್ನಿರಿಸಿ ಬೇಡವೆಂದು ಬೇಡಿಕೊಂಡಳು. ಅವಳ ಸುರಳಿಗುರಳನ್ನು ಮೃದುವಾಗಿ ನೇವರಿಸಿ, ಆರ್ದ್ರ ಕಣ್ಣುಗಳನ್ನು ಒರೆಸಿ, ಬೇಗಬರುವೆನೆಂದು ಹೇಳಿ ಸಂತೈಸಿ, ಅವನು ಹೊರಟು ನಿಂತನು. ''ನೀವಿಲ್ಲದಾಗ ನನಗೆ ಒಂದೊಂದು ನಿಮಿಷವನ್ನೂ ನೂರು ವರುಷದಂತೆ ನೂಕಬೇಕಾಗುವದು. ಉಸುರಿನ ಅಲೆಗಳನ್ನೇ ಎಣಿಸುತ್ತ ಕುಳಿತಿರುತ್ತೇನೆ. ಅಡವಿಯಲ್ಲಿ ನಿಮ್ಮನ್ನು ಕಂಡಾಗ ಸಾಯುವ ಮೃಗಗಳು ಇದ್ದರೆ, ನಿಮ್ಮನ್ನು ಕಾಣದಿದ್ದರೆ ಸಾಯುವ ಮೃಗಾಕ್ಷಿ ಮನೆಯಲ್ಲಿರುವಳೆನ್ನುವದನ್ನು ಮರೆಯಬೇಡಿರಿ'' ಎಂದು ಮೊರೆಯಿಟ್ಟು, ಶೋಕಪಟ್ಟಳು.

ಮಹಾರಾಜನಿಗೆ ಅವಳ ಈ ಅತಿ ಪ್ರೇಮ ಕೃತಕವೆನ್ನಿಸಿತು. ''ಹೆಣ್ಣಿಗೆ ನಾಟಕ ಮಾಡಲು ರಂಗಭೂಮಿಯ ಕಾರಣವೇ ಇಲ್ಲ. ಅವರು ಉಸಿರನ್ನು ಎಳೆದಾಗ ಒಂದು ಹಾವವಿದ್ದರೆ ಬಿಟ್ಟಾಗ ಬೇರೊಂದು ಭಾವವಿರುತ್ತದೆ. ಅಭಿನಯವೂ ಕಣ್ಣು ಕಿವಿಗಳಂತೆ ಅಂಗನೆಯರ ಒಂದು ಅಂಗವೇ ಆಗಿದೆ. ಗಂಡು ಅವರ ಈ ಬಿನ್ನಾಣದ ಬಲೆಗೆ ಬಹುಬೇಗ ಬೀಳುತ್ತದೆ, ಇವಳ ಈ ಪ್ರೀತಿಯ ಜಾಲದಲ್ಲಿ ಇಷ್ಟು ಸುಲಭವಾಗಿ ಸಿಕ್ಕಲು ನಾನೇನು ಮರುಳ ಗಂಡನಲ್ಲ'' ಎಂದು ಮನಸ್ಸಿನಲ್ಲಿ ಅಂದುಕೊಂಡು ಅಂತಃಪುರದಿಂದ ಹೊರ ಹೊರಟ.

ರಾಣಿ ತುಂಬಿದ ಕಣ್ಣುಗಳಿಂದ ಮಹಾರಾಜನ ಮೂರ್ತಿಯನ್ನೇ ಎವೆಯಿಕ್ಕದೇ ನೋಡುತ್ತಲಿದ್ದಳು. ಅಂತಃಪುರದಿಂದ ಅವನು ಮರೆಯಾದಾಗ ಮಾಳಿಗೆಯನ್ನೇರಿದಳು. ಅಲ್ಲಿಂದ ಅವನು ವಾಹನವನ್ನೇರಿದ ಬಗೆ, ಕೂಡುವ ಠೀವಿ, ಕುದುರೆಯ ಕುಣಿತ,

ಸೈನ್ಯಕ್ಕೆಲ್ಲ ಅವನು ಹೊರಡಲು ಮಾಡಿದ ಕಣ್‌ಸನ್ನೆ, ನಕ್ಕನಗೆ, ಮಿಕ್ಕಬಗೆ ಎಲ್ಲವನ್ನೂ ಪಿಳಕಿಸದ ಕಣ್ಣುಗಳಿಂದ ನಿರೀಕ್ಷಿಸುತ್ತ ನಿಂತುಕೊಂಡಳು. ತೇಜಿಯ ತೊಡೆಗೊಂದು ಚಾವಟಿ ಏಟು ಹಾಕಿ ಮೇಲೆ ನೋಡಿದ ಮಹಾರಾಜ. ಎದೆಯ ಮೇಲಿನ ಪೀತಾಂಬರವನ್ನೆಲ್ಲ ತೋಯಿಸುತ್ತ ಕಣ್ಣೀರಿನ ಕಾದಂಬಿನಿಯಾಗಿ ನಿಂತುಕೊಂಡಿದ್ದಳು ಸ್ಥವಿಷ್ಠೆ. ಮಾಳಿಗೆಯ ಕಡೆಗೊಮ್ಮೆ ಮಂದಹಾಸಬೀರಿ ಮುಂದೆ ನಡೆದ ಶರ್ಯಾತಿ.

ಅರಸಿಯ ಈ ವಿರಹ ವ್ಯಾಕುಲತೆಯನ್ನು ಕಂಡು ರಾಜನ ಪಕ್ಕದಲ್ಲಿದ್ದ ಪುರೋಹಿತ ಮಧುಚ್ಛಂದರ ಕಣ್ಣು ತೇವಗೊಂಡವು.

ಅರಣ್ಯದಲ್ಲಿ ರಾಜನು ಕೊಂದ ಕಾಡುಮಿಕಗಳಿಗೆ ಲೆಕ್ಕವಿಲ್ಲ. ಇಟ್ಟಗುರಿ ತಪ್ಪುತ್ತಿರಲಿಲ್ಲ, ಬಿಟ್ಟ ಬಾಣ ವ್ಯರ್ಥವಾಗಲಿಲ್ಲ. ಗುಡುಗು ಹಾಕಿ ವನಾಂತರವನ್ನೆಲ್ಲ ನಡುಗಿಸಿಬಿಡುವ ಹೆಬ್ಬುಲಿಗಳೂ ಕೂಡ ಅವನ ಒಂದೇ ಏಟಿಗೆ ನೆಗೆದು ಬೀಳುತ್ತಲಿದ್ದವು. ಗಿರಿದರಿಗಳ ಗಹನ ಗಹ್ವರಗಳನ್ನು ಹಣಿಕಿ, ಮಲಗಿದ ಸಿಂಹಗಳನ್ನು ಕೆಣಕಿ, ಖಡ್ಗದಿಂದ ಕೊಚ್ಚಿ ಒಗೆಯುತ್ತಲಿದ್ದನು. ಹಂದಿ, ಆನೆ, ಕರಡಿ, ಚಿರತೆ ಮುಂತಾದ ಕ್ರೂರ ಶ್ವಾಪದಗಳೆಲ್ಲ ಅವನ ಬಾಣಕ್ಕೆ ಗುರಿಯಾಗಿ ಪ್ರಾಣ ಬಿಟ್ಟಾಗ ಆ ಗಂಧಮಾದನ ಪರ್ವತವೆಲ್ಲ ನಿರ್ಭಯವಾಯಿತು. ಅಲ್ಲಿ ಒಂದೂ ಹಿಂಸ್ರಪಶು ಉಳಿದಿರಲಿಲ್ಲ.

ಆದರೆ ರಾಜನ ಬೇಟೆಯ ಆಶೆ ಇನ್ನೂ ತೀರಿರಲಿಲ್ಲ. ಹೆಚ್ಚು ಕ್ರೂರ ಪಶುಗಳಿರುವ ಇನ್ನೊಂದು ಅರಣ್ಯಕ್ಕೆ ಹೋಗಿ ತನ್ನ ಮೃಗಯಾಕಂಡೂತಿಯನ್ನು ಕಳೆಯಬೇಕೆಂದು ಮಾಡಿದ್ದನು. ಅವನ ಖಡ್ಗಕ್ಕೆ ನೆತ್ತರದ ಪಿಪಾಸೆ ಪ್ರಾಣಿಗಳನ್ನು ಕೊಂದಂತೆ ಹೆಚ್ಚುತ್ತ ನಡೆದಿತ್ತು. ಬೇಟೆಯ ಹುಚ್ಚು, ಮೃಗಯೆಯ ಮದ, ರಾಜನ ನೆತ್ತಿಗೇರಿತ್ತು. ಅವನು ಬೇಗ ಊರ ಕಡೆಗೆ ತಿರುಗುವ ಲಕ್ಷಣ ಕಾಣಲಿಲ್ಲ.

ಆಗ ಪುರೋಹಿತ ಮಧುಚ್ಛಂದರು ಮಹಾರಾಜನಿಗೆ ಬರುವಾಗ ಮಹಾರಾಣಿಯು ಹೇಳಿದ ಮಾತನ್ನು ನೆನಪಿಗೆ ತಂದುಕೊಟ್ಟು ಕೂಡಲೇ ಊರ ಕಡೆಗೆ ಮರಳಲು ಹೇಳಿದರು. ಅದಕ್ಕೆ ಶರ್ಯಾತಿಯು ನಸುನಕ್ಕು.

''ಹೆಣ್ಣಿನ ಕಣ್ಣೀರು ಮೊಸಳೆಯ ಕಣ್ಣೀರು ಎರಡೂ ಒಂದೇ. **''ಮಧು ತಿಷ್ಠತಿ ವಾಚಿ ಯೋಷಿತಾಂ ಹೃದಿ ಹಾಲಾಹಲಮೇವ ಕೇವಲಮ್''** ಎಂದು ಸ್ತ್ರೀ ಹೃದಯದ ಯಥಾರ್ಥ ಚಿತ್ರವನ್ನು ತೋರುವ ಸುಭಾಷಿತವನ್ನು ಗುರುಗಳು ಕೇಳಿಲ್ಲವೇ?

ನಾವು ಬರುವಾಗ ಮಹಾರಾಣಿಯು ಪ್ರದರ್ಶಿಸಿದ ಪ್ರಣಯಾಭಿನಯ, ವಿರಹವೇದನೆ, ತುಂಬಗೊರಳು, ಕಂಬನಿ ಕೋಡಿ, ಆತುರ–ಕಾತುರಗಳೆಲ್ಲ ಮರುಳ ಗಂಡನ್ನು ಮೋಸ ಮಾಡಲು ಹೂಡಿದ ಆಟವೇ ಸರಿ. ಮೋಸವು ಶ್ವಾಸವಾಡುವ ಶರೀರವೇ ಹೆಣ್ಣು. ಸ್ಥವಿಷ್ಠೆಯ ಕಣ್ಣೀರಿನ ಕಾತರತೆಯನ್ನು ನೆನೆಸಿಕೊಂಡು ನಾನು ಅವಸರದಿಂದ ಮನೆಗೆ ಮರಳುವಷ್ಟು ಮರುಳನೇನಲ್ಲ'' ಎಂದು ನಗೆಯ ನೊರೆಯಲ್ಲಿ ನಾರೀಗೌರವವನ್ನೇ ಹಗುರಾಗಿ ಹಾರಿಸಿ ಹೇಳಿದ ಮಹಾರಾಜ.

''ಮಹಾರಾಜ !'' ಮಧುಚ್ಛಂದರು ಉಕ್ಕುವ ಸಿಟ್ಟನ್ನು ಒತ್ತಿಕ್ಕುತ್ತ ಹೇಳಿದರು. ''ಹೆಣ್ಣಿನ ಹೃದಯವನ್ನು ಇಷ್ಟು ಹಗುರಾಗಿ ಕಾಣುವದು ಸರಿಯಲ್ಲ, **ಸೃಷ್ಟಿಯು ಆದಿಕಾಲದಲ್ಲಿ ಈಶಶಕ್ತಿಯು ತುಂಬುಗೈಯಿಂದ ತೂರಿದ ಸದ್ಗುಣದ ಬೀಜಗಳನ್ನು ಹೆಣ್ಣುಹೃದಯ ಹಿಡಿದಿಟ್ಟುಕೊಂಡಷ್ಟು ಗಂಡುಹೃದಯ ಹಿಡಿದಿಟ್ಟುಕೊಳ್ಳಲಿಲ್ಲ, ಆ ಮಿದು ಎದೆಯಲ್ಲಿ ಬಿದ್ದ ಬೀಜಗಳು ಬೆಳೆದು ಗುಣವು ಗಿಡವಾಗಿ ಹಣ್ಣು ಬಿಟ್ಟಾಗ ಅದನ್ನು ಕಿತ್ತಿ ತನ್ನದೆಂದು ಮೆರೆಯಿಸುವದಷ್ಟೇ ಗಂಡಿನ ಕೆಲಸ.** ನಿಜವಾಗಿ ವಿಚಾರಿಸಿದರೆ ದಯೆ, ಮಾಯೆ, ಮಮತೆ, ಸಮತೆ, ಸ್ನೇಹ ಸಹನೆ, ತ್ಯಾಗ ತಿತಿಕ್ಷೆ ಮೊದಲಾದ ಸದ್ಗುಣಗಳನ್ನು ಆ ಮಾತೃಹೃದಯ ಜೀವದೊಡನೆಯೇ ಬೆಳೆಸಿಕೊಂಡು ಬಂದಿರುತ್ತದೆ. ಸ್ಥವಿಷ್ಠೆಯಂಥ ಹೆಂಗಸಿನ ಹಿರಿಮೆಯನ್ನು ತಿಳಿದುಕೊಳ್ಳುವಷ್ಟು ಯೋಗ್ಯತೆ ನಿಮ್ಮಂಥ ಗಂಡಸಿಗೆ ಬಂದಾಗ ನೀವು ಮಹಾತ್ಮರೇ ಆಗುವಿರಿ ಎಂದರು.''

ಮಧುಚ್ಛಂದರು ಸಂಯಮದಿಂದ ತಮ್ಮ ಸರ್ವಾಂಗ ಕಂಪವೆಲ್ಲವನ್ನು ನಿಯಂತ್ರಿಸಿದ್ದರೂ ತುಟಿಗಳು ಮಾತ್ರ ಅದರುತ್ತಿದ್ದವು.

ಬಹುಕಾಲ ಬ್ರಹ್ಮಚಾರಿಗಳಾದ ಆಚಾರ್ಯ ಮಧುಚ್ಛಂದರು ಉದ್ದಾಮ ಪಂಡಿತರಾದರೂ ಈ ವಿಷಯದಲ್ಲಿ ಮಾತ್ರ ನಿಮ್ಮ ಜ್ಞಾನ ಪಂಗುವಾಗಿದೆ. ಹತ್ತು ಹೆಣ್ಣಿನೊಡನೆ ಬಾಳಿನುದ್ದಕ್ಕೂ ಗೋಳನುಂಡ ನಮ್ಮ ಅನುಭವದ ಮುಂದೆ ಮುಪ್ಪಿನಕಾಲಕ್ಕೆ ಒಂದು ಹೆಣ್ಣನ್ನು ಕಂಡು ಮುದಿ ಹುಚ್ಚಿನಿಂದ ಅದರ ಗುಣಗಳನ್ನು ಅತಿಯಾಗಿ ಅಂದಾಜು ಮಾಡುವ ನಿಮ್ಮ ತಿಳುವಳಿಕೆ ತಿರುಳಿಲ್ಲದ್ದು.

ರಾಜನು ತನ್ನ ಬಹು ಪತ್ನೀತ್ವದ ಅನುಭವದ ಆಗರವನ್ನು ತೆರೆದು ತೋರಿ ಪುರೋಹಿತರ ಗಾರ್ಹಸ್ಥ್ಯ ಜೀವನವನ್ನೇ ಹೀಯಾಳಿಸಿ ನುಡಿದ.

''ಅನೇಕ ಜನರ ಅನುಭವಗಳಿಗಿಂತ ಸಜ್ಜನರ ಒಂದೇ ಅನುಭವವು ಸತ್ಯಕ್ಕೆ ಸಮೀಪವಿರುತ್ತದೆ. ಅತಿಸಾಮಿಪ್ಯವೂ ವಸ್ತು ದರ್ಶನಕ್ಕೆ ವಿರೋಧಿಯೇ ಆಗಿದೆ. ಅತಿ ಪರಿಚಯವು ಬೆಲೆಯನ್ನು ತಿಳಿಯಲು ಪ್ರತಿಬಂಧಕವಾಗಿದೆ. ಸುಲಭ ಸಾಧ್ಯತೆಯು ಅದರ ಮಹತ್ವ ಜ್ಞಾನವನ್ನು ಕಳೆದು ಬಿಡುತ್ತದೆ.'' ಬಾಣ ಬಿಟ್ಟಂತೆ ಬಿರುಸಾಗಿ ನುಡಿದರು ಪುರೋಹಿತರು.

''ಅಪರೂಪವಾಗಿ ದೊರಕಿದ ವಸ್ತುವಿನ ಬಗ್ಗೆ ಆಶೆ ಇಮ್ಮಡಿಸಿ ಮನುಷ್ಯ ಒಮ್ಮೊಮ್ಮೆ ಅದಕ್ಕೆ ಅವಾಸ್ತವ ಮಹತ್ವವನ್ನು ಕೊಡುವದೂ ಉಂಟು ನೀವು ಏನೇ ಹೇಳಿರಿ, ನಿಮ್ಮದು ಬರೀ ತರ್ಕ ವಿಲಾಸ. ನನ್ನದು ಅನುಭವ ವಿಕಾಸ ನಿಮ್ಮದು ಸತ್ಯಕ್ಕೆ ಸಮೀಪವಿದ್ದರೆ ನನ್ನದು ಹದಿನಾರಾಣೆ ಸತ್ಯವೇ ಆಗಿದೆ. **ಹೆಂಗಸಿನಲ್ಲಿ ಶ್ವಾಸದ ತೂಕಾ ತೂಕ ಮೋಸವಿದೆ. ಎದೆಯ ಕಪಾಟ ಹಿಡಿಸದಷ್ಟು ಕಪಟವಿದೆ. ಕೂದಲಿನಷ್ಟೇ ಹೃದಯದಲ್ಲಿ ಕಪ್ಪಿದೆ. ಕರುಳಿನಷ್ಟೇ ವಿಚಾರದಲ್ಲಿ ವಕ್ರತೆ ಇದೆ. ಅವರ ಹುಬ್ಬು ಕಣ್ಣು ಕೂದಲು, ನೋಟ, ಆಟ, ಬೇಟ ಯಾವದೂ ಸರಳವಿಲ್ಲ,** ಎಲ್ಲವೂ

ಅಂಕುಡೊಂಕು, ಸರ್ವವೂ ಕಾಕು ಕೊಂಕು. ನಿಮಗೆ ಬೇಕಾದರೆ ನಿಮ್ಮ ಕಣ್ಣಲ್ಲಿ ಆದರ್ಶ ಸ್ತ್ರೀಯೆಂದು ಗೌರವಾರ್ಹರಾದ ಒಂದೆರಡು ಸ್ತ್ರೀಯರನ್ನು ಪರೀಕ್ಷಿಸಿ ತೋರಿಸುವೆ'' ಎಂದು ಹೇಳಿ ರಾಜ ಹೊರಗೆ ಬಂದನು.

ಅಲ್ಲಿ ಓರ್ವ ದೂತನನ್ನು ಕರೆದು ''ಮನೆಗೆ ಹೋಗಿ ರಾಣಿಗೆ ಹಾಗೂ ಮಧುಚ್ಛಂದರ ಮಡದಿ ಪ್ರತ್ಯೂಷೆಗೆ ''ರಾಜ ಮತ್ತು ಮಧುಚಂದರೂ ಬೇಟೆಗೆ ಮಹಾರಾಜರು ಹೋದಾಗ ಮರಣ ಹೊಂದಿದರು.'' ಎಂದು ತಿಳಿಸು. ನಾವು ಇಲ್ಲಿ ಬದುಕಿ ಉಳಿದ ಸಮಾಚಾರವನ್ನು ಯಾರಿಗೂ ತಿಳಿಸಕೂಡದು ಎಂದು ಕಟ್ಟಪ್ಪಣೆ ಮಾಡಿ ಕಳಿಸಿದ.

ಸೈನಿಕರಿಗೆಲ್ಲ ''ಬೇಟೆ ಸಾಕು ಊರ ಕಡೆಗೆ ಮರಳಿರಿ'' ಎಂದು ಹೇಳಿ ತಾನು ಮಧುಚ್ಛಂದರೊಂದಿಗೆ ಹೊರಟನು. ಊರಿನಿಂದ ನಾಕಾರು ಮೈಲು ದೂರವಿರುವ ಒಂದು ಉದ್ಯಾನದಲ್ಲಿ ಗಿಡದಡಿಯಲ್ಲಿ ಹಾಸುಗಲ್ಲಿನಮೇಲೆ ರಾಶಿಯಾಗಿ ಬಿದ್ದ ಹೂವಿನ ಹಾಸಿಗೆಯ ಮೇಲೆ ಮೈಯ್ಯನ್ನು ಒರಗಿಸಿದ.

ಮಹಾರಾಜನಿಗೆ ಮಧುಚ್ಛಂದರ ಜೊತೆಗೆ ವಾದ ಹೂಡಿ ಆಯಾಸವಾಗಿತ್ತು. ಬೇಟೆಯ ಹುಚ್ಚಿನಲ್ಲಿ ಎಷ್ಟೋ ದಿನ ನಿದ್ರಾಂಗನೆಯನ್ನೂ ಬೆದರಿಸಿ ಓಡಿಸಿಬಿಟ್ಟದ್ದ ಆ ಭೂಪ. ಇಂದು ಆ ಲತಾಮಂಟಪದ ತಂಪಿನ ತೊಡೆಯಲ್ಲಿ ಮಲಗಿದ ರಾಜನನ್ನು ಸಂಪೂರ್ಣವಾಗಿ ನಿದ್ದೆಯು ತನ್ನ ಉಡಿಯಲ್ಲಿ ತೆಗೆದುಕೊಂಡು ತುಂಬು ಸೆರಗನ್ನು ಹೊಚ್ಚಿದಳು.

ಗಾಢ ನಿದ್ರೆಯ ತೋಳ್ಸೆರೆಯಿಂದ ಬಿಡಿಸಿಡಿಕೊಂಡು ಎದ್ದಾಗ ಹೊತ್ತು ಹೊರಳಿತ್ತು. ರಾಜನು ತನ್ನ ರಥದಲ್ಲಿ ಮಧುಚ್ಛಂದರನ್ನು ಕುಳ್ಳಿರಿಸಿಗೊಂಡು ಅವಸರವಾಗಿ ಊರ ಕಡೆಗೆ ಹೊರಟ. ''ಸ್ಥವಿಷ್ಠೆಯ ಹಾಗೂ ಅವಳ ಪ್ರಾಣ ಪ್ರಿಯಪ್ರೇಯಸಿಯಾದ ಪ್ರತ್ಯೂಷೆಯ ಪ್ರಣಯಗಳು ನೀರಿನ ಗುಳ್ಳೆಯಂತೆ ಎಷ್ಟು ಪೊಳ್ಳು, ಅವರ ಮಮತೆಯ ಮಾತು ಎಷ್ಟು ಟೊಳ್ಳು'' ಎನ್ನುವದನ್ನು ಆಚಾರ್ಯರಿಗೆ ತೋರಿಸುವ ಲವಲವಿಕೆಯಿಂದ ಅವನು ಕಾತರನಾಗಿದ್ದ.

''ತನ್ನನ್ನು ಬಿಟ್ಟು ಒಂದು ಕ್ಷಣವೂ ಇರುವದಿಲ್ಲವೆಂದು ಹೇಳಿದ ರಾಣಿಯು ಈಗ ತಾನು ಸತ್ತ ಸುದ್ದಿ ಕೇಳಿ ಬದುಕಿ ಉಳಿದಿದ್ದರೂ ಸಾಕು; ಮಧುಚ್ಛಂದರ ಮುಖ ಕಪ್ಪಿಡುತ್ತದೆ. ಅವಳ ಮಾತಿನ ಮೆರಗೆಲ್ಲ ಬರೀಬುರುಗು ಎಂದು ತಾನೇ ತಿಳಿದು ಹೋಗುತ್ತದೆ. ''ವಿಶ್ವಾಸೋನೈವಕರ್ತವ್ಯಃ ಸ್ತ್ರೀಷು'' ಎಂಬ ಮಾತು ಜಗತ್ತಿಗೆಲ್ಲ ನಿಚ್ಚಳವಾಗಿ ತಿಳಿದು ಬಿಡುತ್ತದೆ ಎಂದು ವಿಚಾರಿಸುತ್ತ ಕುದುರೆಗಳನ್ನು ವೇಗವಾಗಿ ಓಡಿಸಲಿಕ್ಕೆ ಸಾರಥಿಗೆ ಬಲವಂತ ಪಡಿಸಿದನು. ತೇಜಿಗಳು ನಾಗಾಲೋಟ ಹಿಡಿದವು. ಊರು ಸಮೀಪಿಸಿದಂತೆ ಪುರೋಹಿತರ ಭ್ರಾಂತಿಪಟಲ ಹರಿಯುವದೂ ಸಮೀಪಿಸಿತೆಂದು ತುಂಟ ನಗೆಯೊಂದು ರಾಜನ ತುಟಿಯ ಮೇಲೆ ತೆರೆಯಾಡಿ ಹೋಯಿತು. ರಥ ಊರ

ಹೊರಗಿನ ರುದ್ರ ಭೂಮಿಯ ಹತ್ತಿರ ಬಂದಿತು.

ಅಲ್ಲಿ ನೆರೆದ ಪ್ರಚಂಡ ಜನಸ್ತೋಮ ಹಾಗೂ ಅದರ ಚೀತ್ಕಾರಗಳನ್ನು ಕೇಳಿ ಊರಲ್ಲಿಯ ಯಾರೋ ದೊಡ್ಡ ಮನುಷ್ಯರು ತೀರಿಕೊಂಡಿರಬಹುದೆಂದು ರಾಜ ರಥವನ್ನು ಅತ್ತ ಹೊರಳಿಸಹೇಳಿದ. ವರಾಹಕೇತನವುಳ್ಳ ರಾಜನ ಬಂಗಾರ ಕಳಸದ ರಥವನ್ನು ನೋಡಿಯಂತೂ ಜನರ ಶೋಕವು ಮೇರೆಮೀರಿ ಮೊರೆಯಿತು. ರಾಜ ಇಳಿದು ನಿಂತಾಗ ಜನರೆಲ್ಲ ಒಮ್ಮೆಲೇ ಅಳುವದನ್ನು ನಿಲ್ಲಿಸಿ ಕಣ್ಣು ತಿಕ್ಕಿ ತಿಕ್ಕಿ ಅವನನ್ನೇ ನೋಡಲಾರಂಭಿಸಿದರು.

''ಇದೇನು ! ಯಾರು ತೀರಿಕೊಂಡರು'' ಎಂದು ರಾಜ ಕೇಳಿದ.

''ಮಹಾರಾಜರು'' ಎಂದೆಂದು ಜನ ಬಿಕ್ಕಹತ್ತಿತು.

''ನನಗೇನಾಗಿದೆ ! ನಿಮ್ಮ ಕಣ್ಣೆದುರೇ ಯಥೇಷ್ಟವಾಗಿ ನಿಂತಿದ್ದೇನಲ್ಲ!''.

''ಮಹಾರಾಜರು ತೀರಿಕೊಂಡರೆಂದು ದೂತನೊಬ್ಬ ಬಂದು ಸುದ್ದಿಹೇಳಿದ. ಆ ಸುದ್ದಿಯನ್ನು ಕೇಳಿ ಮಹಾರಾಣಿಯವರು 'ಹಾಯ್ ಹಾಯ್' ಎಂದವರೇ ಅಲ್ಲಿಯೇ ನೆಲಕ್ಕೆ ಉರುಳಿ ಬಿಟ್ಟರು. ರಾಜ ವೈದ್ಯರು ಎಷ್ಟು ಯತ್ನಿಸಿದರೂ ಜೀವ ತಿರುಗಲಿಲ್ಲ.''

''ಅಯ್ಯೋ ಚಂಡಾಲ ಸತಿಯನ್ನು ಕೊಂದೆಯಾ'' ಎಂದೆಂದು ಮಹಾರಾಜ ಮೂರ್ಛಿತನಾದ.

ಅಷ್ಟರಲ್ಲಿ ಕೆಲವು ಜನ ಬ್ರಾಹ್ಮಣರು ಮತ್ತೊಂದು ಶವವನ್ನು ಹೊತ್ತುಕೊಂಡು ಬಂದರು. ಆ ಶವವಾಹಕರು ಆ ರುದ್ರಭೂಮಿಯಲ್ಲಿ ಕಾಲಿಟ್ಟಾಗ ಅಲ್ಲಿಯೇ ನಿಂತುಕೊಂಡಿರುವ ಮಧುಚ್ಛಂದ ಹಾಗೂ ಮಹಾರಾಜರನ್ನು ಇಬ್ಬರಗಿನಿಂದ ನಿರುಕಿಸುತ್ತಕಲ್ಲಾಗಿ ನಿಂತುಬಿಟ್ಟರು. ಶವವಾಹಕರ ಹೆಗಲಮೇಲಿರುವದು ತಮ್ಮ ಹೆಂಡತಿ ಪ್ರತ್ಯೂಷೆಯ ಹೆಣವೇ ಎಂದು ಮಧುಚ್ಛಂದರಿಗೆ ತಿಳಿದು ಹೋಯಿತು. ಅವರಿಗೆ ತಮ್ಮ ಜೀವನದ ಮಾಂಗಲ್ಯವೆಲ್ಲ ಮಸಣಗಟ್ಟಿಗೆ ಬಂದಿತೆನ್ನಿಸಿತು. ಕಣ್ಣೀರು ಕೋಡಿಯಿಟ್ಟು ಹರಿದರೂ ಒಡಲಿನಲ್ಲಿ ದುಃಖ ಕಡಲಾಗಿ ಕುದಿಯುತ್ತಲಿತ್ತು. ಇತ್ತ ಪತಿಯ ಮರಣದ ಸುದ್ದಿಯನ್ನು ಕೇಳಿದ ಚಣವೇ ಸಾವನ್ನಪ್ಪಿದ ಇಬ್ಬರು ಸತಿಯರು, ಅತ್ತ ಅವರನ್ನು ಈ ಪ್ರಾಣಾಂತ ಪರೀಕ್ಷೆಗೆ ಗುರಿಪಡಿಸಿ ಈಗ ಪಶ್ಚಾತ್ತಾಪದುರಿಯಲ್ಲಿ ಬೆಂದು ಮುಮೂರ್ಷಾವಸ್ಥೆಯಲ್ಲಿರುವ ಮಹಾರಾಜ, ಈ ಮೂವರ ನಡುವೆ ಮಧುಚ್ಛಂದರು ಪ್ರತ್ಯಕ್ಷಸಾಕ್ಷಿಯಾಗಿ ನಿಂತುಕೊಂಡಿದ್ದರು. ಆ ಸತಿಯರಿಬ್ಬರ ಮರಣ ಅವರ ವಾದಕ್ಕೆ ಗೆಲವು ತಂದಿದ್ದರೂ ಆ ಗೆಲವಿನ ಗೋಪುರದಲ್ಲಿ ಅವರ ಗ್ರಾಹಸ್ಥ್ಯ ಜೀವನದ ಗೋರಿಗೊಂದು ಗೋಳುಗುಮ್ಮಟ ರಚಿತವಾಗಿತ್ತು.

ಆದರೂ ಸಂಯಮಿಗಳಾದ ಅವರು ತಮ್ಮ ಕಣ್ಣೀರನ್ನೆಲ್ಲ ಕೊಡವಿ ಎದ್ದು ಮಹಾರಾಜನಿಗೆ ಮೊದಲು ಶೀತಲೋಪಚಾರವನ್ನು ಮಾಡಿ ಎಬ್ಬಿಸಿ ಕುಳ್ಳಿರಿಸಿದರು.

ಮಹಾರಾಜನು ಎದ್ದು ಎಲ್ಲ ಸಮಾಚಾರವನ್ನೂ ತಿಳಿದು ಮಧುಚ್ಛಂದರ ಹೆಂಡತಿ ಪ್ರತ್ಯೂಷೆಯೂ ತನ್ನ ಪತಿಯ ವಿರಹ ವಾರ್ತೆಯಿಂದ ಚಿತೆಯಿಲ್ಲದೇ ಪ್ರಾಣನೀಗಿದ್ದನ್ನು ಕಂಡು ಮತ್ತೊಮ್ಮೆ ಮೂರ್ಚ್ಛಿತನಾದ. ಅವನನ್ನು ಸಂತೈಸಿ ಮಹಾತ್ಮರಾದ ಮಧುಚ್ಛಂದರು "ಮಹಾರಾಜ ! ಹೆಣ್ಣಿನ ಹೃದಯ ಹಿಮಾಲಯಕ್ಕಿಂತಲೂ ಹಿರಿದು. ತ್ಯಾಗ ಅವರ ಜೀವನದ ಒಂದು ದೊಡ್ಡ ತಪಸ್ಸು. ಅವರ ರಾಗಭೋಗಗಳೆಲ್ಲವೂ ತ್ಯಾಗಕ್ಕೆ ಎತ್ತಿದ ಆರತಿಯ ದೀಪಗಳೇ. ಇಂಥ ಹೆಂಗಸಿನ ಯೋಗ್ಯತೆಯನ್ನು ತಿಳಿದುಕೊಳ್ಳುವಷ್ಟು ಯೋಗ್ಯತೆ ಬಂದರೆ ಗಂಡಸು ಮಹಾತ್ಮನೇ ಆಗುತ್ತಾನೆ." ಎಂದು ಶಾಂತವಾಗಿ ನುಡಿದರು.

ಆದರೆ ರಾಜನ ಹೃದಯದಲ್ಲಿ ಎದ್ದ ಬಿರುಗಾಳಿಗೆ ಪಶ್ಚಾತ್ತಾಪದ ಉರಿ ಪುಟಗೊಂಡಿತ್ತು. ತನ್ನ ಸಾವಿನ ಸುಳ್ಳು ಸುದ್ದಿಯನ್ನು ಕೇಳಿಯೇ ಪ್ರಾಣ ಬಿಟ್ಟಿರುವ ಸತಿಯನ್ನು ತಾನಾಗಿ ಕೊಂದಬಳಿಕ ತಾನು ಜೀವಿಸುವದೇ ಘೋರ ಕೃತಘ್ನತೆಯೆನಿಸಿತು. ಬದುಕೇ ಭಾರವಾಯಿತು. ಅವನ ಒಂದೊಂದು ಶ್ವಾಸದ ಅಲೆಯೂ ಅವನ ನೈಚ್ಯ ನೈರ್ಘರಣ್ಯ ಕಟುಕತೆ ಕೃತಘ್ನತೆಗಳನ್ನು ಎತ್ತಿತ್ತೋರಿಸಿ ಅಣಕಿಸುತ್ತಿದ್ದವಂತೆ ಭಾಸವಾಗುತ್ತಲಿತ್ತು.

ಆಗ ಮಹಾರಾಜನು ಕಣ್ಣೀರನ್ನು ಒರೆಸಿಕೊಂಡು ಗುರುಪತ್ನಿಯಾದ ಪ್ರತ್ಯೂಷೆಯ (ಪ್ರೇತದ) ಪಾದವನ್ನು ಮುಟ್ಟಿ ನಮಸ್ಕರಿಸಿ ಗುರುಗಳಾದ ಮಧುಚ್ಛಂದರ ಹತ್ತಿರ ಬಂದು ತನ್ನ ನಿರ್ಣಯವನ್ನು ಹೇಳಿದ.

"ಗುರುವರರೆ ! ಗಂಡನು ಸತ್ತಾಗ ಅವನ ಮೇಲಿನ ಪ್ರೇಮದಿಂದ ಹೆಂಡತಿ ಸಹಗಮನವನ್ನು ಮಾಡಿದರೆ ಅಂಥ ಹೆಂಡತಿ ಸತ್ತಾಗ ಗಂಡನೂ ಸಹಗಮನ ಮಾಡುವದು ಕರ್ತವ್ಯವಲ್ಲವೇ? ಅಂಥ ಪತಿವ್ರತೆಯನ್ನು ತಾನಾಗಿ ಕೊಂದ ಬಳಿಕಂತೂ ಪತಿಗೆ ಬದುಕಲು ಹಕ್ಕೇ ಇಲ್ಲ. ಕಾರಣ ನಾನೀಗ ಸ್ಥವಿಷ್ಠೆಯ ಜೊತೆಗೆ ಸತಿಹೋಗಿ (ಅಥವಾ 'ಪತಿ ಹೋಗಿ') ಸ್ವರ್ಗದಲ್ಲಿ ಅವಳ ಸನ್ನಿಧಿಯನ್ನು ಸೇರಬೇಕೆಂದು ಬಯಸಿಗ್ದೇನೆ. ಅದಕ್ಕಾಗಿ ಗುರುಗಳು ಅನುಮತಿ ಹಾಗೂ ಆಶೀರ್ವಾದ ಎರಡನ್ನೂ ಕೊಡಬೇಕು" ಎಂದಂದು ನಮಸ್ಕರಿಸಿ, ಸ್ಥವಿಷ್ಠೆಯ ಪ್ರೇತವನ್ನು ಎತ್ತಿಕೊಂಡು ಮೊದಲೇ ಅವಳಿಗಾಗಿ ಸಿದ್ಧಪಡಿಸಿಟ್ಟ ಚಂದನದ ಚಿತೆಯ ಮೇಲೆ ಹೋಗಿ ಕುಳಿತನು. ದಿಙ್ಮೂಢ ರಾಗಿ ನಿಂತ ಮಂತ್ರಿ ಪ್ರಜಾಪರಿವಾರದವರಿಗೆಲ್ಲ ಒಮ್ಮೆ ಕೈಮುಗಿದು ನಮಸ್ಕರಿಸಿ ಚಿತೆಗೆ ಕೊಳ್ಳಿ ಇಡಲು ಹೇಳಿದನು.

ಆಗ ಅಲ್ಲಿ ನೆರೆದ ಸಮಸ್ತ ಜನಸ್ತೋಮದ ದುಃಖವು ಪ್ರಕಟಗೊಂಡು ರೋದನ ಉಚ್ಚತಾರದಲ್ಲಿ ಉಕ್ಕಿ ಹರಿಯಿತು.

ದುಃಖವಿಕಲರಾದ ಮಧುಚ್ಛಂದರು ಪಶ್ಚಾತ್ತಾಪದಗ್ಧನಾದ ಪ್ರಣಯಮುಗ್ಧ ಮಹಾರಾಜನಿಗೆ ಮೊದಲು ಚಿತೆಯನ್ನು ಬಿಟ್ಟು ಕೆಳಗೆ ಇಳಿಯಲು ಹೇಳಿದರು. ಏನಾದರೂ ಸ್ಥವಿಷ್ಠೆಯ ಶವವನ್ನು ಬಿಟ್ಟು ಬಾರದ ರಾಜನನ್ನು ನೋಡಿ ಕರುಣಾಕಲ್ಲೋಲವಾಹಿತರಾದ ಋಷಿಗಳು ಕೊನೆಗೆ ಅವಳನ್ನು ಕರೆದುಕೊಂಡೇ ಇಳಿದು ಬರಲು ಹೇಳಿದರು.

ನಂತರ ಪ್ರತ್ಯೂಷೆಯ ಪ್ರೇತವನ್ನು ತಮ್ಮ ಹಿಂದೆ ತೆಗೆದುಕೊಂಡು ಬರಲು ಶಿಷ್ಯರಿಗೆ ತಿಳಿಸಿ ಪ್ರಜಾಪರಿವಾರದವರನ್ನೆಲ್ಲ ಮನೆಗೆ ಕಳುಹಿಸಿ ಮುನ್ನಡೆದರು. ಮಹಾರಾಜನು ಮಾತ್ರ ಜನರು ಎಷ್ಟು ಬೇಡಿದರೂ ಸ್ಥವಿಷ್ಠೆಯ ಹೆಣವನ್ನು ಯಾರಿಗೂ ಕೊಡದೇ ತಾನೇ ಹೊತ್ತುಕೊಂಡು ದಿವ್ಯಜ್ಞಾನಿಗಳೂ ಸ್ವಾಧೀನಸಿದ್ಧಿವಂತರೂ ಆದ ಮಧುಚ್ಛಂದರನ್ನು ಹಿಂಬಾಲಿಸಿದನು.

ಆ ಎರಡೂ ಹೆಣಗಳನ್ನು ಹೊರಿಸಿಗೊಂಡು ಬ್ರಹ್ಮರ್ಷಿಗಳು ತರುನಿಬಿಡವಾದ ಕಾನನದ ಕಾಂತಾರದಲ್ಲಿ ಹಾಯ್ದು ಗೋಮತೀ ನದಿಯ ಏಕಾಂತ ತೀರಕ್ಕೆ ಬಂದರು. ಅಲ್ಲಿಯೇ ದಂಡೆಯಲ್ಲಿ ನೀರಿನ ಅಂಚಿಗೆ ಆ ಎರಡು ಪ್ರೇತಗಳನ್ನು ಇಡಲಿಕ್ಕೆ ಹೇಳಿ ಆ ಶಿಷ್ಯರಿಗೆ ಹಿಂದಿರುಗಿ ಊರಿಗೆ ಹೋಗಲು ಅಪ್ಪಣೆಯಿತ್ತರು.

ಪುಣ್ಯಪಯಸ್ವಿನಿಯಾದ ಗೋಮತಿಯ ಪಾವನ ತರಂಗಗಳು ಆ ಪತಿವ್ರತೆಯರ ಪ್ರೇತಶರೀರಗಳಿಗೆ ಪ್ರತಿನಿಮಿಷಕೊಮ್ಮೆ ಶೀಕರ ಸ್ನಾನವನ್ನು ಮಾಡಿಸುತ್ತಲಿದ್ದವು. ಮಹಾರಾಜನು ನಿರ್ನಿಮೇಷ ನಯನಗಳಿಂದ ತನಗಾಗಿ ಪ್ರಾಣಕೊಟ್ಟ ಪಟ್ಟದರಸಿಯ ಶವಶರೀರವನ್ನು ಪ್ರೇಮ, ಪಶ್ಚಾತ್ತಾಪ, ದಯೆ, ಮಾಯೆ, ದುಃಖ, ದೈನ್ಯ, ಮಮತೆ, ಕೃತಜ್ಞತೆಗಳಿಂದ ಶಕುಲ–ವಿಕಲನಾಗಿ ಆತುರ–ಕಾತುರಗಳಿಂದ ನೋಡುತ್ತಲಿದ್ದನು.

ಮಂತ್ರದರ್ಶಿಗಳಾದ ಮಧುಚ್ಛಂದರು ಗೋಮತಿಯ ಪುಣ್ಯೋದಕದಲ್ಲಿ ಮಿಂದು ಬಂದು ಅಲ್ಲಿಯೇ ಪುಲಿನ–ಪೀಠವನ್ನೇರಿ ಕುಳಿತರು. ಆ ಸಿದ್ಧಪುರುಷರು ಬದ್ಧಪದ್ಮಾಸನದಲ್ಲಿ ಆಸೀನರಾಗಿ ಕೋಟಿ ಧನ್ವಂತರಿ ಜಪ ಹಾಗೂ ಮೃತ್ಯುಂಜಯ ಮಂತ್ರಗಳ ಪುರಶ್ಚರಣಗೈದು ''ವೈದ್ಯೋ ನಾರಾಯಣೋ ಹರಿಃ ಎಂದೆಂದು ಎದ್ದರು.

ಅಭಿಮಂತ್ರಣೆಗೈದ ತಮ್ಮ ಕಮಂಡಲದಲ್ಲಿಯ ತೀರ್ಥಜಲವನ್ನು ಉಚ್ಚಕಂಠದಿಂದ ಮಂತ್ರಗಳನ್ನು ಉಚ್ಚರಿಸಿ, ಆ ಪ್ರೇತಗಳಿಗೆ ಗೊಜ್ಜತೊಡಗಿದರು ಆ ತೀರ್ಥೋದಕದ ಪುಣ್ಯಪ್ರೋಕ್ಷಣೆಯ ಮತ್ತು ಮಂತ್ರಶಕ್ತಿ ತಪಸ್ಸಾಮರ್ಥ್ಯಗಳ ಪಾವನ ಪ್ರಭಾವದಿಂದ ಮಹಾರಾಜನು ನೋಡನೋಡುತ್ತಲಿರುವಾಗಲೇ, ಕಟ್ಟಿ ಒಗೆದ ಕಟ್ಟಿಗೆಯ ಹೊರೆಯಂತೆ ಬಿದ್ದಿರುವ ಆ ಪ್ರೇತ ದೇಹಗಳು ಕ್ರಮೇಣ ಅಲುಗಹತ್ತಿದವು. ನಿಷ್ಕ್ರಿಯವಾಗಿ ನಿಂತುಹೋದ ನಾಡಿಗಳೆಲ್ಲ ಮೆಲ್ಲಮೆಲ್ಲನೆ ಮಿಡಿಯತೊಡಗಿದವು. ಹಿಂಡಿ ಹಿಪ್ಪೆಯಾಗಿ, ಸಪ್ಪೆಯಾಗಿ, ಸೊಪ್ಪೆಯಾಗಿ ಬಿದ್ದುಹೋದ ಬರಡು ದೇಹದಲ್ಲಿ ಒಮ್ಮೆಲೆ ಚೈತ್ರಚುಂಬನವಾದಂತೆ ಚೈತನ್ಯ ಚಿಗುರಹತ್ತಿತ್ತು.

ಅದರಿಂದ ಉತ್ಸಾಹಿತರಾದ ಮಹಾಮುನಿಗಳು ಭಗವನ್ನಾಮಸ್ಮರಣವನ್ನು ಬಲವಾಗಿ ಮಾಡುತ್ತ ಉಚ್ಚಕಂಠದಿಂದ ಮಂತ್ರಗಳನ್ನು ಕೂಗಿ ಹೇಳಿ ತೀರ್ಥವನ್ನು ಉಗ್ಗಹತ್ತಿದರು. ಸಂಜೀವಿನೀ ಮಂತ್ರದಿಂದ ಪ್ರಾಣಪೂರಣವಾಗಿ ಅವರಿಬ್ಬರೂ ಎದ್ದು ಕುಳಿತರು.

ಕಣ್ಣೆದುರು ನಿಂತ ತಮ್ಮ ಪತಿಗಳನ್ನು ಸ್ಥವಿಷ್ಠೆ ಮತ್ತೂ ಪ್ರತ್ಯೂಷೆ ಇಬ್ಬರೂ ಕಂಡು ಆಶ್ಚರ್ಯ ಆನಂದ ಸಂಭ್ರಮಗಳಿಂದ ದಿಗ್ಭ್ರಮೆಗೊಂಡು ತಮ್ಮ ಕಣ್ಣನ್ನು ತಾವೇ ತಿಕ್ಕಿಕೊಂಡು ಮತ್ತೆ ಮತ್ತೆ ನೋಡಿದರು. ಆ ಮುನಿಗಳ ಕೈಯಲ್ಲಿಯ ಕಮಂಡಲು ಮಂತ್ರೋಚ್ಚಾರಣೆಗಳಿಂದ ಎಲ್ಲವನ್ನೂ ತಿಳಿದುಕೊಂಡು ಜೀವದಾನ ಮಾಡಿದ ಮಹರ್ಷಿಗಳ ಪದತಲದಲ್ಲಿ ಶಿರವಿಟ್ಟು ಬಾಷ್ಪಧಾರೆಯಿಂದ ತೊಳೆದರು.

ಮಂತ್ರಶಕ್ತಿಯಿಂದ ಪುನರುಜ್ಜೀವಿತರಾದ ತಮ್ಮ ಸತೀಶಿರೋಮಣಿಯರಿಂದ ಕೂಡಿಕೊಂಡು ಮಹಾರಾಜ ಮತ್ತು ಮಹರ್ಷಿ ಇಬ್ಬರೂ ವೇದಸೂಕ್ತಗಳ ಮಹಿಮೆಯುನ್ನು ಕೊಂಡಾಡುತ್ತ ಊರಿಗೆ ಮರಳಿದರು. ಯಮನೂರಿನಿಂದ ತಿರುಗಿಬಂದಂತಿರುವ ಆ ರಾಜದಂಪತಿ ಮತ್ತು ಖುಷಿದಂಪತಿಗಳ ಜೋಡಿಯನ್ನು ಕಂಡ ನಾಗರಿಕರ ಕಣ್ಣು ಸಂತಸದಿಂದ ಅರಳಿದವು. ಹರ್ಷಾಶ್ರುಗಳು ಉರುಳಿದವು.

3. ಮದಯಂತಿ

''ದಕ್ಷಾ ಪ್ರಜಾವತೀ ಸಾಧ್ವೀ ಪ್ರಿಯ–ವಾಕ್ಯ–ವಶಂ–ವದಾ
ಗುಣೈರಮೀಭಿಃ ಸಂಯುಕ್ತಾ ಸಾ ಶ್ರೀ ಸ್ತ್ರೀರೂಪಧಾರಿಣೀ॥''

(ಸ್ಕಂದ ಪುರಾಣ ಕಾಶೀ ಖಂಡ)

ಕೋಸಲ ದೇಶದ ದೊರೆಯಾದ ಋತುಪರ್ಣ ರಾಜನಿಗೆ ಮಿತ್ರಸಹ ಎಂಬ ಮಗನಿದ್ದನು. ನಲನಿಗೆ ದಮಯಂತಿಯಿದ್ದಂತೆ ಮಿತ್ರಸಹನಿಗೆ ಮದಯಂತಿ ಎಂಬ ಗುಣವತಿಯಾದ ಹೆಂಡತಿಯಿದ್ದಳು. ಒಂದು ದಿನ ಆ ಮಹಾರಾಜನು ನರ್ಮದೆಯ ದಕ್ಷಿಣದ ಗೊಂಡಾರಣ್ಯದಲ್ಲಿ ಬೇಟೆಯಾಡುವಾಗ ಒಂದು ವಿಚಿತ್ರ ದೃಶ್ಯವನ್ನು ಕಂಡನು. ನಿಬಿಡವನಾಂತರದ ತರುಗುಲ್ಮದ ಹೊದರಿನಲ್ಲಿ ಎರಡು ಹೆಬ್ಬುಲಿಗಳು ಶೃಂಗಾರ ಲೀಲೆಯನ್ನು ನಡೆಯಿಸಿದ್ದವು. ಕ್ರೂರಪ್ರಾಣಿಗಳ ಈ ಉದ್ದಾಮ ಕಾಮಕ್ರೀಡೆಯನ್ನು ನೋಡಿ ರಾಜನಿಗೆ ಕೌತುಕವೆನಿಸಿತು. ರತಿಯ ರಭಸದಲ್ಲಿ ರಾಗರಸದ ಉದ್ರೇಕದಿಂದ ಹೆಣ್ಣುಹುಲಿ ಕಣ್ಣು ಮೀಲಿಸಿದಾಗ ರಾಜ ಗುರಿಯಿಟ್ಟು ಬಾಣ ಬಿಟ್ಟ. ಎರಡನ್ನೂ ಒಂದೇ ಏಟಿಗೆ ಮುಗಿಸಬೇಕೆಂದು ಬಿಟ್ಟ ಬಾಣದಿಂದ ಹೆಣ್ಣುಹುಲಿ ತಕ್ಷಣ ಪ್ರಾಣಬಿಟ್ಟರೂ ಗಂಡು ಮಾತ್ರ ತಪ್ಪಿಸಿಕೊಂಡು ಗುಡುಗು ಹಾಕಿತು. ಆ ಗುಡುಗಿನಲ್ಲಿ ಸೇಡಿನ ಭಾವ ಸಿಡಿದು ಬರುತ್ತಿತ್ತು.

ಮಹಾರಾಜ ಸತ್ತ ಹುಲಿಯ ಹತ್ತಿರ ಬಂದು ನೋಡಿ ಅದರ ರಾಕ್ಷಸೀ ರೂಪವನ್ನು ಕಂಡು ಚಕಿತನಾದ.

ಮನೆಗೆ ಬಂದು ತನ್ನ ಮಹಿಷಿಯಾದ ಮದಯಂತಿಗೆ ಸಮಾಚಾರವನ್ನೆಲ್ಲ ತಿಳಿಸಿದ. ಕ್ರೀಡೆಯ ರಸನಿಮಿಷದಲ್ಲಿ ವ್ಯಾಲಿಯನ್ನು ಹೊಡೆದದ್ದು ಕೇಳಿ ಅವಳ ಹೆಣ್ಣು ಹೃದಯ ಕಣ್ಣೀರು ಮಿಡಿಯಿತು.

ರತಿಸುಖವನ್ನು ಗುಟುಕರಿಸುವ ಕ್ರೌಂಚಮಿಥುನವನ್ನು ಹೊಡೆದ ಬೇಡನಿಗೆ ವಾಲ್ಮೀಕಿ ಕೊಟ್ಟ ಶಾಪ ನೆನಪಾಗಿ ಅವಳ ಹೂವಿನೆದೆಯನ್ನು ನಡುಗಿಸಿತು. ಇನ್ನೆಂದಿಗೂ ರತಿಲೀಲಾಲೋಲವಾದ ಸತಿಪತಿಗಳನ್ನು ಹೊಡೆಯಬಾರದೆಂದು ಜೀವದಾಣೆಯಿಟ್ಟು ಬೇಡಿಕೊಂಡಳು. ಹಾಗೂ ಈಗ ಮಾಡಿದ ಪಾಪದ ಪ್ರಾಯಶ್ಚಿತ್ತಕ್ಕಾಗಿ ಯಜ್ಞ–ಯಾಗಗಳನ್ನು ಮಾಡಬೇಕೆಂದು ಕೇಳಿಕೊಂಡಳು.

ಬ್ರಹ್ಮರ್ಷಿಗಳಾದ ವಸಿಷ್ಠರ ಆಧ್ವರ್ಯದಲ್ಲಿ ಅಶ್ವಮೇಧವು ಪ್ರಾರಂಭ ವಾಯಿತು. ಇಂಥ ಅನೇಕ ಯಾಗಗಳನ್ನು ಮಾಡಿಸಿದ ಅವರ ಪೌರೋಹಿತ್ಯದಲ್ಲಿ ಯಜ್ಞವು ನಿರಾತಂಕವಾಗಿ ನಡೆದು ಮುಕ್ತಾಯಗೊಂಡಿತು. ರಾಜ ತೃಪ್ತಿಯ ನಿಟ್ಟುಸಿರುಬಿಟ್ಟು ರಾಣಿಗೆ ಹೇಳಿದ

''ದೇವಿ ! ಅಶ್ವಮೇಧ ಒಂದು ಅಪೂರ್ವ ಯಜ್ಞ. ಇದು ನಿರ್ವಿಘ್ನವಾಗಿ ಕೊನೆಗೊಂಡದ್ದು ನಮ್ಮ ಪುಣ್ಯ.''

''ನಮ್ಮ ಪುಣ್ಯವಲ್ಲ, ಮಹಾಸತಿ ಅರುಂಧತೀದೇವಿಯೊಡನೆ ಮೈತುಂಬ ಕಣ್ಣು ಮಾಡಿಕೊಂಡು ಯಾವ ವಿಧಿಗೂ ಲೋಪ ಬಾರದಂತೆ ವಿಧಿವಿಧಾನಗಳನ್ನೆಲ್ಲ ಸಾಂಗಮಾಡಿಸಿದ ವಸಿಷ್ಠರ ಪುಣ್ಯ'' ಭಕ್ತಿತುಂಬಿ ಹೇಳಿದಳು ಮದಯಂತಿ.

''ಅವರು ಮೈತುಂಬ ಕಣ್ಣು ಮಾಡಿಕೊಂಡರೆ ನಾವೇನು ಮಲಗಿದ್ದೆವೆ? ನಾನು ಪ್ರತಿಯೊಂದು ಕಾರ್ಯವನ್ನೂ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನಿರೀಕ್ಷಿಸಿಯೇ ಮಾಡುತ್ತಲಿದ್ದೆ'' ಹೆಂಡತಿಯ ಬಾಯಿಂದ ಬಂದ ಪುರೋಹಿತರ ಅತಿ ಪ್ರಶಂಸೆಯನ್ನು ಕೇಳಿ ಹೇಳಿದ ರಾಜ.

''ನಾವು ಎಷ್ಟಾದರೂ ಮಾನವರಲ್ಲವೇ ? ಎಷ್ಟೇ ಪರಿಕಿಸಿದರೂ ಒಮ್ಮೊಮ್ಮೆ ಬುದ್ಧಿಮಂಕಾಗಿ ವಿಪರೀತಕ್ಕೆಡೆ ಮಾಡುತ್ತದೆ. ಅದಕ್ಕಾಗಿಯೇ ಋಷಿಗಳ ದಿವ್ಯ–ದೃಷ್ಟಿಯ ರಕ್ಷಾ–ಕವಚ ನಮಗೆ ನಿತ್ಯವೂ ಅವಶ್ಯಕ'' ಮಹಾರಾಜನ ಮನಸ್ಸಿನ ಮೇಲೆ ಮುಸುಕಿದ ಅಹಂಕಾರದ ಪರಿಯನ್ನು ಮಿದುವಾಗಿ ಹರಿಯುತ್ತ ಹೇಳಿದಳು ದೂರದರ್ಶಿನಿಯಾದ ಮದಯಂತಿ.

''ನನ್ನ ಬುದ್ಧಿಯೊಂದು ನಿತ್ಯ ನಂದಾದೀಪ. ಅದಕ್ಕೆ ಎಂದಿಗೂ ಮಂಕು ಬರುವದೂ ಇಲ್ಲ ಮಂಕು ಕವಿಯುವದೂ ಇಲ್ಲ'' ರಾಜನ ಅಭಿಮಾನ ಹಟಕ್ಕೆ ತಿರುಗಿ ಮಾತು ಮದದ ಮೊಟ್ಟೆಯಾಗಿ ಬರುತ್ತಿತ್ತು.

ಆಗ್ರಹದ ಸವಾರಿಯಾಗಿ ವಾದವೇದಿಕೆಗೆ ಏರಿದ ಮಹಾರಾಜನ ಗಮನವನ್ನು ಬೇರೆ ಕಡೆಗೆ ತಿರುಗಿಸಲಿಕ್ಕಾಗಿ ಮದಯಂತಿ ಕೇಳಿದಳು.

''ಯಜ್ಞ ಮಾಡಿ ದಣಿದುಕೊಂಡ ನಿಮಗೆಲ್ಲ ಇಂದು ಏನು ಮೇಜವಾನಿಯ ಅಡಿಗೆ ಮಾಡಿಸಬೇಕು?''

''ಇಂದು ಶಾಖಾಹಾರವನ್ನು ಬಿಟ್ಟು..........''ಎಂದೇನೋ ಅನ್ನ ಹೊರಟ ರಾಜನ ಮಾತನ್ನು ಅರ್ಧಕ್ಕೇ ತಡೆದು ಮದಯಂತಿ ನುಡಿದಳು.

''ಇಶ್ಯ ! ಮಹರ್ಷಿ ವಶಿಷ್ಠರು ಸ್ನಾನ ಮಾಡಿಕೊಂಡು ಬರುವ ಹೊತ್ತಾಯಿತು. ಇಂದು ಅವರ ಊಟ ಇಲ್ಲಿಯೇ ಆಗಲಿ ಎಂದು ಪ್ರಾರ್ಥಿಸಿಕೊಂಡಿದ್ದೇವೆ. ಈ ಮಹಾಕ್ರತುವನ್ನು ಸಾಂಗಗೊಳಿಸಿದ ಅವರಿಗೆ ಇಂದು ಇಚ್ಛಾ ಭೋಜನವನ್ನು ಮಾಡಿಸೋಣ. ಇಲ್ಲದ **'ಆಮಿಷ'**ಕ್ಕೆ ಒಳಗಾಗುವದು ಬೇಡ''.

''ಆಮಿಷವಿಲ್ಲದಿದ್ದರೆ ಅಡಿಗೆಯೇ ರುಚಿಯಾಗುವದಿಲ್ಲ. ಇಷ್ಟು ದಿನ ವ್ರತಸ್ಥರಾದ್ದರಿಂದ ನಮಗೂ ನಿಮಗೂ ಶಾಖಾಹಾರದ ಹೊರತು ನಿರ್ವಾಹವೇ ಇರಲಿಲ್ಲ. ಈಗ ಯಜ್ಞವೆಲ್ಲವೂ ಮುಗಿದ ಬಳಿಕ ಮತ್ತೇಕೆ ಈ ಜಿಹ್ವಾ–ನಿಯಂತ್ರಣ ! ಬಿಸಿ ಬಿಸಿ

ಮಾಂಸವನ್ನು ಹಾಕಿ ಇಂದು ಒಳ್ಳೇ ರಸಪಾಕವಾಗಲಿ'' ಎಂದು ಅನ್ನುತ್ತಲೇ ವಸಿಷ್ಠರು ಒಳಗೆ ಕಾಲಿಟ್ಟರು.

''ಇದೀಗ ಸರಯೂ ನದಿಗೆ ಸ್ನಾನಕ್ಕೆಂದು ಹೋದ ವಸಿಷ್ಠರು ಇಷ್ಟು ಬೇಗ ಹೇಗೆ ಬಂದರು ? ಎಂದಿಗೂ ಮಾಂಸವನ್ನು ಮುಟ್ಟದ ಇವರಿಗೆ ಇಂದೇಕೆ ಈ ಮಾಂಸದ ಆಶೆ?'' ಎಂದು ಮುಂತಾಗಿ ಕೇಳಬೇಕೆಂದು ಬಾಯಿ ತೆರೆದ ಮದಯಂತಿಯನ್ನು ಕಣ್ಣು ತೆರೆದು ರಾಜ ಸುಮ್ಮನಿರಿಸಿದ.

ಅನಾಯಾಸವಾಗಿ ತನ್ನ ಇಚ್ಛೆ ಕೈಗೂಡಿದ್ದನ್ನು ಕಂಡು ಅವನು ಕುಳಿತಲ್ಲಿಯೇ ಬಾಯಿ ಚಪ್ಪರಿಸಿದ.

ವಸಿಷ್ಠರು ತಮ್ಮ ಆನ್ಹಿಕ ಮುಗಿಸಿಕೊಂಡು ದೇವಾಗಾರದಿಂದ ಬಂದು ಎಲೆಯ ಮೇಲೆ ಕುಳಿತರು. ಎಲ್ಲ ಬಡಿಸುವದಾದ ಬಳಿಕ ಮಹಾರಾಜ ಮದಯಂತಿಯೊಂದಿಗೆ ಕೈಮುಗಿದು ಮಹರ್ಷಿಗಳ ಅಂಜಲಿಯಲ್ಲಿ ಆಪೋಶನ ಹಾಕಿ 'ಕೃಷ್ಣಾರ್ಪಣ' ಎಂದು ನೀರು ಬಿಟ್ಟ.

ಪಂಚಪ್ರಾಣಾಹುತಿಯನ್ನು ತೆಗೆದುಕೊಳ್ಳುವಷ್ಟರಲ್ಲಿ ಮಾಂಸದ ದುರ್ವಾಸನೆ ಹಿಡಿದು ಕಾಯ್ದು ಕೆಂಡರಾದ ವಸಿಷ್ಠರು ದುರ್ವಾಸರಂತೆ ಸಿಟ್ಟಿಗೆದ್ದು ದುರುಗುಟ್ಟಿ ನೋಡಹತ್ತಿದರು.

ಕಣ್ಣಿನಿಂದ ಕೆಂಡಗಳನ್ನೂ ಉಸುರಿನಿಂದ ಎಸರನ್ನೂ ಬಾಯಿಂದ ಕಿಡಿಗಳನ್ನೂ ಉದುರಿಸುತ್ತ ರೌದ್ರಾವತಾರದಲ್ಲಿ ಚೀರಿದರು ''ಮೂರ್ಖ! ನಾನೇನು ರಾಕ್ಷಸನೆಂದು ಬಗೆದೆಯಾ ಮಾಂಸ ತಿನ್ನಲಿಕ್ಕೆ. ಅಶ್ವಮೇಧದಂಥ ದುಷ್ಕರ ಯಜ್ಞ ಮಾಡಿಸಿದ್ದಕ್ಕೆ ಮದೋನ್ಮತ್ತ ! ಇದೇ ಏನು ನೀನು ಕೊಡುವ ಗುರುದಕ್ಷಿಣೆ ! ನನ್ನ ಬ್ರಾಹ್ಮಣ್ಯವನ್ನೇ ಹಾಳು ಮಾಡಲು ಹೊಂಚು ಹಾಕಿರುವೆ. ಭೋಗಿಸು ಅದರ ಫಲವನ್ನು. ನೀನು ನನಗೆ ತಿನಿಸಬೇಕೆಂದು ಮಾಡಿದ ಮಾಂಸವನ್ನೇ ತಿಂದು ಜೀವಿಸುವ ರಾಕ್ಷಸನಾಗಿ ಹುಟ್ಟು'' ಎಂದು ಶಾಪ ಕೊಟ್ಟು ಉತ್ತರಾಪೋಶನ ತೆಗೆದುಕೊಂಡು ಎಲೆಯಿಂದ ಎದ್ದುಬಿಟ್ಟರು.

ಭಯದಿಂದ ನಡಗುತ್ತಲಿರುವ ರಾಜ ಕೈಮುಗಿದು ಕೇಳಿದ, ''ಸ್ವಾಮಿ ! ಆಗ ಬಂದು ತಾವೇ ''ಇಂದು ಮಾಂಸಾಶನವಾಗಲಿ'' ಎಂದು ಹೇಳಿದಿರಲ್ಲವೇ?''

''ಖಲ ! ರಾಕ್ಷಸ ! ಮೋಸಮಾಡಿ ಈ ಮಿಥ್ಯಾಭಾಷಣವನ್ನು ಬೇರೆ ಮಾಡುತ್ತಲಿರುವೆಯಾ ! ಸುಳ್ಳಿಗೂ ಒಂದು ಶಾಪವನ್ನು ಎಸೆದೇನು ಸುಮ್ಮನಿರು'' ಎಂದು ಗುಡುಗಿದರು.

ಆಗ ಮದಯಂತಿ ಮುನಿಗಳ ಪಾದಪಲ್ಲವಗಳನ್ನು ಬಾಷ್ಪಧಾರೆಯಿಂದ ತೊಳೆದು,

''ಸ್ವಾಮಿ ! ಸತ್ಯವಾಗಿಯೂ ತಾವು ಹಾಗೆ ಬಂದು ಹೇಳಿದ್ದು ನಿಜ'' ಎಂದು ಹೇಳಿದಳು.

ವಿಶ್ವಸನೀಯವಾದ ಅವಳ ದೀನ ಮಾತನ್ನು ಕೇಳಿ ಆ ಯೋಗಿವರ್ಯರು ದಿವ್ಯದೃಷ್ಟಿಯಿಂದ ಎಲ್ಲವನ್ನೂ ತಿಳಿದು ನೋಡಿದರು. ಆಮೇಲೆ ಶಾಂತರಾಗಿ,

''ಮಹಾರಾಜ ! ಮಾತು ಮಿಂಚಿಹೋಯಿತು. ಅಂದು ನೀನು ಅಡವಿಯಲ್ಲಿ ಕೊಂದ ಹೆಣ್ಣು ಹುಲಿಯ ಗಂಡ – ಗಂಡುಹುಲಿ – ಒಬ್ಬ ಕ್ರೂರ ರಕ್ಕಸ. ಅಂದು ನಿನ್ನ ಬಾಣ ತಪ್ಪಿಸಿಗೊಂಡು ಹೋಗುವಾಗ ಅದು ಗುಡುಗು ಹಾಕಿ ಇದರ ಸೇಡನ್ನು ತೀರಿಸಿಗೊಳ್ಳುವೆನೆಂದು ಸಾರಿಯೇ ಹೋಗಿತ್ತು. ಆ ಪ್ರಕಾರ ಅದು ಇಂದು ನಾನು ಸ್ನಾನಕ್ಕೆ ಹೋದಾಗ ನನ್ನ ವೇಷದಿಂದ ಬಂದು ಇಷ್ಟೆಲ್ಲ ಅನರ್ಥಮಾಡಿದೆ. ಮಾಂಸದ ಆಹಾರ ಬೇಕೆಂದು ಎಂಥ ಬ್ರಾಹ್ಮಣನೂ ಹೇಳಲಾರ. ಅಂದ ಬಳಿಕ ನನ್ನಂಥ ಬ್ರಹ್ಮರ್ಷಿ ಸಾಮಿಷ ಆಹಾರವನ್ನು ಹೇಗೆ ಬಯಸಬಲ್ಲೆನೆಂಬುವದನ್ನು ನೀನು ತುಸು ವಿಚಾರ ಮಾಡಬಹುದಾಗಿತ್ತು. ''ನನ್ನ ಕಡೆಯಿಂದ ಎಂದೂ ತಪ್ಪೇ ಆಗುವದಿಲ್ಲ. ನನಗೆ ಮೈತುಂಬ ಕಣ್ಣು'' ಎಂಬ ದುರಭಿಮಾನದಿಂದ ಅಂಧನಾಗಿ ಸಾಧ್ವಿಯಾದ ಮದಯಂತಿಯ ತಥ್ಯಪಥ್ಯವಾದ ಮಾತನ್ನು ಕೇಳಲಿಲ್ಲ. ಅದಕ್ಕಾಗಿ ನೀನು ಈ ಶಾಪವನ್ನು ಭೋಗಿಸಬೇಕಾಯಿತು. ಕೊಟ್ಟ ಶಾಪವನ್ನು ನಾನು ಹಿಂದೆ ತೆಗೆದುಕೊಳ್ಳಲಾರೆ. ಆದರೆ ಮದಯಂತಿಯ ಮುಖನೋಡಿ ಅದರ ಅವಧಿಯನ್ನು ಕಡಿಮೆ ಮಾಡಿದ್ದೇನೆ. ನೀನು ಕೇವಲ ಹನ್ನೆರಡು ವರುಷ ಮಾತ್ರ ರಾಕ್ಷಸ ಜನ್ಮವನ್ನು ಅನುಭವಿಸಿದರೂ ಸಾಕು. ಆಮೇಲೆ ನಿನ್ನ ಪೂರ್ವದ ರಾಜನ ದೇಹಕ್ಕೆ ಹಿಂದಿರುಗುವಿ'' ಎಂದು ಸೌಮ್ಯವಾಗಿ ನುಡಿದರು.

ಆದರೆ ''ಹನ್ನೆರಡು ವರುಷವಾದರೂ ರಾಕ್ಷಸನಾಗಬೇಕಾಯಿತಲ್ಲ ! ಅದೂ ಕೂಡ ತನ್ನದೇನೂ ದೋಷವಿಲ್ಲದೆ'' ಎಂಬ ವಿಚಾರದಿಂದ ರಾಜನ ತಲೆ ಕಾಯ್ದು ಹೋಯಿತು. ತನ್ನನ್ನು ರಾಕ್ಷಸನನ್ನಾಗಿ ಮಾಡುವ ಈ ಮುನಿಯನ್ನೇ ಕೊಂದುಬಿಡಬೇಕೆಂದು ಅಶ್ವಮೇಧ ಮಾಡಿದ ಪುಣ್ಯವನ್ನೆಲ್ಲ ಪಣಕ್ಕೆ ಹಚ್ಚಿ ಶಾಪದ ಜಲವನ್ನು ಹಿಡಿದುನಿಂತ. ವಸಿಷ್ಠರು ತತ್ತರಿಸಿ ಹೋದರು. ರಾಜ ವೀರ ಭೈರವನಾದ. ಅಂಜಲಿಯಲ್ಲಿ ಉದಕವನ್ನು ಹಿಡಿದು ಅಭಿಮಂತ್ರಿಸತೊಡಗಿದ.

ಆಗ ರಾಣಿ ಗಾಬರಿಯಾಗಿ ಗಾಳಿ ಹಾಯ್ದವರಂತೆ ಇದ್ದಲ್ಲಿಂದ ಓಡಿ ಬಂದು ರಾಜನ ಕಾಲಮೇಲೆ ಉರುಳಿದಳು. ಕಣ್ಣೀರಿನ ಕೊಡವನ್ನೇ ಉರುಳಿಸಿದಳು. ''ಬ್ರಹ್ಮರ್ಷಿಗಳಾದ ಇಂಥ ಸಿದ್ಧ ತಾಪಸರನ್ನು ಕೊಂದು ಎಷ್ಟು ಕುಲಗಳನ್ನು ನರಕದಲ್ಲಿ ಕೊಳೆಯಿಸಬೇಕೆಂದು ಮಾಡಿರುವಿರಿ ? ಬೇಡ. ವಂಶಾಂಕುರವನ್ನೇ ಧ್ವಂಸಮಾಡಿ ಕೊನೆಯವರೆಗೂ ನಮ್ಮನ್ನು ನರಕದಲ್ಲಿ ನಾರುವ ನೊರಜುಗಳನ್ನಾಗಿ ಮಾಡುವ ಇಂಥ ಘಾತಕ ವ್ಯಾಪಾರ ಬೇಡ.'' ಎಂದು ಪರಿಪರಿಯಿಂದ ಹೇಳಿದಳು, ಹಲುಬಿದಳು. ''ಹತ್ತೆಂಟು ವರುಷ ಶ್ರಮ ಪಟ್ಟು ಮಾಡಿದ ಅಶ್ವಮೇಧದ ಪುಣ್ಯವನ್ನೆಲ್ಲ ಋಷಿ ಹತ್ಯೆಗಾಗಿ ಉಪಯೋಗಿಸುವದೇ? ಅದರಲ್ಲಿಯೂ ಗುರುಗಳು, ಬ್ರಹ್ಮಜ್ಞಾನಿಗಳು. ಇದರಿಂದ ಸಕುಟುಂಬ ಸುಟ್ಟು

ಹೋಗುವಿರಿ. ಚೆಲ್ಲಿರಿ ಆ ನೀರನ್ನು'' ಎಂದು ಬೇಕಾದಷ್ಟು ಅಲ್ಪರಿದು ಅತ್ತು ಬೇಡಿಕೊಂಡಳು.

ಆದರೆ ರಾಜನ ಬುದ್ಧಿ–ಭಾವಗಳಲ್ಲಿ ಆಗಲೇ ರಾಕ್ಷಸೀಯತೆ ಬಂದು ಹೋಗಿತ್ತು. ಅವನು ಕಾಲಾಂತಕನಂತೆ ನಿಂತು ಶಾಪಜಲದಲ್ಲಿ ಮಂತ್ರ ಶಕ್ತಿಯನ್ನು ಹೆಚ್ಚೆಚ್ಚು ತುಂಬಲು ಅಭಿಮಂತ್ರಣವನ್ನು ನಡೆಯಿಸಿಯೇ ಇದ್ದ. ಮಂತ್ರಪೂತವಾದ ಜಲವನ್ನು ವಸಿಷ್ಠರ ಮೇಲೆ ಉಗ್ಗಲು ಕೈಯನೆತ್ತಿದ.

ಆಗ ಮದಯಂತ್ರಿಗೆ ತಟ್ಟನೆ ಒಂದು ಯುಕ್ತಿ ಹೊಳೆಯಿತು. ''ಇವನು ತನ್ನ ಇದ್ದ–ಬಿದ್ದ ಪುಣ್ಯವನ್ನೆಲ್ಲ ಹಾಕಿ ಕೈಯಲ್ಲಿರುವ ನೀರನ್ನು ಅಭಿಮಂತ್ರಿಸಿದ್ದಾಗಿದೆ. ಅದಿಷ್ಟನ್ನೂ ನನ್ನ ಮೇಲೆ ಪೂರ್ಣ ಚೆಲ್ಲಿಕೊಂಡುಬಿಟ್ಟರೆ ವಸಿಷ್ಠರು ಸುರಕ್ಷಿತವಾಗಿ ಉಳಿಯುವರು. ಆಮೇಲೆ ಮತ್ತೊಮ್ಮೆ ಶಾಪ ಕೊಡಲು ಇವನಲ್ಲಿ ಪುಣ್ಯವೂ ಇಲ್ಲ ಶಕ್ತಿಯೂ ಇಲ್ಲ. ಇದರಿಂದ ನಾನು ಸತ್ತರೂ ಚಿಂತೆಯಿಲ್ಲ. ಪತಿಗೆ ಮಾತ್ರ ಬ್ರಹ್ಮಹತ್ಯೆಯ ದೋಷ ಬರದಿದ್ದರೆ ಸಾಕು'', ಎಂದು ವಿಚಾರಿಸಿ ಮಿಂಚಿನಂತೆ ಎದ್ದು ತನ್ನ ಪತಿಯ ಕೈ ಹಿಡಿದಳು.

''ಅಂಥ ಬ್ರಹ್ಮರ್ಷಿಯನ್ನು ಕೊಲ್ಲುವದಕ್ಕಿಂತ ಮೊದಲು ನನ್ನ ಮೇಲೆಯೇ ಆ ನೀರನ್ನೆಲ್ಲ ಚೆಲ್ಲಿ ಕೊಂದುಬಿಡಿರಿ. ನಾನು ಬದುಕಿ ಬ್ರಹ್ಮಹತ್ಯೆಯನ್ನು ನೋಡಲಾರೆ'' ಎಂದು ಕೂಗಿ ಅವನ ನೀರು ತುಂಬಿದ ಬೊಗಸೆಯನ್ನು ತನ್ನ ಮೈಮೇಲೆ ಬಗ್ಗಿಸಿಗೊಳ್ಳಬೇಕೆಂದು ಹವಣಿಸಿದಳು, ಜಗ್ಗಹತ್ತಿದಳು, ಜೋತು ಬಿದ್ದಳು.

ಆಗ ಗಾಬರಿಯಾದ ಮಹಾರಾಜನು ಹೆಂಡತಿ ಸಾಯುವಳೆಂಬ ಭಯದಿಂದ ಆರ್ತನಾಗಿ ಅವಳಿಗೆ ''ನೀನು ಕೈಬಿಡು, ನಾನು ವಸಿಷ್ಠರ ಮೇಲೆ ಇದನ್ನು ಉಗ್ಗುವದಿಲ್ಲ. ನಿನ್ನ ಮೇಲೆಯೂ ಬೇಡ, ಮುಗಿಲಿನಲ್ಲಿ ತೂರಿಬಿಡುತ್ತೇನೆ. ಅಥವಾ ನೆಲದಲ್ಲಿ ಚೆಲ್ಲುತ್ತೇನೆ'' ಎಂದ.

ಆಗ ರಾಣಿಯು ಅವನ ಕೈಹಿಡಿದು ''ಬೇಡ ಬೇಡ. ಮಾರಕ ಮಂತ್ರದಿಂದ ಘೋರವಾದ ಈ ಶಾಪ–ಸಲಿಲವನ್ನು ಮುಗಿಲಿನಲ್ಲಿ ತೂರಿದರೆ ಪಕ್ಷಿಗಳು ಸುಟ್ಟು ಹೋಗುವವು. ನೆಲದಲ್ಲಿ ಚೆಲ್ಲಿದರೆ ಪ್ರಾಣಿಗಳು ಸತ್ತು ಹೋಗುವವು. ಆದ್ದರಿಂದ ಇದನ್ನು ಎಲ್ಲಿಯೂ ಚೆಲ್ಲುವದೇ ಬೇಡ ನನ್ನ ಮೇಲೆಯೇ ಸುರುವಿರಿ'' ಎಂದು ಜೋರಿನಿಂದ ಅವನ ಅಂಜಲಿಯನ್ನು ತನ್ನ ಶರೀರದ ಮೇಲೆ ಸುರುವಿಕೊಂಡಳು.

ಅವಳ ಪಾತಿವ್ರತ್ಯದ ಪ್ರಭಾವದಿಂದ ಆ ಉರಿಯುವ ನೀರು ಮೈತುಂಬ ಬಿದ್ದರೂ ಅವಳಿಗೆ ಏನೂ ಆಗಲಿಲ್ಲ. ಚಂದನ ಲೇಪನ ಮಾಡಿದಂತೆ ಮಿದುವಾದ ಮೈಯೆಲ್ಲ ಗಂಧಾದ್ರ್ರವಾಯಿತು. ವಸಿಷ್ಠರು ಅವಳ ದಿವ್ಯ ಸತೀತ್ವವನ್ನು ಕಂಡು ಬೆಕ್ಕಸಬೆರಗಾಗಿ ನಿಂತರು. ತಮ್ಮ ಮೇಲೆ ಬಂದ ಸಾವನ್ನು ಮೈಮೇಲೆ ತೆಗೆದುಕೊಂಡು ಆ ಅಗ್ನಿದಿವ್ಯದಿಂದ ಪಾರಾಗಿ ಬಂದ ಮದಯಂತಿಯ ಉಪಕಾರಕ್ಕಾಗಿ ಕಣ್ತುಂಬಿ

ಕೃತಜ್ಞತೆಯನ್ನು ಅರ್ಪಿಸಿದರು. ಅವರ ಹೃದಯ ತುಂಬಿ ಬಂದಿತ್ತು, ಕೊರಳು ಬಿಗಿದು ಬಂದಿತ್ತು, ಕಣ್ಣು ತುಳುಕಿ ನಿಂತಿತ್ತು, ಮಾತು ಮೂಕವಾಗಿತ್ತು, ಅದಕ್ಕಾಗಿ ಅವರು ಅವಳನ್ನು ಮನಸ್ಸಿನಿಂದಲೇ ವಂದಿಸಿದರು. ಮೌನದಿಂದಲೇ ಅಭಿನಂದಿಸಿದರು.

ಕೈಯ್ಯಲ್ಲಿಯ ನೀರೆಲ್ಲ ಮದಯಂತಿಯ ಮೈಮೇಲೆ ಚೆಲ್ಲಿಹೋದ ಬಳಿಕ ರಾಜ ತನ್ನ ಖಾಲಿಯಾದ ಕೈಗಳನ್ನು ಹಿಂದೆ ತೆಗೆದುಕೊಂಡ. ಅಂಗೈಯಲ್ಲಿ ಇನ್ನೂ ನಾಕೆಂಟು ಹನಿಗಳು ಹತ್ತಿದ್ದವು. ಅವು ಅವಸರದಲ್ಲಿ ಅವನ ಮುಂಗಾಲುಗಳ ಮೇಲೆ ಉದುರಿಬಿದ್ದವು. ತಕ್ಷಣವೆ ಅವನ ಕಾಲುಗಳು ಸುಟ್ಟು ಕರಕಾಗಿ ಹೋದವು. ಅಂದಿನಿಂದ ಅವನು 'ಕಲ್ಮಾಷಪಾದ' ಎಂದು ಹೆಸರಾದನು.

4. ತ್ರೇತಾಯುಗದ ಸಾಮ್ಯವಾದಿ ರಂತಿದೇವ

(ಅನ್ನಬ್ರಹ್ಮನ ಆಮರಣ ಉಪವಾಸ)
ಸ್ರೋತೋಮೂರ್ತ್ಯಾ ಭುವಿ ಪರಿಣತಾಂರಂತಿದೇವಸ್ಯ ಕೀರ್ತಿಮ್
ಮೇಘದೂತೇ ಕಾಲಿದಾಸಃ

ಚರ್ಮಣ್ವತೀ (ಚೆಂಬಳಾ) ನದಿಯ ತರಂಗ ಮಾಲೆಗಳು ಇಂದಿಗೂ ದಶಪುರದ ಪ್ರಾಕಾರ ಪ್ರದಕ್ಷಿಣೆಯನ್ನು ಮಾಡುತ್ತಲಿವೆ. ಆಂಗಿರಸ ಅರಸರ ಚಿರರಾಜಧಾನಿಯಾದ ಆ ಪುರದ ಪರಿಸರದಲ್ಲಿ ಚೆಂಬಳೆ ತನ್ನ ತೆರೆ ತುಂತುರುಗಳನ್ನು ವಿರಲ ತರಸಿಯಾಗಿ ಇನ್ನೂ ಆ ನಗರದೊಡನೆ ನೀರಾಟವನ್ನು ಆಡುತ್ತಲೇ ಇದ್ದಾಳೆ. ಈ ನದೀ ನಗರಗಳ ಬಾಂಧವ್ಯ, ಈ ಸಂಬಂಧ ಬಂಧುರತೆ ಕಾಲಿದಾಸನನ್ನೂ ಸೆರೆಹಿಡಿದಿತ್ತು, ಈ ಪಟ್ಟಣ ಆ ಪ್ರವಾಹ ಎರಡನ್ನೂ ತನ್ನ ಅಮರ ಕಾವ್ಯವಾದ ಮೇಘ ಸಂದೇಶದಲ್ಲಿ ಮೂಡಿಸಿ ತ್ರಿಕಾಲಾಬಾಧಿತವನ್ನಾಗಿ ಮಾಡಿಟ್ಟಿದ್ದಾನೆ ಕವಿ.

ಹಿಂದೊಮ್ಮೆ ಜಲದಾನಕ್ಕಾಗಿ ಆತ್ಮಬಲಿದಾನವನ್ನೇ ಮಾಡಿದ ರಂತಿದೇವನ ಕಥೆಯನ್ನು ಈಗಲೂ ಈ ಪ್ರಾಚೀನನದಿಯ ವಾಚಾಲ ವೀಚಿಗಳು ಮೊರೆಮೊರೆದು ಹೇಳುತ್ತಿವೆ. ಅವನ ದಾನ –ಕೀರ್ತಿಯನ್ನು ನೆರೆ ನೊರೆಗೆಳಲ್ಲಿ ಹೊತ್ತು ಅಭಿಮಾನದಿಂದ ಮೆರೆಯುತ್ತಿವೆ.

ಭರತ–ವಂಶ–ಲಲಾಮನಾದ ಸಂಕೃತಿಯ ವರಪುತ್ರನೇ ರಂತಿದೇವ. ರಾಜರ್ಷಿಯಾದ ರಂತಿದೇವನ ಆಳಿಕೆಯಲ್ಲಿ ರಾಮ ರಾಜ್ಯದ ಸುಖ ಸಂಪದಗಳು ಆ ನೆಲದಲ್ಲಿ ನೆಲೆಸಿದ್ದವು. ಅವನ ನ್ಯಾಯವಾದ ಶಾಸನ, ಹಾಗೂ ಪ್ರಜಾನುರಂಜನದಿಂದ ಪ್ರೀತರಾದ ದೇವ ದಿಕ್ಪಾಲಕರು ಅವನ ರಾಜ್ಯದಲ್ಲಿ ಬಂಗಾರದ ಮಳೆಗರೆದಿದ್ದರು.

ಹೊಳೆ ಹಳ್ಳಗಳು ನೀರಿನಿಂದಲೂ, ಭೂಮಿ ಬೆಳೆಯಿಂದಲೂ, ಕಣಜ ಕಾಳುಗಳಿಂದಲೂ, ಬೊಕ್ಕಸ ಹಣದಿಂದಲೂ, ಹೃದಯ ಆನಂದದಿಂದಲೂ ಯಾವಾಗಲೂ ತುಂಬಿರುತ್ತಲಿದ್ದವು.

ತನ್ನ ಭಂಡಾರದಲ್ಲಿ ಶೇಖರಿತವಾಗುತ್ತಲಿರುವ ಅಪಾರ ಸಂಪತ್ತನ್ನು ನೋಡಿ ರಾಜನ ಮನಸ್ಸು ಸಂತಸದುಂಬಿತು. ಭಾಂಡಾರದ ಬಾಗಿಲು ತೆರೆದಿಟ್ಟು ದಾನ ಮಾಡಲು ಸುರುಮಾಡಿದ. ಬಡಬಗ್ಗರು ಬಂದು ತಮಗೆ ಹೊರಲಾರದಷ್ಟು ಹಣವನ್ನು ಹೊತ್ತುಕೊಂಡು ಹೋಗುತ್ತಲಿದ್ದರು. ಅನ್ನದಾನಕ್ಕಂತೂ ಲೆಕ್ಕವೇ ಇರಲಿಲ್ಲ.

ಕಾಶಿಯಿಂದ ರಾಮೇಶ್ವರದವರೆಗೆ ಪ್ರತಿ ಊರಿನಲ್ಲಿಯೂ ಒಂದೊಂದು ಅನ್ನ ಛತ್ರವನ್ನು ತೆರೆದನು. ದೇಶವ್ಯಾಪಿಯಾದ ಲಕ್ಷಾವಧಿ ಅನ್ನಛತ್ರಗಳನ್ನು ನೋಡಿಕೊಳ್ಳಲಿಕ್ಕೆಂದು ಎರಡು ಲಕ್ಷ ಜನ ವ್ಯವಸ್ಥಾಪಕರನ್ನು ಅವನು ನಿಯಮಿಸಬೇಕಾಯಿತು. ಈ ಎರಡು ಲಕ್ಷ ಸುಯೋಗ್ಯ ವ್ಯವಸ್ಥಾಪಕರಿಗೆಲ್ಲ ಮಾಸಿಕ

ವೇತನವನ್ನು ಗೊತ್ತುಪಡಿಸಿದನು. ಪ್ರತಿಯೊಂದು ಛತ್ರದಲ್ಲಿಯೂ ವ್ಯವಸ್ಥಾಪಕರು ಬಂದ ಅತಿಥಿಗಳಿಗೂ, ಊರವರಿಗೂ ಬಹಳ ಆದರಾಂತಃಕರಣದಿಂದ ಅನ್ನವನ್ನು ಇಕ್ಕುತ್ತಲಿದ್ದರು.

ಇದರಿಂದ ಜನರೆಲ್ಲ ಅಡಿಗೆ ಮಾಡುವದನ್ನು ಬಿಟ್ಟು ಹೆಂಡಿರು ಮಕ್ಕಳು ಸಹಿತ ರಂತಿ ಛತ್ರಕ್ಕೇ ಊಟಕ್ಕೆ ಬಂದುಬಿಡುತ್ತಲಿದ್ದರು. ಅಲ್ಲಿಯ ನೈವೇದ್ಯ ವೈಶ್ವದೇವದಿಂದ ಪವಿತ್ರವಾದ ಹಾಗೂ ಪುಷ್ಟಿಕರವಾದ ಸ್ವಾದಿಷ್ಟ ನಳಪಾಕವನ್ನು ಉಂಡು ಪ್ರಜೆಗಳೆಲ್ಲ ಬಲಿಷ್ಠರಾಗಿದ್ದರು. ಆರೋಗ್ಯಭಾಗ್ಯ ಪ್ರತಿಯೊಬ್ಬ ಪ್ರಜೆಯ ಶರೀರದ ಸೊತ್ತಾಗಿತ್ತು. ಊಟದ ಪರಿದಾಟವೇ ಇಲ್ಲದ್ದರಿಂದ ಜನರಲ್ಲಿ ವೃತ್ತಿಕಲಹ, ದ್ವೇಷಾಸೂಯೆ, ಲಾಭ ಲೋಭ ಮೊದಲಾದ ದುರ್ಗುಣಗಳ ಪ್ರಸಕ್ತಿಯೇ ಇರಲಿಲ್ಲ. ಪರಸ್ಪರ ಪ್ರೀತಿ ನ್ಯಾಯ ನೀತಿಗಳೇ ರಂತಿದೇವನ ಪ್ರಜೆಗಳ ವೈಶಿಷ್ಟ್ಯವಾಗಿತ್ತು.

ಹೊಟ್ಟೆಯ ಚಿಂತೆ ಇಲ್ಲದ್ದರಿಂದ ಬ್ರಾಹ್ಮಣರು ಸರ್ವದಾ ಜ್ಞಾನದಾನವನ್ನು ಮಾಡುತ್ತ ಅಧ್ಯಾತ್ಮಸಾಧನವನ್ನು ಮಾಡುತ್ತಲಿದ್ದರು. ಉಳಿದ ವರ್ಣದವರಾದರೂ ತಮ್ಮ ಉಳಿದ ವೇಳೆಯಲ್ಲಿ ಹೊಲ–ಮನೆಗಳಲ್ಲಿ ಮೈಮುರಿದು ದುಡಿಯುತ್ತಲಿದ್ದುದರಿಂದ ಮಣ್ಣಿನಲ್ಲಿ ಸತ್ವ ಹೆಚ್ಚಾಗಿ ನೂರ್ಮಡಿಯಾಗಿ ಬೆಳೆ ಬರುತ್ತಲಿತ್ತು. ಖಾಲೀಕೂಡಲಾರದೇ ಜನ ಬೆಟ್ಟ–ಬಯಲುಗಳನ್ನೆಲ್ಲ ಕಡಿದು, ಕಳೆ ತೆಗೆದು, ಹರಗಿ ಹೊಲ ಮಾಡಿ ಬಿತ್ತಲಿಕ್ಕೆ ಹದ ಮಾಡಿಕೊಂಡರು. ಹೆಣ್ಣು ಮಕ್ಕಳೂ ಕೂಡ ತಮ್ಮ ತಮ್ಮ ಮನೆಯ ಅಂಗಳದಲ್ಲಿ ಅಂಗೈಯಗಲ ಜಾಗೆಯನ್ನೂ ವ್ಯರ್ಥಮಾಡದೇ ಬಿತ್ತಿ ಬೆಳೆ ಮಾಡುತ್ತಲಿದ್ದರು. ಸಕಾಲ ವೃಷ್ಟಿ ಹಾಗು ಜನರ ಬೆವರು ಗೊಬ್ಬರದಿಂದ ಹೊಲಗಳಲ್ಲಿ ಬೆಳೆಗಳು ಬಹಳ ಕಸುವಿನಿಂದ ಬೆಳೆಯುತ್ತಲಿದ್ದವು. ರಾಶಿಯನ್ನು ಮಾಡಿದಾಗ ಆ ಧಾನ್ಯವನ್ನು ತುಂಬಿಡಲು ಜನರ ಮನೆ ಸಾಲುತ್ತಲಿರಲಿಲ್ಲ. ಭೂದೇವಿಯು ವಾತ್ಸಲ್ಯದಿಂದ ಜನರಿಗೆ ತನ್ನ ಚಿರಸಂಚಿತ ನಿಧಿಯನ್ನೆಲ್ಲ ಅರ್ಪಿಸಿಬಿಟ್ಟಿದ್ದಳು.

ಆ ಕಾಳಿನ ರಾಶಿಯಲ್ಲಿ ಜನ ತಮಗೆ ಬೇಕಾದಷ್ಟನ್ನು ತೆಗೆದುಕೊಂಡು ಉಳಿದುದನ್ನೆಲ್ಲ ರಾಜಭಾಗವೆಂದು ಇಟ್ಟುಬಿಡುತ್ತಿದ್ದರು.

ವಿಜಯದಶಮಿಯ ದಿನ ಸೀಮೋಲ್ಲಂಘನಕ್ಕಾಗಿ ಹೊರಟ ರಾಜ ದಾರಿ ಯುದ್ದಕ್ಕೂ ಗರಿ ಚವರಿಯನ್ನು ಬೀಸಿ ಕರೆಯುತ್ತಲಿರುವ ಹಸಿರು ಹೊಲಗಳನ್ನೂ, ಹೊಲದಲ್ಲಿಯ ಬೆಳೆಗಳನ್ನೂ, ಬೆಳೆಯ ಮೇಲಿನ ಕಳೆಯನ್ನೂ ನೋಡಿ ಹಿರಿಹಿರಿ ಹಿಗ್ಗುತ್ತಿದ್ದ.

ದಿಗ್ವಿಜಯ ಮಾಡಿಕೊಂಡು ಹಿಂದಿರುಗಿ ಪ್ರಜಾಪರ್ಯವೇಕ್ಷಣ ಮಾಡುತ್ತ ಬರುವ ಮಹಾರಾಜನ ಎದುರಿಗೆ ಜನರು ತಮ್ಮ ಶ್ರಮದ ಫಲವಾದ ಧನ, ಧಾನ್ಯಗಳನ್ನು ರಾಶಿರಾಶಿಯಾಗಿ ತಂದು ಸುರುವುತ್ತಿದ್ದರು. ಸಂತಸದಿಂದ ಉಬ್ಬಿಹೋದ ಮಹಾರಾಜ ಅದನ್ನೆಲ್ಲ ಆ ಊರಿನ ಅನ್ನ ಛತ್ರಗಳಿಗೂ, ಗ್ರಾಮಪಂಚಾಯಿತಿಗಳಿಗೂ

ಕೊಟ್ಟುಬಿಡುತ್ತಲಿದ್ದ. ಅದರಿಂದ ಇಡೀ ಒಂದು ವರುಷ ಜನರಿಗೆ ಅನ್ನದ ಚಿಂತೆಯಿಲ್ಲದೇ ನಿರ್ವಂಚನೆಯಿಂದ ತಮ್ಮ ತಮ್ಮ ಕೆಲಸ ಮಾಡುತ್ತಲಿದ್ದರು.

ಹೀಗೆ ರಂತಿದೇವನು ಭರತಖಂಡದ ಅಂದಿನ ಎರಡು ಲಕ್ಷ ಹಳ್ಳಿಗಳಲ್ಲಿ ಸ್ಥಾಪಿಸಿದ ಅನ್ನ ಛತ್ರಗಳು ಕ್ರಾಂತಿಯ ಶಬ್ದವನ್ನೂ ಉಚ್ಚರಿಸದೇ ಒಂದು ತರಹದ ಸ್ನೇಹಮಯ ಸಮತಾವಾದವನ್ನೇ ನಿರ್ಮಿಸಿದ್ದವು. ಅದು ಇಂದಿನ ರಷಿಯಾ ಚೀನಗಳ ಕಮ್ಯುನಿಸ್ಟರ 'ಜಬರದಸ್ತಿಯ ಸಮತಾವಾದ' ವಾಗದಿದ್ದರೂ ಭಾರತದ ಶಾಂತಿ ಸೌಹಾರ್ದಗಳ ಮಮತಾವಾದವಾಗಿತ್ತು. ಮಾತಿಲ್ಲದೇ ಕೃತಿ ಮೂಡಿ ನಿಂತಿತ್ತು. ಪ್ರಚಾರವಿಲ್ಲದೇ ಪ್ರಮೇಯ ಅಸ್ತಿತ್ವದಲ್ಲಿ ಬಂದಿತ್ತು. ಇಂಥ ಸವರ ಸಂತೋಷಕರವಾದ ಸಾಮಾಜಿಕ ವ್ಯವಸ್ಥೆಯನ್ನು ಜೀವನದ ಉದ್ದಕ್ಕೂ ಕಾಪಾಡಿಕೊಂಡು ಬಂದರೂ ಅದನ್ನೇ ಗುಡ್ಡ ಮಾಡಿ ಪ್ರಚಾರದ ಗುಲ್ಲೆಬ್ಬಿಸಿ ಪ್ರತಿಷ್ಠೆಯನ್ನು ಮೆರೆಯಿಸುವದು ರಂತಿಗೆ ಬೇಕಾಗಿರಲಿಲ್ಲ. ಆದ್ದರಿಂದಲೇ ಅದು ಎಲ್ಲಿಯೂ ವಿವರವಾಗಿ ಉಲ್ಲಿಖಿತವಾಗಿಲ್ಲ.

ಇಂಥ ಪುಣ್ಯಾತ್ಮನಾದ ಈ ರಂತಿಯ ಯಜ್ಞಕ್ಕಾಗಿ ಪಶುಗಳು ಅಡವಿಯಿಂದ ತಾವಾಗಿ ಬರುತ್ತಲಿದ್ದವು. ಈ ರಾಜರ್ಷಿಯ ಯಜ್ಞದಲ್ಲಿ ಬಲಿಯಾದರೆ ಈ ಪಶುಯೋನಿಯಿಂದ ಮುಕ್ತಿಯಾಗಿ ಮಾನವರಿಗೂ ದೊರಕದ ಸ್ವರ್ಗ ತಮಗೆ ಸುಲಭವಾಗಿ ಸಿಗುವದೆಂದು ಅವು ನಂಬಿದ್ದವು.

ಒಂದು ದಿನ ಒಂದು ಆಕಳು ಸ್ವರ್ಗಾಪೇಕ್ಷೆಯಿಂದ ಇವನ ಯಜ್ಞಮಂಟಪಕ್ಕೆ ತನ್ನನ್ನು ಬಲಿಕೊಡು ಎಂದು ಬಂದು ಕೇಳಿಕೊಂಡಿತು. ಅದರ ಒತ್ತಾಯಕ್ಕೆ ಒಳಗಾಗಿ ಅದನ್ನು ಯಜ್ಞ ಪಶುವನ್ನಾಗಿ ಮಾಡಿದಾಗ ಮತ್ತೊಂದು ಆಕಳವು ಅದನ್ನು ನೋಡಿ ಕೆಟ್ಟ ದನಿಯಿಂದ ಚೀರಿತು. ಅದರ ಕರುಣಾಕ್ರಂದನಕ್ಕೆ ಅವನ ಎದೆ ಸೀಳಿದಂತಾಗಿ ಅಂದಿನಿಂದ ಅವನು ಗೋವಧೆಯನ್ನು ಸಾರ್ವತ್ರಿಕವಾಗಿ ಪ್ರತಿಬಂಧಿಸಿದನು. ಹಾಗೂ ಈ ಹಿಂಸಾ ಯಜ್ಞವನ್ನು ಬಿಟ್ಟು ಅನ್ನಸತ್ರವನ್ನು ಪ್ರಾರಂಭಿಸಿದನು. ರಾಜ್ಯದ ಎಲ್ಲ ಹಳ್ಳಿ ಪಳ್ಳಿ ಪಟ್ಟಣಗಳಲ್ಲಿ ನಿತ್ಯ ಕ್ಷೇತ್ರಭೋಜನ ನಡೆಯುವಂತೆ ಏರ್ಪಾಡು ಮಾಡಿದನು.

ಹೀಗೆ ಅನೇಕ ವರುಷಗಳ ವರೆಗೆ ನಡೆದ ದಾನದಕ್ಷಿಣೆ ಯಜ್ಞಯಾಗಗಳಿಂದ ಅವನ ಬೊಕ್ಕಸವೆಲ್ಲ ಬರಿದಾಗಹತ್ತಿತು. ಜನರು ಕೊಟ್ಟ ಕರವನ್ನೆಲ್ಲ ಆ ಆ ಊರುಗಳಲ್ಲಿಯೇ ಅನ್ನ ಛತ್ರಗಳಿಗಾಗಿ ಉಪಯೋಗಿಸಹೇಳಿದ್ದರಿಂದ ಕೇಂದ್ರದ ಬೊಕ್ಕಸಕ್ಕೆ ಹಣ ಬರುವದೇ ನಿಂತು ಹೋಯಿತು. ಬೇರೆ ಬೇರೆ ಮಾರ್ಗಗಳಿಂದ ಬಂದ ಹಣವೆಲ್ಲ ಎರಡು ಲಕ್ಷ ಅನ್ನ ಛತ್ರ ವ್ಯವಸ್ಥಾಪಕರ ಮಾಸಿಕ ವೇತನ, ದರ್ಬಾರದ ಖರ್ಚುಗಳಿಗಾಗೀ ಸಾಲದೇ ಹೋಗುತ್ತಿತ್ತು. ಅನ್ಯಾಯದಿಂದ ಅವನು ರಾಜ ಭಾಂಡಾರದಿಂದ ಒಂದು ಕಪರ್ದಿಕೆಯನ್ನೂ ತೆಗೆದುಕೊಳ್ಳುತ್ತಲಿರಲಿಲ್ಲ.

ರಾಜನು ಅರಮನೆಗೆ ತನ್ನ ಕುಟುಂಬಕ್ಕಾಗಿ ಬಹಳೇ ಪರಿಮಿತ ಆಹಾರವನ್ನು ಗೊತ್ತು ಮಾಡಿದ್ದ. ಅಕಸ್ಮಾತ್ತಾಗಿ ಯಾರಾದರೂ ಅತಿಥಿಗಳು ಬಂದರೆ ಅದರಲ್ಲಿಯೇ

ಅವರಿಗೆ ಹೊಟ್ಟೆತುಂಬ ಹಾಕಿ ತಮ್ಮ ಕುಟುಂಬದವರು ಅರಹೊಟ್ಟೆಯೋ ಉಪವಾಸವೋ ಇದ್ದು ಬಿಡುತ್ತಲಿದ್ದರು.

ಒಂದು ದಿನ ಮಧ್ಯಾನ್ಹ ರಾಜ–ರಾಣಿಯರು ತಮ್ಮ ಮಕ್ಕಳೊಂದಿಗೆ ಊಟಕ್ಕೆ ಕೂಡಬೇಕೆಂದಾಗ ಬಾಗಿಲಲ್ಲಿ ಅತಿಥಿಗಳು ಕಾಣಿಸಿಕೊಂಡರು. ಅವರಿಗೆಲ್ಲ ಹೊಟ್ಟೆ ತುಂಬ ಊಟಕ್ಕೆ ಹಾಕಿ ರಂತಿಯ ಪರಿವಾರದವರು ಕೈತೊಳೆದುಕೊಂಡರು.

ಮರುದಿನ ಮತ್ತೆ ಕೆಲವು ಅತಿಥಿಗಳು ಬಂದರು. ಮತ್ತೆ ರಂತಿದೇವನ ಕುಟುಂಬಕ್ಕೆ ಏಕಾದಶಿಯಾಯಿತು.

ಅದರ ಮರುದಿನವೂ ದೈವವು ಅವರ ಪರೀಕ್ಷೆಗೆ ನಿಂತಿತು. ಹೀಗೆಯೇ ನಲವತ್ತೆಂಟು ದಿನಗಳವರೆಗೆ ರಂತಿದೇವನ ಕುಟುಂಬ ಉಪವಾಸದಿಂದ ಕ್ಷೀಣವಾಯಿತು. ತ್ರಾಣ ಹೋಯಿತು. ಪ್ರಾಣ ಹೊಯ್ದಾಡಿತು.

ನಲವತ್ತೆಂಟನೇಯ ದಿನ ಮಕ್ಕಳೆಲ್ಲ ಪ್ರೇತಪ್ರಾಯವಾಗಿ ನೆಲದ ಮೇಲೆ ಬಿದ್ದುಬಿಟ್ಟಿದ್ದವು. ಅದನ್ನು ನೋಡಿದ ರಂತಿಯ ಜೀವ ಕಣ್ಣಿಗೆ ಬಂದಿತು. ಹೆಂಡತಿಯ ಪಂಚಪ್ರಾಣಗಳೂ ಪ್ರಸ್ಥಾನ ಗೀತೆಯನ್ನು ಹೇಳುವದರಲ್ಲಿದ್ದವು. ಹೆಂಡತಿ ಮಕ್ಕಳ ಈ ದುರ್ದೆಶೆಯನ್ನು ಕಂಡು ರಂತಿಯ ಹಸಿವೆ ಸತ್ತು ಹೋಗಿತ್ತು.

ತನ್ನ ನಾಡಿಗಳು ನಿಲ್ಲಬಂದಿದ್ದರೂ ಮಕ್ಕಳನ್ನು ಹೇಗಾದರೂ ಮಾಡಿ ಇಂದು ಬದುಕಿಸಿಕೊಳ್ಳಬೇಕೆಂದು ಅವನು ಸಂಕಲ್ಪಿಸಿದ. ಕೇವಲ ಇಚ್ಛಾಶಕ್ತಿಯಿಂದಲೇ ಸೋತು ನಿರ್ವಿಣ್ಣವಾದ ನರಗಳಲ್ಲಿ ಉತ್ಸಾಹವನ್ನು ತುಂಬಿದ. ಹೇಗೋ ಎದ್ದು ತಾನೇ ಗಂಜಿ, ಹಾಲು ಪಾಯಸ, ನೀರುಗಳನ್ನು ತೆಗೆದುಕೊಂಡು ಬಿಕ್ಕುತ್ತ ಮಲಗಿಕೊಂಡಿರುವ ಮಕ್ಕಳನ್ನು ತೊಡೆಯ ಮೇಲೆ ಹಾಕಿಕೊಂಡು ಹನಿಹನಿಯಾಗಿ ಗಂಜಿಯನ್ನು ಗಂಟಲಿಗೆ ಬಿಡಹತ್ತಿದ. ಅವಕ್ಕೆ ನುರಿಸುವ ಶಕ್ತಿಯಾಗಲಿ ನುಂಗುವ ತ್ರಾಣವಾಗಲಿ ಇರಲಿಲ್ಲ. ಅದನ್ನು ನೋಡಿ ರಂತಿಗೆ ಕರುಳು ಕಿತ್ತಿಬಂದಿತು. ಆದರೂ ಗಟ್ಟಿ ಮನಸ್ಸುಮಾಡಿ ಸಿಹಿಯಾದ ಪಾಯಸವನ್ನು ಬಟ್ಟಲಿನಿಂದ ಚೀಪಿಸಹತ್ತಿದ. ಅದರಿಂದ ಮಕ್ಕಳು ಮೆಲ್ಲಮೆಲ್ಲನೇ ಕಣ್ಣು ತೆರೆಯಹತ್ತಿದವು. ಇನ್ನು ಮಕ್ಕಳು ಬದುಕುವವು ಎಂಬಾಶೆಯಿಂದ ರಂತಿಗೆ ಆ ದೀರ್ಘೋಪವಾಸದಲ್ಲಿಯೂ ಬಲ ಬಂದಂತಾಯಿತು. ಬಹು ಜಾಗರೂಕತೆಯಿಂದ ಅಕ್ಕರೆತುಂಬಿ ಸಿಹಿ ಸಕ್ಕರೆಯ ಪಾಯಸವನ್ನು ನೆಕ್ಕಿಸಹತ್ತಿದ. ಆದರೆ ರಂತಿಯ ವಿಧಿ ಇನ್ನೂ ಬೆನ್ನು ಬಿಟ್ಟಿರಲಿಲ್ಲ.

ಅಷ್ಟರಲ್ಲಿ ''ಓಂ ಭವತಿ ಭಿಕ್ಷಾಂದೇಹಿ'' ಎಂಬ ದನಿ ಹೊರಗಿನಿಂದ ಕೇಳಿ ಬಂದಿತು. ತಿರುಗಿ ನೋಡುವಷ್ಟರಲ್ಲಿ ತೇಜಸ್ವಿಯಾದ ಬ್ರಾಹ್ಮಣನೊಬ್ಬ ಹಸಿವೆಯಿಂದ ಕಂಗೆಟ್ಟು ನಿಲ್ಲಲೂ ಕೂಡ ಶಕ್ತಿಯಿಲ್ಲದೇ ನಿಂತಲ್ಲಿಯೇ ಕುಸಿದು ಕುಳಿತ.

ಮಗನನ್ನು ಅಲ್ಲಿಯೇ ಮಲಗಿಸಿ ರಂತಿಯು ಮೊದಲು ಆ ಬ್ರಾಹ್ಮಣನಿಗೆ ತನಗಾಗಿ ತೆಗೆದಿರಿಸಿದ ಅಡಿಗೆಯನ್ನೆಲ್ಲ ಬಡಿಸಿದ. ಶತಮಾನಗಳಿಂದ ಉಪವಾಸವಿದ್ದವನಂತೆ ಆ

ದ್ವಿಜನು ಬಡಿಸಿದಂತೆಲ್ಲ ಗಬಗಬ ತಿನ್ನುತ್ತಲಿದ್ದ. ತಿಂದಂತೆಲ್ಲ ಇವನು ಬಡಿಸುತ್ತಲಿದ್ದ. ಆ ಬ್ರಾಹ್ಮಣ ಅವ್ಯುತೋಪಿ ತೆಗೆದುಕೊಂಡಾಗ ಮಾಡಿದ್ದರಲ್ಲಿ ಅರ್ಧ ಅಡಿಗೆ ಖಾಲಿಯಾಗಿತ್ತು. ಅವನಿಗೆ ದಕ್ಷಿಣೆ ತಾಂಬೂಲ ಕೊಟ್ಟು ಕೈಮುಗಿದ.

''ಅನ್ನದಾತಾ ಸುಖೀಭವ'' ಎಂದು ಆ ಬ್ರಾಹ್ಮಣ ಬಾಯಿತುಂಬಿ ಹರಿಸಿದಾಗ ರಂತಿಯ ಉಪವಾಸದಿಂದ ಒಣಗಿದ ತುಟಿಯಮೇಲೆ ಕೃತಕೃತ್ಯತೆಯ ಭಾವ ಸುಳಿಯಿತು.

ಅವನು ಮರಳಿ ಮಕ್ಕಳ ಹತ್ತಿರಬಂದು ಹಾಲಿನ ಬಟ್ಟಲನ್ನು ಎತ್ತಿದ.

ಆಗ ಓರ್ವ ಒಕ್ಕಲಿಗ ಬಂದು ಬಾಗಿಲಲ್ಲಿ ಬಿಕ್ಕಿದ. ಬೇಡಲಿಕ್ಕೂ ಅವನಲ್ಲಿ ತ್ರಾಣವಿರಲಿಲ್ಲ.

ರಂತಿಯು ಧಾವಿಸಿ ಬಂದು ಅವನನ್ನು ಎತ್ತಿ ಕೂಡಿಸಿ ಹಾಲು ಪಾಯಸ ಅವನಿಗೆ ಕುಡಿಸಿದ ಅವನಿಗೆ ಹಸಿವೆ ಎನ್ನಲು ತ್ರಾಣಬಂತು. ಹೊಟ್ಟೆತುಂಬ ಊಟಕ್ಕೆ ಹಾಕಿ ಆದರದಿಂದ ಬೀಳ್ಕೊಟ್ಟ.

ಅವನು ಹೊಸ್ತಿಲದಾಟುವದರೊಳಗಾಗಿ ಬೇಡನೊಬ್ಬನು ಬಂದು ''ಎಪ್ಪ ! ಭಿಕ್ಷಾ ನೀಡಿರಿ'' ಎಂದ. ಮಹಾರಾಜ ಅದೇ ಕೈಯಿಂದ ಅವನು ತಿಂದು ತೇಗುವಷ್ಟು ಬಡಿಸಿದ. ಅವನು ಉಣ್ಣುತ್ತ ಕುಳಿತಾಗ ಅವನ ಹತ್ತೆಂಟು ಬೇಟೆಯ ನಾಯಿಗಳು ಅನ್ನದ ವಾಸನೆಗೆ ನಾಲಿಗೆ ತೆರೆದು ನೋಡುತ್ತ ನಿಂತುಕೊಂಡಿದ್ದವು. ಅದನ್ನು ನೋಡಿ ಆ ಬೇಡನು,

''ಬುದ್ದಿ ! ಈ ನಾಯಿ ನನ್ನ ಅನ್ನದ ಕಡೆಗೆ ಹೇಗೆ ಆಶೆಯಿಂದ ನೋಡುತ್ತಿದೆ ? ನೋಡಿರಿ. ಈ ಪರಿಯಿಂದ ಇವು ನೋಡಿದರೆ ನನಗೆ ಉಂಡ ಅನ್ನ ಹೊಟ್ಟೆಗಾದರೂ ಹೇಗೆ ಹತ್ತಬೇಕು ? ಪಾಪ ಮೂಕ ಪ್ರಾಣಿ, ಅವೂ ಹಸಿದಿವೆ. ಅವಕ್ಕೂ ಅಷ್ಟು ಏನಾದರೂ ಹಾಕಿರಿ. ನನಗೆ ಉಣ್ಣಲಿಕ್ಕೆ ನಿಶ್ಚಿಂತೆಯಾಗುವದು'' ಎಂದು ನಿರ್ಭಿಡೆಯಿಂದ ಹೇಳಿದ.

ಮಹಾರಾಜನು ಇದ್ದು ಬಿದ್ದ ಎಲ್ಲ ಅಡಿಗೆಯನ್ನೂ ತನ್ನ ಮಕ್ಕಳಿಗೆಂದು ಇಟ್ಟಿರುವ ಗಂಜಿ ಹಾಲು ಪಾಯಸಗಳನ್ನು ಎಲ್ಲವನ್ನೂ ತಂದು ಆ ನಾಯಿಗಳಿಗೆ ಹಾಕಿದ. ಆಗ ಆ ನಾಯಿ ನಾಯಿಕ ಇಬ್ಬರೂ ಹೊಟ್ಟೆತುಂಬಉಂಡು ಸಂತೋಷಪಟ್ಟರು.

ಅವರ ಆನಂದವನ್ನು ಕಂಡು ರಂತಿದೇವನಿಗೆ ನಿಜವಾಗಿಯೂ ಆನಂದವಾಯಿತು. ತೃಪ್ತಿಯ ತೇಗನ್ನು ಬಿಟ್ಟು ಕೃತಜ್ಞತೆಯಿಂದ ಕಣ್ಣುತುಂಬಿ ನಿಂತುಕೊಂಡಿದ್ದ ಆ ಬೇಡ ಹಾಗೂ ಬೇಟೆಯ ನಾಯಿಗಳಿಗೆ ಕೈಮುಗಿದು 'ಶುನಿ ಚೈವ ಶ್ವಪಾಕೇ ಚ' ಇರುವ ನಾರಾಯಣ ಪ್ರೀತನಾಗಲಿ ಎಂದು ಬೇಡಿಕೊಂಡ.

ಒಳಗೆ ಬಂದು ನೋಡಿದ. ದೃಶ್ಯ ಎದೆಕೊರೆಯಿತು. ಮುಂದಿಟ್ಟ ಪಾಯಸದ ಬಟ್ಟಲ ಹೋದದ್ದರಿಂದ ನಿರಾಶರಾದ ಮಕ್ಕಳು ನರಳಲೂ ತ್ರಾಣವಿಲ್ಲದೇ ನಿಕ್ಕಳಿಕೆಯಾಗಿ ಡಬ್ಬ ಬಿದ್ದವು. ಆ ಮಕ್ಕಳನ್ನು ರಂಬಿಸಲಿಕ್ಕೂ ರಂತಿಗೆ ಮೋರೆ ಇಲ್ಲದಾಗಿತ್ತು. ಬರಿಗೈಯಿಂದ ಆ ಎಳೆ ಕಳಲುಗಳ ಹತ್ತಿರ ಹೋಗಲು ಅವನಿಗೇ ನಾಚಿಕೆಯಾಯಿತು.

ಏನಾದರೂ ಉಳಿದಿದೆಯೆ ಎಂದು ಅಡಿಗೆಯಿಟ್ಟ ಸ್ಥಳದ ಕಡೆಗೆ ಕಣ್ಣುಹಾಯಿಸಿದ. ಒಂದು ತಂಬಿಗೆ ನೀರಿನ ಹೊರತು ಎಲ್ಲವೂ ತೀರಿಹೋಗಿತ್ತು. ಈ ನೀರನ್ನಾದರೂ ಹನಿಸಿದರೆ ಮಕ್ಕಳ ಗಂಟಲಾದರೂ ಹಸಿಯಾಗಬಹುದು. ನನಗೂ ಗಂಟಲು ಕಿತ್ತಿಬರುತ್ತಿದೆ. ತುಸು ಪಿಪಾಸೆಯನ್ನು ಶಾಂತಮಾಡಿಕೊಳ್ಳೋಣ ಎಂದು ಎದ್ದ.

''ಬುದ್ಧಿ ! ಒಂದು ಹನಿ ನೀರು ಹನಿಸರಿ. ಪುಣ್ಯ ಬರತದ'' ಎಂದು ಬಾಗಿಲಿನಾಚೆಯಿಂದ ದನಿ ಕೇಳಿಸಿತು.

ರಂತಿ ಹೊರಗೆ ಬಂದು ನೋಡಿದ. ಹೊಲೆಯನೊಬ್ಬ ಅಂಗಳದಲ್ಲಿ ನೀರಡಿಕೆಯಿಂದ ತೇಕುತ್ತ ನಿಂತುಕೊಂಡಿದ್ದ.

ತಕ್ಷಣದಲ್ಲಿ ರಾಜ ಒಳಗಿನ ಹೊಂಗಲಶವನ್ನು ಎತ್ತಿತಂದು ಆ ಹೊಲೆಯನ ಬೊಗಸೆಗೆ ಬಗ್ಗಿಸಿದ. ಅವನು ಸಾಕೆಂದು ತಲೆ ಅಲುಗಿಸಿದಾಗ ಆ ತಣ್ಣೀರಿನ ಹೂಜಿ ಬರಿದಾಗಿತ್ತು.

ಅ ಬಂಗಾರದ ಹೂಜೆಯನ್ನು ಆ ಚಾಂಡಾಲನ ಅಂಗೈಯಲ್ಲಿ ಒಗೆದು 'ಕೃಷ್ಣಾರ್ಪಣ' ಎಂದ ರಂತಿದೇವ.

ಒಳಗೆ ಮಕ್ಕಳು ಕಣ್ಣಲ್ಲಿ ಪ್ರಾಣ ಹಿಡಿದಿದ್ದವು. ಹೆಂಡತಿ ಪರಲೋಕದ ಹಾದಿ ಹಿಡಿದಿದ್ದಳು. ಸ್ವಯಂ ರಂತಿಗಾದರೂ ನಲವತ್ತೆಂಟು ದಿನದ ಉಪವಾಸದಿಂದ ನಿತ್ರಾಣವಾಗಿ ಒಂದೊಂದೇ ನಾಡಿ ಬಿಡಹತ್ತಿದವು. ಉಸಿರು ಎಳೆದುಕೊಳ್ಳಲಿಕ್ಕೆ ಬಹಳ ಶ್ರಮವಾಗುತ್ತಲಿತ್ತು. ತನ್ನ ಆಯುಷ್ಯದ ಕೊನೆಯ ಕ್ಷಣವು ಹತ್ತಿರ ಬಂದಿತೆಂದು ರಂತಿಗೆ ಖಾತ್ರಿಯಾಯಿತು.

ಸಾಯುವ ಮುನ್ನ ಅತಿಥಿಸೇವೆಗಾಗಿ ಹುತಾತ್ಮರಾಗುತ್ತಿದ್ದ ತನ್ನ ಹೆಂಡತಿ ಮಕ್ಕಳನ್ನು ಒಮ್ಮೆ ಕಣ್ಣುತುಂಬ ನೋಡಬೇಕೆಂದು ಎನಿಸಿತು. ಆದರೆ ಅವರಿದ್ದಲ್ಲಿ ಬರುವಷ್ಟು ಶಕ್ತಿ ಉಳಿದಿರಲಿಲ್ಲ. ದಾರಿಯಲ್ಲಿಯೇ ಕುಕ್ಕರಿಬಿದ್ದ.

ಅವನ ಹೆಂಡತಿ ಬಿದ್ದಲ್ಲಿಂದಲೇ ಬಾಯಿಬಿಡುತ್ತಲಿರುವ ಪತಿಯನ್ನು ದೀನವಾಗಿ ನೋಡಿದಳು. ಅವಳಿಗೂ ಎದ್ದುಬರಲು ಪ್ರಾಣವಿಲ್ಲ. ಅಳಲು ದನಿಯಿಲ್ಲ. ಬರಿಕಣ್ಣಿನಿಂದಲೇ ನಾನೂ ಹಿಂದೆಯೇ ಬಂದೆ'' ಎಂದು ಸೂಚಿಸಿ ಕಣ್ಣು ಮುಚ್ಚಿದಳು.

ರಂತಿಯು ಆ ಹೆಂಡತಿಯನ್ನೂ ನಿಶ್ಚೇತನವಾಗಿ ಬಿದ್ದ ಮಕ್ಕಳನ್ನೂ ಕಣ್ಣುತುಂಬ ಕುಳಿತಲ್ಲಿಂದಲೇ ನೋಡಿದ. ಅವನಿಗೆ ಪಶ್ಚಾತ್ತಾಪವಿರಲಿಲ್ಲ ಅತಿಥಿಸೇವೆಗಾಗಿ, ಅನ್ನದಾನಕ್ಕಾಗಿ ಧರ್ಮಾಹುತಿಯಾಗುತ್ತಿರುವ ತನ್ನ ಕುಟುಂಬದ ಬಗ್ಗೆ ಅವನಿಗೆ ಅಭಿಮಾನವೆನಿಸಿತ್ತು. ಸ್ವಾಮಿ ಸಾಯುವ ಕಾಲಕ್ಕೆ ತನ್ನ ಪರಿವಾರದಿಂದ ಎಷ್ಟು ಸೇವೆಯನ್ನು ತೆಗೆದುಕೊಂಡನಲ್ಲ! ಎಂದು ಹೆಮ್ಮೆಯೆನಿಸಿತ್ತು. ಇದಕ್ಕಾಗಿ ಭಗವಂತನಿಗೆ ಕೈಮುಗಿದು ಕೊನೆಗಾಲದ ಕೃತಜ್ಞತೆಯನ್ನು ಅರ್ಪಿಸಿದ.

''ನ ಕಾಮಯೇಹಂ ಗತಿಮೀಶ್ವರಾತ್ ಪರಾಮ್
ಅಷ್ಟರ್ಧಿಯುಕ್ತಾಂ ಅಪುನರ್ಭವಂ ವಾ
ಆರ್ತಿಂ ಪ್ರಪದ್ಯೇಽ ಖಿಲದೇಹಭಾಜಾಂ
ಅಂತಃಸ್ಥಿತೋ ಯೇನ ಭವಂತ್ಯದುಃಖಾಃ''

ಅವನ ಹಸಿವು ಹಿಂಗಿತ್ತು, ಬಾಯಾರಿಕೆ ಆರಿತ್ತು, ಇಷ್ಟುಜನ ಕ್ಷುಧಿತರ ಪಿಪಾಸಿತರ ಅಂತರ್ಯಾಮಿ ಪ್ರೀತನಾದನೆಂದು ಅವನಿಗೆ ತೃಪ್ತಿಯಾಗಿತ್ತು, ಹೊಟ್ಟೆತುಂಬಿತ್ತು.

ಅಂದು ತನ್ನಲ್ಲಿ ಬೇಡಬಂದ ಬ್ರಾಹ್ಮಣನಲ್ಲಿಯೇ ಅವನಿಗೆ ಭಗವಂತ ಕಂಡ ಶೂದ್ರನಲ್ಲಿ ಶಿವಕಂಡ. ಬೇಡನಲ್ಲಿಯೇ ಬ್ರಹ್ಮದರ್ಶನವಾಯಿತು. ನಾಯಿಯಲ್ಲಿಯೇ ನಾರಾಯಣ ಗೋಚರಿಸಿದ. ಪಂಚಮನಲ್ಲಿಯೇ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದ. ಅವನ ದೃಷ್ಟಿ ದಿವ್ಯತೆ ಪಡೆದುಕೊಂಡಿತ್ತು.

5. ಕಣ್ಣು ತಿವಿದ ಹೆಣ್ಣ ನೊಲಿದು ಮದುವೆಯಾದ ಮುನಿವರ

ವಿಶಾಲ ರಾಜ್ಯದ ಕಾರ್ಯಭಾರದಿಂದ ಸಂತ್ರಸ್ತನಾದ ಶರ್ಯಾತಿ ಸಾರ್ವಭೌಮನು ಒಂದುದಿನ ವನವಿಹಾರಕ್ಕೆ ಹೊರಟಿದ್ದನು. ಸುವರ್ಣ ಸ್ಯಂದನದಲ್ಲಿ ಅವನ ನೆಚ್ಚಿನ ಹೆಂಡತಿಯಾದ ಸ್ಥವಿಷ್ಠೆ ಮತ್ತು ಮೆಚ್ಚಿನ ಮಗಳಾದ ಸುಕನ್ಯೆ ಕುಳಿತಿದ್ದರು. ಪ್ರೀತಿಯ ಮಡದಿ ಮಕ್ಕಳೊಡನೆ ನಿಸರ್ಗ ಸೌಂದರ್ಯದ ಸಂಕೇತಸ್ಥಾನದಂತಿರುವ ಆ ವನಾಂತ ಸಂಚಾರವು ರಾಜನಿಗೆ ಒಂದು ರಸಯಾತ್ರೆಯಾಗಿತ್ತು. ಒಳಗೆ ಹೋದಂತೆಲ್ಲ ಪ್ರಕೃತಿ ದೇವಿಯು ವಿಪಿನಗರ್ಭದಲ್ಲಿ ಅಡಗಿಸಿಟ್ಟ ತನ್ನ ಚೆಲವು ಚಾರಿಮೆಗಳನ್ನು ಸೆರಗು ತೆರೆದು ತೋರಿಸಹತ್ತಿದಳು. ಅಲ್ಲಿಯ ಕುಕಿಲುವ ಕೋಕಿಲೆ, ಕುಣಿಯುವ ನವಿಲು, ಹಾಡುವ ಭೃಂಗ, ಜಿಗಿಯುವ ಚಿಗರೆ, ತೀಡುವ ಗಾಳಿ ಎಲ್ಲವೂ ರಾಜಕನ್ಯೆಯಾದ ಸುಕನ್ಯೆಯ ಬಾಲಮನಕ್ಕೆ ಗರಿಮೂಡಿಸಿದವು.

ಕೌಮಾರದಿಂದ ಯೌವನದ ಮಧುವನಕ್ಕೆ ಅದೇ ಕಾಲಿರಿಸುತ್ತಲಿರುವ ರಾಜಕುಮಾರಿಯ ಹೃದಯ ಈ ವನೋತ್ಸಂಗದಲ್ಲಿ ನಡೆದ ಪ್ರಕೃತಿಯ ಆಟವನ್ನು ನೋಡಿ ದಂಗುಬಡಿಯಿತು.

ಅಲ್ಲಿಯ ಹೂಗಂಪಿನ ಮರವಾಸನೆ, ಶ್ರೀಗಂಧಸೌಂಗಂಧ, ಸಂಪಿಗೆಯ ಕಂಪು, ಕೇದಗೆಯ ಸೊಂಪುಗಳಿಗೆ ಅವಳ ಮುಗ್ಧತೆಯ ಮೊಗ್ಗು ಅರಳಿ ಉತ್ಫುಲ್ಲ ಕಲ್ಹಾರವಾಯಿತು. ಅವಳ ಭಾವಕುಸುಮದ ದಳದಳಗಳೂ ಅಲ್ಲಿಯ ಕಂಪಿಂಪುಗಳಿಗೆ ಪರಿಮಳಿಸಿ ಗಮಗಮಿಸಿದವು. ಅವಳ ಅಂಗ–ಪ್ರತ್ಯಂಗಗಳಲ್ಲಿಯೂ ವಸಂತ ಶ್ರೀ ವಿಲಾಸಗೈದಿತ್ತು.

ಆ ವನ ವಿಹಾರವನ್ನು ಮುಗಿಸಿಕೊಂಡು ರಾಜ–ರಾಣಿಯರು ತಿರುಗಿ ಹೊರಟಾಗ ದಾರಿಯಲ್ಲಿ ಒಂದು ಸುಂದರ ತಪೋವನದಲ್ಲಿ ತಂಗಿದರು. ಮರುದಿನ ಅಲ್ಲಿಂದ ಅವರು ಹೊರಡಬೇಕೆಂದಾಗ ಅವರ ಮಗಳ ಮೂಕ ಭಾವಕ್ಕೆ ಮಾತುಮೂಡಿತ್ತು.

''ಅಪ್ಪ ! ಈ ತಪೋವನ ಒಂದು ಹೂಗಳ ಅರಮನೆ. ಸೌಂದರ್ಯದ ಸಿರಿಮನೆ. ಇಲ್ಲಿಯ ನಿತಾಂತ ನೀರವತೆ ಮನಸ್ಸಿಗೆ ಶಾಂತಿಯನ್ನು ತಂದು ಕೊಡುತ್ತದೆ. ಇಲ್ಲಿಯ ಚೆಲುವಿಕೆಯ ಭಾವಣೆಯಲ್ಲಿ ರಮಣೀಯತೆಯು ರಾಜ್ಯವನ್ನೇ ಕಟ್ಟಿದೆ. ನಗರದ ಕೃತ್ರಿಮ ಜೀವನದ ಕೋಲಾಹಲದಿಂದ ದೂರವಾಗಿ ಇಲ್ಲಿಯ ಸೃಷ್ಟಿಮಾತೆಯ ಒಡಲಲ್ಲಿ ನಾವು ಕೆಲವು ದಿನ ಹಾಯಾಗಿ ಏಕೆ ಇರಬಾರದು''? ಎಂದಳು

ರಾಜನು ಮಗಳ ಈ ಮಾತನ್ನು ಮನ್ನಿಸಿ ಸೈನಿಕರಿಗೆಲ್ಲ ಕೆಲವು ದಿನ ಅಲ್ಲಿಯೇ ತಪೋವನದ ಪರಿಸರದ ಪುಣ್ಯಭೂಮಿಯಲ್ಲಿ ಬೀಡುಬಿಡಲು ಅಪ್ಪಣೆಮಾಡಿದ.

ರಾಜಕುಮಾರಿಯು ತನ್ನ ಗೆಳತಿಯರೊಂದಿಗೆ ಅಲ್ಲಿಯ ವನರಾಜ್ಯದ ಹೂವಿನ ಸುಗ್ಗಿ, ಗಾಳಿಯ ಲೀಲೆ, ಲತೆಗಳ ಲಾಸ್ಯ, ಋತುಗಳ ರಿಂಗುಣಿತ, ತೊರೆಗಳ ಮೊರೆತಗಳನ್ನು ನೋಡಿ ಹಿಗ್ಗಿ ಹೂವಾದಳು. ಅಲ್ಲಿಯ ವನದ ವಕ್ಷಸ್ಥಳದಲ್ಲಿ ನಿಬಿಡವಾಗಿ ಬೆಳೆದ ಗಿಡಗಳಿಗೆಲ್ಲ ಭೆಟ್ಟಿಕೊಟ್ಟಳು. ಬಳ್ಳಿಗಳನ್ನೆಲ್ಲ ಕುಲುಕಿದಳು. ಹೂಗಳ ಮೇಲೆಲ್ಲ ಕೈಯಾಡಿಸಿದಳು. ನವಿಲುಗಳನ್ನೆಲ್ಲ ಮಾತಾಡಿಸಿದಳು. ಕೋಕಿಲೆಗಳಿಗೆಲ್ಲ ಅಣಕಿಸಿದಳು. ಚಿಗರೆಗಳ ಜೊತೆಗೆ ಗೆಳೆತನ ಬೆಳೆಸಿದಳು. ಕೆಲವೇ ದಿನಗಳಲ್ಲಿ ಆ ಸುಕನ್ಯೆ ವನಕನ್ಯೆಯಂತೆ ಆ ಆರಣ್ಯಕ ಸಂಸಾರಕ್ಕೆ ಹೊಂದಿಕೊಂಡು ಆ ಸಸ್ಯಸೃಷ್ಟಿಯಲ್ಲಿ ಸಮರಸಳಾಗಿ ಅಲ್ಲಿಯ ಗಿಡಗಳಿಗೊಂದು ಬಳ್ಳಿಯಾದಳು. ಬಳ್ಳಿಗೊಂದು ಹೂವಾದಳು. ಹೂವಿಗೊಂದು ನಗೆಯಾದಳು. ಆ ಅರಣ್ಯಕ್ಕೊಂದು ಬೆಳದಿಂಗಳಾದಳು. ಮೂಕಸೃಷ್ಟಿಗೊಂದು ಭಾಷೆಯಾದಳು.

ಆ ವನಕ್ಕೆ ಬಂದ ಬಳಿಕ ಮಗಳ ಚೆಲುವಿಕೆಗೊಂದು ಚೈತನ್ಯ ಬಂದಂತಾಗಿ, ಶಾಲೀನತೆಗೆ ಬದಲಾಗಿ ವಾಚಾಲತೆ ಬಂದದ್ದನ್ನು ಕಂಡು ಸಂತಸಗೊಂಡ ಮಹಾರಾಜ ತನ್ನ ವನವಾಸದ ಅವಧಿಯನ್ನು ಮತ್ತೆ ಕೆಲವು ದಿನಗಳವರೆಗೆ ಬೆಳೆಸಿದ.

ಒಂದು ದಿನ ಸುಕನ್ಯೆ ಗೆಳತಿಯರೊಂದಿಗೆ ಪುಷ್ಪಾವಚಯಕ್ಕೆಂದು ಬಹುದೂರ ಹೋಗಿದ್ದಳು. ಒಂದಾದ ಬಳಿಕ ಒಂದು ಗಿಡಗಳು ಆ ಬಳ್ಳಿವೈಯ ಬಾಲೆಯನ್ನು ತಮ್ಮ ಕುಡಿಬೆರಳಿನಿಂದ ಕರೆಯುತ್ತಲಿದ್ದವು. ಹೂವಿನ ಬುಟ್ಟಿ ತುಂಬಿದರೂ ಅವಳಿಗೆ ತೃಪ್ತಿಯಿಲ್ಲ. ಮುಂದೆ ಮುಂದೆ ಕಾಣುವ ಗಿಡಗಳೂ, ಗಿಡಗಳನ್ನಪ್ಪಿನಿಂತಿರುವ ಬಳ್ಳಿಗಳೂ, ಬಳ್ಳಿಗಳ ಮೇಲಿನ ಚೆಂದ ಗಂಧದ ಹೂಗಳೂ, ಹೂಗಳ ದಳ ದಳಗಳಮೇಲೆಯೂ ನಳನಳಿಸುವ ಸೊಂಪುಕಂಪುಗಳೂ ಅವಳನ್ನು ವನದೇವತೆಯ ಅಂತಃಪುರಕ್ಕೇ ಕರೆದುಕೊಂಡು ಹೋದವು.

ಆ ಕುಮಾರಿಯರು ಅಲ್ಲಿ ವನಸಿರಿಯ ಶೃಂಗಾರ ಸಜ್ಜೆವನೆಯ ಸೊಗಸು–ಸೊಬಗುಗಳನ್ನು ಅರಳು ಗಣ್ಣುಗಳಿಂದ ಕುಡಿದರು. ಅಲ್ಲಿಯ ಲತಾಪ್ರತಾನಗಳ ಜೋಕಾಲಿಗಳನ್ನು ಜೀಕಿ ನಾಗರ ಹಬ್ಬವನ್ನು ಮಾಡಿದರು ವನಕಿನ್ನರಿಯರಾಗಿ ಹಾಡಿದರು. ಚೆಲುವಿನ ಚಿಟ್ಟೆಗಳಾಗಿ ಆಡಿದರು. ಕೊನೆಗೆ ದಣಿದು ತಮ್ಮ ತಂಗುಮನೆಯ ಕಡೆಗೆ ತಿರುಗಿದರು.

ದಾರಿಯಲ್ಲಿ ಒಂದು ದೊಡ್ಡ ಹುತ್ತವು ಬೆಳೆದಿತ್ತು. ಎತ್ತರವಾದ ಹುತ್ತವನ್ನು ಸುಕನ್ಯೆ ಸರಸರಹತ್ತಿದಳು. ಅದರ ಮೇಲೆ ಅನೇಕ ಗಿಡಗಂಟೆಗಳು ಬೆಳೆದಿದ್ದವು. ಆ ಕಲ್ಲುಕಂಟಿಗಳ ನಟ್ಟನಡುವೆ ಎರಡು ಕಾಜಿನ ಗುಂಡಗಳು ಲಕಲಕ ಹೊಳೆಯುತ್ತಿದ್ದವು.

ಸುಕನ್ಯೆಗೆ ಆ ತೇಜೋಗೋಲಕಗಳ ಥಳಥಳ ಹೊಳಪನ್ನು ನೋಡಿ ಕೌತುಕವು ಕೆರಳಿತು. ಇದೇನಿರಬಹುದೆಂದು ಕುತೂಹಲದಿಂದ ಒಂದು ಮುಳ್ಳನ್ನು ತೆಗೆದುಕೊಂಡು ಕಚ್ ಎಂದು ಚುಚ್ಚಿದಳು.

''ಆಹ್ ಅಯ್ಯೋ'' ಎಂದು ಎಲ್ಲಿಯೋ ನರಳಿದಂತಾಯಿತು. ಬಳ ಬಳ ರಕ್ತವು ಸುರಿಯಹತ್ತಿತು.

ಗೆಳತಿಯರೆಲ್ಲ ಗಾಬರಿಯಾದರು. ಸುಕನ್ಯೆ ಹೌಹಾರಿದಳು. ಹೆದರಿ ಹುಚ್ಚೆದ್ದು ಎಲ್ಲರೂ ಮನೆಯ ಕಡೆಗೆ ಓಡಿದರು. ಇತ್ತ ಮನೆಗೆ ಬರುಷ್ಟರಲ್ಲಿ ರಾಜನ ಸೇನಾಶಿಬಿರದಲ್ಲಿ ಬಹು ಜನರಿಗೆ ಮಲಮೂತ್ರಗಳೇ ಬಂದಾಗಿ ಬದುಕೇ ಅಸಹ್ಯವಾಗಿತ್ತು. ರಾಜನಿಗೂ ಅದೇ ಪರಿಸ್ಥಿತಿಯೊದಗಿ ತಮ್ಮ ಧರ್ಮ ಗುರುಗಳಾದ ಮಧುಚ್ಛಂದರನ್ನು ಕರೆದು ಕಾರಣ ಕೇಳಿದ.

''ಶರ್ಯಾತಿ ಸಾರ್ವಭೌಮ!'' ಪುರೋಹಿತರು ಪರಿಸ್ಥಿತಿಯ ಗಾಂಭೀರ್ಯವನ್ನು ಅರಿತು ಹೇಳಿದರು. ''ಇಲ್ಲಿ ಸಮೀಪದಲ್ಲಿಯೇ ವಲ್ಮೀಕಗುಲ್ಮದಲ್ಲಿ ಚ್ಯವನ ಮಹರ್ಷಿಗಳು ತಪಃಸಮಾಧಿಯಲ್ಲಿ ಇದ್ದಾರೆ. ಯಾರೋ ಅವರಿಗೆ ಅಪಚಾರವನ್ನು ಎಸಗಿದ್ದರಿಂದ ಹೀಗಾಗಿದೆ. ವಿಚಾರಿಸು'' ಎಂದರು.

ಆಗ ರಾಜನು ಎಲ್ಲ ಸೈನಿಕರನ್ನು ಬೆದರಿಸಿ ವಿಚಾರಿಸಿದ. ಯಾರೂ ತಾವು ಅತ್ತ ಕಡೆಗೆ ಸುಳಿದೇ ಇಲ್ಲ ಎಂದು ಹೇಳಿದರು.

ಮತ್ತೆ ನೂರಾರು ಜನರು ಮಲಮೂತ್ರಗಳು ಕಟ್ಟಿ ''ಅಯ್ಯೋ ಸಾಯುತ್ತೇವೆ'' ಎಂದು ಚೀರಹತ್ತಿದ್ದು ಕೇಳಿಸಿತು.

ಆಗ ಸಖಿಯರೊಂದಿಗೆ ಸುಕನ್ಯೆ ವಿಚ್ಛಾಯವದನಳಾಗಿ ಬಂದಳು. ರಾಜ ಆ ಸಖಿಯರನ್ನು ಕೇಳಿದ.

''ನಿಮ್ಮಲ್ಲಿ ಯಾರಾದರೂ ಈ ಅರಣ್ಯದ ಹುತ್ತಿನಲ್ಲಿ ಕುಳಿತ ಮಹರ್ಷಿಗಳಿಗೆ ಆಪಚಾರವೆಸಗಿದಿರಾ?

ಉಳಿದವರೆಲ್ಲ ಇಲ್ಲವೆಂದು ಹೇಳಿದರು.

ಸುಕನ್ಯೆಯ ಮುಖವು ಮಾತ್ರ ಗ್ರಹಣ ಹಿಡಿದ ಚಂದ್ರಬಿಂಬವಾಗಿತ್ತು. ಮೋರೆಯ ಮೇಲೆ ಬಸಿಯುತ್ತಲಿರುವ ಬೆವರ್ಹನಿಗಳನ್ನು ಒರೆಸುತ್ತ ರುದ್ಧಕಂಠದಿಂದ ಹೂ ಹರಿಯಲಿಕ್ಕೆ ಹೋದಾಗ ತಿಳಿಯದೇ ತಾನು ಮಾಡಿದ ತಪ್ಪನ್ನು ಹೇಳಿದಳು.

ರಾಜ ಭೂತಾವಿಷ್ಟನಾದಂತೆ ನಿಂತುಬಿಟ್ಟ. ಸುಕನ್ಯೆಯ ಮುಖಕ್ಕೆ ಹಿಡಿದ ಗ್ರಹಣ ಅವನ ಮುಖಕ್ಕೂ ಹಿಡಿಯಿತು.

ಮಧುಚ್ಛಂದರ ಕಾಲಿಗೆರಗಿ ''ಸ್ವಾಮಿ ಇದಕ್ಕೇನು ಗತಿ ! ಯಾವ ಪರಿಹಾರ ! ಎಂದು ಕೇಳಿದ.

''ರಾಜನ್ !'' ನ್ಯಾಯಾಧೀಶನ ಶಾಸನದ ಬಿಗುವಿನಲ್ಲಿ ಆಚಾರ್ಯರು ಉತ್ತರಿಸಿದರು '' ನಿನ್ನ ಮಗಳು ಮಹಾಮುನಿಗಳಿಗೆ ಅಕ್ಷಮ್ಯ ಅಪರಾಧವನ್ನು ಮಾಡಿದ್ದಾಳೆ. ಇದರಿಂದ ಅವರ ಧೀರ್ಘತಪೋಭಂಗವಾಯಿತು. ನಿನ್ನ ಕನ್ಯೆ ಸುಕನ್ಯೆ

ಅವರ ತೇಜಸ್ವಿಯಾದ ಕಣ್ಣುಗಳನ್ನು ಚುಚ್ಚಿ ಕಳೆದುಬಿಟ್ಟಿದ್ದಾಳೆ. ಕುರುಡರಾದ ಅವರು ಇನ್ನು ಸ್ನಾನ ಆನ್ಹಿಕ ಊಟ ಎಲ್ಲದಕ್ಕೂ ಪರಾಧೀನರಾದರು. ಆದ್ದರಿಂದ ಅವರ ನಿರಂತರ ಸೇವೆಗೆ ಏನಾದರೂ ಒಂದು ಏರ್ಪಾಡು ಮಾಡಿ ಹೋಗಿ ಬೇಡಿಕೋ''

''ಅವರ ಸೇವೆಗೆ ಸಾವಿರ ದಾಸದಾಸಿಯರನ್ನು ಇರಿಸುತ್ತೇನೆ'' ಎಂದ ಮಹಾರಾಜ ಸಮಸ್ಯೆ ಬಹು ಸುಲಭವಾಗಿಬಿಟ್ಟಿತೆಂಬ ಭಾವದಿಂದ.

''ಸಂಬಳ ತಿನ್ನುವ ಸಾವಿರ ಜನವಿದ್ದರೂ ಅಂತಃಕರಣದ ಒಬ್ಬರು ಇದ್ದಂತಾಗುವದಿಲ್ಲ. ಹಡೆದ ತಂದೆಯಂತೆ, ಪಡೆದ ಮಗನಂತೆ, ಕೈಹಿಡಿದ ಹೆಂಡತಿಯಂತೆ ಕರುಳಿನಿಂದ ಸೇವಿಸುವವರು ಅವರ ಬಳಿಗೆ ಬೇಕು ಮಹಾರಾಜ! ಎಂದರು ಮಧುಚ್ಛಂದರು.

ರಾಜ ದಿಙ್ಮೂಢನಾಗಿ ನಿಂತ. ರಾಣಿ ದಿಗ್ಭ್ರಮೆಗೊಂಡು ನಿಂತಳು. ಮಂತ್ರಿಗಳು ಹೌಹಾರಿದರು. ಹೊರಗೆ ಜನಸ್ತೋಮ 'ಅಯ್ಯೋ' ಎಂದು ಸಾಮೂಹಿಕವಾಗಿ ಒದರಹತ್ತಿದರು.

ಆಗ ಕೆಳಗೆ ಮುಖಮಾಸಿಕೊಂಡು ನಿಂತ ಸುಕನ್ಯೆ ಮಿಂಚಿನಂತೆ ತೂರಿ ಮುಂದೆ ಬಂದಳು. ಮಧುಚ್ಛಂದರಿಗೆ ಒಮ್ಮೆ ನಮಸ್ಕರಿಸಿ ತಂದೆಯ ಕಡೆಗೆ ನೋಡಿ ಹೇಳಿದಳು.

''ಅಪ್ಪ ! ಈಗ ತಪ್ಪು ಮಾಡಿದವಳು ನಾನು. ನನ್ನಿಂದ ಇಷ್ಟೆಲ್ಲ ಪ್ರಜೆಗಳಿಗೆ ಪ್ರಾಣಾಂತಿಕ ಪ್ರಸಂಗ ಬಂದಿದೆ. ಆದ್ದರಿಂದ ನಾನೀಗ ಈ ಋಷಿಗಳ ಸೇವೆಗೆ ನಿಲ್ಲುತ್ತೇನೆ.''

''ಮಗು ನೀನೆಷ್ಟು ದಿನದವಳು! ನಾಳೆ ನೀನು ಗಂಡನ ಮನೆಗೆ ಹೋದ ಬಳಿಕ!'' ಎಂದು ಪ್ರಶ್ನಿಸಿದ ಮಹಾರಾಜ.

''ಮಹಾರಾಜ ! ನಿನಗೆ ಆ ಸುಕನ್ಯೆಯ ಮಾತು ಪೂರ್ಣ ಅರ್ಥವಾಗಲಿಲ್ಲ. 'ಯಾರಾದರೂ ಅಂತಃಕರಣದ ಸಂಬಂಧಿಗಳು ಅವರಿಗೆ ಸೇವೆ ಮಾಡಲು ಬೇಕು'' ಎಂಬ ನನ್ನ ಮಾತಿನ ಮರ್ಮವನ್ನು ಅವಳು ಸರಿಯಾಗಿ ಗ್ರಹಿಸಿಯೇ ಹೇಳಿದ್ದಾಳೆ. ಅವಳು ಆ ಋಷಿಪುಂಗವನ ಕೈ ಹಿಡಿದು ಯಾವಜ್ಜನ್ಮ ಸೇವೆಯನ್ನು ಮಾಡುತ್ತೇನೆ ಎಂದೆನ್ನುತ್ತಾಳೆ'' ಎಂದು ಸುಕನ್ಯೆಯ ಮಾತಿನ ಧ್ವನ್ಯಾಲೋಕಕ್ಕೆ ಲೋಚನವನ್ನು ಬರೆದರು ಮಧುಚ್ಛಂದರು.

ರಾಜನು ಹಾಗೇನು ಎನ್ನುವ ಅಭಿಪ್ರಾಯದಿಂದ ಮಗಳ ಕಡೆಗೆ ನೋಡಿದ. ಅವಳ ಕಪೋಲತಲ ಆರಂಜಿತವಾಗಿತ್ತು.

''ಅಂಥ ಮುದುಕನ ಕೊರಳಿಗೆ ನನ್ನ ಕರುಳಿನ ಕಂದಮ್ಮನನ್ನು ಕಟ್ಟಿ ನನ್ನ ಕೈಯಿಂದಲೇ ಅವಳನ್ನು ಕೊಲ್ಲಲಾರೆ'' ಎಂದು ಗರ್ಜಿಸಿದ ಮಹಾರಾಜ. ಮಹಾರಾಣಿಯ ಹುಬ್ಬುಗಂಟೂ ಅದನ್ನು ಅನುಮೋದಿಸಿತು.

''ನಿನ್ನ ಸಂತೋಷ'' ಎಂದು ಹೊರಹೊರಟರು ಆಚಾರ್ಯರು.

ಆಗ ಸುಕನ್ಯೆ ಆ ಕುಲಗುರುಗಳ ಕಾಲು ಹಿಡಿದು ತಡೆದು ನಿಲ್ಲಿಸಿ ದಯವಿಟ್ಟು ತುಸು ಕುಳಿತುಕೊಳ್ಳಲು ಹೇಳಿದಳು. ಆಮೇಲೆ ರಾಜರಾಣಿಯರ ಕಡೆಗೆ ಮುಖಮಾಡಿ,

''ತಾತ ! ತಪ್ಪುಮಾಡಿದ ಮೇಲೆ ಸಿಟ್ಟೂ ಮಾಡಿದರೆ ಹಾನಿ ಯಾರಿಗೆ ? ಋಷಿಗಳ ಶಾಪ ಈಗ ನಮಗೆಲ್ಲ ಸೌಮ್ಯರೂಪದಲ್ಲಿ ತಟ್ಟಿದ್ದು ಇನ್ನೊಂದು ಗಳಿಗೆಗೆ ಇಡೀ ನಮ್ಮ ಕುಲವನ್ನೇ ಕಬಳಿಸುವದರಲ್ಲಿ ಸಂದೇಹವಿಲ್ಲ. ಕಣ್ಣು ಕಳೆದು ಅವರ ಆಯುಷ್ಯವನ್ನೇ ಹಾಳು ಮಾಡಿದ ನನ್ನ ಅಪರಾಧ ಸಾಮಾನ್ಯವಲ್ಲ. ಸಾಮಾನ್ಯವಾಗಿ ಋಷಿಗಳ ಕೋಪ ಸುಲಭವಾಗಿ ಶಮನವಾಗುವದಲ್ಲ. ಆದರೂ ಮಧುಚ್ಛಂದರು ಚ್ಯವನರ ಸ್ವಭಾವವನ್ನು ಅರಿತೇ ಈ ಉಪಾಯವನ್ನು ಸೂಚಿಸಿದ್ದಾರೆ. ಅವರ ಶಾಪಕ್ಕೆ ಸಾವಿರ ಜನ ತುತ್ತಾಗುವದಕ್ಕಿಂತ ನನ್ನೊಬ್ಬಳನ್ನು ಆ ಬ್ರಹ್ಮರ್ಷಿಗಳ ಪ್ರಸಾದಕ್ಕೆ ಪಾತ್ರಳನ್ನಾಗಿ ಮಾಡುವದು ಒಳ್ಳೆಯದಲ್ಲವೇ ? ವಿಚಾರಿಸಿ ನೋಡಿರಿ. ತಪ್ಪು ಮಾಡಿದ ನನಗಂತೂ ಶಾಪ, ತಾಪ, ನೋವು, ಸಾವು ತಪ್ಪಿದ್ದಲ್ಲ. ಅದಕ್ಕೆ ಉಳಿದವರೇಕೆ ತುತ್ತಾಗಬೇಕು. ತಪಸ್ವಿಗಳ ಕೋಪದ ಕಿಚ್ಚಿನಲ್ಲಿ ಬೇಯುವ ಬದಲು ಕರುಣೆಯ ಮಡುವಿನಲ್ಲಿ ಮೀಯುವ ಮಾರ್ಗವನ್ನು ಮಧುಚ್ಛಂದರು ತೋರಿದ್ದಾರೆ.

ಮೇಲಾಗಿ ಅಂಥ ಬ್ರಹ್ಮರ್ಷಿಗಳಿಗೆ ಕನ್ಯಾದಾನ ಮಾಡಿಕೊಟ್ಟರೆ ನಿನಗೆಂಥ ಪುಣ್ಯ!. ನನ್ನದೆಂಥ ಭಾಗ್ಯ!. ಅವರ ಸೇವೆ ಮಾಡುವ ಭಾಗ್ಯದೊರೆತರೆ ಗೌರಿಗಂಗೆಯರೂ ಧನ್ಯರಾದಾರು. ಅಂತಹ ಭಾಗ್ಯವನ್ನು ನನಗೆ ಒದಗಿಸಿಕೊಡುವ ಭಾರವನ್ನು ಮಧುಚ್ಛಂದಂಥ ತಪಸ್ವಿಗಳು ಹೊತ್ತದ್ದೂ ಒಂದು ನನ್ನ ಸೌಭಾಗ್ಯವೇ ಸರಿ. ಅದಕ್ಕಾಗಿ ನಾವು ಮೊದಲು ಇವರಿಗೆ ಆಭಾರಿಯಾಗಬೇಕಾಗಿದೆ'' ಎಂದಂದು ಆಚಾರ್ಯರ ಅಡಿದಾವರೆಗೆ ಮತ್ತೊಮ್ಮೆ ವಂದಿಸಿದಳು.

''ಅಖಂಡ ಸೌಭಾಗ್ಯವತೀಭವ''.

ಎಂದು ಎದೆತುಂಬಿ ಆಶೀರ್ವದಿಸುವಾಗ ತುದಿಕಳಿಸಿ ಬಂದ ಮಧುಚ್ಛಂದರ ಕಣ್ಣೀರು ಸುಕನ್ಯೆಯ ಮುಡಿಮಂದಾರಗಳಲ್ಲಿ ಮಂಜಿನ ಹನಿಯಂತೆ ಮಿನುಗಿದವು. ಅವಳನ್ನು ಹಿಡಿದೆತ್ತಿ,

''ನಿನ್ನ ಸುಕನ್ಯೆ ಎಂಬ ಹೆಸರು ಇಂದು ಸಾರ್ಥಕವಾಯಿತು. ನಿನ್ನ ಈ ಹಸುಳೆ ಮಿದುಳಿನಲ್ಲಿ ಹುಟ್ಟಿದ ವಿಚಾರಗಳು ಎಂಬತ್ತು ವರುಷ ತುಂಬಿದ ಋಷಿಗಿಂತ ಪಕ್ವವಾಗಿವೆ. ನೀನೊಬ್ಬ ಅತಿ ಚಿಕ್ಕವಯಸ್ಸಿನ ಸತಿಸಾವಿತ್ರಿ'' ಎಂದು ಶ್ಲಾಘಿಸಿದರು.

''ಇಂಥ ಹಾಲ್ಗಲ್ಲದ ಹಸುಳೆಯುನ್ನು ಮದುವೆಯಾಗಲು ಆ ನೈಷ್ಠಿಕ ಬ್ರಹ್ಮಚಾರಿಗಳು ಹೇಗೆ ಸಮ್ಮತಿಸುವರು?''

ಮಹಾರಾಣಿ ಸ್ಥವಿಷ್ಠೆ ಹೇಗಾದರೂ ಮಾಡಿ ಮಗಳನ್ನು ಉಳಿಸಲು ಪುರೋಹಿತರಿಗೆ ಪ್ರಶ್ನೆ ಹಾಕಿದಳು.

''ನೀನೆನ್ನುವ ಮಾತು ನಿಜವಮ್ಮ !'' ಮಧುಚ್ಛಂದರು ಶಾಂತರೀತಿಯಿಂದ ತಿಳಿಹೇಳಹತ್ತಿದರು.

''ಆ ಬ್ರಹ್ಮರ್ಷಿಗಳಿಗೆ ಮದುವೆಯಾಗುವ ವಿಚಾರವೇ ಇರಲಿಲ್ಲ. ಇದ್ದರೆ ತಾರುಣ್ಯದಲ್ಲಿ ಕನ್ಯೆಗಳ ಸರವನ್ನೇ ಅವರು ಕೊರಳಲ್ಲಿ ಕಟ್ಟಿಕೊಳ್ಳಬಹುದಾಗಿತ್ತು. ಅವರ ತಪದ ಝಳಕ್ಕೆ ಕಮರಿಹೋದೇನೆಂದು ಭಯದಿಂದ ಕಾಮ ಸಮೀಪದಲ್ಲಿಯೇ ಸುಳಿದಿಲ್ಲ. ಆದ್ದರಿಂದ ಅವರಿಗೆ ಎಂದಿಗೂ ಮದುವೆಯ ಅವಶ್ಯಕತೆಯೆನಿಸಿಲ್ಲ. ಇಂದಿಗೂ ಅದರ ಆವಶ್ಯಕತೆ ಇಲ್ಲ. ಆದರೆ ಇಂದು ನಿಮ್ಮ ಮಗಳು ಅವರಿಗೆ ಬೇಡವಾದ ಮದುವೆಯು ಮುಪ್ಪಿನ ಕಾಲದಲ್ಲಿ ಆವಶ್ಯಕವಾಗುವಂತೆ ಮಾಡಿದ್ದಾಳೆ. ಕಣ್ಣು ಹೋದ ಬಳಿಕ ಆ ಹಣ್ಣು ಜೀವಕ್ಕೆ ತಾಯಿಯಾಗಿ, ತಂಗಿಯಾಗಿ, ಮಡದಿಯಾಗಿ ಉಪಚರಿಸಲು ಒಂದು ಹೆಣ್ಣು ಜೀವವಾದರೆ ಆ ಕಣ್ಣುಹೋದ ದುಃಖ ಅಸಹ್ಯವೆನಿಸುವದಿಲ್ಲ. ಇಲ್ಲದಿದ್ದರೆ ಎಡವಿದಾಗೊಮ್ಮೆ ಎದ್ದಾಗೊಮ್ಮೆ ಕಣ್ಣು ಕಳೆದ ಕನ್ಯೆಯ ಕುಟುಂಬವನ್ನೇ ಶಪಿಸಿ ಸುಡುತ್ತ ಹೋಗಬಹುದು. ಅವರ ಈ ಮುಪ್ಪಿನಲ್ಲಿಯೂ ಕುರುಡತನದ ದುಃಖವನ್ನು ಮರೆಯಿಸಿ, ಸ್ನಾನ ಆನ್ಹಿಕ ಅನುಷ್ಠಾನಗಳಿಗೆ ಆತಂಕ ಬಾರದಂತೆ ನೋಡಿಕೊಂಡರೆ ಆದ ತಪ್ಪು ಮರೆತುಹೋಗುತ್ತದೆ. ತನ್ನ ಸೇವಾಭಾವದಿಂದ ಆ ಕಣ್ಣಿನ ನೋವನ್ನು ಮರೆಯಿಸಿ ನಲಿವನ್ನು ಉಂಟುಮಾಡುವ ಸೇವಾಭಾವದ ಹದ ಹವಣುಗಳು ಸುಕನ್ಯೆಗೆ ಚೆನ್ನಾಗಿ ಗೊತ್ತಿವೆ.''

ಪುರೋಹಿತರ ಈ ಮಾತು ಕೇಳಿ ಕರುಳಿನಲ್ಲಿ ಕಸಿವಿಸಿಯಾಗಿ ಸ್ಥವಿಷ್ಠೆ ನುಡಿದಳು.

''ಅವರ ಕಣ್ಣು ಬೇನೆಗೆ ಒಂದು ಇಡೀ ಹೆಣ್ಣು ಜೀವವನ್ನೇ ತ್ಯೆಯುದ್ದಹಚ್ಚಬೇಕೇ? ನನ್ನ ಈ ಎಳೆಕಳಲ.......''

''ಅಮ್ಮ'' ತಾಯಿಯ ಅಕ್ಕಸದ ನುಡಿಗಳನ್ನು ಅರ್ಧಕ್ಕೇ ತಡೆದು ಸುಕನ್ಯೆ ಹೇಳಿದಳು– ''ನನ್ನ ಬಾಳಂತೂ ಆ ಬ್ರಹ್ಮತೇಜಸ್ಸಿನ ಕಣ್ಣು ತಿವಿದಾಗಲೇ ಬರಡು ಕೊರಡಾಗಿ ಹೋಗಿದೆ. ಆ ಕೊರಡು ಹಾಗೆಯೇ ಕೊಳೆತು ದಳ್ಳುರಿಯಲ್ಲಿ ಉರಿದುಹೋಗುವದಕ್ಕಿಂತ ತೇಯುವ ಚಂದನವಾಗಿ, ತೀಡುವ ಗಂಧವಾಗಲಿ ಎಂದೇ ಮಧುಚ್ಛಂದರ ಸ್ನೇಹದ ಸಲಹೆ'' ಎಂದು ನುಡಿದು ಪುರೋಹಿತರ ಕಡೆಗೆ ತಿರುಗಿ,

''ಪೂಜ್ಯರೇ ! ಅಂಥ ಘೋರ ಪಾತಕ ಮಾಡಿದ ಈ ಜೀವ ಪಾವನವಾಗುವಂತೆ ಆಶೀರ್ವದಿಸಿರಿ'' ಎಂದು ಬೇಡಿಕೊಂಡಳು.

''ದೀರ್ಘಸುಮಂಗಲೀ ಭವ'' ಉತ್ಸಾಹದಿಂದ ಆಶೀರ್ವದಿಸಿದರು ಆಚಾರ್ಯರು.

ಅವರ ಆಶೀರ್ವಾದದ ವಚನ ಕೇಳಿ ಸ್ಥವಿಷ್ಠೆಗೆ ಸಂಕಟವಾಯಿತು. ಮನಸ್ಸು ನಿಲ್ಲದೇ–

''ಎಲ್ಲಿಯ ದೀರ್ಘ ಸುಮಂಗಲೀ ! ಪುರೋಹಿತರೇ ! ಸಾಯುವ ಮುದುಕ ನನ್ನು ಕೈಹಿಡಿದ ಸುಕನ್ಯೆಗೆ ಮಾಂಗಲ್ಯ ಮಿಂಚಿನ ಮಾಲೆಯಲ್ಲವೇ ?'' ಎಂದು ಬಿಕ್ಕಿದಳು.

''ಅಮ್ಮ !'' ತಾಯೊಡಲಿನ ಉರಿಯನ್ನು ಶಾಂತಮಾಡಲಿಕ್ಕಾಗಿ ಸೌಮ್ಯವಾಗಿ ಹೇಳಿದರು ಗುರುಗಳು ''ಋಷಿಗಳು ದೀರ್ಘಾಯುಷಿಗಳು ಅವರು ಈಗ ವೃದ್ಧರಾದರೂ ಅವರ ಮುಪ್ಪಿಗೂ ಮರಣಕ್ಕೂ ಇರುವ ಅಂತರದಲ್ಲಿ ನಮ್ಮಂಥ ಮಾನವರ ಮೂರು ತಾರುಣ್ಯಗಳು ತಿರುಗಿಹೋಗುತ್ತವೆ. ಸಾಯುವವರೆಗೆ ನಿನ್ನ ಮಗಳ ಕೊರಳಲ್ಲಿಯ ಮಂಗಳ ಸೂತ್ರ ಸೌಭಾಗ್ಯಕ್ಕೆ ಭಂಗವಿಲ್ಲವೆಂದು ತಿಳಿ. ವೇದ ಓದಿದ ಈ ಬ್ರಾಹ್ಮಣನ ಮಾತಿನಲ್ಲಿ ನಿನಗೆ ವಿಶ್ವಾಸವಿದ್ದರೆ ಕೇಳು. ನಿನ್ನ ಮಗಳು ಸೀತೆ, ಸಾವಿತ್ರಿಯರಂತೆ ಅಖಂಡ ಸೌಭಾಗ್ಯವತಿಯಾಗಿ 'ಋಷೀಕಾ' ಪದವಿಗೆ ಏರಿ ಸರ್ವಸುಮಂಗಳೆಯರಿಂದಲೂ ಪೂಜಿಸಲ್ಪಡುತ್ತಾಳೆ. ಎರಡು ಕುಲಗಳನ್ನೂ ಉದ್ಧರಿಸಿ ಸ್ತ್ರೀ ಜೀವನಕ್ಕೇ ಗೌರವವನ್ನು ತರುತ್ತಾಳೆ,'' ಎಂದು ಹೇಳಹೇಳುತ್ತ ಗದ್ಗದಿತರಾದರು. ವಲ್ಕಲದಿಂದ ಕಣ್ಣು ಒರೆಸಿಕೊಂಡರು.

ಅವರ ಈ ಭಾವಪೂರ್ಣವಾದ ನುಡಿಯನ್ನು ಕೇಳಿ ಶರ್ಯಾತಿ ಹಾಗೂ ಸ್ಥವಿಷ್ಠೆ ಇಬ್ಬರಿಗೂ ಸಮಾಧಾನವಾಯಿತು. ಅವರು ಮಧುಚ್ಛಂದರಿಗೆ ಮೊದಲು ಚ್ಯವನ ಮಹರ್ಷಿಗಳ ಹತ್ತಿರ ಹೋಗಿ ತಮ್ಮ ತಪ್ಪನ್ನು ಕ್ಷಮಿಸಿ ಸುಕನ್ಯೆಯ ಮದುವೆಗೆ ಅವರು ಸಮ್ಮತಿಸುವಂತೆ ಮಾಡಬೇಕೆಂದು ಕೇಳಿಕೊಂಡರು.

ಆಗ ಮಧುಚ್ಛಂದರು ಕೋಪಾಂಧರೂ ನೇತ್ರಾಂಧರೂ ಆಗಿ ಕುಳಿತುಕೊಂಡ ಚ್ಯವನರ ಹತ್ತಿರ ಹೋಗಿ ವಸ್ತುಸ್ಥಿತಿಯನ್ನೆಲ್ಲ ನಿವೇದಿಸಿದರು. ಹಾಗೂ ರಾಜದಂಪತಿಗಳ ಬಯಕೆಯನ್ನು ತಿಳಿಸಿದರು.

ಅದಕ್ಕೆ ಅವರು ''ಮುಪ್ಪಿನಕಾಲದಲ್ಲಿ ಮತ್ತೇಕೆ ಈ ಸಂಸಾರದ ಜಂಜಡ? ಇಷ್ಟುದಿನ ಅಖಂಡ ಕಾಯ್ದುಕೊಂಡು ಬಂದ ನನ್ನ ನೈಷ್ಠಿಕ ಬ್ರಹ್ಮಚರ್ಯವನ್ನು ಕೊನೆಗಾಲದಲ್ಲಿ ಹೇಗೆ ಬಿಡಲಿ'' ಎಂದು ತಮ್ಮ ಅಸಮ್ಮತಿಯನ್ನು ಸೂಚಿಸಿ ಒಮ್ಮೆಲೇ ''ಅಯ್ಯೋ ಕಣ್ಣೇ ! ಏನು ಉರಿ ! ಎಂಥ ಹೊಡೆತ''! ಎಂದು ನರಳಹತ್ತಿದರು.

ಅವರ ಕಣ್ಣಿನ ವಿಲಕ್ಷಣ ವೇದನೆ, ಬಾವು ಹಾಗೇ ಇದ್ದವು. ಅದರ ಹೊಡೆತ ಹೆಚ್ಚಾದಾಗೊಮ್ಮೆ ಅವು ಆ ಕಣ್ಣನ್ನು ತಿವಿದವರ ಕುಲಗೋತ್ರಗಳನ್ನೆಲ್ಲ ಉದ್ಧಾರ ಮಾಡುತ್ತಿದ್ದವು.

ಇದನ್ನೆಲ್ಲ ತಿಳಿದು ನೋಡಿದ ಮಧುಚ್ಛಂದರು ಅವರಿಗೆ ಆ ಕನ್ಯೆಯ ಅಪರಾಧವನ್ನೂ ಮತ್ತು ಈಗಿನ ಅವಳ ಮನೋಭಾವವನ್ನೂ ತಿಳಿಸಿ ಮದುವೆಗೆ 'ಹೂ' ಎನ್ನಿಸಿದರು.

ರಾಜನು ಮದುವೆಯನ್ನು ಅಲ್ಲಿಯೇ ಆಶ್ರಮದಲ್ಲಿ ಆಡಂಬರವಿಲ್ಲದೇ ಮಧುಚ್ಛಂದರ ಪೌರೋಹಿತ್ಯದಲ್ಲಿ ನೆರವೇರಿಸಿದನು. ರಾಜಕನ್ಯೆಯಾದ ಸುಕನ್ಯೆ ಋಷಿಪತ್ನಿಯಾದಳು.

ಸ್ಥವಿಷ್ಠೆ ಹಾಗೂ ಶರ್ಯಾತಿಗಳಿಗೆ ಮಗಳ ಸಲುವಾಗಿ ಇನ್ನೂ ಕೆಲವು ದಿನ ಅಲ್ಲಿಯೇ ಇರಬೇಕೆಂದೆನಿಸಿತ್ತು.

ಆದರೆ ಸುಕನ್ಯೆಯೇ ತಂದೆಗೆ ''ರಾಜಧಾನಿಯನ್ನು ಬಿಟ್ಟು ಬಹಳ ದಿನವಾಯಿತು. ಅಲ್ಲಿಯ ಪ್ರಜೆಗಳ ಪರಿಸ್ಥಿತಿ ಏನಾಗಿದೆಯೋ ಯಾರು ಬಲ್ಲರು. ಒಬ್ಬ ಮಗಳ ಸಲುವಾಗಿ ಕೋಟ್ಯಾವಧಿ ಪ್ರಜೆಗಳನ್ನು ಕಡೆಗಣಿಸಿ ಅಡವಿಯಲ್ಲಿ ಕೂಡುವದು ಸರಿಯಲ್ಲ'' ಎಂದು ರಾಜನೀತಿಯನ್ನು ಬೋಧಿಸಿ ಅವರನ್ನು ಊರಿಗೆ ಹೊರಡಿಸಿದಳು.

ಮಗಳನ್ನು ಕಾಡಿನಲ್ಲಿ ಬಿಟ್ಟು ರಥವನ್ನು ಏರುವಾಗ ಸ್ಥವಿಷ್ಠೆಗೆ ಜೀವ ಕೊರಳಿಗೆ ಬಂದಿತ್ತು. ಮಗಳನ್ನು ಗಟ್ಟಿಯಾಗಿ ಅಪ್ಪಿಕೊಂಡು ದೊಡ್ಡದನಿತೆಗೆದು ಅತ್ತುಬಿಟ್ಟಳು. ಮಹಾರಾಜನ ಮೂಕ ಶೋಕ ಇನ್ನೂ ಆಳವಾಗಿತ್ತು. ಒಡಲಿನಲ್ಲಿ ದುಃಖ ಕಡಲಾಡುತ್ತಿದ್ದರೂ ಮೌನದ ಮುದ್ರೆಯನ್ನುಭದ್ರವಾಗಿ ಹಾಕಿ ಶೂನ್ಯನೇತ್ರದಿಂದ ಸುಕನ್ಯೆಯನ್ನೇ ನಿರೀಕ್ಷಿಸುತ್ತಲಿದ್ದನು. ಅವರ ಶೋಕದ ಸಾಂದ್ರತೆಯನ್ನು ಕಂಡು ಹಸುಹಕ್ಕಿಗಳೂ ಗೋಗರೆದವು. ಗಿಡಬಳ್ಳಿಗಳೂ ಕಣ್ಣೀರಿಟ್ಟವು.

ಆದರೆ ಸುಕನ್ಯೆಯೇ ಮುದುಕಿಯಂತೆ ಅವರನ್ನೆಲ್ಲ ಸಂತೈಸಿ ''ಅಪ್ಪ ! ನನಗೆ ಹೂವಿನ ಮೇಲೆ ಆಸೆ ಬಹಳ ಈ ಹೂವಿನ ಸ್ವರ್ಗದಲ್ಲಿ ಈ ಚೆಲುವಿನ ಮಡಿಲಲ್ಲಿ ಈ ಬ್ರಹ್ಮರ್ಷಿಗಳ ಭೀಮರಕ್ಷೆಯಲ್ಲಿ ನಾನು ಸುಖವಾಗಿಯೇ ಇರುವೆನು. ದೈವ ನನ್ನ ಬಯಕೆಯನ್ನು ಕೈಗೂಡಿಸಿದೆ ದೇವರನ್ನು ಕಂಡು ಬ್ರಹ್ಮಾನಂದವನ್ನು ಉಂಡ ಇಂಥ ದೈವೀ ಪುರುಷರು ನನ್ನ ಕೈ ಹಿಡಿದದ್ದರಿಂದ ನನ್ನ ಜೀವನ ಪಾವನವಾಗಿದೆ. ಬಾಳು ಸಾರ್ಥಕವಾಗಿದೆ'' ಎಂದು ಗೆಲುವಿನ ನಗೆ ನಕ್ಕಳು. ಮಗಳ ಈ ಗೆಲುವಿನ ನಗೆ, ಒಲುವಿನ ನುಡಿಗಳನ್ನು ಕೇಳಿ ಮನದ ದುಗುಡ ಕಿಂಚಿತ್ ಕಡಿಮೆಯಾದಂತಾಗಿ ಅವರು ಊರಿಗೆ ಹೋಗಲು ರಥವನ್ನೇರಿದರು.

ಆದರೆ ಅವರ ರಥ ಕಣ್ಮರೆಯಾದ ಕೂಡಲೇ ಅವಳ ದುಃಖ ಉಕ್ಕರಿಸಿ ಬಂದಿತು. ತನ್ನ ತಾಯಿ–ತಂದೆಗಳು ತನ್ನನ್ನು ನೆನೆದು ಕೊನೆಯವರೆಗೆ ಬೇಯದಿರಲಿ ಎಂದು ಸುಕನ್ಯೆ ಅವರಿರುವವರೆಗೆ ನಗುನಗುತ್ತಲೇ ಇದ್ದಳು. ಅವರ ಮುಖ ಕಾಣದಂತಾದಾಗ ಅವಳ ಸಂಯಮದ ಕಟ್ಟು ಒಡೆದು ಕಣ್ಣೀರು ಕೋಡಿಯಾಗಿ ಹರಿಯಹತ್ತಿತು. ಆಶ್ರಮದ ಹಿಂದೆ ಹೋಗಿ ತಪೋವನದಲ್ಲಿಯ ಅಶೋಕ ವೃಕ್ಷದ ವೇದಿಕೆಯ ಮೇಲೆ ಕುಳಿತು ಬಿಕ್ಕಿ ಬಿಕ್ಕಿ ಅತ್ತಳು. ಅವಳ ಅಶ್ರುಗಳಿಂದ ಆಲವಾಲ ತುಂಬಿತ್ತು.

ಹಿಂದಿನಿಂದ ಯಾರೋ ಬಂದು ಅವಳ ಹೆಗಲಮೇಲೆ ಕೈ ಇರಿಸಿದಂತಾಯಿತು. ಬೆಚ್ಚಿಬಿದ್ದು ಹಿಂತಿರುಗಿ ನೋಡಿದಳು. ತನ್ನ ಪತಿದೇವ ಚ್ಯವನರು. ಇವಳ ಬಿಕ್ಕು ದುಃಖಗಳನ್ನು ಕೇಳಿ ಕಾಲಾಡಿಸುತ್ತ ಬಂದಿದ್ದರು.

ಆಶ್ರಮದಲ್ಲಿ ಆಳುವದೂ ಒಂದು ಅಪರಾಧವೋ ಏನೋ ಅದಕ್ಕಾಗಿಯೇ ತನ್ನನ್ನು ಶಿಕ್ಷಿಸಲು ಅವರು ಬಂದಿರಬಹುದು ಎಂದು ಗಾಬರಿಯಾಗಿ ಬೆದರಿನಿಂತಳು ಸುಕನ್ಯೆ. ಶಾಪ ಭಯದಿಂದ ಅವಳ ಸರ್ವಾಂಗವೂ ಕಂಪಿಸುತ್ತಿತ್ತು.

ಆದರೆ ಅದನ್ನು ತಿಳಿದ ಚ್ಯವನರು ''ಸುಕನ್ಯೆ ! ನನಗೆ ಹೆದರಿದೆಯಾ ! ನೀನು ಮಾಡಿದ ತ್ಯಾಗಕ್ಕೆ ನಿನಗೆ ನಾನು ಏನು ಮಾಡಿದರೂ ಕಡಿಮೆಯೇ ನಾನು ನನ್ನ ತಪಸ್ಸನ್ನೆಲ್ಲ ಧಾರೆಯೆರೆದು ಕೊಟ್ಟಾದರೂ ನಿನ್ನನ್ನು ಸುಖಿಯಾಗಿ ಮಾಡಬೇಕೆನ್ನುತ್ತೇನೆ. ಈ ವಯಸ್ಸಿನಲ್ಲಿ ನಿನಗಾಗಿ ನಾನೇನು ಮಾಡಬಲ್ಲೆ, ನಿನಗೆಂತು ಸುಖವನ್ನೀಯಬಲ್ಲೆ ? ಇದೇ ನನಗೀಗ ಚಿಂತೆಯಾಗಿದೆ. ದೇವರ ಚಿಂತೆಯ ಬದಲಾಗಿ ದೇವಿಯ ಚಿಂತೆ ಈಗ ಪ್ರಾರಂಭವಾಗಿದೆ. ಈ ಹರಕು ಗುಡಿಸಲಿನಲ್ಲಿ ಈ ಮುದುಕ ಗಂಡನ ಜೊತೆಗೆ ನಿನ್ನಂಥ ರಾಜಕುಮಾರಿಗೆ ಅದೆಂತು ಸುಖಸಂಸಾರವಾದೀತು ? ಸುಕನ್ಯಾ ನಾನು ನಿನ್ನ ಬಾಳನ್ನು ಹಾ.....

''ಒಳಿತೆನ್ನಿರಿ'' ಅರ್ಧಕ್ಕೇ ಅವರ ಹತ್ತಿರ ಬಂದು ಸುಕನ್ಯೆ ಬಾಯಿ ಮುಚ್ಚಿದಳು. ಆದರೆ ತಾಯಿಯನ್ನಗಲಿದ ಆ ಎಳೆ ಜೀವನದ ಅಳಲಿನ ಆಳವನ್ನು ತಿಳಿದ ಆ ಹಣ್ಣು ಜೀವ ಪರದೇಶಿಯಂತಾದ ಹೆಣ್ಣು ಜೀವವನ್ನು ಸಂತೈಸಲಿಕ್ಕೆಂದು ಹುಡುಕಿಕೊಂಡು ಬಂದಿತ್ತು.

ಅವಳನ್ನು ತಮ್ಮ ಹತ್ತಿರ ಕರೆದುಕೊಂಡು, 'ಸುಕನ್ಯಾ' ಎಂದಾಗ ಅವರ ಕಂಠ ಅವರುದ್ಧವಾಗಿತ್ತು, ವಾಣಿ ನಿರುದ್ಧವಾಗಿತ್ತು, ತುಂಬಿದ್ದ ಹೃದಯದಿಂದ ಅವಳನ್ನು ಎದೆಗೆ ತಬ್ಬಿಕೊಂಡು ಸ್ನೇಹದಿಂದ ಮೈಮೇಲೆಲ್ಲ ಕೈಯಾಡಿಸಿದಾಗ ಸುಕನ್ಯೆಗೆ ಕಲ್ಪವೃಕ್ಷದ ಆಸರೆ ದೊರೆತಂತಾಗಿತ್ತು.

ಶೋಕಭಾರದಿಂದ ಸಿಡಿಯುತ್ತಲಿರುವ ತನ್ನ ತಲೆಯನ್ನು ಚ್ಯವನರ ವಿಶಾಲ ವಕ್ಷಸ್ಥಲದಲ್ಲಿರಿಸಿದಾಗ ಆ ಎದೆಯಲ್ಲಿ ಅವಳಿಗೆ ತಾಯಿ–ತಂದೆಯರಿಬ್ಬರ ವಾತ್ಸಲ್ಯವೂ ಒಂದುಗೂಡಿದಂತೆನಿಸಿತು. ಅಲ್ಲಿಯ ನಾಡಿಗಳ ಪ್ರತಿಯೊಂದು ಸ್ಪಂದನವೂ ಅವಳಿಗೆ ಒಲವಿನ ವಿಶ್ವಾಸದ ಸಂದೇಶವನ್ನು ತರುತ್ತಿತ್ತು. ಅವಳ ಸಂತ್ರಾಸಕ್ಕೆ ಅಲ್ಲಿ ಶಾಂತಿ ಇತ್ತು, ಅವಳ ಭೀತಿಗೆ ಅಲ್ಲಿ ಆಶ್ವಾಸನವಿತ್ತು, ಅವಳ ಪ್ರೇಮಕ್ಕೆ ಅಲ್ಲಿ ಕರೆ ಇತ್ತು, ಅವಳ ಶಂಕೆಗೆ ಅಲ್ಲಿ ಸಮಾಧಾನವಿತ್ತು, ಅವಳ ಜೀವಕ್ಕೆ ಅಲ್ಲಿ ಆಪ್ಯಾಯನವಿತ್ತು, ಆದ್ದರಿಂದಲೇ ಆ ವಿಶ್ವಾಸದ ಉರದಲ್ಲಿ ಶಿರವಿಟ್ಟಕೂಡಲೇ ಬಹುದಿನದಿಂದ ನೀಗಿಹೋದ ನಿದ್ರೆ ಅವಳನ್ನು ಗಾಢವಾಗಿ ಆವರಿಸಿತು.

6. ಜಾರಿದ ದೇವರ ದಾರಿಗೆ ತಂದಳು ನಾರಿಯು ತಿಳಿಹೇಳಿ

ಸುಕನ್ಯೆ ಮತ್ತು ಚ್ಯವನರ ಹೊಸ ಸಂಸಾರವು ಸರಾಗವಾಗಿ ಸಾಗಿದಾಗ ಒಂದು ದಿನ ಅಕಸ್ಮಾತ್ತಾಗಿ ಅಶ್ವಿನೀಕುಮಾರರು ಬಂದರು. ದೇವಲೋಕದ ವೈದ್ಯರಾದ ಅವರ ಜಾಣ್ಮೆಯನ್ನು ತಿಳಿದ ಚ್ಯವನರು ಅವರಿಗೆ ತಮ್ಮ ಕಣ್ಣನ್ನು ತೋರಿಸಿ ಅದಕ್ಕೆ ಏನಾದರೂ ಉಪಾಯ ಮಾಡಬೇಕೆಂದು ಕೇಳಿಕೊಂಡರು. ಆ ದೇವಲೋಕದ ಧನ್ವಂತರಿಗಳು ಒಂದು ದಿವ್ಯ ರಸವನ್ನು ಹಚ್ಚಿದರು ಅದರಿಂದ ತಕ್ಷಣದಲ್ಲಿ ಕಣ್ಣಿನ ಬೇನೆ ಹೊಡೆತಗಳೆಲ್ಲ ಕಡಿಮೆಯಾಗಿ ಕಣ್ಣು ನಿಚ್ಚಳವಾಗಿ ಕಾಣಹತ್ತಿದವು.

ಆಗ ಆನಂದೋದ್ರೇಕದಿಂದ ಮುನಿಗಳು ಒಳಗೆ ಕಾರ್ಯಮಗ್ನಳಾದ ಸುಕನ್ಯೆಯನ್ನು ಕೂಗಿ 'ನನಗೆ ಕಣ್ಣು ಬಂದಿವೆ ನೋಡುಬಾ' ಎಂದರು. ಇಂಥ ವೃದ್ಧಾಪ್ಯದಲ್ಲಿಯೂ ಪ್ರತಿದಿನ ಅವರ ವ್ಯಂಗ್ಯ ವಿನೋದೋಕ್ತಿಗಳನ್ನು ಕೇಳಿದ ಅವಳು ಇದಾದರೂ ವಿನೋದವಚನವಿರಬಹುದು ಎಂದು ಒಳಗೇ ಕುಳಿತಳು ಆದರೆ ಹೊಸಗಣ್ಣು ಪಡೆದು ಹರ್ಷವಾಯುವಾದಂತಾದ ಅವರು ಒಂದೇ ಸಮನೆ ಕೂಗಾಡಲು ಸುಕನ್ಯೆ ಹಾಗೆಯೇ ಧಾವಿಸಿ ಬಂದಳು ಮುನಿಗಳ ಹತ್ತಿರ ನಿಂತು ನೋಡಿದಳು. ಮುನಿಗೆ ಕಣ್ಣು ಬಂದಿದ್ದವು.

ಚ್ಯವನರು ಅಂದು ಮೊದಲುಬಾರಿ ಸುಕನ್ಯೆಯನ್ನು ಕಣ್ಣು ಅರಳಿಸಿ ನೋಡಿದರು. ಅವಳ ರೂಪರಸವನ್ನು ಎಷ್ಟು ಕುಡಿದರೂ ಅವರಿಗೆ ತೃಪ್ತಿಯೂ ಇಲ್ಲ, ತಣಿವೂ ಇಲ್ಲ. ಸುಕನ್ಯೆಯೂ ಅರಳುಗಣ್ಣಿನಿಂದ 'ಚಕ್ಷುಷ್ಮಂತ'ನಾದ ಪತಿಯನ್ನು ಅಪಲಕನಯನದಿಂದ ನಿರೀಕ್ಷಿಸಿ ಅವನಿಗೆ ನೇತ್ರದಾನವನ್ನು ಮಾಡಿದ ಅಶ್ವಿನೀಕುಮಾರರನ್ನೂ ಕೃತಜ್ಞತೆ ಸೂಸುವ ಕಣ್ಣಿನಿಂದ ನೋಡಿದಳು.

ಅವಳ ಅನಿಂದ್ಯ ಸೌಂದರ್ಯವನ್ನು ಕಂಡೇ ಆ ವೈದ್ಯರ ಕಣ್ಣಿಗೆ ಕಾಮಣಿಯಾದಂತಾಯಿತು. ದೇವಲೋಕದಲ್ಲಿ ದುರ್ಮಿಳವಾದ ಚೆಲುವಿಕೆ ಆ ಗುಡಿಸಲಿನಲ್ಲಿ ಬೆಳದಿಂಗಳು ಬೀರುವದನ್ನು ಕಂಡು ಅವರಿಗೆ ಅಚ್ಚರಿಯೂ ಆಯಿತು. ಮತ್ಸರವೂ ಆಯಿತು.

ಈ ಹೆಣ್ಣಿಗಾಗಿಯೇ ಈ ಋಷಿ ಇಷ್ಟು ದೀರ್ಘತಪಸ್ಸನ್ನು ಆಚರಿಸಿರಬಹುದೇ?

ಅಥವಾ ಮುನಿಯು ಇಲ್ಲಿಯ ಚೈತ್ರಪಲ್ಲವಗಳಲ್ಲಿ ಪವಡಿಸಿದ ವಸಂತ ಲಕ್ಷ್ಮಿಯನ್ನೇ ಎಚ್ಚರಿಸಿ ಕಂಕಣ ಕಟ್ಟಿರಬಹುದೇ ?

ಇಲ್ಲವೆ ಇಲ್ಲಿಯ ವನದೇವತೆಯೇ ಒಲಿದು ಇವರ ಕೈ ಹಿಡಿದಿರಬಹುದೇ ?

ಆದರೆ ಇಂಥ ಚೆಲುವೆಯನ್ನು ಮುದುಕನಿಗೆ ಗಂಟುಹಾಕಿ ವಿಧಿ ಎಂತಹ ವಿಕಟವಿಡಂಬನೆ ಮಾಡುತ್ತಲಿದೆ ! ಅಥವಾ ಈ ಘೋರಾರಣ್ಯದ ಕಾಡು ಕುಸುಮಗಳಿಗೂ, ವನಮಲ್ಲಿಕೆಗೂ, ಕಾನನದ ಚಂದ್ರಿಕೆಗೂ ಒಂದು ಜೋಡು ಇರಲಿ ಎಂದು ಈ ಬರಡು ಬಾಳಿಗೆ ಇವಳನ್ನು ಕರೆದಿದೆಯೇ ?

ಎಂದೇನೇನೋ ಯೋಚಿಸುತ್ತ ನಿಂತಾಗ ಕಾಮನ ಚೆಲ್ವಿಕೆಗೆ ಕವಲೊಡೆದಂತಿರುವ ಆ ಅಶ್ವಿನೀಕುಮಾರರನ್ನು ಸುಕನ್ಯೆ ಒಂದುಕ್ಷಣ ವೀಕ್ಷಿಸಿದಳು.

ಪೌರುಷ ಸೌಂದರ್ಯವೆಲ್ಲ ಒಂದು ಮೈಯಲ್ಲಿ ಹಿಡಿಸಲಿಲ್ಲವೆಂದು ಬಗೆದು ವಿಧಿ ಈ ಎರಡು ನಿಲುವಿನಲ್ಲಿ ಆ ಚೆಲುವನಿರಿಸಿದಂತಿತ್ತು. ತಾರುಣ್ಯದ ಕಾಂತಿಗೆ ಲಾವಣ್ಯದ ಚೌಕಟ್ಟು, ಕಟ್ಟಿದಂತಿರುವ ಅವರ ಆ ಮೈಯ್ಯ ಹುರಿಕಟ್ಟು, ಎದೆಯ ಹರವು, ನಿಂತನಿಲುವು, ನಿಲುಮೆಯ ಚೆಲುವು, ನಡಿಗೆಯ ಬೆಡಗುಗಳು ಒಂದು ನಿಮಿಷ ಅವಳನ್ನು ಬೆರಗುಗೊಳಿಸಿದವು.

ಅವಳ ದೃಷ್ಟಿ–ಪ್ರಸಾದದಿಂದ ಪುಲಕಿತರಾದ ಅವರು ಹೊರಡುವಾಗ ಚ್ಯವನರ ಪಾದಮುಟ್ಟಿ ನಮಸ್ಕರಿಸಿದರು. ತಮ್ಮ ಕಣ್ಣಿನ ಬೇನೆಯನ್ನು ಕಡಿಮೆ ಮಾಡಿದ್ದಕ್ಕಾಗಿ ಅವರನ್ನು ಅಭಿನಂದಿಸಿ ಆಗಾಗ ಬರುತ್ತಿರಬೇಕೆಂದು ಹೇಳಿ ಚ್ಯವನರು ಅವರನ್ನು ಬೀಳ್ಕೊಟ್ಟರು.

ಅವರಿಗೂ ಏನಾದರೂ ನೆವಮಾಡಿ ಅಲ್ಲಿ ಬರುವದೇ ಬೇಕಾಗಿದ್ದುದರಿಂದ ಋತು ಪರಿವರ್ತನೆಯಾದಾಗೊಮ್ಮೆ ಅವರು ಅಲ್ಲಿಗೆ ಬಂದು ಋಷಿಯ ಆರೋಗ್ಯವನ್ನು ವಿಚಾರಿಸುತ್ತಲಿದ್ದರು. ಋಷಿಗಳು ಆ ದೇವಲೋಕದ ಧನ್ವಂತರಿಗಳನ್ನು ಅತ್ಯಾದರದಿಂದ ಉಪಚರಿಸುತ್ತಲಿದ್ದರು. ಸುಕನ್ಯೆಯೂ ತನ್ನ ರಸಪಾಕ ಮತ್ತು ಆದರದ ಮಾತುಗಳಿಂದ ಬಂದ ಅತಿಥಿಗಳನ್ನೆಲ್ಲ ಸತ್ಕರಿಸುತ್ತಲಿದ್ದಳು. ದೇವಲೋಕದ ಸುರರೂ ಭೂಲೋಕದ ಭೂಸುರರೂ ನಿತ್ಯವೂ ಅವರ ಅತಿಥಿಗಳಾಗಿರುತ್ತಲಿದ್ದರು. ಚ್ಯವನರು ತಾವು ಗೃಹಸ್ಥಾಶ್ರಮ ಸ್ವೀಕರಿಸಿದ್ದು ಸಾರ್ಥಕವಾಯಿತೆಂದುಕೊಳ್ಳುತ್ತಲಿದ್ದರು.

ಆದರೆ ಅಶ್ವಿನೀಕುಮಾರರು ಹೊಟ್ಟೆಹಸಿದು ಬರುತ್ತಿರಲಿಲ್ಲ, ಕಣ್ಣು ಹಸಿದು ಬರುತ್ತಿದ್ದರು. ಸುಕನ್ಯೆಯ ರೂಪರಸವನ್ನು ಬೊಗಸೆಗಂಗಳಿಂದ ಕುಡಿಯುತ್ತಲಿದ್ದರು. ಅವರಿಗೆ ಬಂದಾಗೊಮ್ಮೆ ಅವಳಲ್ಲಿ ಹೊಸ ಸೌಂದರ್ಯವೇ ಕಾಣುತ್ತಿತ್ತು. ಅವಳ ಲಾವಣ್ಯದ ಶರಧಿಗೆ ಅನುದಿನವೂ ಭರತಿ ಬರುತ್ತಲೇ ಇತ್ತು. ಕಣ್ಣಿನ ಕಾಂತಿ ಉಕ್ಕುತ್ತಲೇ ಇತ್ತು.

ಒಂದುದಿನ ಚ್ಯವನರು ನದೀ ಸ್ನಾನಕ್ಕೆ ಹೋದಾಗ ಅವರಿಬ್ಬರೂ ಗುಡಿಸಲಿನ ಒಳಗೆ ಬಂದರು ಆಗ ಸುಕನ್ಯೆ ಮಂದಹಾಸದಿಂದ ಅವರಿಗೆ ಸ್ವಾಗತ ಮಾಡಿ ಆಸನವಿತ್ತು ಋಷಿಗಳು ಸ್ನಾನ ಮಾಡಿ ಬರುವವರೆಗೆ ಅದರ ಮೇಲೆ ಕುಳಿತುಕೊಳ್ಳಲಿಕ್ಕೆ ಹೇಳಿದಳು. ರವಿಚಂದ್ರರು ಕೂಡಿ ಜೋಡಿಯಾಗಿ ಮುಗಿಲನಿಳಿದು ಬಂದಂತಿರುವ ಅವರ

ತುಂಬುವರೆಯದ ಮಾಂಸಲ ಶರೀರವನ್ನು ಸಸ್ಪೃಹ ನೇತ್ರಗಳಿಂದ ನೋಡುತ್ತ ಅಲ್ಲಿಯೇ ನಿಂತು ಕೊಂಡಳು.

ಅವಳ ಚಪಲಗಣ್ಣುಗಳ ವಿಪುಲ ವಿಭ್ರಮದಿಂದ ಉತ್ತೇಜಿತರಾದ ಅಶ್ವಿನಿಗಳು ಅಲ್ಲಿಯ ಏಕಾಂತವನ್ನು ಗಮನಿಸಿ ಕೇಳಿದರು.

''ಸುಕನ್ಯೆ ನಿಮ್ಮ ದಾಂಪತ್ಯ ಜೀವನ ಹೇಗೆ ನಡೆದಿದೆ ?''

''ಸುಖಮಯವಾಗಿ, ಸಂತಸಪೂರ್ಣವಾಗಿ''

''ನಿನಗೆ ವಯಸ್ಸೆಷ್ಟು ?''

''ಹದಿನೆಂಟು''

''ಚ್ಯವನರಿಗೆ ?''

''ನೂರಾಎಂಟು''

''ನಿನ್ನ ಪತಿಯ ವಯಸ್ಸು ತೀರ ಹೆಚ್ಚಾಗಲಿಲ್ಲವೇ ?''

''ಅಹುದು''

''ಎಲ್ಲ ಇಂದ್ರಿಯಗಳೂ ಶಿಥಿಲವಾಗಿ ಸಂಸಾರ ಸುಖವನ್ನು ಭೋಗಿಸಲು ಅವರು ತೀರ ಅಸಮರ್ಥರಾಗಿರುವರಲ್ಲವೇ ?

''ನಿಜ''

ತಾವು ಎಳೆದೊಯ್ಯಲಿರುವ ದಾರಿಗೆ ತಾನಾಗಿ ಬರುತ್ತಲಿರುವ ಸುಕನ್ಯೆಯ ಮಾತಿನ ಮೋಡಿಯಿಂದ ಅಶ್ವಿನಿಗಳು ತೀರ ಉತ್ತೇಜಿತರಾದರು. ಅವಳು ಇಷ್ಟು ಸುಲಭದಲ್ಲಿ ತಮಗೆ ವಶಳಾಗಬಹುದೆಂದು ಅವರು ಭಾವಿಸಿರಲಿಲ್ಲ. ಅವಳ ಬಾಯಿಂದಲೇ ಹೃದಯದ ಅಭಿಲಾಷೆಯನ್ನು ಬಿಚ್ಚಿ ಹೇಳಿಸಿ ಕೇಳಬೇಕೆಂದು ಮತ್ತೆ ಮಾತನ್ನು ಮುಂದುವರಿಸಿದರು.

''ಇಂಥ ಮುದುಕ ಗಂಡನಿಂದ ನಿನ್ನಂಥ ನವತರುಣಿಯ ಆಶೆ ಆಕಾಂಕ್ಷೆಗಳು ತೃಪ್ತಿಯಾಗಬಹುದೇ? ಅವಳು ಹೊಸ ಸಂಸಾರದ ಸವಿ ಸ್ವಾರಸ್ಯಗಳನ್ನು ಕಾಣಬಲ್ಲಳೇ?''

''ಶಕ್ಯವೇ ಇಲ್ಲ''

'' ಆ ಹೊಸ ಸಂಸಾರದ ರಸರಮ್ಯತೆಗಳನ್ನು ನಾವು ನಿನಗೆ ಒದಗಿಸಿ ಕೊಟ್ಟರೆ........

''ಪರಮೋಪಕಾರವಾಗುವದು''

''ಆ ಉದ್ದೇಶದಿಂದಲೇ ನಾವಿಬ್ಬರೂ ದೇವತೆಗಳು ಮೇಲಿಂದಮೇಲೆ ನಿಮ್ಮ ಆಶ್ರಮಕ್ಕೆ ಬರುತ್ತಲಿದ್ದೇವೆ''.

''ಕಳೆದುಹೋದ ನನ್ನ ಸಂಸಾರ ಸುಖವನ್ನು ಚಿಗುರಿಸಬಲ್ಲ ಭಾಗ್ಯ ದೇವತೆಯೆಂದು ತಿಳಿದೇ ನಾನು ಎಂದಿನಿಂದಲೂ ನಿಮ್ಮೆಡೆಗೆ ಆಶೆಯಿಂದ ನೋಡುತ್ತ ಬಂದಿದ್ದೇನೆ. ನಾನು ಬಾಯಿಬಿಟ್ಟು ಹೇಳದಿದ್ದರೂ ನನ್ನ ಮನದ ಬಯಕೆಯನ್ನು, ತೀರಿಸಬಂದ ದೈವೀಪುರುಷರಾದ ತಮ್ಮ ಕರುಣಾಕೋಮಲತೆಗೆ ನಾನು ಕೃತಜ್ಞಳಾಗಿದ್ದೇನೆ''.

''ಹಾಗಾದರೆ ಹೊರಗೆ ದೇವವಿಮಾನ ಸಿದ್ಧವಿದೆ. ಸಾಕು ಈ ಮುದುಕನ ಜೊತೆಗೆ ಸಂಸಾರ, ಅವನು ಸ್ನಾನಮಾಡಿ ಬರುವದರೊಳಗಾಗಿ ನಂದನವನಕ್ಕೆ ವಿಹಾರಕ್ಕೆ ಹೋಗೋಣ, ನಡೆ. ಅಲ್ಲಿಯ ಮಂದಾಕಿನೀ ತೀರದ ಮಂದಾರ–ಕುಂಜ–ನಿಕುಂಜಗಳಲ್ಲಿ ನಮ್ಮೊಡನೆ ಸ್ವಚ್ಛಂದವಿಹಾರ ಮಾಡಿ ನಿನ್ನ ಜನ್ಮದ ಬಯಕೆಗಳನ್ನೆಲ್ಲ ಪೂರೈಸಿಕೊಳ್ಳುವಿಯಂತೆ''.

ಅವರ ಈ ಮಾತನ್ನು ಕೇಳಿ ಸುಕನ್ಯೆಗೆ ಮೂರ್ಛೆ ಬಂದು ಸಿಡಿಲು ಹೊಡೆದಂತೆ, ವಜ್ರ ಬಡಿದಂತೆ, ಕೊಡಲಿಯಿಂದ ಕಡಿದಂತೆ ನಿಂತಲ್ಲಿಂದಲೇ ನೆಲಕ್ಕೆ ಉರುಳಿದಳು. ಆಗ ಅಶ್ವಿನಿಗಳ ಶೈತ್ಯೋಪಚಾರಕ್ಕೆ ಎದ್ದು ಕುಳಿತು ಬಿಕ್ಕಿಸಿ ಅಳಹತ್ತಿದಳು. ಮತ್ತು ದೀನದೃಷ್ಟಿಯಿಂದ ಅವರನ್ನು ನೋಡಿ,

''ನೀವು ದೇವತೆಗಳೆಂದು ನಿಮ್ಮನ್ನು ನಂಬಿದವರಿಗೆ ಹೀಗೆ ಮೋಸ ಮಾಡಬಹುದೇ ? ನಾವು ಹುಲುಮನುಜರು ತಪ್ಪುಮಾಡಿದರೆ ನೀವು ಶಾಸನ ಮಾಡಿ ಸರಿಯಾದ ದಾರಿ ತೋರಿಸಬೇಕು. ಅದೆಲ್ಲವೂ ಹೋಗಿ ಭೂಲೋಕದ ಓರ್ವ ಋಷಿಪತ್ನಿಯನ್ನು ಓಡಿಸಿಗೊಂಡು ಹೋಗುವ ವಿಚಾರದಲ್ಲಿದ್ದ ನಿಮ್ಮ ದೇವತ್ವಕ್ಕೆ ಧಿಕ್ಕಾರವಿರಲಿ. ಪತಿಯಿಲ್ಲದಾಗ ಸತಿಯನ್ನು ಎತ್ತಿಕೊಂಡು ಹೋಗಲೆಣಿಸಿದ ನಿಮಗೂ ರಾವಣನಿಗೂ ಅಂತರವೇನು ? ಒಬ್ಬ ಮನುಷ್ಯ ಬಾಲಿಕೆಗೆ ಇದ್ದಷ್ಟೂ ಶೀಲ, ಸಂಯಮ, ವಿವೇಕಗಳಿಲ್ಲದ ನಿಮ್ಮ ಉಚ್ಛೃಂಖಲ ಉನ್ಮತ್ತ ಜೀವನವನ್ನು ನೋಡಿ ಕೋಪ ಕೆರಳುತ್ತದೆ ದೇವಗಣದವರೆಂದು ಸುಮ್ಮನಿದ್ದೇನೆ. ಇಲ್ಲದಿದ್ದರೆ ಶಾಪವಿತ್ತು ಈಗಲೇ ಬೂ.....

ಅಶ್ವಿನಿಗಳು ಗಾಬರಿಯಾದರು. ಅವಳ ಮಾತಿನಿಂದಲೇ ಅವರಿಗೆ ನಾಚಿಕೆ ಯಾಗಿ ತಲೆತಗ್ಗಿಸಿದ್ದರು. ಆಡ ಆಡುತ್ತ ಅವಳ ನುಡಿ ಕಿಡಿಯಾಗುತ್ತಿರುವದನ್ನು ಕಂಡು ಬೆದರಿ ಪಶ್ಚಾತಾಪವನ್ನು ವ್ಯಕ್ತಮಾಡಿ ''ಸುಕನ್ಯೆ !'' ತಪ್ಪಾಯಿತು ಕ್ಷಮಿಸು ''ಎಂದು ನುಡಿದು ನಾಚಿಕೆಯಿಂದ ಮುಖವನ್ನು ಕೆಳಗೆ ಮಾಡಿದರು.

ಅಂಥ ದೇವ–ಪುರುಷರಿಂದ ತಪ್ಪೆನ್ನಿಸಿಕೊಳ್ಳಬೇಕಾಗಿ ಬಂದುದಕ್ಕಾಗಿ ಅವಳಿಗೆ ಬಹಳ ದುಃಖವಾಯಿತು. ಅವಳ ಕಣ್ಣಿನಿಂದ ಅಶ್ರು ಧಾರೆಧಾರೆಯಾಗಿ ಹರಿಯಹತ್ತಿತು. ಭಕ್ತಿಯಿಂದ ಅವಳು ಹೋಗಿ ಅವರ ಪಾದಗಳಿಗೆ ದೇವಭಾವದಿಂದ ವಂದಿಸಿದಳು.

''ಸುಕನ್ಯೆ ! ನಿನ್ನ ಪಾತಿವ್ರತ್ಯ ಸೌಶೀಲ್ಯಗಳಿಗಾಗಿ ನಾವು ಮೆಚ್ಚಿದ್ದೇವೆ. ನಿನ್ನ ಸುಖಕ್ಕಾಗಿ ನಾವೇನು ಮಾಡಬೇಕು ಹೇಳು'' ಎಂದು ಪ್ರಸನ್ನವದನದಿಂದ ಅಶ್ವಿನೀಕುಮಾರರು ಕೇಳಿದರು.

ಆಗ ಆ ಋಷಿರಮಣಿಯು ಬೊಗಸೆಯಗಲದ ನಯನಯುಗಲವನ್ನು ಅರಳಿಸಿ ಪೌರುಷದ ಪೀಠಪ್ರಭಾವಳಿಯಂತಿರುವ ಅವರ ದೇಹವನ್ನು ಮತ್ತೊಮ್ಮೆ ನಿರೀಕ್ಷಿಸಿದಳು. ಪ್ರಾಯ ಅವರ ಕಾಯದಲ್ಲಿ ವಸಂತೋದಯವನ್ನು ಸಾರಿತ್ತು. ಅವರ ಅಂಗ ಪ್ರತ್ಯಂಗಗಳಲ್ಲಿಯೂ ನಡೆನುಡಿಗಳಲ್ಲಿಯೂ ನೋಟ ಮೈಮಾಟಗಳಲ್ಲಿಯೂ ನವಯೌವನವು ತನ್ನ ಮೋಹಕವಾದ ಮುದ್ರೆಯನ್ನು ಭದ್ರವಾಗಿ ಒತ್ತಿತ್ತು.

ಹೀಗೆ ತುಂಬು ತಾರುಣ್ಯದ ದೃಢವಾದ ಅಪ್ಪುಗೆಯಲ್ಲಿ ಒಪ್ಪುವ ಅವರ ನೀಡಿದಾದ ದೇಹವನ್ನು ಸಾಂಕೇತಿಕವಾಗಿ ವೀಕ್ಷಿಸಿ,

''ತಾವು ನಿಜವಾಗಿಯೂ ಅನುಗ್ರಹಿಸುವದಾದರೆ...........

ನಾಚಿಕೆ ಅವಳ ಗಲ್ಲವನ್ನು ಕೆಂಪುಗಾಲಿನಿಂದ ತುಳಿದು ಗಂಟಲನ್ನು ಹಿಡಿದಿತ್ತು.

''ಹೇಳು ನಿಸ್ಸಂಕೋಚವಾಗಿ ಹೇಳು. ಸುಕನ್ಯೆ ಇಂದಿನಿಂದ ನಾವು ನಿನ್ನ ಸೋದರರೆಂದು ತಿಳಿ'' ಎಂದು ಅಶ್ವಿನಿಗಳು ಅಂತಃಕರಣದಿಂದ ನುಡಿದರು.

ಆಗ ಅವಳಿಗೆ ಧೈರ್ಯ ಬಂದಂತೆನಿಸಿ ಆವೇಗದಿಂದ ಮಾತನಾಡ ಹತ್ತಿದಳು.

''ಹಾಗಾದರೆ ನಾನು ಕೃತಕೃತ್ಯಳಾದೆ. ನಿಮ್ಮನ್ನು ಕಂಡಾಗಿನಿಂದಲೂ ನನಗೆ ನಿಮ್ಮಲ್ಲಿ ಸೋದರ ಭಾವನೆ. ಅಣ್ಣ ಎಂಬ ಅಭಿಮಾನದಿಂದಲೇ ನಿಮ್ಮ ಸುಂದರವಾದ ಶರೀರವನ್ನು ತೃಪ್ತಿಯಿಲ್ಲದೇ ನೋಡುತ್ತಲಿದ್ದೆ. ನಿಮ್ಮ ಶರೀರ, ನಿಮ್ಮ ತಾರುಣ್ಯ, ನಿಮ್ಮ ಲಾವಣ್ಯವನ್ನು ಕಂಡಾಗಲೆಲ್ಲ ನನ್ನ ಪತಿಗೂ ಇಂಥ ತಾರುಣ್ಯ ಬಂದರೆ ನಿಮಗಿಂತ ಸುಂದರರಾಗಿ ಕಾಣಬಹುದಲ್ಲ ಎಂದು ಎನಿಸುತ್ತಿತ್ತು. ಆದರೆ ಇಂಥ ಮುಪ್ಪಿನಲ್ಲಿ ಆ ಯೌವನ ಬರುವದು ಹೇಗೆ ? ಅಶಕ್ಯವೆಂದು ನಿರಾಶಳೇ ಆಗಿದ್ದೆ.

ಆದರೆ ಹೋದ ಕಣ್ಣನ್ನು ಮೂರು ತಾಸಿನಲ್ಲಿ ತಂದುಕೊಟ್ಟ ನನ್ನ ಅಣ್ಣಂದಿರ ವೈದ್ಯಕೀಯ ಚಾತುರ್ಯವನ್ನು ಕಂಡು ನನ್ನಲ್ಲಿ ಆಶೆ ಅಂಕುರಿಸಿತು.

''ಅಳಿದ ಕಣ್ಣನ್ನೇ ತಂದ ಕೈ ಕಳೆದ ಪ್ರಾಯವನ್ನೂ ಏಕೆ ತರಬಾರದು ? ನಮ್ಮ ಭಾರತೀಯ ವೈದ್ಯ ಶಾಸ್ತ್ರವು ಪ್ರತಿ ಜೀವವನ್ನೇ ಮಾಡಬಲ್ಲದು. ಪ್ರಾಯಹೋದ ಮಾನವಗೆ ಕಾಯಕಲ್ಪ ಮಾಡಿ ತಾರುಣ್ಯವನ್ನು ತರಲಾರದೇ ? ಅದರಲ್ಲಿಯೂ ದೇವಲೋಕದ ಧನ್ವಂತರಿಗಳಿಗಂತೂ ಯಾವುದು ತಾನೇ ಅಶಕ್ಯ ! ಮನಸ್ಸು ಮಾಡಿದರೆ ಅವರು ಖಂಡಿತವಾಗಿಯೂ ನನ್ನ ಪತಿಯನ್ನು ತರುಣನನ್ನಾಗಿ ಮಾಡಬಲ್ಲರು. ನಿಮ್ಮನ್ನು ಒಂದು ದಿನ ಕಂಡು ತಂಗಿಯ ಹೃದಯವನ್ನು ತೋಡಿಕೊಳ್ಳಬೇಕೆಂದು ಬಯಸಿದ್ದೆ''. ನೀವು ಬಂದಾಗಲೆಲ್ಲ ಇದೇ ಆಸೆಯಿಂದ ನಾನು ನಿಮ್ಮ ಕಡೆಗೆ ನೋಡುತ್ತಿದ್ದೆ. ಸಂಕೇತಪೂರ್ಣವಾಗಿ ನಿಮ್ಮ ಶರೀರವನ್ನು ನಿರೀಕ್ಷಿಸುತ್ತಿದ್ದೆ.

ನನ್ನ ಅಣ್ಣಂದಿರು ನನ್ನ ಪ್ರಾಣನಾಥನಲ್ಲಿ ಯೌವನದ ಪ್ರಾಣಪೂರಣೆ ಮಾಡಿದಾಗ ಹೇಗೆ ಕಾಣಬಹುದು ? ಎಂಬುದನ್ನು ನನ್ನ ಮನೋಭಿತ್ತಿಯಲ್ಲಿ ಚಿತ್ರ ಬರೆದು ಇಟ್ಟಿದ್ದೆ. ಆ ನನ್ನ ಕಾಲ್ಪನಿಕ ಚಿತ್ರಕ್ಕೂ ನಿಮ್ಮ ಪ್ರತ್ಯಕ್ಷ ಶರೀರಕ್ಕೂ ಹೋಲಿಸಿ ನೋಡುತ್ತಿದ್ದೆ. ನನ್ನ ಆ ಮಾನಸಸೃಷ್ಟಿಯಲ್ಲಿಯ 'ಪತಿ ಪ್ರತಿಮೆಯ' ಕುಂದುಕೊರತೆಗಳನ್ನು ನಿಮ್ಮ ಮೈಕಟ್ಟು ಪ್ರಮಾಣ ಬದ್ಧವಾದ ಶರೀರವನ್ನು ನೋಡಿ ತುಂಬಿಕೊಳ್ಳುತ್ತಿದ್ದೆ.

ನಿಮ್ಮನ್ನು ಅಣ್ಣ ಎಂದು ತಿಳಿದಿದ್ದರಿಂದ ಹಾಗೂ ನೀವು ದೇವತಾ ಪುರುಷರಾದುದರಿಂದಲೂ ನೀವು ಮಾನವ ಸ್ತ್ರೀಯನ್ನು ಎಂದೂ ಬಯಸಲಾರಿರಿ ಎಂದು ನನಗೆ ನಿಶ್ಚಯವಿದ್ದುದರಿಂದಲೂ ನಿಮ್ಮನ್ನು ನೋಡಲಿಕ್ಕೆ ನನಗೆ ಸಂಕೋಚವೇ ಆಗಲಿಲ್ಲ. ಆ ನನ್ನ ದೃಷ್ಟಿ ನಿಮ್ಮಲ್ಲಿ ದುರ್ಭಾವನೆ, ದುರ್ವಾಸನೆಗಳಿಗೆ ಕಾರಣವಾಗಿದ್ದರೆ ಅಣ್ಣ ! ನನ್ನನ್ನು ಕ್ಷಮಿಸಿರಿ.

ಆದರೆ ದೇವ ವೈದ್ಯರೇ ! ನಿಮ್ಮ ಶಾಸ್ತ್ರದಲ್ಲಿ ಸತ್ತವರನ್ನು ಬದುಕಿಸಲೂ ಉಪಾಯಗಳನ್ನು ಹೇಳಿದ್ದಾರೆ. ಅಂದಬಳಿಕ ಇದ್ದ ಮುದುಕರನ್ನು ತರುಣರನ್ನಾಗಿಸಲು ಉಪಾಯವನ್ನು ಹೇಳಿರಬೇಕಲ್ಲವೇ? ನೀವು ದೇವತೆಗಳಾದುದರಿಂದ ದಿವ್ಯದೃಷ್ಟಿಯಿಂದ ನನ್ನ ಈ ಮನದಾಸೆಯನ್ನು ಪೂರೈಸಬಂದಿರುವರೆಂದೇ ವಿಶ್ವಾಸದಿಂದ ನಾನು ನಿಮ್ಮೊಡನೆ ಇಷ್ಟು ಹೊತ್ತು ಮಾತಾಡಿದೆ. ನೇತ್ರದಾನ ಮಾಡಿದಂತೆ ನೀವು ನನ್ನ ಪತಿಗೆ ಯೌವನದಾನವನ್ನೂ ಮಾಡಲಾರಿರಾ ?''

ಅವಳ ಕಂಠ ಕಾತರವಾಯಿತು. ಧ್ವನಿ ದೀನವಾಗಿ, ಕ್ಷೀಣವಾಗಿ ಮಾತು ಬಾರದಂತಾಯಿತು. ಕೇವಲಬಾಷ್ಪಾವರುದ್ಧವಾದ ನಯನಾಂಚಲದಿಂದ ಅವರನ್ನೊಮ್ಮೆ ನೋಡಿ ತಲೆತಗ್ಗಿಸಿದಳು.

''ತಂಗಿ! ಗಾಬರಿಯಾಗಬೇಡ. ನಿನ್ನ ಗಂಡನಿಗೆ ಏಳು ಸಪ್ತಕಗಳಲ್ಲಿ ಮುಪ್ಪುಕಳೆದು ತಾರುಣ್ಯತಿರುಗುವಂತೆ ಮಾಡುತ್ತೇವೆ ಒಂದುವೇಳೆ ಹರೆ ತಿರುಗದಿದ್ದರೆ, ಪೂರು ಯಯಾತಿಗೆ ಇತ್ತಂತೆ ನಮ್ಮಿಬ್ಬರ ಯೌವನವನ್ನು ನಿನ್ನ ಗಂಡನಿಗೆ ಧಾರೆಯೆರೆದು ಕೊಡುತ್ತೇವೆ'' ಎಂದು ಹೇಳಿದರು.

ಅವರ ಮಾತು ಕೇಳಿ ಸುಕನ್ಯೆಯ ಕಣ್ಣು ಆ ಅಶ್ವೀನಿಕುವರರಿಗೆ ಕೃತಜ್ಞತೆಯ ಕದಲಾರತಿಯನ್ನು ಎತ್ತಿದವು.

ಆಗ ಆ ದೇವವೈದ್ಯರು ಅಲ್ಲಿಯೇ ಆಶ್ರಮದ ಒಂದು ಕೋಣೆಯಲ್ಲಿ ಶತಮಾನೋತ್ಸವ ಮುಗಿದು ಎಂಟು ವರುಷ ಆಗಿಹೋದ ಮುದುಕ ಚ್ಯವನರನ್ನು ಮಲಗಿಸಿ ಕಾಯಕಲ್ಪದ ಚಿಕಿತ್ಸೆಯನ್ನು ಮಾಡಹತ್ತಿದರು. ಚ್ಯವನಪ್ರಾಶವನ್ನು ಕೊಡಹತ್ತಿದರು.

ವೈದ್ಯರು ನಲವತ್ತೊಂಭತ್ತು ದಿನ ಅತ್ತ ನೋಡಕೂಡದೆಂದು ಸುಕನ್ಯೆಗೆ

ಹೇಳಿದ್ದರು. ಜೀವ ಕಣ್ಣಲ್ಲಿ ಹಿಡಿದುಕೊಂಡು ಹೇಗೋ ಏಳು ಸಪ್ತಕಗಳನ್ನು ಕಳೆದಳು. ಆಗ ಅವಳು ನಿದ್ರಾಹಾರಗಳನ್ನು ಬಿಟ್ಟು ದೇವರ ಧ್ಯಾನವನ್ನು ಮಾಡಿದಳು. ಅವಳ ತಪಸ್ಸಿಗೆ ದೇವರು ಕಣ್ಣುತೆರೆದ.

ಕೊನೆಯದಿನ ಅಶ್ವಿನಿಗಳು ''ಇಂದು ಬಾಗಿಲು ತೆರೆಯುವೆವು. ನಿನ್ನ ತರುಣ ಪತಿಯ ದರ್ಶನ ತೆಗೆದುಕೊಳ್ಳಲು ಸ್ನಾನ ಮಾಡಿ ಶುಚಿಯಾಗಿ ಬಾ'' ಎಂದು ಸುಕನ್ಯೆಗೆ ಹೇಳಿದರು.

ಕುತೂಹಲ ಅವಳನ್ನು ತೂಗುಯ್ಯಾಲೆ ಆಡಿಸಹತ್ತಿತ್ತು, ತನ್ನ ಪತಿ ಹೇಗಾಗಿರಬಹುದು ? ತರ್ಕ ತಿಪ್ಪರಲಾಗಹಾಕಿದರೂ ಸತ್ಯದ ನೆಲೆ ಹತ್ತದಂತಾಗಿತ್ತು, ಅವಸರದಿಂದ ನದಿಗೆ ಹೋಗಿ ಮುಳುಗುಹಾಕಿದಳು. ದಂಡೆಯ ಕಲ್ಲೊಂದರ ಮೇಲೆ ಕುಳಿತು ಗಂಗೆಗೆ ಅರ್ಘ್ಯವನ್ನು ಕೊಡಹತ್ತಿದಳು.

ಯಾರೋ ಹಿಂದಿನಿಂದ ಬಂದು ಬಲವಾಗಿ ಅವಳ ಕಣ್ಣುಗಳನ್ನು ಮುಚ್ಚಿದರು. ಆಗ ಅವಳು ''ಅಶ್ವಿನಿಗಳೇ ತನ್ನ ಗಂಡನನ್ನು ಕೋಣೆಯಲ್ಲಿ ಕಳ್ಳಿರಿಸಿ ಬಂದು ತನ್ನನ್ನು ಕೆಡಿಸಬಂದಿರುವರೋ ? ಅಥವಾ ಮತ್ತಾವ ಪಾಪಿಯೋ ?'' ಎಂದು ಹೆದರಿ ಕೆಟ್ಟದನಿಯಿಂದ ಚಿಟ್ಟನೇ ಚೀರಿದಳು.

ಆಗ ಕಿಲಕಿಲನೇ ನಗುತ್ತ ಓರ್ವ ಸುಕುಮಾರ ತರುಣ ಒದ್ದೆಯಾದ ಕೂದಲನ್ನು ಹಿಡಿದು ಅವಳ ಹವಳದುಟಿಯನ್ನು ಚುಂಬಿಸಿಬಿಟ್ಟ.

ಸುಕನ್ಯೆ ಅಯ್ಯೋ! ಎಂದು ಅಪರಾಧಿಯನ್ನು ಕೆಕ್ಕರಿಸಿ ನೋಡಿದಳು.

''ಏಕೆ ಸುಕನ್ಯೆ ಗುರುತು ಹತ್ತಲಿಲ್ಲವೇ ?'' ಎಂದನಾ ಯುವಕ.

ದನಿಯ ಮೇಲಿಂದ ಇವನು ತನ್ನ ಪತಿ ಚ್ಯವನನೇ ಎಂದರಿತು ಇದೇನು ಹರೆಯದವರಂತೆ ಹುಡುಗಾಟ'' ಎಂದು ಪಿಳುಕಿಸದ ಕಣ್ಣುಗಳಿಂದ ಪತಿಯ ರೂಪವನ್ನು ಹಸಿದವರಂತೆ ನೋಡಹತ್ತಿದಳು. ಆಗ ಚ್ಯವನ ಅವಳ ಒದ್ದೆಮೈಯನ್ನಪ್ಪಿ ಅವಳ ಹವಳದುಟಿಗಳಲ್ಲಿ ಮುತ್ತು ಪೋಣಿಸಿದ. ಸುಕನ್ಯೆಯ ಹೃದಯ ಗರಿಗೆದರಿತ್ತು, ಕಾಯಕಲ್ಪದಿಂದ ತನ್ನ ಪತಿ ಇಷ್ಟು ಸುಂದರ ತರುಣನಾಗಿ ಹೊರಬೀಳಬಹುದೆಂದು ಅವಳು ಎಣಿಸಿರಲಿಲ್ಲ.

ಹೊಸ ಹರೆಯದ ತರುಣನಾದ ಚ್ಯವನನು ತನ್ನ ಪುಷ್ಟವಾದ ನೀಳ್ ದೋಳುಗಳಿಂದ ಅವಳ ಸ್ವರಕಂಪಿತ ಶರೀರವನ್ನು ಬಿಗಿಹಿಡಿದಾಗ ಆ ಸುಕುಮಾರಿಯಾದ ಸುಕನ್ಯೆಯ ದೇಹದ ಎಲುವುಗಳೆಲ್ಲ ಮುರಿದು ಮುದ್ದೆಯಾದಂತಾದವು. ಉಸುಲುಗಟ್ಟುವಂತಾಯಿತು.

ಆದರೂ ಅದೇ ಮೊದಲ ಬಾರಿ ಗಂಡಸಿನ ಪಾಷಾಣಸ್ಪರ್ಶದ ಪರಿಚಯವಾದ ಅವಳಿಗೆ ಆ ಬಿಗಿಯಲ್ಲಿಯೂ ಒಂದು ಸುಖವಿತ್ತು, ಆ ಬಂಧನದಲ್ಲಿಯೂ ಮುಕ್ತಿಯ

ಆನಂದವಿತ್ತು, ಆ ವೇದನೆಯಲ್ಲಿಯೂ ಒಂದು ಸುಖಸಂವೇದನೆಯಿತ್ತು.

ಸ್ವಚ್ಛಂದ ಜಲಕ್ರೀಡೆಯಾಡಿ ಸ್ನಾನಮಾಡಿ ಶುಚಿರ್ಭೂತರಾಗಿ ಬಂದ ಆ ನವವಧೂವರರನ್ನು ಕಂಡು ಅಶ್ವಿನೀಕುಮಾರರಿಗೆ ತಮ್ಮ ವಿದ್ಯೆ ಸಾರ್ಥಕವೆನಿಸಿತು.

ಮನೆಗೆ ಬಂದ ಸುಕನ್ಯೆಯು ಮತ್ತೆ ಒಮ್ಮೆ ಅಶ್ವಿನೀಕುಮಾರರನ್ನು ಅದೇ ಅರಳುಗಂಗಳಿಂದ ನೋಡಿ ಮತ್ತೊಮ್ಮೆ ತನ್ನ ಪತಿಯ ವಿಶಾಲ ಕಾಯವನ್ನೂ ವೀಕ್ಷಿಸಿದಳು. ಅವರಿಬ್ಬರ ಸೌಂದರ್ಯ ಸೇರಿಯೂ ತನ್ನ ಪತಿಯ ಶಾರೀರಿಕ ಸೌಂದರ್ಯದ ತೂಕ ಬರುವದಿಲ್ಲವೆಂದು ತನ್ನಲ್ಲಿಯೇ ಅಂದು ತನ್ನ ಪತಿಯ ರೂಪನೋಡಿ ಹೆಮ್ಮೆಯಿಂದ ಉಬ್ಬಿದಳು. ರೂಪಲಾವಣ್ಯಗಳು ತೂಗು ತಕ್ಕಡಿಯಾದ ಅವಳ ಈ ವಿಚಿತ್ರ ನೋಟವನ್ನು ನೋಡಿ ಅಶ್ವಿನೀಕುಮಾರರು ನಸುನಕ್ಕರು. ತನ್ನ ಭಾವ ಹಾಗೂ ಕಣ್ಣಿನ ತೂಕಗಳನ್ನು ಕಂಡುಹಿಡಿದ ಅವರ ನಗೆನೋಡಿ ಸುಕನ್ಯೆಯ ತುಟಿಯಂಚಿನಲ್ಲಿ ನಗೆ ಮಿಂಚಿತು.

ಊಟವಾದ ಬಳಿಕ ಲೋಕಾಭಿರಾಮವಾಗಿ ಕುಳಿತುಕೊಂಡಾಗ ಚ್ಯವನರು ಅಶ್ವಿನಿಗಳ ಯೌವನ ದಾನಮಾಡಿದ ಉಪಕಾರವನ್ನು ಶ್ಲಾಘಿಸಿ ತಮ್ಮಿಂದ ಅವರಿಗೆ ಏನಾಗಬೇಕೆಂದು ಕೇಳಿದರು.

ಆಗ ಅಶ್ವಿನಿಗಳು ಬಹು ದುಃಖದಿಂದ,

''ನಾವು ವೈದ್ಯರೆಂದು ನಮಗೆ ಯಜ್ಞದಲ್ಲಿ ಆಹುತಿಯನ್ನು ತಡೆಹಿಡಿದಿದ್ದಾರೆ. ದಯವಿಟ್ಟು ತಾವು ನಮ್ಮನ್ನು ಯಜ್ಞಭಾಗಿಗಳನ್ನಾಗಿ ಮಾಡಬೇಕು'' ಎಂದು ಕೇಳಿಕೊಂಡರು.

ಅದಕ್ಕೆ ಚ್ಯವನರು ಸಮ್ಮತಿಸಿ, ಇನ್ನು ಕೆಲವೇ ದಿನಗಳಲ್ಲಿ ನಾನೇ ಯಜ್ಞಮಾಡಿಸಿ ನಿಮಗೆ ಆಹುತಿಕೊಡಲು ಪ್ರಾರಂಭಿಸುವೆನೆಂದು ಆಶ್ವಾಸನೆಯಿತ್ತು ಸಂತೈಸಿ ಕಳಿಸಿದರು.

ಅಶ್ವಿನಿಗಳ ಹಸ್ತಗುಣದಿಂದ ಹರೆತಿರುಗಿದ ಬಳಿಕ ಚ್ಯವನರ ದಾಂಪತ್ಯ ಜೀವನದಲ್ಲಿ ರಸಿಕತೆ ಸೌಗಂಧವನ್ನು ಸೂಸಿತು. ಸುಕನ್ಯೆಯ ರೂಪ ಚ್ಯವನರ ಕಣ್ಣು ಕೋರೈಯಿಸಿದರೆ ಅವಳ ಗುಣ ಅವರ ಹೃದಯವನ್ನು ಸೂರೆಗೊಂಡಿತ್ತು.

ಆ ಚೆಲುವಿನ ಭಾವಣೆಯಲ್ಲಿ ಅವರ ಬಾಳು ರಾಗರಸದ ಸಿಂಚನದಿಂದ ಬಾಳದ ಬೇರಿನಂತೆ ಪರಿಮಳಬೀರಿ ಘಮಘಮಿಸಿತ್ತು.

ಆ ಹೂವಿನ ರಾಜ್ಯದಲ್ಲಿ ಅವಳ ಹರೆಯದ ಹೊಂಗನಸುಗಳೆಲ್ಲ ಸಾಕಾರ ಸುಂದರವಾಗಿ ಶೃಂಗಾರ–ಜೀವನಕ್ಕೆ ರಂಗು ಹೊಯ್ದಿದ್ದವು.

ಧರ್ಮಾವಿರುದ್ಧವಾದ ನರ್ಮಕೇಲಿಗಳಲ್ಲಿ ಅವರ ದೈಹಿಕವಾದ ಕಾಮ ದೈವಿಕ ಪ್ರೇಮವಾಗಿ ಪರಿಣತಿಗೊಂಡು ಸ್ವತಃಶುದ್ಧವಾಗಿತ್ತು. ಅವರ ರಾಗಭೋಗಗಳು

ಮನೋಯೋಗ ಆತ್ಮಾನುರಾಗದ ಸಂಕೇತವಾಗಿದ್ದವು.

ಒಂದುದಿನ ಶರ್ಯಾತಿ ಮಹಾರಾಜನು ಮಗಳನ್ನು ನೋಡಿಕೊಂಡು ಹೋಗಲಿಕ್ಕೆಂದು ಆಶ್ರಮಕ್ಕೆ ಬಂದ.

ಅಲ್ಲಿ ತನ್ನ ಮಗಳ ಮೈಗೆ ಮೈ ಹಚ್ಚಿ ಲಲ್ಲೆಹೊಡೆಯುತ್ತ ಕುಳಿತ ಓರ್ವ ಸುಂದರ ಯುವಕನನ್ನು ಕಂಡು ಅವನ ಕೋಪ ಕೆಂಡವಾಯಿತು. ತನ್ನ ಮಗಳು ತಾನು ಮದುವೆಯಾದ ಮುದುಕ ಗಂಡನನ್ನು ವಂಚಿಸಿ ಈ ತರುಣನೊಂದಿಗೆ ಕಾಮಕೇಳಿಗಿಳಿದಿರುವಳೆಂದು ತಿಳಿದು ಇಬ್ಬರನ್ನೂ ಮುಗಿಸಿಬಿಡಲು ಖಡ್ಗವನ್ನು ಎತ್ತಿದ.

ಆಗ ಗಾಬರಿಯಾಗಿ ಸುಕನ್ಯೆ ತಂದೆಯ ಕೈಹಿಡಿದು ಎಲ್ಲ ಸಮಾಚಾರವನ್ನು ತಿಳಿಸಿದಳು.

ಮಹಾರಾಜ ತನ್ನನ್ನು ತಾನೇ ನಂಬದಂತಾದ. ಆದರೂ ಹತ್ತಿರ ಕುಳಿತು ಸೂಕ್ಷ್ಮವಾಗಿ ಪರಿಕಿಸಿದ. ಆ ಮುದುಕ ಚ್ಯವನರೇ ಹರೆಯದ ತುಂಬು ಮೈಯಿಂದ ಕಾಮನಂತೆ ಮನನೀಯರಾಗಿದ್ದರು. ರಾಮನಂತೆ ರಮಣೀಯರಾಗಿದ್ದರು. ಅವನ ಆನಂದಕ್ಕೆ ಪಾರವೇ ಉಳಿಯಲಿಲ್ಲ. ಅಳಿಯ ಮತ್ತು ಮಗಳನ್ನು ಅನಿಮಿಷನಯನಗಳಿಂದ ಗಂಟೆಗಟ್ಟಲೇ ನೋಡಿದ.

''ಇದೆಲ್ಲವೂ ಸುಕನ್ಯೆಯ ಪುಣ್ಯ'' ಎಂದು ಚ್ಯವನರು ಅವಳ ಕಡೆ ನೋಡಿದರು.

''ಇದೆಲ್ಲ ತಮ್ಮ ಆಶೀರ್ವಾದ ಭಾಗ್ಯ'' ಎಂದಳು ಸುಕನ್ಯೆ, ಪತಿಯನ್ನು ಅಭಿನಂದಿಸಿ. ತಂದೆಯನ್ನು ಕುರಿತು ''ತಾತ ! ವಾಸ್ತವಿಕವಾಗಿ ಇದೆಲ್ಲದರ ಶ್ರೇಯಸ್ಸು ನಮ್ಮ ಪುರೋಹಿತರಾದ ಮಧುಚ್ಛಂದರಿಗೆ ಸೇರಿದ್ದು. ನನ್ನ ಈ ಸೌಭಾಗ್ಯವನ್ನೆಲ್ಲ ಮುಂಚಿತವಾಗಿಯೇ ಕಂಡುಕೊಂಡು, ನನ್ನನ್ನೂ ನಿಮ್ಮನ್ನೂ ಮನ ಒಲಿಸಿ, ಈ ಮದುವೆಮಾಡಿಸಿ ನನಗೆ ಇಂಥ ಭಾಗ್ಯವನ್ನು ತಂದು ಕೊಟ್ಟವರು ಅವರು. ಮೊದಲು ನಾನು ಅವರನ್ನು ಕಂಡು ವಂದಿಸಬೇಕಾಗಿದೆ. ಇಂಥ ಮಂಗಲ ಸಂಬಂಧನ್ನು ಒದಗಿಸಿಕೊಟ್ಟಿದ್ದಕ್ಕಾಗಿ ಕೃತಜ್ಞತೆಯಿಂದ ಅಭಿನಂದಿಸಬೇಕಾಗಿದೆ'' ಎಂದು ಹೇಳಿದಳು.

ಎರಡುದಿನ ಅಲ್ಲಿ ಇದ್ದು ಮಹಾರಾಜನು ಬರುವಾಗ ಮಗಳು, ಅಳಿಯ ಇಬ್ಬರನ್ನೂ ತನ್ನ ರಥದಲ್ಲಿ ಕೂಡಿಸಿಗೊಂಡೇ ಊರಿಗೆ ಬಂದನು. ಸ್ಥವಿಷ್ಠೆ ಹಣ್ಣು ನಿವಾಳಿಸಿ ಆ ನವದಂಪತಿಗಳಿಗೆ ದೃಷ್ಟಿತೆಗೆದಳು. ಅಳಿಯನನ್ನು ಕಂಡು ಅವಳ ಆನಂದ ಬ್ರಹ್ಮಾನಂದಕ್ಕೆ ಹೆಗಲೆಣೆಯಾಗಿತ್ತು.

ಅಲ್ಲಿ ಚ್ಯವನ ಮತ್ತು ಮಧುಚ್ಛಂದರ ನೇತೃತ್ವದಲ್ಲಿ ಶರ್ಯಾತಿ ಅಶ್ವ ಮೇಧಯಾಗ ಮಾಡಿದ. ಆಗ ಚ್ಯವನರ ಸಲಹೆಯಂತೆ ಅಶ್ವಿನೀಕುಮಾರರಿಗೂ ಆಹುತಿಯನ್ನು ಕೊಡಲಾಯಿತು. ಸಂತುಷ್ಟರಾದ ಆ ದಿವ್ಯ ವೈದ್ಯರು ಹೊರಟಾಗ,

ಸ್ಥವಿಷ್ಠೆಯು ತನ್ನ ಅಳಿಯನಿಗೆ ಮತ್ತೊಮ್ಮೆ ಚ್ಯವನಪ್ರಾಶದ ಲೇಹ್ಯವನ್ನು ಕೊಟ್ಟು ಹೋಗಬೇಕೆಂದು ಕೇಳಿದಳು.

ಆಗ ಅವರು ''ಇನ್ನೇನು ನಮ್ಮ ಔಷಧದ ಅವಶ್ಯಕತೆಯೇಇಲ್ಲ, ಸುಕನ್ಯೆಯ ಪ್ರೇಮವೇ ಅವರಿಗೆ ದಿವ್ಯರಸಾಯನವಾಗಿ ನಿತ್ಯ ಯೌವನವನ್ನು ತಂದುಕೊಡುತ್ತದೆ'' ಎಂದು ಹೇಳಿದರು.

ಲಾವಣ್ಯ ತಾರುಣ್ಯಯುತಾಃ ಪತಿವ್ರತಾಃ
ವರ್ಷಾನದೀನಾಮಿವ ಭೂರುಹಾಂ ಮಧುಃ ।
ಭರ್ತುರ್ನಿಜಪ್ರೇಮರಸಾಯನಾವೃತೈಃ
ಗತಂಗತಂ ಯೌವನಮಾನಯಂತಿ ॥

7. ಧಿಗ್‌ಬಲಂ ಬ್ರಹ್ಮಬಲಂ ಭಕ್ತಿತೇಜೋ ಬಲಂ ಬಲಂ

"ರಾಜರ್ಷಿರಂಬರೀಷೋಽಭೂತ್ ಮಹಾಭಾಗವತಃ ಕೃತೀ ।
ನಾಸ್ಪೃಶದ್ ಬ್ರಹ್ಮಶಾಪೋಽಪಿ ಯಂ ನ ಪ್ರತಿಹತಃ ಕ್ವಚಿತ್"॥

ಮಹಾರಾಜ ಅಂಬರೀಷನ ಅಂಕಿತದಲ್ಲಿದ್ದ ಭೂಮಿಗೆ ಸೀಮೆಯಿಲ್ಲ. ಬಿಸಿಲು ಬಿದ್ದಲ್ಲೆಲ್ಲ ಅವನ ಆಳಿಕೆ. ಗಾಳಿ ಬೀಸಿದಲ್ಲೆಲ್ಲ ಅವನ ಶಾಸನ. ಅವನ ಐಶ್ವರ್ಯವನ್ನು ಎಣಿಸಲು ಗಣಿತ ಶಾಸ್ತ್ರದಲ್ಲಿ ಅಂಕಿಗಳಿಲ್ಲ. ನೆಲದ ಮೇಲೆ ನಡೆದಾಡುವವರಾರಿಗೂ ಅವನನ್ನು ಎದುರಿಸುವ ಶಕ್ತಿ ಇರಲಿಲ್ಲ.

ಅವನ ಬೊಕ್ಕಸದಲ್ಲಿ ಲಕ್ಷ್ಮಿ ಪಂಗುವಾಗಿ ತಂಗಿದ್ದಳು. ಬಾಹುಗಳಲ್ಲಿ ವೀರಶ್ರೀ ಒರಗಿದ್ದಳು. ಮುಖದಲ್ಲಿ ಆತ್ಮ ಶ್ರೀ ಮಿಂಚುತ್ತಲಿತ್ತು. ನಾಲಿಗೆಯ ತುದಿಯಲ್ಲಿ ಶಾರದೆ ನೆಲೆಸಿದ್ದಳು. ಇವೆಲ್ಲದಕ್ಕೂ ಅವನ ಪ್ರಾಯ ಕಳಸವಿಟ್ಟಿತ್ತು.

ಅವನ ಅಂತಃಪುರವು ಲಾವಣ್ಯ ಲಕ್ಷ್ಮಿಯ ಲೀಲಾಗಾರವಾಗಿತ್ತು. ರತಿರಂಭೆಯರಿಗೆ ರೂಪದಾನ ಮಾಡುವಂಥ ಚೆಲುವಿಕೆ ಅವನ ಪ್ರೇಯಸಿಯ ಸೊತ್ತಾಗಿತ್ತು. ಅವಳ ಎರಡು ಕಣ್ಣು ಕಾಮನ ಐದು ಬಾಣಗಳ ಕಾರ್ಯ ಮಾಡುತ್ತಲಿದ್ದವು. ಚೆಲುವು ವರಪಡೆದು ಅವಳ ಮುಖದಲ್ಲಿ ಸ್ಥಾನಗಳಿಸಿತ್ತು.

ಇಂಥ ರೂಪಸಿಯಾದ ರಮಣಿ, ಅಂಥ ಭಾಗ್ಯ, ಅಷ್ಟು ಅಧಿಕಾರ, ಆ ವೈಭವ ಇಷ್ಟೆಲ್ಲ ಇದ್ದರೂ ಅವನೊಂದು ಪದ್ಮಪತ್ರದಂತಿದ್ದ. ರಾಗಭೂಮಿಯಲ್ಲಿಯೇ ಯೋಗಸಾಧನೆ ಮಾಡುವ ರಾಜರ್ಷಿ. ರಾಗ ಅವನಿಗೆ ವಿರಾಗದ ಇನ್ನೊಂದು ಮೈ. ಭೋಗ ಅವನಿಗೆ ತ್ಯಾಗಕ್ಕೆ ಪ್ರತಿಯೋಗಿ. ಕುಟುಂಬವೆಲ್ಲ ಭಗವತ್ ಪರಿವಾರವೆಂದು ಅವನು ರಕ್ಷಿಸುತ್ತಲಿದ್ದ. ದಾನಮಾಡಲಿಕ್ಕೆ ಉಪಯುಕ್ತವೆಂದು ಹಣವನ್ನು ಗಳಿಸುತ್ತಲಿದ್ದ. ಜನರಿಗೆ ಸುಖವಾಗಲಿ ಎಂದು ರಾಜಧರ್ಮವನ್ನು ಪಾಲಿಸುತ್ತಲಿದ್ದ.

ಅವನ ಪ್ರೇಮಕ್ಕೆ ಪ್ರಜಾಪರಿವಾರವೆಲ್ಲ ಮೆಚ್ಚಿತ್ತು.

ಅವನ ಶ್ರದ್ಧೆಗೆ ಗುರುಹಿರಿಯರು ಮೆಚ್ಚಿದ್ದರು.

ಅವನ ಭಕ್ತಿಗೆ ಭಗವಂತ ಮೆಚ್ಚಿ ರಕ್ಷಣೆಗಾಗಿ ತನ್ನ ಚಕ್ರನ್ನಿಟ್ಟಿದ್ದ. ಅವನ ವ್ಯಕ್ತಿತ್ವಕ್ಕೆ ವಿಶ್ವವೇ ತಲೆಬಾಗಿತ್ತು.

ಒಮ್ಮೆ ಆ ರಾಜರ್ಷಿಯು ಕಾಲಿಂದೀತಟಾಕದಲ್ಲಿದ್ದ ಮಧುವನದಲ್ಲಿ ಒಂದು ವರುಷ ಪರ್ಯಂತರ ದ್ವಾದಶೀ ವ್ರತವನ್ನು ಅನೂಚಾನವಾಗಿ ಆಚರಿಸಿದ. ಕಾರ್ತೀಕ ಶುದ್ಧ ದ್ವಾದಶಿಯ ದಿನ ಆ ಸಾಂವತ್ಸರಿಕ ವ್ರತದ ಉದ್ಯಾಪನೆಯನ್ನು ಮಾಡಿ ಅದರ ಫಲವನ್ನೆಲ್ಲ ಶ್ರೀ ಕೃಷ್ಣನಿಗೆ ಸಮರ್ಪಣೆಗೈಯ್ಯಬೇಕೆಂದು ಸಂಕಲ್ಪಿಸಿದ.

ಅಂದು ಲಕ್ಷಾವಧಿ ಬ್ರಾಹ್ಮಣರನ್ನು ವೃಷ್ಟಾನ್ನ ಭೋಜನಕ್ಕೆ ನಿಮಂತ್ರಿಸಿದ. ಕೋಟ್ಯಾವಧಿ ಆಕಳುಗಳನ್ನು ದಾನವಿತ್ತ.

ಅಂದು ಆ ಮಧುವನದಲ್ಲಿ ಅಂಬರೀಷನು ದಾನವಿತ್ತ ಬೆಳ್ಳಿ ಬಂಗಾರಗಳಿಗೆ ಮಿತಿ ಇಲ್ಲ, ಕ್ಷೇತ್ರ ಪಾತ್ರಗಳಿಗೆ ಲೆಕ್ಕವಿಲ್ಲ. ಹೊಟ್ಟೆತುಂಬ ಊಟ, ಕೈತುಂಬ ದಕ್ಷಿಣೆ, ಮೈತುಂಬ ಬಂಗಾರ ವಸ್ತು-ಒಡವೆಗಳ ದಾನ ಪಡೆದು ಬ್ರಾಹ್ಮಣರು ಎದೆತುಂಬಿ ಆಶೀರ್ವದಿಸಿದರು.

ಕುಡಿಬಾಳೆಯ ಎಲೆಯಲ್ಲಿ ಬಡಿಸಿದ ತರತರದ ವೃಷ್ಟಾನ್ನಗಳ ಗಮಗಮ ಸುವಾಸನೆ ಇಡಗಿತ್ತು.

ಮೂರುದಿನದ ಉಪವಾಸ ನೂರುದಿನದಷ್ಟು ರಾಜನನ್ನು ನಿತ್ರಾಣ ಮಾಡಿತ್ತು. ಹಸಿವೆ 'ಇನ್ನು ಅನ್ನವನ್ನು ಹಾಕದಿದ್ದರೆ ನಿನ್ನ ಪ್ರಾಣ ತಿಂದೇ ಪಾರಣೆಮಾಡುತ್ತೇನೆ' ಎನ್ನುತ್ತಿತ್ತು. ಆದರೂ ಅವನು ಏನೂ ಅವಸರವಿಲ್ಲದಂತೆ ನಿಧಾನವಾಗಿ ಬ್ರಾಹ್ಮಣರ ಭೋಜನವನ್ನು ಮಾಡಿಸಿದ. ಬ್ರಾಹ್ಮಣರು ತಮ್ಮ ಜೊತೆಗೇ ಊಟಕ್ಕೆ ಕೂಡಲು ಅವನಿಗೆ ಹೇಳಿದರು. ಆದರೆ ಬ್ರಾಹ್ಮಣಭೋಜನವು ನಿರಾತಂಕವಾಗಿ ಮುಗಿಯುವವರೆಗೆ ಅವನಿಗೆ ಸಮಾಧಾನವಿಲ್ಲ. ಭೋಜನೋತ್ತರ ಅವರಿಂದ ಸ್ವಸ್ತಿ ಮಂತ್ರಾಕ್ಷತೆಯನ್ನು ತೆಗೆದುಕೊಂಡ.

ಆಮೇಲೆ ತನ್ನ ದ್ವಾದಶೀ ಪಾರಣೆಗಾಗಿ ಎಲೆಯ ಮೇಲೆ ಕುಳಿತುಕೊಂಡ. ಪಂಚಭಕ್ಷ್ಯಪಕ್ವಾನ್ನಗಳನ್ನು ಬಡಿಸಿದ ಎಲೆಗೆ ಪರಿಷೇಚನ ಮಾಡಬೇಕೆಂದು ಕೈಯಲ್ಲಿ ನೀರು ತೆಗೆದುಕೊಂಡ. ಅಷ್ಟರಲ್ಲಿ ಹೊರಗೆ ದುರ್ವಾಸರು ಬಂದರು.

''ಓಂ ಭವತಿ'' ಎಂಬ ದನಿಕೇಳಿ ರಾಜನು ತಕ್ಷಣ ಎಲೆಬಿಟ್ಟು ಎದ್ದ. ಅರ್ಘ್ಯಪಾದ್ಯಗಳಿಂದ ದುರ್ವಾಸ ಋಷಿಗಳನ್ನು ಪೂಜಿಸಿದ. ಭೋಜನಕ್ಕೆ ದಯಮಾಡಿಸಬೇಕೆಂದು ಬಾಗಿ ಬೇಡಿಕೊಂಡ.

'ಈಗ ಬಂದೆ' ಎಂದು ದುರ್ವಾಸರು ನದಿಗೆ ಸ್ನಾನಕ್ಕೆ ಹೋದರು. ಅಲ್ಲಿ ಯಮುನೆಯಲ್ಲಿ ಮಿಂದು ದಂಡೆಯಮೇಲಿದ್ದ ಒಂದು ಪಾಷಾಣಪೀಠದ ಮೇಲೆ ಕುಳಿತು ಗಾಯತ್ರಿ ಜಪವನ್ನು ಸುರು ಮಾಡಿದರು. ಜಪ ಧ್ಯಾನದಲ್ಲಿ ಅವರ ಮನಸ್ಸು ಲೀನವಾಯಿತು. ಹೊತ್ತು ಅವರಿಗೆ ಗೊತ್ತಾಗದಂತೆ ಸರಿಯಹತ್ತಿತು.

ಇತ್ತ ಮಹಾರಾಜನು ಮನೆಯಲ್ಲಿ ದಾರೀಕಾಯ್ದು ಬೇಸತ್ತ. ಅಂದು ದ್ವಾದಶಿ ಪಳಮಾತ್ರ ಸಾಧನೆ ಇದ್ದಿತು. 'ದ್ವಾದಶೀ ದ್ವಾದಶೀರ್ಹಂತಿ' ಒಂದು ದ್ವಾದಶಿಯ ಸಾಧನೆ ತಪ್ಪಿದರೆ ಹನ್ನೆರಡು ಏಕಾದಶೀ ಮಾಡಿದ ಪುಣ್ಯವೆಲ್ಲ ಹ್ರಾಸವಾಗುವದು ಎಂಬ ಮಾತು ಮಹಾರಾಜನ ಸ್ಮರಣಕ್ಕೆ ಬಂದಿತು.

ಪಾರಣೆಯ ಮುಹೂರ್ತ ಮೀರಬಂದಿತು. ರಾಜ ಹೊರಗೆ ಬಂದು ನೋಡಿದ. ಆದರೂ ದುರ್ವಾಸರ ಸುದ್ದಿ ಇಲ್ಲ. ಅವನಿಗೆ ಧರ್ಮ ಸಂಕಟ ಬಂದಿತು.

ದುರ್ವಾಸರ ದಾರೀ ಕಾಯ್ದರೆ ಪಾರಣೆಯ ಸಮಯ ಮೀರಿ ತನ್ನ ದ್ವಾದಶೀ ವ್ರತ ಹಾಳಾಗುತ್ತದೆ. ಅದಕ್ಕಾಗಿ ಊಟಕ್ಕೆ ಕುಳಿತರೆ ಬ್ರಹ್ಮದ್ರೋಹ, ಯತಿದ್ರೋಹ, ಮುನಿದ್ರೋಹ ಏನುಮಾಡಬೇಕೋ ತಿಳಿಯಲೊಲ್ಲದು. ಮುನಿಗಳೋ ಬೇಗ ಬರಲೊಲ್ಲರು.

ರಾಜ ಕೊನೆಗೊಂದು ನಿರ್ಧಾರಕ್ಕೆ ಬಂದ. ಸುಜ್ಞರಾದ ಪಂಡಿತರ ಹತ್ತಿರ ಬಂದು ತನ್ನ ಸಂಕಟವನ್ನು ಹೇಳಿಕೊಂಡ. ಅವರ ಸೂಚನೆಯಂತೆ ಅವರ ಕೈಯಿಂದ ತೀರ್ಥಪಾರಣೆ ಮಾಡಿ ಮತ್ತೆ ದುರ್ವಾಸರ ದಾರೀ ಕಾಯುತ್ತ ಕುಳಿತ.

ಅವರು ತಮ್ಮ ಜಪತಪಗಳನ್ನು ಮುಗಿಸಿ ನದಿಯಿಂದ ಬಂದಕೂಡಲೇ ರಾಜನು ಭಕ್ತಿಯಿಂದ ವಂದಿಸಿದ. ಭೋಜನಕ್ಕೆ ಕುಳಿತುಕೊಳ್ಳಬೇಕೆಂದು ಪ್ರಾರ್ಥಿಸಿದ.

ಅವನು ತಮ್ಮನ್ನು ಬಿಟ್ಟು ತೀರ್ಥವನ್ನು ತೆಗೆದುಕೊಂಡದ್ದನ್ನು ತಿಳಿದ ದುರ್ವಾಸರ ಕಣ್ಣು ಸಿಟ್ಟಿನಿಂದ ಉರಿವ ಅಗ್ಗಿಷ್ಟಿಗೆಯಾಯಿತು. ಅವಮಾನದ ಭಾರಕ್ಕೆ ಜರಾಜೀರ್ಣವಾದ ಅವರ ಸರ್ವಾಂಗವೂ ಕಂಪಿಸಹತ್ತಿತು. ಹೃದಯದಲ್ಲಿ ತಾಪ ತುಂಬಿತು. ಹುಬ್ಬಿನಲ್ಲಿ ಕೋಪ ಕಂಡಿತು. ತುಟಿ ಶಾಪ ಕೊಡಬೇಕೆಂದು ಅದುರಹತ್ತಿತು. ಅವಡುಗಚ್ಚಿ ಕಮಂಡಲುವನ್ನು ಬಗ್ಗಿಸಿದರು. ಶಾಪೋದಕವನ್ನು ಕೈಯಲ್ಲಿ ಹಿಡಿದು,

''ದುರಾತ್ಮ ! ನನ್ನನ್ನು ಊಟಕ್ಕೆ ಆಮಂತ್ರಿಸಿ ನಾನು ಬರುವದರೊಳಗಾಗಿ ತೀರ್ಥಪಾರಣೆ ಮಾಡಿದೆಯಾ! ನನಗೆ ಅವಮಾನ ಮಾಡಲಿಕ್ಕಾಗಿಯೇ ನೀನು ಕರೆದು ಬುದ್ಧಿಪೂರ್ವಕವಾಗಿಯೇ ನನ್ನನ್ನು ಬಿಟ್ಟು ತೀರ್ಥ ತೆಗೆದುಕೊಂಡೆ. ಐಶ್ವರ್ಯದಿಂದ ನೀನು ಮತ್ತನಾಗಿರುವೆ ನಿನ್ನ ಮದವನ್ನು ಇಳಿಸುವೆ ನಿಲ್ಲು'' ಎಂದಂದು ಕೈ ಎತ್ತಿದರು.

ಸಿಟ್ಟಿನಿಂದ ಅವರ ಕೈ ನಡುಗಿ ನೀರೆಲ್ಲ ನೆಲದ ಪಾಲಾಗಿತ್ತು. ಕಮಂಡಲು ಬರಿದಾಗಿತ್ತು.

ಆಗ ಅವರು ಕೆದರಿದ ಕೇಶದಿಂದ 'ಚಟ್' ಎಂದು ಒಂದು ಜಡೆಯನ್ನು ಕಿತ್ತಿ ನೆಲಕ್ಕೆ ಅಪ್ಪಳಿಸಿದರು. ಅದರಿಂದ ಒಂದು ಉರಿಯುವ ಕೃತ್ಯಾ (ಬೆಂಕಿಯ ಬೊಂಬೆ) ಎದ್ದಿತು. ತನ್ನ ಉರಿನಾಲಿಗೆಯನ್ನು ಚಾಚಿ ಆ ಕೃತ್ಯೆಯು ಅಂಬರೀಷನನ್ನು ಸುಡಲು ಬಂದಿತು. ಆ ಹೆಣ್ಣುವೀರಭದ್ರನ ಭೀಕರ ಅವತಾರವನ್ನು ನೋಡಿ ಜನರೆಲ್ಲ ನಡುಗಿಹೋದರು. ರಾಣಿ ಮೂರ್ಛಿತಳಾದಳು. ಪ್ರಜೆಗಳೆಲ್ಲ ಹಾಹಾಕಾರ ಮಾಡಹತ್ತಿದರು. ಬೆದರಿದ ಬ್ರಾಹ್ಮಣರಿಗಂತೂ ಒದರಲೂ ಬಾಯಿಬಾರದಂತಾಗಿತ್ತು.

ಆದರೆ ಭಕ್ತಾಗ್ರೇಸರನಾದ ಅಂಬರೀಷ ಮಾತ್ರ ಬೆದರಲಿಲ್ಲ. ಬೆಚ್ಚಲಿಲ್ಲ. ಒಂದು ಹೆಜ್ಜೆಕೂಡ ಹಿಂದೆ ಸರಿಯಲಿಲ್ಲ.

ಶಾಂತಸ್ವರದಿಂದ ಕೈಜೋಡಿಸಿ ''ಸ್ವಾಮಿನ್ ! ಕ್ಷಮಿಸಿ, ಶಾಂತರಾಗಿರಿ'' ಎಂದು ಬೇಡಿಕೊಂಡು ಭಗವಂತನನ್ನು ಧ್ಯಾನಿಸಿದ.

ಅವನ ರಕ್ಷಣೆಗಾಗಿ ಇಟ್ಟ ಸುದರ್ಶನ ಚಕ್ರವು ಗರಗರ ತಿರುಗುತ್ತ ಬಂದು ಮೊದಲು ಅಂಬರೀಷನನ್ನು ಕಬಳಿಸಲು ಬಂದ ಆ ಬೆಂಕಿಯ ಶಂಖಿಣಿಯನ್ನು ಕೊಂದುಹಾಕಿತು.

ತನ್ನ ಮಾನಸ ಪುತ್ರಿಯಾದ ಆ ಅಗ್ನಿಪಿಶಾಚಿಯನ್ನು ಕ್ಷಣಾರ್ಧದಲ್ಲಿ ನುಂಗಿ ತನ್ನೆಡೆಗೆ ಸುಡುತ್ತ ಬರುತ್ತಲಿರುವ ಆ ಸುದರ್ಶನವನ್ನು ಕಂಡು ದುರ್ವಾಸರು ಗಾಬರಿಯಾಗಿ ಓಡಹತ್ತಿದರು.

ತಿರುಗುವ ಜ್ವಾಲಾಮುಖಿಯಾಗಿ ಸುದರ್ಶನ ಅವರ ಬೆನ್ನುಹತ್ತಿತ್ತು. ಹೌಹಾರಿದ ದುರ್ವಾಸರು ಹೇಗಾದರೂ ಮಾಡಿ ಜೀವ ಉಳಿಸಿಗೊಳ್ಳಲೆಂದು ದಿಗ್‌ಭ್ರಾಂತರಾಗಿ ದಶದಿಕ್ಕುಗಳನ್ನು ಹೊಕ್ಕೋಡಿದರು.

ಗಿರಿಗಳನ್ನು ಏರಿದರು, ದರಿಗಳನ್ನು ಹಾರಿದರು, ಗವಿಗಳನ್ನು ಸೇರಿದರು, ನದಿಗಳನ್ನು ದಾಟಿದರು, ಸಪ್ತಸಿಂಧುಗಳ ಆಚೆಗೆ ಸಾರಿದರು. ಎಲ್ಲಿ ಹೋದರೂ ಹಾದಿಗುಂಟ ಸಿಡಿಲು ಸಿಡಿಸುತ್ತ ಬರುವ ಆ ಬೆಂಕಿಯ ವಂಕಿಯು ಅವರ ಬೆನ್ನು ಬಿಡಲಿಲ್ಲ.

ಕೊನೆಗೆ ಸತ್ಯಲೋಕವನ್ನು ಸಾರಿ ಬ್ರಹ್ಮದೇವರ ಎದುರು ಅಡ್ಡ ಬಿದ್ದು ರಕ್ಷಿಸಬೇಕು ಎಂದು ಕೇಳಿಕೊಂಡರು ದುರ್ವಾಸರು.

ಆಗ ಬ್ರಹ್ಮದೇವರು ''ದುರ್ವಾಸ ! ನಿನಗೆ ಆಸುವು ಕೊಟ್ಟರೆ ನನ್ನ ಸತ್ಯಲೋಕವೇ ಸುಟ್ಟುಹೋಗುವದು. ಭಗವದ್‌ಭಕ್ತನಿಗೆ ದ್ರೋಹ ಬಗೆದು ಕೆಂಡವನ್ನು ಉಡಿಯಲ್ಲಿ ಕಟ್ಟಿಕೊಂಡೇ ಹೊರಟಿರುವಿ. ಅದು ನೀನು ನಿಂತ ನೆಲ, ಕುಳಿತ ಸ್ಥಲ, ಹೊಕ್ಕ ಜಲ, ಹುಟ್ಟಿದ ಕುಲ ಎಲ್ಲವನ್ನೂ ಸುಟ್ಟು ಹಾಕುವದು. ನೀನು ಸಮುದ್ರ ಸೇರಿದರೆ ಸಮುದ್ರಕ್ಕೇ ಉರಿಹತ್ತುವದು. ಉಸುರಾಡಿಸಿದರೆ ಗಾಳಿಯ ಮೈಯ್ಯೂ ಉರಿದುಹೋಗುವದು. ನಿನಗೆ ಆಶ್ರಯ ಕೊಡುವದೆಂದರೆ ಕಿಚ್ಚು ಕುಡಿದಂತೆಯೇ ಸರಿ. ದಯಮಾಡಿ ಮೊದಲು ನನ್ನ ಲೋಕವನ್ನು ಬಿಟ್ಟು ಹೊರಡು'' ಎಂದು ಹೇಳಿ ಹೊರಗೆ ಹಾಕಿದರು.

ಆಗ ದುಃಖದಗ್ಧರಾದ ದುರ್ವಾಸರು ಕೈಲಾಸಕ್ಕೆ ಓಡಿದರು. ಅಲ್ಲಿಯ ಹಿಮದ ತಂಪಿನಲ್ಲಿ ಶಾಂತಮನಸ್ಸಿನಿಂದ ಕುಳಿತ ಪರಶಿವನ ಬೆನ್ನಿಗೆ ಬಿದ್ದು ರಕ್ಷಿಸು ಎಂದು ಬೇಡಿಕೊಂಡರು.

ವಸ್ತ್ರಉಚ್ಚಿ ಜಡೆಬಿಚ್ಚಿ ಹುಚ್ಚನಂತೆ ಓಡುತ್ತಿರುವ ಆ ದುರ್ವಾಸರ ದೈನ್ಯ ದುಃಖಗಳನ್ನು ಕಂಡು ಕೈಲಾಸಪತಿಯ ಹೃದಯ ಕರುಗಿತು. ಪಾದದ ಮೇಲೆ ಬಿದ್ದು ಹೊರಳಾಡುತ್ತಿರುವ ಆ ದೀನ ಬ್ರಾಹ್ಮಣನನ್ನು ಎತ್ತಿಹಿಡಿದು ಸಂತೈಸಿ,

''ಮುನಿಗಳೇ ! ಭಗವಂತನ ದ್ರೋಹಕ್ಕಿಂತ ಭಕ್ತರದ್ರೋಹ ಬಹಳ ಭಯಂಕರ. ಭಕ್ತದ್ರೋಹಿಗಳನ್ನು ನಾವಾರೂ ಕಾಯಲಾರೆವು. ಆದರೂ ನಿಮಗೆ ನಾನೀಗ ಪಾರಾಗಲು

ಒಂದು ಉಪಾಯವನ್ನು ಹೇಳುತ್ತೇನೆ, ಮಾಡಿರಿ'' ಎಂದರು.

ಹೊರಟುನಿಂತ ದುರ್ವಾಸರ ಪಂಚಪ್ರಾಣಗಳಿಗೆ ಪರಶಿವನ ಮಾತಿನಲ್ಲಿ ಸಂಜೀವಿನಿ ದರ್ಶನವಾದಂತಾಯಿತು. ಆಶೆಗೂಡಿ ನೋಡಹತ್ತಿದರು. ಪರಮೇಶ್ವರರು ಮುಂದುವರೆದರು.

''ಪ್ರಿಯ ಸೋದರ !'' ದುರ್ವಾಸರ ಮೇಲೆ ಕೈಯಾಡಿಸಿ ಬೆವರನೊರೆಸುತ ಪಾರ್ವತೀಶರು,

''ಬೆದರಬೇಡ. ನೀನೀಗ ವೈಕುಂಠಕ್ಕೆ ಹೋಗು. ಆ ಭಗವಂತನ ಹೊರತು ಜ್ವಾಲಾಜನಕವಾದ ಈ ಸುದರ್ಶನ ಚಕ್ರವನ್ನು ಶಾಂತಪಡಿಸಲು ಯಾರಿಗೂ ಸಾಧ್ಯವಿಲ್ಲ. ದಯಾನಿಧಿಯಾದ ಆ ಜಗದೀಶನೇ ನಿನ್ನ ಕರುಣಾಕ್ರಂದನವನ್ನು ಕೇಳಿ ಉದ್ಧಾರಮಾಡುವನು'' ಎಂದು ಹೇಳಿದರು.

ಆಗ ದುರ್ವಾಸರಿಗೆ ಧೈರ್ಯ ಬಂದಂತಾಯಿತು. ಆದರೆ ಹೊರಟು ನಿಂತ ಅವರಿಗೆ ಮತ್ತೊಂದು ಶಂಕೆ ಬಂದು ನಡಗುತ್ತ ಕೇಳಿದರು.

''ಸ್ವಾಮಿ ! ನನ್ನಂಥ ಪಾಪಿಷ್ಠನಿಗೆ, ಭಕ್ತದ್ವೇಷಿಗೆ ಆ ಶ್ರೀಧಾಮದಲ್ಲಿ ಪ್ರವೇಶ ಹೇಗೆ ಸಾಧ್ಯ''?

''ಹರಿನಾಮಸ್ಮರಣ ಮಾಡುತ್ತ ಸಾಗು, ದಾರಿ ತಾನೇ ದೊರೆಯುವದು'' ಎಂದು ಯುಕ್ತಿಯನ್ನು ಸೂಚಿಸಿದರು ಸರ್ವಜ್ಞರು.

ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ''

''ಹರೇಕೃಷ್ಣ ಹರೇಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ''

ಎನ್ನುತ್ತಲೇ ಕೈಲಾಸದಿಂದ ಮೇಲಕ್ಕೆದ್ದರು ದುರ್ವಾಸರು.

ದುಃಖದೀರ್ಣರಾದ ಅವರ ಗದ್ಗದ ಕಂಠದಿಂದ ಹೊರಟ ಶಬ್ದಗಳು ದಶದಿಕ್ಕುಗಳನ್ನೂ ದುಮುದುಮುಸಿದವು.

ಭಕ್ತಿವಿಹ್ವಲರಾದ ಅವರ ಉಚ್ಚಕಂಠದ ಹರಿನಾಮ ಸ್ಮರಣೆಗೆ ಮೇಲಿನ ಏಳು ಲೋಕಗಳೂ ಎಚ್ಚೆತ್ತವು. 'ಹರೇ ರಾಮ ಹರೇಕೃಷ್ಣ' ಎಂದು ಭಾವ ಪೂರಿತವಾಗಿ ಬರುತ್ತಲಿರುವ ನಾದದ ಲಹರಿಗಳು ಗಾಳಿಯ ಅಲೆಗಳಗುಂಟ ತೇಲಿ ವೈಕುಂಠದವರೆಗೆ ಬಂದವು.

ದುರ್ವಾಸರು ತಮ್ಮ ಭಕ್ತಿಯ ಬಲದಿಂದ, ಸ್ಮರಣೆಯ ಶಕ್ತಿಯಿಂದ ಮೇಲೆ ಮೇಲೆ ಏರುತ್ತಲೇ ಇದ್ದರು. ಆಗಸದ ಊರಿನವರೆಲ್ಲ ಕುತೂಹಲದಿಂದ ಅವರ ಈ ಲೋಕೋಲ್ಲಂಘನವನ್ನು ನೋಡುತ್ತಲಿದ್ದರು. ಆರ್ತರಾಗಿ ಕೂಗುತ್ತಲಿರುವ ಅವರ ಭಕ್ತಿಗೀತವನ್ನು ಕೇಳುತ್ತಲಿದ್ದರು.

ನಾಮಸ್ಮರಣೆಯಿಂದಾಗಿ ಕಿಡಿಕಾರುವದನ್ನು ಕಡಿಮೆಮಾಡಿದ್ದರೂ ದೂರಿಂದಲೇ ಸುದರ್ಶನ ಬೆನ್ನುಹತ್ತಿತ್ತು.

ವೈಕುಂಠಲೋಕಕ್ಕೆ ಬಂದ ದುರ್ವಾಸರು ಭಗವಂತನ ಅಡಿದಾವರೆಗಳಲ್ಲಿ ಶಿರವನಿಟ್ಟರು.

''ಅಪರಾಧ ಸಹಸ್ರಾಣಿ ಕ್ರಿಯಂತೇಽ ಹರ್ನಿಶಂ ಮಯಾ''

ತಾನಿ ಸರ್ವಾಣಿ ಮೇ ದೇವ ಕ್ಷಮಸ್ವ ಮಧುಸೂದನ''

''ಸ್ವಾಮಿ! ನನ್ನ ಅನಂತ ತಪ್ಪುಗಳನ್ನು ಮನ್ನಿಸು. ಈ ನಿನ್ನ ಸುದರ್ಶನದಿಂದ ನನ್ನನ್ನು ಉಳಿಸು. ನೀನಲ್ಲದೇ ನಮ್ಮಂಥ ಪಾಪಿಗಳನ್ನು ಬೇರಿನ್ನಾರು ಕಾಯಬೇಕು! ಮಕ್ಕಳು ಎಷ್ಟೇ ತಪ್ಪುಮಾಡಿದರೂ ಕ್ಷಮಿಸಿ ಅವರನ್ನು ರಕ್ಷಿಸುವದು ತಂದೆ–ತಾಯಿಗಳ ಕರ್ತವ್ಯವಲ್ಲವೇ ? ಜಗತ್ತಿನ ತಂದೆಯಾದ ನೀನೇ ಮುನಿದು ನನ್ನನ್ನು ತೊರೆದುಬಿಟ್ಟರೆ ಬದುಕುವದು ಹೇಗೆ? ತಂದೆಯೇ! ಕ್ಷಮಿಸಿ ಕಾಯಿ '' ಎಂದು ಹಲುಬುವ ದುರ್ವಾಸನನ್ನು ಕಂಡು ಭಗವಂತನಿಗೂ ದಯೆ ಬಂದಿತು.

ಆಗ ಆ ಸಿರಿಯರಸನು ಕರುಣಾಲುಲಿತವಾದ ಕಟಾಕ್ಷದಿಂದ ನೋಡಿ ಸ್ನೇಹಶೀತಲವಾದ ಕೈಯಿಂದ ದುರ್ವಾಸರನ್ನು ಎದ್ದು ಕೂಡಿಸಿ,

''ಬ್ರಹ್ಮರ್ಷಿಯೇ ! ನಿನ್ನಂಥ ಆತ್ಮಜ್ಞಾನಿಗೆ ಬಂದ ಈ ದುರವಸ್ಥೆಯನ್ನು ಕಂಡು ನನಗೆ ನಿಜವಾಗಿಯೂ ಬಹಳ ಕೆಡುಕೆನಿಸಿದೆ'' ಎಂದಂದಾಗ ಭಗವಂತನ ಪೀತಾಂಬರದ ಅಂಚು ಕಣ್ಣಂಚನ್ನೊರೆಸುತ್ತಿತ್ತು. ಮಾತು ಕರುಳಿಗೆ ಆತು ಪ್ರೀತಿಗೆ ಓತು ಬರುತ್ತಿತ್ತು. ''ಆದರೆ ಇಂಥ ಪರಿಸ್ಥಿತಿಯಲ್ಲಿಯೂ ನನಗೆ ನಿಮಗಾಗಿ ಏನೂ ಮಾಡಲಿಕ್ಕೆ ಬರುವದಿಲ್ಲವೆನ್ನುವದು ಮತ್ತಿಷ್ಟು ನನ್ನ ದುಃಖಕ್ಕೆ ಕಾರಣವಾಗಿದೆ'' ಎಂದು ತನ್ನ ಅಸಹಾಯತೆಯನ್ನು ಗೂಢವಾಗಿ ಹೇಳಿದ ಶ್ರೀಹರಿ.

ಆಗ ದುರ್ವಾಸರಿಗೆ ಅಚ್ಚರಿಯಾಯಿತು. ''ನೀನು ಬಿಟ್ಟ ಸುದರ್ಶನವನ್ನು ಆಜ್ಞೆಮಾಡಿ ನೀನು ಹಿಂತೆಗೆದುಕೊಳ್ಳಲಾರೆಯಾ ? ನನ್ನ ಮೇಲಿನ ನಿನ್ನ ಕೋಪವು ಇನ್ನೂ ಶಾಂತವಾಗಿಲ್ಲವೇ ?'' ಕಾತರಿಸಿ ಕೇಳಿದರು ದುರ್ವಾಸರು.

''ಸ್ವಾಮಿ ಈ ಚಕ್ರವನ್ನು ಈಗ ನಾನು ಬಿಟ್ಟಿಲ್ಲ'' ಭಗವಂತ ತನ್ನ ಸ್ನೇಹಾವರ್ತಸುಳಿಯ ತಿರುವುಗಳನ್ನು ಬಿಚ್ಚಿತೋರಿಸಲೆಂದು ಹೇಳಿದ ''ನಾನು ನನ್ನ ಸ್ವಂತ ಕೈಯಿಂದ ದುಷ್ಟರಾಕ್ಷಸರ ಮೇಲೆ ಮಾತ್ರ ಇದನ್ನು ಪ್ರಯೋಗಿಸುತ್ತೇನೆ. ಆಗ ಇದನ್ನು ನಾನು ತಿರುಗಿ ತೆಗೆದುಕೊಳ್ಳಲೂ ಬಲ್ಲೆ. ಆದರೆ ಈ ಚಕ್ರವನ್ನು ನಾನು ನನ್ನ ಭಕ್ತನಾದ ಅಂಬರೀಷನ ರಕ್ಷಣೆಗಾಗಿ ಇಟ್ಟಿದ್ದೆ. ನೀವು ಅವನಿಗೆ ಅಪಚಾರವೆಸಗಿದ್ದರಿಂದ ಈ ಚಕ್ರವು ಸಿಟ್ಟಿಗೆದ್ದು ನಿಮ್ಮನ್ನು ಕಬಳಿಸಲು ಬೆನ್ನುಹತ್ತಿದೆ. ಈಗ ಅದು ನಾನು ಹೇಳಿದರೂ ಕೇಳುವದಿಲ್ಲ. ನಿಮ್ಮ ಬೆನ್ನು ಬಿಡುವದಿಲ್ಲ''.

ವೈಕುಂಠಪತಿಯ ಈ ಖಡಾಖಂಡಿತವಾದ ನುಡಿಗಳನ್ನು ಕೇಳಿ ದುರ್ವಾಸರು ಹೌಹಾರಿದರು. ''ಅಯ್ಯೋ ಇನ್ನೇನು ಗತಿ'' ಎಂದಂದು ಹಿಂದಿರುಗಿ ನೋಡಿದರು. ಹಿಂದೆಮುಂದೆ ಪಂಚಾಗ್ನಿಗಳನ್ನು ಪ್ರಪಂಚಿಸುತ್ತ, ಆ ವಹ್ನಿವಲಯ ಸಿಡಿಯುತ್ತ ನಿಂತುಕೊಂಡಿತ್ತು ಸುಡಲು ಸಮುಸಮೀಪಕ್ಕೆ ಬರಹತ್ತಿತ್ತು.

ಆಗ ಅದನ್ನು ಕಂಡು ''ಅಯ್ಯೋ ಸತ್ತೆ'' ಎಂದು ಚಿಟ್ಟನೇ ಚೀರಿ ದುರ್ವಾಸರು ಕಮಲಾಕಾಂತನ ಕಾಲುಗಳ ಮೇಲೆ ಬಿದ್ದರು. ''ಸ್ವಾಮಿ ! ಹೇಗಾದರೂ ಮಾಡಿ ನನ್ನನ್ನು ಈ ಸುದರ್ಶನಶನಿಯಿಂದ ಪಾರುಮಾಡು'' ಎಂದು ಮೊರೆಯಿಟ್ಟರು.

ಆಗ ಭಗವಂತನು ದುರ್ವಾಸರ ಪಿಂಗಟರಂಗದ ಕರ್ಕಶ ಕೇಶಗಳನ್ನು ಮೃದುವಾಗಿ ಸವರುತ್ತ ''ವಿಪ್ರೋತ್ತಮ ! ಈ ಸುದರ್ಶನವು ಬೆನ್ನುಬಿಡಬೇಕಾದರೆ ನೀನು ಯಾವ ಭಕ್ತನಿಗೆ ಅಪಚಾರನ್ನು ಎಸಗಿರುವೆಯೋ ಅವನನ್ನೇ ಹೋಗಿ ಬೇಡಿಕೋ. ಅವನೇ ಈ ಚಕ್ರವನ್ನು ಶಾಂತಗೊಳಿಸಬಲ್ಲ'' ಎಂದು ಹೇಳಿದ.

ದುರ್ವಾಸರ ಬ್ರಾಹ್ಮಣತ್ವಾಭಿಮಾನ ಸಿಡಿದೆದ್ದಿತು.

''ನಾನು ಇಂಥ ಬ್ರಾಹ್ಮಣನಾಗಿ ಕ್ಷತ್ರಿಯನಿಗೆ ಬಾಗಿ ಬೇಡಿಕೊಳ್ಳಲೇ ! ಸ್ವಾಮಿ! ನೀನು ಕುಳಿತು ಬ್ರಾಹ್ಮಣಜಾತಿಗೆ ಹೀಗೆ ಅವಮಾನ ಮಾಡಿಸುವದು ಸರಿಯೇ ?'' ಎಂದು ಗರ್ಜಿಸಿದರು. ಬ್ರಹ್ಮದಂಡಕ್ಕೆ ಸಾಕ್ಷಾತ್ ಪರಬ್ರಹ್ಮನೇ ಕುಳಿತು ಮಾಡುತ್ತಲಿರುವ, ಮಾಡಿಸುತ್ತಲಿರುವ ಈ ಮಾನಕ್ಷತಿಯನ್ನು ಕಂಡು ಅವರ ಕಣ್ಣಿನಲ್ಲಿ ಕೆಂಡ ಹೊತ್ತಿತು. ಹುಬ್ಬು ಹಾರಿತ್ತು, ಜಡೆನಿಮಿರಿ ನಿಂತಿತ್ತು, ದೇವರಿಗೇ ಶಾಪಕೊಡುವವರಂತೆ ಅವರು ಅವನನ್ನೇ ಕ್ರೋಧತಾಮ್ರವಾದ ದೃಷ್ಟಿಯಿಂದ ನಿರುಕಿಸಹತ್ತಿದರು.

ಆಗ ಆ ಅಗ್ನಿಕಂಕಣ ಒಮ್ಮಿಂದೊಮ್ಮೆಲೇ ಭುಗಿಲ್ಲೆಂದು ಒಂದು ದೊಡ್ಡ ಬೆಂಕಿಯ ಬಣಿವೆಯೇ ದುರ್ವಾಸರನ್ನು ಸುಡಲು ಬಂದಂತಾಯಿತು. ಆ ಸಿಡಿಲಿನ ಸೆಳಕಿಗೆ ಅವರ ಗಡ್ಡ, ಮೀಸೆ, ಜಡೆಗಳ ಉಪಾಗ್ರಗಳೆಲ್ಲ ಸುಟ್ಟು ಕಮರಿಹೋದವು. ಮೈಯೆಲ್ಲ ಕ್ಷಣಾರ್ಧದಲ್ಲಿ ಕಿಚ್ಚಿಗೆ ಹಚ್ಚಿದಂತೆ ಬೆಂದು ಬದನೇಕಾಯಿಯಾಯಿತು. ಕಾತರಿಸಿ ಭಗವಂತನ ಪಾದಕ್ಕೆ ಬಿದ್ದರು. ಮೈಯೆಲ್ಲ ಧಗಧಗಿಸಿ ಉರಿಯಹತ್ತಿತು.

ದೇವದೇವನು ಮತ್ತೆ ತನ್ನ ಅಮೃತ ಹಸ್ತದಿಂದ ಅವರ ಬೆಂದು ಭರ್ಜಿತವಾದ ಮೈಮೇಲೆಲ್ಲ ಕೈಯಾಡಿಸಿ ಶಾಂತರನ್ನಾಗಿ ಮಾಡಿ ನಕ್ಕು ಹೇಳಿದ.

''ಭೂಮೀಸುರ ! ನಿಮ್ಮಂಥ ಬ್ರಾಹ್ಮಣರಿಗೆ ಬೆನ್ನುಹತ್ತಿದ್ದು ನನ್ನ ಚಕ್ರವಲ್ಲ, ನಿಮ್ಮ ದುರಭಿಮಾನದ ಚಕ್ರ. ಅದು ನನ್ನ ಚಕ್ರವಾಗಿದ್ದರೆ ಎಂದೋ ನಾನು ಅದನ್ನು ಹಿಂತೆಗೆದುಕೊಳ್ಳುತ್ತಲಿದ್ದೆ. ಜಾತಿಯ ಅಭಿಮಾನ ಜ್ಞಾನದ ದುರಹಂಕಾರಗಳೇ ನಿಮ್ಮನ್ನು ಸುದರ್ಶನ ಚಕ್ರವಾಗಿ ಸುಡುತ್ತಲಿವೆ. ಭಕ್ತಿ ಶಮ–ದಮ–ವೈರಾಗ್ಯಗಳು ಯಾವ ಜಾತಿಯವರ ಸೊತ್ತೂ ಅಲ್ಲ. ಜ್ಞಾನ ಭಕ್ತಿಗಳಿರದ ಬ್ರಾಹ್ಮಣನಿಗಿಂತ ಭಕ್ತ್ಯಾದಿಗಳಿಂದ

ಯುಕ್ತನಾದ ಚಂಡಾಲನಾದರೂ ಸಾವಿರಪಟ್ಟು ಶ್ರೇಷ್ಠ. ಈ ತಿಳುವಳಿಕೆ ಮೂಡಿ ಆ ದರ್ಪ–ದುರಭಿ ಮಾನಗಳು ದೂರಾಗುವವರೆಗೆ ನೀವಾಗಿ ನಿರ್ಮಿಸಿಗೊಂಡ ಈ ಚಕ್ರ ಈ ಉರಿ ಶಾಂತವಾಗಲಾರದು'' ಎಂದು ಸ್ಪಷ್ಟವಾಗಿ ಹೇಳಿದನು.

ಆಗ ದುರ್ವಾಸರಿಗೆ ಪರಮಾತ್ಮನ ಆ ಮಾತುಗಳಲ್ಲಿ ತತ್ವಜ್ಞಾನದ ಸುವಾಸ ಬರಹತ್ತಿತು. ತಮ್ಮ ದರ್ಪ–ದುರಭಿಮಾನಗಳಿಂದ ತಾವಾಗಿ ಹೊತ್ತಿಸಿಟ್ಟ ಬೆಂಕಿಯ ಬಳ್ಳಿಯ ಅರಿವು ಬಂದು ತಕ್ಷಣದಲ್ಲಿ ಅವರು ನೆಲದೆಡೆಗೆ ಹೊರಳಿದರು.

ವೈಕುಂಠದಿಂದ ಒಮ್ಮೆಲೇ ಧೀಂಕಿಟ್ಟು ಧುಮುಕಿದ ಅವರು ನೇರವಾಗಿ ನೆಲದೊಳಗೆ ನಿಂತ ಅಂಬರೀಷ ರಾಜನ ಪಾದದ ಮೇಲೆ ಬಿದ್ದು ಹೊರಳಾಡಹತ್ತಿದರು. ಕಣ್ಣೀರಿನಿಂದ ಅವನ ತಾವರೆಗಾಲುಗಳನ್ನು ತೊಳೆದು, ಎವೆಯಿಂದ ಅಲ್ಲಿಯ ಧೂಲೀ ಕಣಗಳನ್ನು ಬಳೆದು, ಕೈಜೋಡಿಸಿ ಕ್ಷುಣ್ಣಕಂಠದಿಂದ ಹೇಳಿದರು.

''ಭಕ್ತಾಗ್ರೇಸರ ! ನನ್ನ ತಪ್ಪನ್ನು ಮನ್ನಿಸು. ನನಗೆ ಒಳ್ಳೇಪಾಠ ಕಲಿಸಿದಿ. ಜಪತಪಗಳಿಂದ ಬಂದ ತುಸು ಶಕ್ತಿಸಾಮರ್ಥ್ಯಗಳನ್ನು ಲೋಕದ ಉಪಕಾರಕ್ಕಾಗಿ ಉಪಯೋಗಿಸದೇ ಅಪಕಾರಕ್ಕಾಗಿ ವಿನಿಯೋಗಿಸಿದರೆ ಅದು ತಿರುಗಿ ಅವರಿಗೇ ಹೇಗೆ ಮೃತ್ಯುವಾಗುವದು ಎನ್ನುವದು ನನಗೂ ನನ್ನ ಮುಖಾಂತರ ಜಗತ್ತಿಗೂ ಚೆನ್ನಾಗಿ ಇದರಿಂದ ತಿಳಿದಂತಾಯಿತು. ಭಕ್ತದ್ರೋಹಮಾಡಿದರೆ ಭಗವಂತ ಕೂಡ ಕ್ಷಮಿಸಲಾರ. ನನ್ನ ತಪ್ಪನ್ನು ನೀನೇ ಕ್ಷಮಿಸಿ ಅನುಗ್ರಹಿಸು. ಪ್ರಳಯಾಂತಕವಾದ ಈ ಸುದರ್ಶನದ ವನ್ಹಿವರ್ತುಲದಿಂದ ರಕ್ಷಿಸು'' ಎಂದು ಅಂಗಲಾಚಿದರು.

ಅಂಬರೀಷಮಹಾರಾಜನು ಅಂದು ದುರ್ವಾಸರು ಸುದರ್ಶನ ಬೆನ್ನುಹತ್ತಿ ಓಡಿಹೋದಂದಿನಿಂದ ಅಲ್ಲಿಯೇ ಯಮುನಾತೀರದ ಮಧುವನದಲ್ಲಿ ಕುಳಿತುಗೊಂಡಿದ್ದನು. ಮನೆಗೆ ಬಂದ ಅತಿಥಿಗಳು ಊಟ ಮಾಡದೇ ಉಪವಾಸ ಹೋದರಲ್ಲ ! ಎಂಬ ಚಿಂತೆ ಅವನ ಅಂತರಂಗವನ್ನು ಕೊರೆಯುತೊಡಗಿತ್ತು. ಬ್ರಾಹ್ಮಣರನ್ನು ಉಪವಾಸ ಕಳುಹಿಸಿ ನಾನೆಂದಿಗೂ ಬಾಯಲ್ಲಿ ತುತ್ತುಹಾಕಲಾರೆನೆಂದು ಅವನು ಅಂದಿನಿಂದ ಆಹಾರವನ್ನು ಬಿಟ್ಟುಬಿಟ್ಟ. ಮಂತ್ರಿಗಳೂ ಮಹಾರಾಣಿಯೂ ಎಷ್ಟು ಹೇಳಿದರೂ ರಾಜನ ನಿಶ್ಚಯ ಕದಲಲಿಲ್ಲ. ಪ್ರತಿ ನಿತ್ಯವೂ ಸ್ನಾನ ಆನ್ಹಿಕ ಮುಗಿಸಿಗೊಂಡು ತೀರ್ಥ ತೆಗೆದುಕೊಂಡು ಭಗವಂತನನ್ನು ಧ್ಯಾನ ಮಾಡುತ್ತ ಕುಳಿತುಬಿಡುತ್ತಲಿದ್ದ. ದುರ್ವಾಸರು ಬಂದ ಬಳಿಕ ಅವರಿಗೆ ಹೊಟ್ಟೆತುಂಬ ಊಟಕ್ಕೆ ಹಾಕಿದ ಮೇಲೆಯೇ ಅವರ ಅಪ್ಪಣೆಪಡೆದು ಊಟ ಮಾಡುತ್ತೇನೆಂದು ನಿರ್ಧರಿಸಿಬಿಟ್ಟಿದ್ದ.

ಹೀಗೆ ಇಡೀ ಒಂದು ವರುಷ ಕಳೆದರೂ ದುರ್ವಾಸರು ಬರಲಿಲ್ಲ. ರಾಜನಿಗೆ ತನ್ನ ಹಸಿವೆಗಿಂತ ದುರ್ವಾಸರ ಬಗೆಗೆ ಅತ್ಯಂತ ಚಿಂತೆಯಾಗಿತ್ತು. ನನ್ನ ಮೂಲಕವಾಗಿ ಆ ಬ್ರಾಹ್ಮಣರಿಗೆ ಸುದರ್ಶನ ಬೆನ್ನುಹತ್ತಿ ಎಷ್ಟು ತ್ರಾಸ ಕೊಡುವದೋ ಏನೋ ಎಂದು ಹಗಲಿರುಳು ಪರಿತಪಿಸುತ್ತಲಿದ್ದ.

ಇಂದು ಅಕಸ್ಮಾತ್ತಾಗಿ ಮೇಲಿಂದ ಬಿದ್ದು ತನ್ನ ಪಾದ ಪಾಂಸುಗಳಲ್ಲಿ ಹೊರಳಾಡುವ ಋಷಿಪುಂಗವನನ್ನು ನೋಡಿ ಅಂಬರೀಷನು ನಾಚಿಕೆಯಿಂದ ಒಮ್ಮೆಲೇ ಪಾತಾಳಕ್ಕೆ ಇಳಿದಂತಾದ. ಸರಕ್ಕನೇ ತನ್ನ ಕಾಲನ್ನು ಹಿಂದಕ್ಕೆಳೆದುಕೊಂಡು ಆ ಋಷಿಗಳನ್ನು ಸಂತೈಸಿ ಕೂಡಿಸಿ ನಮಸ್ಕರಿಸಿದ.

ಆದರೆ ಅವರ ಹಿಂದೆಯೇ ಸ್ಫುಲಿಂಗರಿಂಗಣದಲ್ಲಿ ಅಗ್ನಿಸಿಂಚನಮಾಡುತ್ತ ಋಷಿಯ ಮೈಯನ್ನು ಸುಡುತ್ತಲಿರುವ ಆ ಬೆಂಕಿಯ ಕಂಕಣವನ್ನು ಕಂಡು ಕೈಮುಗಿದು.

'ಸುದರ್ಶನ ನಮಸ್ತುಭ್ಯಂ ಸಹಸ್ರಾರ ಅಚ್ಯುತಪ್ರಿಯ ।
ಸರ್ವಾಸ್ತ್ರಘಾತಿನ್ ವಿಪ್ರಾಯ ಸ್ವಸ್ತಿ ಭೂಯಾ ಇಡಸ್ಪತೇ''॥

ಎಂದು ನಮಸ್ಕರಿಸಿ ಅಂಬರೀಷ ಮಹಾರಾಜ ಕೇಳಿಕೊಂಡ.

''ನಾನು ನನ್ನ ಜನ್ಮದಲ್ಲಿ ದಾನಧರ್ಮ, ಯಜ್ಞಯಾಗ, ಭಕ್ತಿ ಪೂಜೆ ಏನಾದರೂ ಮಾಡಿದ್ದಿದ್ದರೆ ಅದೆಲ್ಲದರ ಪುಣ್ಯವನ್ನೂ ಈ ಮಹರ್ಷಿಗಳಿಗೆ ದಾನವಾಗಿತ್ತಿದ್ದೇನೆ. ಅದೆಲ್ಲದರ ಪುಣ್ಯಪ್ರಭಾವದಿಂದ ವಿಷ್ಣುಚಕ್ರವೇ ! ನೀನು ಶಾಂತನಾಗಿ ಈ ಮುನಿಯನ್ನು ಬಿಡು. ನಾನು ನಿಜವಾದ ಭಗವದ್ಭಕ್ತನಾಗಿದ್ದರೆ ನನ್ನ ಪ್ರಾರ್ಥನೆಯಂತೆ ನೀನು ಈ ಬ್ರಾಹ್ಮಣನನ್ನು ಬಿಟ್ಟುತೊಲಗು. ನನ್ನ ಭಕ್ತಿ ಹಾಗೂ ಏಕಾದಶೀವ್ರತಗಳಿಂದ ಭಗವಂತ ಸಂತುಷ್ಟನಾಗಿದ್ದರೆ ಅದರಿಂದ ದುರ್ವಾಸರ ತಾಪವೆಲ್ಲ ಪರಿಹಾರವಾಗಿ ಅವರು ಮೊದಲಿನಂತೆ ಕಾಂತಿ, ಶಾಂತಿಗಳಿಂದ ಕೂಡಿ ಸಂತೋಷಿತರಾಗಲಿ''.

ಅವನ ಈ ಉದಾರ ಪ್ರಾರ್ಥನೆಯನ್ನು ಕೇಳಿ ಸುದರ್ಶನವು ತಕ್ಷಣದಲ್ಲಿ ಶಾಂತವಾಯಿತು. ಅದರ ಉರಿಯ ಝಳಕ್ಕೆ ಬೆಂದುಹೋದ ದುರ್ವಾಸರ ಶರೀರ ಮೊದಲಿನಂತೆ ಮಿಂಚುಗೂಡಿತು. ಆನಂದದಿಂದ ಕಣ್ಣು ಹನಿಗೂಡಿತು. ಅವರು ಕೃತಜ್ಞತೆಯಿಂದ ಬಾಗಿ ತಡೆತಡೆದು ಹೇಳಿದರು.

''ಅಂಬರೀಷ ! ಇದೀಗ ನೀನು ನಿಜವಾಗಿಯೂ ಭಗವದ್ಭಕ್ತ. ಕೃತ್ಯಾಳನ್ನು ನಿರ್ಮಿಸಿ ನಿನ್ನನ್ನು ಕೊಲ್ಲಬಯಸಿದ ನನ್ನನ್ನು ಸುದರ್ಶನದಿಂದ ಉಳಿಸಿದೆ. ನಿನ್ನ ವೈರಿಯ ಪ್ರಾಣರಕ್ಷಣೆಗಾಗಿ ನಿನ್ನ ಪುಣ್ಯ ಸರ್ವಸ್ವನ್ನೂ ಹೋಮಮಾಡಿದೆ. ನಿನಗೆ ಶಾಪಕೊಟ್ಟು ಸುಟ್ಟುಬಿಡಬೇಕೆಂದು ಮಾಡಿದ ನನಗಾಗಿ ಈಗ ಇಡೀ ಒಂದು ವರುಷದವರೆಗೆ ನಿರಾಹಾರನಾಗಿ ಉಪವಾಸ ನಿಂತುಕೊಂಡೆ. ನಿನ್ನಲ್ಲಿ ಇಂಥ ಸದ್ಗುಣಗಳಿರುವದರಿಂದಲೇ ನೀವು ಭಗವಂತನನ್ನು ಬೆರಳ ತುದಿಯಮೇಲೆ ಕುಣಿಸಬಲ್ಲಿರಿ. ಯಾವ ಜಾತಿಯವರಿದ್ದರೂ ನಿಮ್ಮಂಥ ಭಗವದ್ ಭಕ್ತರಿಗೆ ನನ್ನ ದೀರ್ಘದಂಡ'' ಎಂದು ನಮಸ್ಕರಿಸಿದರು.

ಆಗ ತಕ್ಷಣದಲ್ಲಿ ಮಹಾರಾಜ ಅವರ ಕೈಗಳನ್ನು ಹಿಡಿದು ತಡೆದು ಆಸನದ ಮೇಲೆ ಕೂಡಿಸಿ ಅರ್ಘ್ಯಪಾದ್ಯಗಳಿಂದ ಪೂಜಿಸಿ ಪಾದಮುಟ್ಟಿ ನಮಸ್ಕರಿಸಿದ. ಸ್ವಾಮಿ!

ನನ್ನಿಂದ ತಮಗೆ ಬಹಳೇ ತೊಂದರೆಯಾಯಿತು, ಕ್ಷಮಿಸಬೇಕು ಎಂದು ಹೇಳಿ ಭೋಜನಕ್ಕೆ ಎಬ್ಬಿಸಿದ.

ದುರ್ವಾಸರು ಎಲೆಯ ಮೇಲೆ ಬಂದು ಕುಳಿತಾಗ ನಿಡಿದಾಗಿ ಬಿಡಿಸಿದ ಕುಡಿಬಾಳೆಯ ಜೋಡೆಲೆಯ ತುಂಬ ನೂರಾರು ಪಕ್ವಾನ್ನಗಳನ್ನು ಬಡಿಸಿದ್ದರು. ಅದನ್ನು ನೋಡಿ ಸುದರ್ಶನದ ಮುಂದೆ ಇಡೀ ವರುಷ ಓಡಿ ಓಡಿ ದಣಿದು ದುರ್ಬಲವಾಗಿ ಬಿದ್ದುಕೊಂಡಿರುವ ಅವರ ನರನಾಡಿಗಳೆಲ್ಲ ಚೇತರಿಸಿಗೊಂಡು ರಸಾಸ್ವಾದಕ್ಕೆ ಅಣಿಯಾದವು. ಅಂದಿನ ಅಡುಗೆಯ ಸುವಾಸಕ್ಕೆ ದುರ್ವಾಸರ ಹೃದಯದ ದುರ್ವಾಸವೆಲ್ಲ ಹೋಗಿ ಅಲ್ಲಿ ಶಾಂತಿಸೌಹಾರ್ದಗಳು ವಾಸವಾಗಿದ್ದವು. ಪ್ರಸನ್ನ ಚಿತ್ತದಿಂದ ಗೋವಿಂದನನ್ನು ನೆನೆಯುತ್ತ ಅವರು ಅಂದು ಊಟ ಮಾಡಿದರು. ಅವರ ಹೊಟ್ಟೆ ಮುನ್ನೂರಾಅರವತ್ತು ದಿನಗಳ ಹಸಿವನ್ನೆಲ್ಲ ಅಂದು ಹಿಂಗಿಸಿಗೊಂಡಿತ್ತು, ಮಹಾರಾಜನ ಮನಸ್ಸು ತೃಪ್ತಿಗೊಂಡಿತ್ತು.

ಅವರ ಊಟವಾದ ಬಳಿಕ ಅವರ ಅಪ್ಪಣೆಯನ್ನು ತೆಗೆದುಕೊಂಡು ಮಹಾರಾಜನು ಆ ವರ್ಷಾಂತ ದಿನದಲ್ಲಿ ಪಾರಣೆ ಮಾಡಿದ. ದುರ್ವಾಸರು ತನ್ನಲ್ಲಿ ಊಟಮಾಡಿ ತೃಪ್ತರಾದರಲ್ಲ ! ಎನ್ನುವ ಮಾತೇ ಅವನಿಗೆ ತೃಪ್ತಿಯನ್ನು ತಂದಿತ್ತು, ಆ ತೃಪ್ತಿಯಿಂದಲೇ ಅವನ ಹೊಟ್ಟೆಯೂ ತುಂಬಿತ್ತು, ಆ ತುಂಬಿದ ಹೊಟ್ಟೆಯನ್ನು ಅಂದಿನ ಪಾರಣೆಯ ಪಕ್ವಾನ್ನದ ಊಟವು ತುಳುಕಿಸಿತ್ತು, ಅವರಿಬ್ಬರ ಮನದ ದುಗುಡವನ್ನೂ ಅಳುಕಿಸಿತ್ತು, ಗುಣಲುಬ್ಧರಾದ ದುರ್ವಾಸರ ಬಾಯಿಂದ ತನ್ನಷ್ಟಕ್ಕೆ ತಾನೇ ಇಂಥ ಉದ್ಗಾರ ಹೊರಬಿದ್ದಿತು.

''ಅಹೋ ಅನಂತದಾಸಾನಾಂ ಮಹತ್ವಂ ದೃಷ್ಟಮದ್ಯ ಮೇ ।
ಕೃತಾಗಸೋಽಪಿ ಯದ್ರಾಜನ್ ಮಂಗಲಾನಿ ಸಮೀಹಸೇ'' ।

ನಾಮುಡಿದ ಕೇದಗೆಯ

ಅವಳಷ್ಟು ಮುಡಿಯಲಿ

'ಗೌರಿ' ಯುವನಾಶ್ವನ ಷಟ್ಟದರಸಿಗೆ ತಕ್ಕ ಹೆಸರು. ಅವಳು ಮಹಾರಾಜನಿಗೆ ಸರ್ವಮಂಗಲೆಯಾದರೆ ಪ್ರಜೆಗಳಿಗೆಲ್ಲ ಅಂಬಿಕೆಯಾಗಿದ್ದಳು. ಅವಳಲ್ಲಿ ಸತಿಯ ಸದ್ಗುಣಗಳಿದ್ದರೆ ರತಿಯ ರೂಪವಿತ್ತು.

ಚೆಲುವಿಕೆ ಅರಳಿ ಅವಳ ಮುಖವಾಗಿತ್ತು, ಹವಳ ಹೂತು ಅವಳ ಅಧರವಾಗಿತ್ತು. ಅವಳ ಒಂದು ಕಣ್ಣುಸನ್ನೆಗೆ ಹತ್ತು ಹುಣ್ಣಿಮೆಗಳು ಹಬ್ಬಿನಿಲ್ಲುತ್ತಿದ್ದವು. ಒಂದು ಮಂದಹಾಸದಲ್ಲಿ ಶತಮಂದಾರಗಳು ಎಸಳು ತೆಗೆಯುತ್ತಿದ್ದವು.

ಅವಳ ಈ ಅಪರೂಪವಾದ ರೂಪದಿಂದ ಯುವನಾಶ್ವನ ಪ್ರೇಮ ಪುಷ್ಪವು ನಿತ್ಯೋನ್ಮೀಲಿತವಾಗಿಯೇ ಅಮ್ಲಾನವಾಗಿ ಉಳಿಯುತ್ತಿತ್ತು. ಅವಳ ರಾಗಾನುರಾಗಗಳಿಂದ ರಸಸಿಂಚಿತವಾದ ಅವನ ಪ್ರೇಮವಲ್ಲರಿಯು ಸರ್ವದಾ ಸಂಪೂರ್ಣ ಪಲ್ಲವಿತವಾಗಿ ನಿಂತುಕೊಂಡಿತ್ತು.

ಆದರೆ ಎಷ್ಟೋ ದಿನಗಳು ಕಳೆದರೂ, ಅನೇಕ ವರುಷಗಳು ಉರುಳಿದರೂ ಅವರ ಆ ಪ್ರಣಯದ ಬಳ್ಳಿಗೆ ಫಲ ಬಿಡಲಿಲ್ಲ. ಸಂತಾನದ ಅಭಾವ ಅವಳ ಪ್ರಾಯದ ಉಪವನದಲ್ಲಿ ಹೇಮಂತಗೀತವನ್ನು ಹೇಳಿತ್ತು. ಸಂತತಿಯ ಚಿಂತೆ ಆ ರಾಜದಂಪತಿಗಳ ಪ್ರಣಯದ ಹಸುರಿನಲ್ಲಿ ಎಸರು ನೀರು ಹೊಯ್ದಿತ್ತು. ಅವರ ಹರೆಯದ ಹೊಂಗನಸಿನಲ್ಲಿ ಪುತ್ರಚಿಂತೆಯು ಸಿಡಿಲಿನ ಮರಿ ಗುಡುಗುವಂತೆ ಮಾಡಿತ್ತು.

ಪುರೋಹಿತರ ಸಲಹೆ ಸೂಚನೆಗಳಂತೆ ಆ ದಂಪತಿಗಳು ಅನೇಕ ವ್ರತ ಉದ್ಯಾಪನೆಗಳನ್ನು ಮಾಡಿದರು. ಕೆರೆ, ಕಾಲುವೆಗಳನ್ನು ಕಟ್ಟಿಸಿದರು. ಅನ್ನ ಛತ್ರ ಅರವಟ್ಟಿಗೆಗಳನ್ನು ದೇಶದ ತುಂಬ ಇಡಿಸಿದರು. ಕಂಡದೇವರಿಗೆಲ್ಲ ಕೈಮುಗಿದು ಹರಕೆಹೊತ್ತರು.

ಮಂತ್ರ, ತಂತ್ರ, ಔಷಧ ಉಪಚಾರ ಎಲ್ಲ ಪ್ರಯತ್ನಗಳೂ ಮುಗಿದವು. ಏನಾದರೂ ಅವರ ಬಾಳಿನ ಆಗಸದಲ್ಲಿ ಚಂದ್ರೋದಯವಾಗಲೇ ಇಲ್ಲ. ದುಃಖದ ಕಾಳರಾತ್ರಿ ಸರಿಯಲೇ ಇಲ್ಲ.

ಬಿಸಿಲಿಗಿಟ್ಟ ಕಿಸಲಯದಂತೆ ಮಹಾರಾಣಿಯ ಶರೀರ ಬಾಡಿಹೋಯಿತು. ಹಗಲು ಮುಗಿಲಿನಲ್ಲಿ ತಿರುವು ಒಗೆದ ಚಂದ್ರಬಿಂಬದಂತೆ ಅವಳ ಮುಖ ನಿಸ್ತೇಜವಾಯಿತು. ಕೊಯ್ದಿಟ್ಟು ಬಹಳ ದಿನವಾದ ಕಮಲದಂತೆ ಅವಳ ಕಣ್ಣುಗಳು ಕಾಂತಿಯನ್ನು ಕಳೆದುಕೊಂಡು, ಕೇವಲ ಕಾಣುವ ಯಂತ್ರವಾದವು ಅವಳ ಪ್ರಾಯದ ಕಾಯಕಾಂತಿ ಅಸ್ತವಾಗಿ ಅದರ ಛಾಯೆಮಾತ್ರ ಉಳಿದಿತ್ತು.

ಒಂದುದಿನ ಅವಳು ಅರಮನೆಯ ವಸಂತೋದ್ಯಾನದಲ್ಲಿ ತಾನಾಗಿ ನೀರು ಹಾಕಿ ಬೆಳೆಯಿಸಿದ ಮಾವಿನ ಗಿಡದ ಆಲವಾಲಕಟ್ಟೆಯ ಮೇಲೆ ಕುಳಿತುಕೊಂಡಿದ್ದಳು. ಅವಳ ಶ್ರಮ ಸಾರ್ಥಕವಾಗಿ ಆ ಮಾಮರವು ಅಂದು ಕಾಯಿಬಿಟ್ಟಿತ್ತು.

ಅದನ್ನು ನೋಡಿ ಅವಳಿಗೆ ಆನಂದವಾಗುವದರ ಬದಲು ದುಃಖವೇ ಇಮ್ಮಡಿಸಿ ಹೋಯಿತು. ನೀರಾಗಿ ಚಿಮ್ಮಿತು. ಅವಳ ಕಣ್ಣೀರಿನಿಂದ ಆ ಗಿಡದ ಮಡಿ ತುಂಬಿ ನಿಂತಿತ್ತು.

ತಾನು ಬೆಳೆಯಿಸಿದ ಬಳ್ಳಿಗೆ ಹೂ ಬಿಟ್ಟು ಕಾಯಿ ಮೂಡಿತು. ಆದರೆ ತನಗೆ.....?

ಆ ಬಳ್ಳಿಗಿಂತ ತನ್ನ ಬಂಜೆಬಾಳು ಕಡೆಯಾಯಿತು ಎಂಬ ವಿಚಾರ ಅವಳ ಮಿದುಳುಗಳನ್ನು ಮುದ್ದೆಮಾಡಿತ್ತು. ಕರುಳು ಕಿವುಚಿತ್ತು. ಅಂಗೈ ಪೀಠದ ಮೇಲೆ ಮುಖವನ್ನು ಇರಿಸಿ ನಿಟ್ಟುಸಿರಿನಿಂದ ತುಟಿಯ ಹವಳದ ಕುಡಿಯನ್ನು ಬಾಡಿಸುತ್ತ ಕುಳಿತಿದ್ದಳು.

ತನ್ನ ಕಣ್ಣೀರಿನಿಂದ ತುಂಬಿದ ಆ ಎಳೆಗಿಡದ ಕಿರುಮಡಿಯಲ್ಲಿ ಯಾರದೋ ಪಡಿನೆಳಲು ಬಿದ್ದದ್ದನ್ನು ಕಂಡು ಅವಳು ಬೆಚ್ಚಿಬಿದ್ದು ಹಿಂದೆ ನೋಡಿದಳು. ಮಹಾರಾಜ ಯುವನಾಶ್ವನು ಸಜಲ–ನೇತ್ರನಾಗಿ ನಿಂತಿದ್ದ.

ಅದನ್ನು ನೋಡಿ ಗೌರಿ ಮಾತನಾಡದೇ ಮುಖ ತಗ್ಗಿಸಿದಳು. ಅವಳ ದುಃಖ ಮಹಾರಾಜನನ್ನು ಕಂಡು ಕೋಡಿಯಾಗಿ ಹರಿಯಿತು. ಆಲವಾಲವನ್ನು ತುಂಬಿತು.

ಮಹಾರಾಜ ಮೂಕನಾಗಿ ಅವಳನ್ನು ಹತ್ತಿರ ಎಳೆದುಕೊಂಡ. ಅವನ ಹೃದಯದಲ್ಲಿಯೂ ದುಃಖ ಅಂಚುಮಟ ತುಂಬಿತ್ತು. ಮಾತೂ ಕೂಡ ಅಲ್ಲಿ ಕರಗಿ ನೀರಾಗಿತ್ತು.

ರಾಣಿಯ ಗದ್ದವನ್ನು ಹಿಡಿದು ಎತ್ತಿದ. ನೀರಿನಲ್ಲಿ ಎರಡು ಮೀನಗಳಂತೆ ಕಣ್ಣುಗಳು ಸೋತು ತೇಲುತ್ತಿದ್ದವು. ಒಂದು ನಿಮಿಷ ರಾಜ ಆ ತೇಲ್ಗಣ್ಣುಗಳನ್ನು ನಿರುಕಿಸಿದ. ಅವುಗಳ ವೇದನೆ ಅರ್ಥವಾಗಿ ಆ ಮುಖವನ್ನೇ ಎತ್ತಿ ತನ್ನ ಎದೆಯಲ್ಲಿ ಅಡಗಿಸಿಕೊಂಡ.

ಅವನ ಕಣ್ಣೀರು ಅವಳ ಕೂದಲುಗಳನ್ನೆಲ್ಲ ತೊಯಿಸಿತ್ತು. ಅವಳ ಕಣ್ಣೀರು ಅವನ ಎದೆಗಂಧವನ್ನೆಲ್ಲ ತೊಳೆದಿತ್ತು. ಕಣ್ಣೊಳಗಿನ ನೀರೆಲ್ಲ ಆಗುವವರೆಗೆ ಇಬ್ಬರೂ ಅತ್ತರು. ಒಬ್ಬರೂ ಮಾತನಾಡಲಿಲ್ಲ. ಎಷ್ಟೋ ಹೊತ್ತಿನ ಮೇಲೆ ಇಬ್ಬರೂ ಮೌನವಾಗಿ ಅಂತಃಪುರಕ್ಕೆ ತೆರಳಿದರು.

ಮರುದಿನ ಮಹಾರಾಣಿ ಮಹಾರಾಜನಿಗೆ ಸುಪ್ರಭಾತವನ್ನು ಕೋರಲಿಕ್ಕೆ ಬಂದಾಗ ಅವಳ ಮೋರೆಯು ಪ್ರಸನ್ನ ಪಂಕೇರುಹವಾಗಿತ್ತು. ಪತಿಯ ಪಲ್ಲವ ಪಾದಗಳಿಗೆ ಭಕ್ತಿಯಿಂದ ವಂದಿಸಿದಳು. ಅವನ ಕಾಲೂಬಳಿಯನ್ನು ತೆಗೆದು ತಿಲಕವನ್ನಾಗಿ

ತೀಡಿಕೊಂಡಳು. ಕಣ್ಣಿಗೆ ಹಚ್ಚಿಕೊಂಡು ಮೈಯೆಲ್ಲ ಸವರಿಕೊಂಡಳು.

ಬಹುದಿನದ ಮೇಲೆ ಅವಳ ಮೊಗದ ಮೊಗಸಾಲೆಯಲ್ಲಿ ನಗೆನವಿಲಾಡುವದನ್ನು ನೋಡಿ ರಾಜನ ಮನಸ್ಸು ಗೆಲುವುಗೊಂಡಿತು.

ಮಹಾರಾಣಿ ಗೌರಿಯ ಆ ಉತ್ಫುಲ್ಲಗಲ್ಲಗಳಿಗೆ ಅನುರಾಗ ಗುಲ್ಲು ಕೊಡಬೇಕೆಂದು ರಾಜನು ರಸಾಲಸ ದೃಷ್ಟಿಯಿಂದ ಅವಳನ್ನು ಕಟಾಕ್ಷಿಸುತ್ತ ಮುಂದೆಸರಿದ. ರಾಣಿ ತನ್ನ ಮಿಂಚು ಮೈಯನ್ನು ಕೊಂಚ ಆಚೆ ಸರಿಸಿ ನಿಂತುಕೊಂಡು,

''ನನ್ನದೊಂದು ಬಯಕೆ''ಎಂದಳು.

''ಒಂದೇಕೆ ! ನೂರುವರ ಕೇಳು. ಇದೋಕೊಟ್ಟೆ'' ಎಂದ ರಾಜ.

''ಒಂದು ಮಾತನ್ನು ನಡೆಯಿಸಿಕೊಡುತ್ತೇನೆಂದು ಮೊದಲು ವಚನ ಕೊಡಿರಿ'' ಎಂದಳು ರಾಣಿ.

ರಾಜ ತನ್ನ ತರಂಗದೋಳಿನಿಂದ ಅವಳನ್ನು ಬರಸೆಳೆದು ಅವಳ ಓಷ್ಠಪಲ್ಲವದಲ್ಲಿ ತನ್ನ ಪ್ರೀತಿಯನ್ನು ಟಿಪ್ಪಣಿಸಿ,

''ಅದೇನು ಹೇಳಬಾರದೇ ಮೊದಲು'' ಎಂದು ಕೇಳಿದನು.

ರಾಣಿಯ ಮುಖವು ಒಮ್ಮೆಲೇ ಗಂಭೀರವಾಯಿತು. ರಾಜನ ತೋಳಸೆರೆಯಿಂದ ಬಿಡಿಸಿಗೊಂಡು ಸಾವಧಾನವಾಗಿ ಹೇಳಿದಳು.

''ನೀವು ನನಗಾಗಿ, ನಮ್ಮ ರಾಜ್ಯಕ್ಕಾಗಿ ಇನ್ನೊಂದು ಮದುವೆಮಾಡಿಕೊಳ್ಳಬೆಕು. ಯಾರ ಪುಣ್ಯದಿಂದಾದರೂ ಮನೆಗೊಂದು ಮಗುವಾಗಿ ಅಂಗಳದಲ್ಲಿ ತಿಂಗಳು ತೊಳಗಿದರೆ ಸಾಕು'',

ಎಂದಂದು ರಾಜನ ಭಾವವನ್ನು ಅವನ ಹಣೆಯ ಗೆರೆಗಳಲ್ಲಿ ಓದತೊಡಗಿದಳು.

ಅದನ್ನು ಕೇಳಿ ಆಶ್ಚರ್ಯದಿಂದ ಹುಬ್ಬುಏರಿಸಿ ರಾಜ ಕೇಳಿದ

''ಗೌರಿ ನಾನು ಅಷ್ಟು ಕಠೋರನೆಂದು ತಿಳಿದುಕೊಂಡಿರುವೆಯಾ !

''ಅಲ್ಲದೇ ಮತ್ತೇನು ?''

''ಹೆಣ್ಣು ಜೀವನದ ಒಂದು ಬಯಕೆಯನ್ನೂ ಪೂರೈಯಿಸದ ಗಂಡಸರು ಕಠೋರವೇ ಅಲ್ಲವೇ ?''

''ಇನ್ನೊಂದು ಮದುವೆಯಾದರೂ ಮಕ್ಕಳು ಆಗೇತೀರುವವೆಂದು ಯಾರು ಹೇಳುವರು ?''

''ಅದೃಷ್ಟವಿದ್ದರೆ ಏಕಾಗಬಾರದು?''

''ಆ ಅದೃಷ್ಟವಿದ್ದರೆ ಈ ಹೆಂಡತಿಯಲ್ಲಿಯೇ ಸಂತತಿ ಆಗಬಹುದಿತ್ತು, ನಮ್ಮ ದೈವದಲ್ಲಿಲ್ಲದಾಗ ನಾನು ಮದುವೆಮಾಡಿಕೊಂಡರೂ ಆಗುವದಿಲ್ಲ'',

''ನನ್ನ ಅದೃಷ್ಟದಲ್ಲಿ ಇರದಿದ್ದರೆ ನಿಮ್ಮ ಅದೃಷ್ಟದಲ್ಲಿ ಯಾಕೆ ಇರಬಾರದು ! ಅದಕ್ಕಾಗಿಯೇ ಇನ್ನೊಂದು ಸಂಬಂಧ ಮಾಡಿಕೊಂಡು ನಿಮ್ಮ ದೈವ ಪರೀಕ್ಷೆ ಏಕೆ ಮಾಡಬಾರದು''.

''ಅದಕ್ಕೂ ಆಗದಿದ್ದರೆ ?''

''ಆ ಅಮಂಗಳ ಮಾತನ್ನು ಈಗೇಕೆ ಆಡುವದು ! ಮಕ್ಕಳಾಗುವದಿಲ್ಲವೆಂದು ನಿರ್ಧಾರಮಾಡಿಕೊಂಡು ಯಾರೂ ಮದುವೆಯಾಗುವದಿಲ್ಲ, ಈಗಂತೂ ನೀವು ನನಗೆ ವಚನಕೊಟ್ಟಿದ್ದೀರಿ. ಈಗ ಮದುವೆಗೆ ಸಿದ್ಧರಾಗಿರಿ''

''ನಿನ್ನ ಸವತಿಗೆ ಮಕ್ಕಳಾದರೆ ನಿನಗೇನು ಬಂದಂತಾಯಿತು?''

''ನನ್ನ ಸವತಿಯ ಮಗ ನಿಮ್ಮ ಮಗನಲ್ಲವೇ ? ನಿಮ್ಮ ಮಗ ನನ್ನ ಮಗನಲ್ಲವೇ?''

ಮನೆಯ ಗಿಡದಲ್ಲಿ ಹೂವಾಗದಾಗ ಬೇರೆಯ ಹೂವನ್ನು ಮುಡಿದುಕೊಂಡರೆ ಆನಂದವಾಗುವದಿಲ್ಲವೇ ! ಎಂದು ಆಕ್ಷೇಪಿಸಿ ತನ್ನ ಎದೆಯ ಹಂಬಲವನ್ನು ಬಿಚ್ಚುಮಾತಿನಲ್ಲಿ ಬಿಡಿಸಿ ಇಡಹತ್ತಿದಳು ಗೌರಿ.

''ಹೆಣ್ಣು ಜೀವಕ್ಕೆ ಎರಡೇ ಹಂಬಲ. ಪತಿಯನ್ನು ಪ್ರೀತಿಪಡಿಸುವದು. ಮಕ್ಕಳನ್ನು ಆಡಿಸುವದು. ಇದರಲ್ಲಿ ಒಂದು ಸುಖವನ್ನು ನನಗೆ ಕೊಟ್ಟು ಇನ್ನೊಂದನ್ನು ಕೊಡಲು ನೀವೇಕೆ ಇಷ್ಟು ಜಿಪುಣತನವನ್ನು ತೋರಿಸುವಿರಿ ?''.

ಮೇಲಾಗಿ ಇಂದಿನ ರಾಜ ಮಹಾರಾಜರೆಲ್ಲ ಅನೇಕ ಹೆಂಡಂದಿರನ್ನು ಮಾಡಿಕೊಂಡು ಸುಖಪಡುತ್ತಲಿರುವಾಗ ನೀವು ಮಾತ್ರ ಒಬ್ಬಳೇ ಹೆಂಡತಿಯಿಂದಲೇ ಅದೃಷ್ಟ ಪರೀಕ್ಷೆಯನ್ನು ಏಕೆ ಮಾಡಬೇಕು. ಬರಲಿರುವ ನನ್ನ ತಂಗಿಗೆ ನಿಮ್ಮಿಂದ ಮಗು ಹುಟ್ಟಿದಾಗ ಅದನ್ನು ಲಾಲಿಸದಷ್ಟು ನಾನು ಕ್ರೂರಳೆಂದು ಬಗೆದಿರಾ !

ಮಾತೃ–ಪ್ರೇಮದ ಜೊತೆಗೆ ನನ್ನ ಮನಸ್ಸಿನ ದೊಡ್ಡಿಸ್ತನವನ್ನು ತೋರಿಸಲಿಕ್ಕಾದರೂ ನೀವು ಮದುವೆ ಮಾಡಿಕೊಂಡು ಒಂದು ಅವಕಾಶವನ್ನು ಕಲ್ಪಿಸಿಕೊಡಿರಿ. ಅಂದರೆ ನಿಮಗೆ–ಗಂಡಸರಿಗೆ ಹೆಣ್ಣಿನ ಹೃದಯ ಎಷ್ಟು ಉದಾರ ಎಷ್ಟು ದಯಾಲು, ಎಷ್ಟು ಅನಸೂಯ, ಎನ್ನುವುದರ ಕಲ್ಪನೆಯಾದರೂ ಬಂದೀತು.

ನಿಮ್ಮ ಮಗು ಯಾರ ಹೊಟ್ಟೆಯಿಂದಲಾದರೂ ಹುಟ್ಟಿಬರಲಿ ಅದು ನನ್ನದೇ ಮಗು. ಅದನ್ನು ನಾನೇ ಪಾಲಿಸುವೆ, ನಾನೇ ಲಾಲಿಸುವೆ. ನಾನೇ ಜೋಗುಳಿಸುವೆ, ನಾನೇ ಆಡಿಸುವೆ, ಉಣ್ಣಿಸುವೆ, ತಿನ್ನಿಸುವೆ ನನ್ನ ತೊಡೆಯ ಮೇಲೆಯೇ ಚುಕ್ಕುತಟ್ಟಿಮಲಗಿಸುವೆ. ನನಗೆ ಗೊತ್ತು ಅದು ಖಂಡಿತವಾಗಿಯೂ ನನ್ನನ್ನು ಅಮ್ಮ ಎಂದೇ ಕರೆಯುವದು.............'' ರಾಣಿಯ ಮೈಯಲ್ಲಿ ಮಾತೃತ್ವದ ಆವೇಶ

ಬಂದಂತಾಗಿ ಮಾತು ಮಾಲೆಮಾಲೆಯಾಗಿ ಬರುತ್ತಿದ್ದವು. ಅವಳ ತಾಯ್ತನಸಿನ ಬಯಕೆಗಳೆಲ್ಲ ಶಬ್ದಸಲಿಲದಲ್ಲಿ ಹರಿದು ಬರಹತ್ತಿದವು.

ರಾಜನಿಗೆ ಅದನ್ನು ನೋಡಿ ಕನಿಕರವೆನಿಸಿತು. ಅವಳ ಮನೋರಥವನ್ನು ಪೂರಯಿಸದಿದ್ದರೆ ಅವಳ ಅತೃಪ್ತ ಆಶೆಗಳು ಅವಳ ಮಿದುಳನ್ನೇ ಮೇದುತಲೆ ಕೆಡಿಸಬಹುದೆಂದು 'ಹೂ' ಗುಟ್ಟಿದ.

ರಾಣಿಗೆ ಪರಮಾನಂದವಾಯಿತು. ಮರುಮುಹೂರ್ತದಲ್ಲಿಯೇ ಲಾವಣ್ಯಲಕ್ಷ್ಮಿಯೋರ್ವಳನ್ನು ತಂದು ಮದುವೆ ಮಾಡಿಸಿದಳು.

ಹೊಸ ಹೆಂಡತಿಯ ಜೊತೆಗೆ ಹಸೆಯ ಮೇಲೆ ಕುಳಿತ ಮಹಾರಾಜನನ್ನು ನೋಡಿ ಸೊಸೆಮಗನನ್ನು ಕಂಡ ನಲ್ದಾಯಿಯಂತೆ ಹಿಗ್ಗಿದಳು.

ಕಂಕಣಕಟ್ಟಿಕೊಂಡು ಆ ತಂಗಿ ಬಂದು ತನಗೆ ನಮಸ್ಕಾರ ಮಾಡಿದಾಗ ''ಅಷ್ಟಪುತ್ರ ಸೌಭಾಗ್ಯವತೀ ಭವ'' ಎಂದು ಎದೆತುಂಬಿ ಬಾಯಿತುಂಬಿ ಆಶೀರ್ವಾದ ಮಾಡಿದಳು.

ಪ್ರತಿದಿನವೂ ಅವಳು ಸಜ್ಜೆ ಮನೆಯಿಂದ ಹೊರಗೆ ಬಂದು ಹಿರಿಯಕ್ಕನಿಗೆ ನಮಸ್ಕರಿಸುವಾಗ ಆ ನವವಧುವಿನ ಮುಖದಲ್ಲಿ ಹೊಸಜೀವ ಹೊಳವು ಹಾಕಿದ ಲಕ್ಷಣಗಳೇನಾದರೂ ಇವೆಯೇ ಎಂದು ಪರಿಕಿಸುತ್ತಿದ್ದಳು.

ರಾಜ ಅವಳ ಹುಚ್ಚು ಹಂಬಲಕ್ಕಾಗಿ ಕ್ಷಣ ನಗೆಬಂದು ನಕ್ಕರೂ ಅವಳ ಅಳಲಿನ ಅಳವನ್ನು ನೆನೆದು ಕಂಬನಿದುಂಬುತ್ತಲಿದ್ದ.

ಲಾವಣ್ಯಲಕ್ಷ್ಮಿಯು ಬ್ರಹ್ಮದೇವರು ಅಪ್ಸರೆಯರ ಮೂರ್ತಿಗಳನ್ನು ಎರಕಹಾಕಿ ತೆಗೆಯಲು ಮಾಡಿದ ಚೆಲುವಿನ ಪಡಿಯಚ್ಚಿನಂತಿದ್ದಳು.

ಯೌವನ ಆದೀಗ ಅವಳ ಕುಸುಮಕೋಮಲ ಅಂಗಗಳಲ್ಲಿ ಮುಸುಕು ತೆಗೆಯುತ್ತಲಿದ್ದಿತು. ಮೀಸಲು ಮುರಿಯದ ಅವಳ ಪೇಶಲ ಶರೀರ ರಾಜನಿಗೆ ರಸಕವಲವಾಗಿತ್ತು.

ಆ ಅನಾಘ್ರಾತಪುಷ್ಪದಲ್ಲಿ ಜೇಂಗೊಡ ತುಂಬಿ ತುಳುಕುವದನ್ನು ಕಂಡು ಅವನ ದುಂಬಿಮನಸ್ಸು ಆನಂದದಿಂದ ಝೇಂಕರಿಸಿತು. ಅತ್ತ ಕಾಮನ ಪುಷ್ಪಚಾಪ ಠೇಂಕರಿಸಿತು. ಶೃಂಗಾರ ಸಂಹಿತೆಯ ಪ್ರಣಯದ ಪ್ರಣವ ಓಂಕರಿಸಿತು. ರಸರಾತ್ರಿಗಳು ಎಷ್ಟೋ ಕಳೆದವು.

ಆದರೆ ಫಲವಿಲ್ಲ, ಪುತ್ರನಿಲ್ಲ.

ಪಟ್ಟದರಸಿ ಗೌರಿಗೆ ಬಹಳೇ ನಿರಾಸೆಯಾಯಿತು.

ಆಗ ಲಾವಣ್ಯಲಕ್ಷ್ಮಿ ತನ್ನ ಹಿರಿಯಕ್ಕ ಗೌರಿಯ ಮೇಲ್ಪಂಕ್ತಿಯನ್ನು ಅನುಸರಿಸಿ

ಮಹಾರಾಜನಿಗೆ ಬೇರೆ ಮದುವೆ ಮಾಡಿಕೊಳ್ಳಲು ತಿಳಿಸಿದಳು. ಹೊಸ ಹೊಸ ಹೆಣ್ಣಿನ ರಸಕೇಲಿಯ ರುಚಿಹತ್ತಿದ ರಾಜನ ಮುದುಕ ಮನಸ್ಸು ಸಮ್ಮತಿಯನ್ನು ಸೂಚಿಸಿತು.

ವಾಸವಿ ರಾಜನ ಮೂರನೆಯ ಮಾಸದ ಹೂವಾಗಿ ಬಂದಳು. ಮಹಾರಾಜ ಅವಳ ಪ್ರಾಯದ ಮಧುಕೋಶವನ್ನು ಮೀಸಲು ಮುರಿದಾಗ ಅವನ ಪ್ರಣಯ ಪಿಪಾಸೆ ನೂರು ನಾಲಿಗೆಗಳನ್ನು ಚಾಚಿನಿಂತಿತ್ತು.

ಅವಳ ಅಂಗರಾಗ ಅವನಲ್ಲಿ ಅನಂಗರಾಗವನ್ನು ಹುಟ್ಟಿಸಿತು. ಅವಳ ಹುಬ್ಬುಗಳು ಅವನ ಕಣ್ಣಿಗೆ ಹಬ್ಬವನ್ನುಂಟುಮಾಡಿದ್ದವು. ಅವಳ ಮಂದಹಾಸದಲ್ಲಿ ಅವನು ನಂದನವನವನ್ನೇ ಕಂಡ. ಅವಳ ಮಾತು ಮಾತುಗಳಲ್ಲಿಯೂ ಅಮೃತಬಳ್ಳಿಯೇ ಹೂತು ನಿಂತಂತೆ ಆ ರಾಜನಿಗೆ ಭಾಸವಾಗುತ್ತಿತ್ತು. ವಾಸವಿಯ ಪ್ರೇಮರಸದ ಆ ಸವಿ ಅವನಿಗೆ ಮೋದಕವೂ ಆಗಿತ್ತು, ಮಾದಕವೂ ಆಗಿತ್ತು.

ಅವಳ ಈ ಸ್ನೇಹಸಂಮೋಹಿನಿಯ ಸುಖೋನ್ಮಾದದಲ್ಲಿ ಮೈಮರೆತ ಅವನಿಗೆ ವರುಷಗಳುರುಳಿದ್ದು ಎಚ್ಚರವೇ ಇರಲಿಲ್ಲ. ಅಷ್ಟುಹಿತವಾಗಿತ್ತು ಅವಳ ಭೋಗ ಅಷ್ಟು ಸುಖವೆನಿಸಿತ್ತು ಅವಳ ರಾಗ.

ಆದರೆ ಎಷ್ಟೋ ದಿನಗಳು ಕಳೆದರೂ ಪುತ್ರಫಲವಾಗದಾಗ ಆ ರಾಗ ಪರಾಗದ ಕಣಕಣಗಳೂ ನಿರಾಸೆಯ ನಿಟ್ಟುಸುರಿಗೆ ಹಾರಿಹೋಗಿ ರಾಜ ಬೇರೊಂದೆಡೆಗೆ ತಿರುಗುವಂತಾಯಿತು.

ಹೀಗೆಯೇ ಮಕ್ಕಳ ಸಲುವಾಗಿ ಹೊಸ ಹೊಸ ಸಂಬಂಧಗಳನ್ನು ಬೆಳೆಸುತ್ತ ರಾಜ ನೂರು ಕೈಗಳಿಗೆ ಕಂಕಣಕಟ್ಟಿದ. ಪ್ರಮದಾಪ್ರಪಂಚದ ಶತಮುಖ ಸೌಂದರ್ಯವನ್ನೆಲ್ಲ ಸವೆದು ಸುಖಿಸಿದ. ಇಷ್ಟಾದರೂ ಸಂತತಿಯಾಗದ್ದರಿಂದ ಮುಂದೆ ಮದುವೆ ನಿಲ್ಲಿಸಿದ.

ಅವನಿಗೆ ಹೆಣ್ಣಿನ ಒಂದೊಂದು ಮೈಯಲ್ಲಿಯೂ ಒಂದೊಂದು ತರಹದ ಸುಖ ಎನಿಸುತ್ತಿತ್ತು. ಆ ನೂರು ಕಲಶಗಳಲ್ಲಿಯೂ ಪ್ರೀತಿ–ಮಧು ತುಂಬಿ ತುಳುಕಿತ್ತು. ಪ್ರತಿಯೊಂದಕ್ಕೂ ತನ್ನದೇ ಆದ ಒಂದು ರುಚಿ ಇತ್ತು, ಒಂದು ರಸ ಇತ್ತು, ಒಂದು ರಾಗವಿತ್ತು, ಒಂದು ರಂಗವಿತ್ತು.

ಸ್ತ್ರೀಸೌಂದರ್ಯದ ಒಂದೊಂದು ಎಸಳಿನಲ್ಲಿಯೂ ಎಂತಹ ಸ್ನೇಹ ಸೌಗಂಧ ಗಮಗಮಿಸಿ ಎಂಥ ಕಾಂತಿ ಕಳಕಳಿಸುವದು ಎನ್ನುವದನ್ನು ಕಂಡು ಉಂಡ ಅವನ ಮನಸ್ಸಿನಲ್ಲಿ ನಾರೀಕುಲದ ಬಗ್ಗೆ ಒಂದು ಆದರ ಮೂಡಿತು.

ಅವರ ಹೊರಮೈ ಮೆರಗಿಗಿಂತ ಒಳಮನದ ಮಮತೆ ಹಿರಿಮೆಗಳು ಅವನಲ್ಲಿ ಗೌರವಭಾವನೆಯನ್ನು ಉದ್ದೀಪಿಸಿದ್ದವು.

ಅವರೆಲ್ಲರ ತ್ಯಾಗ, ರಾಗ, ಅನಸೂಯೆ, ಅನಪೇಕ್ಷೆ, ಮಮತೆ, ಸೇವಾಭಾವ, ಸಂಯಮ, ಸೋದರೀವೃತ್ತಿ, ಉದಾರ ಪ್ರವೃತ್ತಿಗಳನ್ನು ನೋಡಿದ ಅವನಿಗೆ 'ನಾರಿಯೆಂದರೆ ನೆಲದಲ್ಲಿ ನಿಂತ ದೇವತೆ' ಎಂಬ ಭಾವನೆ ಬೆಳೆದು ಬಂದಿತು.

ತನ್ನ ಪುಣ್ಯಪ್ರಾಪ್ತವಾದ ನಿತ್ಯನವೋನವವಾದ ಉದ್ದಾಮ ಯೌವನ, ರಾಜಸಿರಿ, ಸಮಾನದೃಷ್ಟಿ, ಸ್ನೇಹಾಂತಃಕರಣಗಳಿಂದ ಎಲ್ಲರನ್ನೂ ತೃಪ್ತಿಪಡಿಸುತ್ತಲಿದ್ದ. ಆ ನೂರು ರೂಪಗಳೂ ತನ್ನ ಅಚ್ಚು ಮೆಚ್ಚಿನ ಪಟ್ಟದರಸಿಯಾದ ಗೌರಿಯ ನೂರು ಪ್ರತಿಗಳೇ ಎಂದು ಭಾವಿಸಿ ಪ್ರೀತಿಸುತ್ತಿದ್ದ.

ಆದರೆ ಇದರಿಂದ ಮಹಾರಾಣಿ ಗೌರಿಗೆ ಬಹಳ ನಿರಾಸೆಯಾಯಿತು. ಅವಳ ತಾಯೊಡಲಿನ ಹೆಬ್ಬಯಕೆಗಳೆಲ್ಲ ಬೋರ್ಗರೆದು, ಮೊರೆಮೊರೆದು, ಹೃದಯದ ಮರಳುಗಾಡಿಗೆ ಬಡೆದು ಅಡಗಿಹೋಗುತ್ತಲಿದ್ದವು.

ಆದರೂ ಕೂಸನ್ನು ಆಡಿಸುವ ಲಾಲಿಸುವ ಅವಳ ಹವ್ಯಾಸ ಮಾತ್ರ ಕಡಿಮೆಯಾಗಿರಲಿಲ್ಲ. ದಾರಿಕೇರಿಯಲ್ಲಿ ಆಡುವ ಮಕ್ಕಳನ್ನೂ ಕರೆತಂದು ಮುದ್ದಾಡಿ, ತಿನಿಸಿ, ಉಣಿಸಿ ಕಳಿಸುತ್ತಿದ್ದಳು.

ಆ ಬಂಜೆಯ ಕೈಮುಟ್ಟಿದರೆ ಮಕ್ಕಳು ಸೊರಗುವವೆಂದು ಪುತ್ರವತಿಯರು ಅನ್ನುವದು ಅವಳ ಕಿವಿಗೆ ಬಿದ್ದಿತು. ಅವಳ ಕಣ್ಣಿಗೆ ಬೀಳದಿರಲೆಂದು ಎಷ್ಟೋ ತಾಯಂದಿರು ತಮ್ಮ ಮಕ್ಕಳನ್ನು ಬಾಗಿಲು ಹಾಕಿ ಮನೆಯ ಅಂಗಳದಲ್ಲಿಯೇ ಆಡಬಿಡಹತ್ತಿದರು.

ಇದನ್ನೆಲ್ಲ ತಿಳಿದ ಅವಳ ಹೂವಿನೆದೆಗೆ ನೂರು ಬರೆಗಳನ್ನು ಎಳೆದಂತಾಯಿತು. ಸಾವಿರಚೇಳು ಒಮ್ಮೆಲೆ ಕಡಿದಂತಾಯಿತು.

ಅವಳ ಈ ಹೊಟ್ಟೆಯ ಉರಿಯನ್ನು ಕಡಿಮೆಮಾಡಲಿಕ್ಕಾಗಿ ಯುವನಾಶ್ವನು ಒಮ್ಮೆ ಆ ಗೌರಿಯನ್ನು ಅರಣ್ಯಕ್ಕೆ ಕರೆದೊಯ್ದ. ಅಲ್ಲಿಯ ಪುಣ್ಯಾಶ್ರಮಂಗಳ ಪ್ರಶಾಂತ–ವಾತಾವರಣದಿಂದ ಅವಳ ಮನದ ದುಗುಡ ಕಡಿಮೆಯಾಗಬಹುದೆಂದು ಎಣಿಸಿ ಆ ನಿಸರ್ಗದ ನೆಲೆವೀಡಿನಲ್ಲಿ ಕ್ಷೇತ್ರಯಾತ್ರೆಯನ್ನು ಕೈಕೊಂಡ.

ಅಲ್ಲಿಯ ನಿತಾಂತ–ಪ್ರಶಾಂತವಾದ ಒಂದು ತಪೋವನದಲ್ಲಿ ಅನೇಕ ಬ್ರಹ್ಮರ್ಷಿಗಳು ತಪೋನಿರತರಾಗಿದ್ದರು. ಸಾರ್ವಭೌಮನಾದ ಯುವನಾಶ್ವ ಅವರಿಗೆಲ್ಲ ಗೋಗಣ ಧಾನ್ಯರಾಶಿಗಳನ್ನು ಇತ್ತು ಮೇಲೆ ಧಾರಾಳವಾಗಿ ದಕ್ಷಿಣೆಯನ್ನೂ ಕೊಟ್ಟು ''ಸ್ವೀಕರಿಸಿ ಅನುಗ್ರಹಿಸಬೇಕು'' ಎಂದು ಪ್ರಾರ್ಥಿಸಿದ.

ಅವನ ಈ ಪ್ರಭೂತ ದಾನ ದಕ್ಷಿಣೆಗಳಿಂದ ಪ್ರೀತ–ಪ್ರಸನ್ನರಾದ ಆ ಬ್ರಹ್ಮಜ್ಞಾನಿಗಳು ತಮ್ಮ ಅತಿಥಿಯಾಗಿ ಬಂದ ಆ ರಾಜದಂಪತಿಗಳನ್ನು ಸ್ವಾಗತಿಸಿ

ಯೋಗಕ್ಷೇಮವನ್ನು ವಿಚಾರಿಸಿದರು. ಮಹಾರಾಜ ತನ್ನ ಮನದಳಲನ್ನು ಹೇಳಿದಾಗ ಅವರಿಗೆ ಬಹಳ ಕೆಡುಕೆನಿಸಿತು. ದಯಾಪೂರಿತರಾಗಿ ಆ ಬ್ರಹ್ಮಜ್ಞಾನಿಗಳು ಅವನಿಗೆ ಆಶ್ವಾಸನೆಯನ್ನೀಯುತ್ತ ಹೇಳಿದರು.

''ಮಹಾರಾಜ ! ಚಿಂತಿಸಬೇಡ, ನಾವೆಲ್ಲರೂ ಕೂಡಿ ನಿನ್ನ ಕಡೆಯಿಂದ ಒಂದು ಯಜ್ಞಮಾಡಿಸಿ ನಿನಗೆ ವಿಶ್ವವಿಜೇತನಾದ ಓರ್ವ ಪುಣ್ಯಪ್ರತಾಪಿಯಾದ ಪುತ್ರನು ಹುಟ್ಟುವಂತೆ ಮಾಡುತ್ತೇವೆ''.

ಅವರ ಮಾತು ರಾಜನಿಗೆ ಅಮೃತಪ್ರಾಯವಾಗಿ ಕಿವಿಗೆ ಆಪ್ಯಾಯನವಾದರೆ ರಾಣಿಗಂತೂ ಸರ್ವಾಂಗ ಸಂತರ್ಪಣೆಯನ್ನುಂಟುಮಾಡಿತ್ತು.

ಅವಳ ಮನಬನದಲ್ಲಿಯ ಆಶೆಯ ಬಳ್ಳಿ, ಬ್ರಹ್ಮರ್ಷಿಗಳ ಮಾತಿನ ಪಂಚಾಮೃತ–ಸಿಂಚನದಿಂದ ಮತ್ತೆ ಚಿಗಿತು, ಕಾತು, ಹೂತು, ನೆನೆಕೊನೆಯೇರಿ ನಿಂತಿತು.

ಅವಳ ಮನದ ಮುಗಿಲಿನಲ್ಲಿ ಎಂದೋ ಮುದುರಿ ಮುರಿದು ಹೋದ ಹಗಲುಗನಸುಗಳೆಲ್ಲ ಮತ್ತೆ ರಂಗುತುಂಬಿ ಹೊಂಬೆಳಕಿನಲ್ಲಿ ಹೊಳೆಯತೊಡಗಿದವು.

ರಾಜ ಅವರೆದುರು ಅಡ್ಡಬಿದ್ದು ''ಎಷ್ಟು ವೆಚ್ಚಬಂದರೂ ಅಡ್ಡಿಯಿಲ್ಲ. ಯಜ್ಞಮಾಡಿಸಿ ಪಿತೃಋಣದಿಂದ ತನ್ನನ್ನು ಉದ್ಧರಿಸಬೇಕು'' ಎಂದು ಬೇಡಿಕೊಂಡನು.

ಋತ್ವಿಜರೂ ಋಷಿಗಳೂ ಕೂಡಿದರು. ಬ್ರಹ್ಮಾಪರೋಕ್ಷ ಮಾಡಿಕೊಂಡ ಭೃಗುಋಷಿಗಳನ್ನು ಅಧ್ವರ್ಯುಗಳನ್ನಾಗಿ ಮಾಡಿ ಎಲ್ಲರೂ ಕೂಡಿ ಮಹಾರಾಜ ಯುವನಾಶ್ವನ ಕಡೆಯಿಂದ ಐಂದ್ರೀಇಷ್ಟಿಯನ್ನು ಮಾಡಿಸಿದರು.

ಭೃಗುಮುನಿಗಳ ಸಮರ್ಥವಾದ ನೇತೃತ್ವದಲ್ಲಿ ಏಳುದಿನ ಆ ಮಹಾಯಜ್ಞವು ನಿರ್ವಿಘ್ನವಾಗಿ ನೆರವೇರಿತು. ಮರುದಿನ ಅವಭೃತಸ್ನಾನ.

ಅದೇ ಯಜ್ಞದ ಕೊನೆಯಲ್ಲಿ ಮಂತ್ರಪೂತವಾದ ಪುಂಸವನ ಉದಕವನ್ನು ಎಲ್ಲ ಋಷಿಗಳೂ ಅಭಿಮಂತ್ರಿಸಿ, ಅವಭೃತಸ್ನಾನಾನಂತರ ಅವನ ನೂರು ಮಂದಿ ಹೆಂಡಂದಿರಿಗೆಲ್ಲ ಕೊಡಲಿಕ್ಕೆಂದು ಒಂದು ದೊಡ್ಡ ಕಲಶದಲ್ಲಿ ತುಂಬಿ ಆಗ್ನ್ಯಾಗಾರದಲ್ಲಿ ಇಟ್ಟಿದ್ದರು.

ಆ ಸಾಪ್ತರಾತ್ರದ ಯಜ್ಞದ ಏಳೂ ರಾತ್ರಿಗಳಲ್ಲಿ ನಿದ್ರೆ ಇರದ್ದರಿಂದ ಋಷಿಗಳೆಲ್ಲ ಅಂದು 'ಸಾಡೆ'ಯಾದ ಮದಿವೆ ಮನೆಯ ಬೀಗರಂತೆ ನಿಶ್ಚಿಂತೆಯಿಂದ ನಿದ್ದೆಹೋಗಿದ್ದರು.

ಇತ್ತ ಅಗ್ನ್ಯಾಗಾರದ ಬಹಿರ್ವಿತರ್ದಿಕೆಯ ಮೇಲೆ ವ್ರತಸ್ಥರಾದ ರಾಜ ರಾಣಿಯರು ಶುಚಿರ್ಭೂತರಾಗಿ ಒರಗಿದ್ದರು. ಮಹಾರಾಣಿಯ ಮನಸ್ಸು ಪುತ್ರೋತ್ಸವದ ಮುಂಗನಸಿನ ರಸಾನುಭೂತಿಯನ್ನು ಪಡೆಯುತ್ತಲಿತ್ತು.

ಮಹಾರಾಜನಿಗೆ ಸಾಯಂಕಾಲದವರೆಗೆ ಯಜ್ಞಕುಂಡದ ಉರಿಯೆದುರು ಕುಳಿತು ನಾಲಿಗೆ ಒಣಗಿಹೋಗಿತ್ತು. ಮಧ್ಯರಾತ್ರಿಯಲ್ಲಿ ನೀರಡಿಕೆಯಿಂದ ಅವನ ಗಂಟಲು ಕಿತ್ತಿಬರುವಂತಾಯಿತು. ತೃಷೆಯ ದಾಹ ಅನಿರ್ವಾಹವಾಯಿತು.

ಅವನು ಎದ್ದು ಒಳಗೆ ಅಗ್ನ್ಯಾಗಾರದಲ್ಲಿ ಹೋದ. ಅಲ್ಲಿ ಒಂದು ಮಾಡದಲ್ಲಿ ಜಲಪೂರ್ಣವಾದ ಮೃಣ್ಮಯ ಪಾತ್ರವನ್ನು ತುಂಬಿ ಇಟ್ಟಿತ್ತು. ಅದನ್ನು ಎತ್ತಿ ಗಟಗಟ ನೀರನ್ನೆಲ್ಲ ಕುಡಿದ. ಬಾಯಾರಿಕೆ ಶಾಂತವಾಗಿ ಹಾಯಾಗಿ ಮಲಗಿ ನಿದ್ರಿಸಿದ.

ಮರುದಿನ ಬೆಳಿಗ್ಗೆ ಋಷಿಗಳು ಸ್ನಾನಮಾಡಿ ಬಂದು ನೋಡುವಷ್ಟರಲ್ಲಿ ಯಜ್ಞೋದಕವನ್ನೆಲ್ಲ ಯಾರೋ ಕುಡಿದದ್ದು ಕಂಡುಬಂದಿತು. ಇದನ್ನು ಯಾರು ಕುಡಿದವರು ಎಂದು ಮಹಾಕೋಲಾಹಲವೇ ಪ್ರಾರಂಭವಾಯಿತು.

ಮಹಾರಾಜನು ಅದನ್ನು ಕೇಳಿ ಮುನಿಗಳ ಹತ್ತಿರ ಬಂದು ಮುನ್ನಾ ದಿನದ ರಾತ್ರಿಯಲ್ಲಿ ಗೊತ್ತಾಗದೇ ಆ ಯಜ್ಞೋದಕವನ್ನು ನಾನೇ ಕುಡಿದೆನೆಂದು ಹೇಳಿದನು.

ಅದನ್ನು ಕೇಳಿ ಋಷಿಗಳಿಗೆ ಅತ್ಯಾಶ್ಚರ್ಯವಾಯಿತು. ಅಂಜಿಕೆಯೂ ಆಯಿತು.

ಅಮೋಘವಾದ ಯಜ್ಞಾಭಿಮಂತ್ರಿತವಾದ ಪುಂಸವನ ಜಲವನ್ನು ಹೆಣ್ಣುಮಕ್ಕಳೇ ಕುಡಿಯಬೇಕು. ಅಂದರೆ ಅವರು ಖಂಡಿತವಾಗಿಯೂ ಗರ್ಭ ಧಾರಣೆಯಾಗಿ ಹಡೆಯುವರು. ಆದರೆ ಈಗ ರಾಜನೇ ಕುಡಿದುಬಿಟ್ಟದ್ದರಿಂದ ಮುಂದೇನು ಗತಿ !

ಇಷ್ಟುಜನ ಬ್ರಹ್ಮರ್ಷಿಗಳೆಲ್ಲ ಕೂಡಿ ಗರ್ಭೀಭವನದ ಮಂತ್ರಾಧಾನ ಮಾಡಿಟ್ಟ ನೀರು ವ್ಯರ್ಥವಂತೂ ಎಂದಿಗೂ ಆಗುವದು ಸಾಧ್ಯವಿಲ್ಲ ಇವನಂತೂ ಗಂಡಸು! ಮುಂದೇನು ಆಗುವದೋ ಏನೋ ಎಂದು ಎಲ್ಲರೂ ಚಿಂತಿಸಹತ್ತಿದರು.

ಆಗ ಯಜ್ಞಪತಿಗಳಾದ ಭೃಗುಋಷಿಗಳು ''ಗಾಬರಿಯಾಗಬೇಡಿರಿ. ಇದೆಲ್ಲವೂ ಭಗವತ್ಸಂಕಲ್ಪದಂತೆಯೇ ನಡೆದಿದೆ. ಅವನೇ ನಮಗೆಲ್ಲರಿಗೂ ಕಲ್ಯಾಣವನ್ನೇ ಮಾಡುವನು'' ಎಂದು ಸಮಾಧಾನ ಮಾಡಿದರು.

ಆದರೆ ಮುಂದೆ ಕೆಲವೇ ದಿನಗಳಲ್ಲಿ ರಾಜನ ಹೊಟ್ಟೆ ಉಬ್ಬಿತು. ಬಸಿರಾದ ಹೆಂಗಸರಂತೆ ದಿನೇ ದಿನೇ ಮುಂದೆ ಬರುತ್ತಲಿರುವ ತನ್ನ ಹೊಟ್ಟೆಯನ್ನು ನೋಡಿ ಅವನಿಗೇ ನಾಚಿಕೆಯಾಯಿತು. ಆದಕ್ಕೂ ಹೆಚ್ಚು ಗಾಬರಿಯಾಯಿತು. ಈ ಗರ್ಭದಿಂದ ತನಗೆ ಮೃತ್ಯುವೇ ಬಂದಿತೆಂದು ಅವನಿಗೆ ಅನ್ನಿಸಿತು.

ಅವನಿಗೆ ಗರ್ಭಿಣಿ ಹೆಣ್ಣು ಮಕ್ಕಳಂತೆ ಹೊಸ ಹೊಸ ಬಯಕೆಗಳು ಆಗಹತ್ತಿದವು.

ಗತಿ ಮಂದಗಾಮಿಯಾಯಿತು. ಊಟದಲ್ಲಿ ಅರುಚಿ ಹುಟ್ಟಿತು. ಮುಖ ಬಿಳುಪಾಯಿತು. ಮೈಕೈಗಳಲ್ಲಿ ಆಲಸ್ಯ ತುಂಬಿತು.

ಇಂಥ ಗುಡ್ಡಹೊಟ್ಟೆ ಹೊತ್ತುಕೊಂಡು ರಾಜಸಭೆಯಲ್ಲಿ ಕೂಡಲಿಕ್ಕೂ ಅವನಿಗೆ ಲಜ್ಜೆ ಎನಿಸಹತ್ತಿತು. ಜನರಿಗೆ ಮುಖ ತೋರಿಸದಂತಾಯಿತು ಅವನು ಗಾಬರಿಯಾಗಿ

ಓಡಿ ಅರಣ್ಯಕ್ಕೆ ಬಂದ.

ಭೃಗುಋಷಿಗಳು ಆ ಬಸಿರಾದ ರಾಜನನ್ನು ತಮ್ಮ ಆಶ್ರಮದಲ್ಲಿಯೇ ಇಟ್ಟುಕೊಂಡರು. ಏನೂ ಗಾಬರಿಯಾಗಬೇಡವೆಂದು ಹೇಳಿದರು.

ಒಂಬತ್ತು ತಿಂಗಳು ತುಂಬಿದ ಬಳಿಕ ಯಥಾಪ್ರಕಾರ ಅವನಿಗೆ ಬೇನೆಗಳು ಸುರುವಾದವು. ರಾಜರಾಣಿಯರ ಎದೆಗಳು ಒಡೆದು ನೀರಾದವು. ಕಣ್ಣೆಲ್ಲ ಕರಗಿ ನೀರಾದವು. ಮುಂದೇನು ಎಂದು ಕಾತರಿಸಿ ಭೃಗುಋಷಿಯ ಕಡೆಗೆ ಧಾವಿಸಿದರು.

ಆಗ ಭೃಗುಋಷಿಗಳು ಅವರಿಗೆಲ್ಲ ಕಣ್‌ಸನ್ನೆಯಿಂದಲೇ ಸುಮ್ಮನಿರಲು ಹೇಳಿ ಶಲ್ಯತಂತ್ರದಲ್ಲಿ ನಿಷ್ಣಾತರಾದ ಸುಶ್ರುತಾಚಾರ್ಯರನ್ನು ಕರೆಯಿಸಿ ತೋರಿಸಿದರು. ಸುಶೃತರು ಭೃಗುಋಷಿಗಳ ಆಜ್ಞೆಯಂತೆ ಸೂಕ್ಷ್ಮವಾದ ಉದರವಿದಾರಣದ ಆಯುಧಗಳಿಂದ ರಾಜನ ಹೊಟ್ಟೆಯನ್ನು ಹರಿದು ಕೂಸನ್ನು ಸುರಕ್ಷಿತವಾಗಿ ಹೊರಗೆ ತೆಗೆದರು. ಮಹಾರಾಜನ ಹೊಟ್ಟೆಯನ್ನು ಮತ್ತೆ ಹೊಲಿದು ಗಿಡಮೂಲಿಕೆಯ ರಸ ಲೇಪನಮಾಡಿ ಮೊದಲಿದ್ದಂತೆ ಮಾಡಿದರು.

ಹೊಟ್ಟೆಯನ್ನು ಹರಿದುತೆಗೆದ ಆ ಕೂಸು ಬಹಳ ಮುದ್ದು ಮುದ್ದಾಗಿತ್ತು. ನೂರು ಜನ ಬ್ರಾಹ್ಮಣರ ವೇದಮಂತ್ರಗಳಿಂದ ಪ್ರಸೂತವಾದ ಆ ಕೂಸಿನ ಅಂಗಾಂಗಗಳಲ್ಲಿಯೂ ಪಾವಿತ್ರ್ಯ ಸೂಸುತ್ತಿತ್ತು.

ಯಜ್ಞಾಗ್ನಿಯ ಅನುಗ್ರಹದಿಂದ ಆ ಎಳೆಕಳಲಿನ ಕಿರುಗಣ್ಣುಗಳಲ್ಲಿಯೂ ವಿಲಕ್ಷಣವಾದ ತೇಜ ತಾಂಡವವಾಡುತ್ತಿತ್ತು.

ಮುಖವಂತೂ ಸೂರ್ಯಮಂಡಲವನ್ನೇ ಸಾಣೆಹಿಡಿದು ಸಣ್ಣದುಮಾಡಿ ಆ ಪುಟ್ಟಕೊರಳಿನ ಮೇಲೆ ಮಾಟಾಗಿ ಕೂಡಿಸಿದಂತೆ ಒಪ್ಪುತ್ತಿತ್ತು.

ಚಂದ್ರಮನ ಮರಿಯಂತಿದ್ದ ಆ ಕೂಸನ್ನು ಕಂಡ ಗೌರಿಯ ಹಿಗ್ಗಿಗೆ ಅವಳ ಹೃದಯ ಕಿರುದಾಗಿತ್ತು. ಉಕ್ಕುವ ಅಂತಃಕರಣದಿಂದ ಅವಳು ತನ್ನ ನಳಿದೋಳುಗಳಿಂದ ಎತ್ತಿ ಅದನ್ನು ತೊಡೆಯ ಮೇಲೆ ಕೂಡಿಸಿಗೊಂಡಳು.

ಮುಂದೆ ಕೆಲ ನಿಮಿಷಗಳಲ್ಲಿ ಹಸಿವೆಯಿಂದ ಆ ಕೂಸು ಅಳಹತ್ತಿತು. ಗೌರಿಯು ಅದನ್ನು ಪ್ರೇಮದಿಂದ ಅಪ್ಪಿ ಮುದ್ದುಸುರಿಸಿದಳು. ಕೂಸು ಹೆಚ್ಚು ಹೆಚ್ಚಾಗಿಯೇ ಚೀರಹತ್ತಿತು.

ಅವಳಿಗೆ ಏನು ಮಾಡಬೇಕೋ ತಿಳಿಯದಂತಾಯಿತು. ಎಷ್ಟೇ ಕರಳು ಕರಗಿ ನೀರಾದರೂ ಬಂಜೆ ಹೃದಯವಲ್ಲವೇ ! ಹುಟ್ಟಿದ ಕೂಸಿಗೆ ಅವಳು ಏನಿತ್ತು ಸಂತೈಸಬಲ್ಲಳು!

ರಾಜನೂ ಋಷಿಗಳೂ ದಿಙ್ಮೂಢರಾಗಿ ನಿಂತರು. ಕೂಸು ಒದರುತ್ತಲೇ ಇತ್ತು.

ಆ ಎಳೆಬತ್ತಿಗೆ ಬೇರೆ ಏನೂ ತಿನ್ನಲು ಬಾರದು. ತಿನಿಸಿದರೂ ದಕ್ಕಲಾರದು.

ಹೆತ್ತ ಹೊಟ್ಟೆಯಂತೂ ಗಂಡಸಿನದಾದುದರಿಂದ ಮೊಲೆಹಾಲು ಇಲ್ಲ. ಕೂಸಂತೂ ಕೆಟ್ಟದನಿಯಿಂದ ಒಂದೇಸಮನೇ ಕೂಗುತ್ತಲೇ ಇದೆ.

ಅದರ ದೀನಧ್ವನಿ ಆ ವನಾಂತರವನ್ನೆಲ್ಲ ತುಂಬಿತು. ಎಲ್ಲರೂ ಆ ಕೂಸಿನ ಶೋಕಾಲಾಪಕ್ಕೆ ಮೂಕಸಾಕ್ಷಿಗಳಾಗಿ ದಿಗ್ಭ್ರಮೆಗೊಂಡು ನಿಂತರು.

ಅಷ್ಟರಲ್ಲಿ ಆ ವಿಪಿನ ಗರ್ಭವನ್ನೆಲ್ಲ ಬೆಳ್ಳಂಬೆಳಗಿಸುತ್ತ ಒಂದು ಜ್ಯೋತಿರ್ಮೂರ್ತಿ ಕಾಣಿಸಿಗೊಂಡಿತು. ಎಲ್ಲರೂ ಅದರ ಪ್ರಭಾಪುಂಜದಿಂದ ಕಣ್ಣು ಕುಕ್ಕಿದಂತಾಗಿ ಸಿಡಿದು ಎದ್ದುನಿಂತರು.

ಆಗ ಭೃಗುಋಷಿಗಳು ಅದಕ್ಕೆ ನಮಸ್ಕರಿಸಿ ಕೂಸನ್ನು ಎತ್ತಿತಂದು ಆ ತೇಜೋಮೂರ್ತಿಯ ಕೈಯಲ್ಲಿ ಕೊಟ್ಟರು. ವ್ರತೋಪವಾಸಗಳಿಂದ ವಿವರ್ಣವಾದ ತಮ್ಮ ಮುಖದಲ್ಲಿ ನಗೆಯ ರೇಷೆಯೊಂದನ್ನು ತಂದು ಹೇಳಿದರು.

''ದೇವೇಂದ್ರ ! ಇದು ನಿನ್ನನ್ನು ಉದ್ದೇಶಿಸಿ ಮಾಡಿದ ಐಂದ್ರ್ಯಯಜ್ಞದಿಂದ ಹುಟ್ಟಿದ ಮಗು. ಇದು ಪ್ರಮಾದದಿಂದ ಗಂಡಸಿನ ಹೊಟ್ಟೆಯಿಂದಲೇ ಹುಟ್ಟಿಬಿಟ್ಟಿತು. ಈಗ ಹಸಿವೆಯೆಂದು ಚೀರುತ್ತದೆ. ಅದಕ್ಕೆ ಆಹಾರವನ್ನು ಕೊಡುವವನಾರು ?''.

''ನಾನು–

ನನ್ನನ್ನು ಕುಡಿದೇ ಆ ಕೂಸು ದೊಡ್ಡದಾಗುವದು.'' ಮಾಂಧಾಸ್ಯತಿ ಇತಿ ಮಾಂಧಾತ ಎಂದೇ ಮುಂದೆ ಅವನು ಜಗತ್ತಿನಲ್ಲಿ ಪ್ರಸಿದ್ಧನಾಗುವನು.

–ಎಂದ ದೇವರಾಜ ಪಿತೃತ್ವಾಭಿಮಾನದಿಂದ. ಅಳುತ್ತಿರುವ ಆ ಕೂಸನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ವಾತ್ಸಲ್ಯಪೂರ್ಣವಾಗಿ ನೋಡಿ ತನ್ನ ತರ್ಜನಿಯನ್ನು (ತೋರಬೆರಳು) ಅದರ ಬಾಯಲ್ಲಿಟ್ಟ.

ತಕ್ಷಣ ಅದು ಸುಮ್ಮನಾಗಿ ಜುರು ಜುರು ಅವನ ಬಟ್ಟನ್ನು ಚೀಪಹತ್ತಿತು. ಇಂದ್ರನು ತನ್ನ ಬೆರಳಿನಿಂದ ಅದಕ್ಕೆ ಅಮೃತವನ್ನು ಹನಿಹನಿಯಾಗಿ ಚೀಪಿಸಿದನು.

ಹೊಟ್ಟೆ ತುಂಬಿ ಆನಂದದಿಂದ ಅದು ಕಣ್ಣು ತೆಗೆದು ಇಂದ್ರನನ್ನು ನೋಡಿತು. ಮುದ್ದು ಮಂದಹಾಸ ಅದರ ಪುಟ್ಟತುಟಿಯ ಎಸಳುಗಳನ್ನು ಓರೆಮಾಡಿತ್ತು.

ಅದರ ಮುಗ್ಧ ಸೌಂದರ್ಯವನ್ನು ಕಂಡು ಇಂದ್ರನಿಗೆ ಮಮತೆ ತುಂಬಿ ಬಂದಿತು. ಅದರ ಹಾಲ್ಗಲ್ಲಗಳ ಮೇಲೆ ಪಟಪಟ ಮುದ್ದುಸುರಿಸಿದ. ಅದರ ನಯವಾದ ಕಪೋಲ ಕೆಂಗುಲಾಬಿಯ ಪಕಳೆಯಂತೆ ರಂಜಿಸಿತು.

ರೇಶಿಮೆಯ ಗುಂಜಿನಂತಿರುವ ಅದರ ಎಳೆಗೂದಲುಗಳನ್ನು ನಯವಾಗಿ ನೇವರಿಸಿ ಹಣೆಯನ್ನು ಚುಂಬಿಸಿದನು.

ತಲೆಯ ಮೇಲೆ ಕೈಯಿಟ್ಟು ಅಂತಃ ಕರಣಪೂರ್ವಕವಾಗಿ ಆಶೀರ್ವದಿಸಿ ಆ ಕೂಸನ್ನು ಎತ್ತಿ ಅಲ್ಲಿಯೇ ನಿಂತಿರುವ ಗೌರಿಯನ್ನು ಕರೆದು–

“ಇಗೋ, ಇದು ನಿನ್ನ ಮಗು. ಇದಕ್ಕೆ ನಾನೀಗ ಅಮೃತಪ್ರಾಶನ ಮಾಡಿಸಿದ್ದೇನೆ. ಇದು ಇನ್ನು ಅಳುವದಿಲ್ಲ, ಇದು ನಿನ್ನ ಮಾತೃಹೃದಯದ ವಾತ್ಸಲ್ಯಮಮತೆಗಳಿಗಾಗಿ ದೈವದತ್ತವಾದ ಕರುಳಿನಕೊಡುಗೆ” ಎಂದು ಹೇಳಿ ಅವಳ ಉಡಿಯಲ್ಲಿ ಹಾಕಿದನು.

ಅವಳ ಕಣ್ಣು ರಸ ತುಂಬಿದ ಬಟ್ಟಲಾಗಿದ್ದವು. ಒಡಲು ಹಿಗ್ಗಿನ ಕಡಲಾಗಿತ್ತು. ಹರ್ಷಾತಿರೇಕದಿಂದ ಪುಲಕಿತರಾದ ರಾಜ ರಾಣಿಯರು ಕೈಮುಗಿದು ನರಗಳು ಉಬ್ಬಿ ಬಿಗಿದ ಕೊರಳನ್ನು ಸರಿಪಡಿಸಿಗೊಂಡು ಮಾತನಾಡಬೇಕೆನ್ನುವಷ್ಟರಲ್ಲಿ ಆ ಜಂಗಮಜ್ಯೋತಿ ಅದೃಶ್ಯವಾಗಿತ್ತು.

ಗೌರಿಗೆ ತನ್ನ ಕರುಳುಗಳಿಗೆ ಕೈಕಾಲುಮೂಡಿಯೇ ಆ ಕೂಸು ಆದಂತೆನಿಸಿತು.

ಗಂಟೆಗಟ್ಟಲೆ ಅವಳು ಮಾಂಧಾತನನ್ನು ಎವೆಯಿಕ್ಕದೇ ನೋಡುತ್ತಿದ್ದಳು.

ಚಿನ್ನದ ತೊಟ್ಟಲದಲ್ಲಿ ಮಲಗಿಸಿ ತನ್ನ ಹೃದಯವನ್ನೇ ತೂಗುವಂತೆ ಹಾಡಿ ಹಾಡಿ ತೂಗುತ್ತಿದ್ದಳು.

ಆ ಎಳೆ ಕಂದಮ್ಮನ ಮುಗ್ಧ ಮಂದಹಾಸದ ಎದುರು ಆವಳಿಗೆ ರಾಜ್ಯ, ಐಶ್ವರ್ಯ ಅಧಿಕಾರ ಸುಖಭೋಗ ಎಲ್ಲವೂ ಕಃಪದಾರ್ಥವೆನಿಸಿತು.

ಮಾಂಧಾತನ ನಗೆ ಅವಳ ಕಣ್ಣೆದರು ಹಗಲು ಹನ್ನೆರಡು ಗಂಟೆಯೂ ಹುಣ್ಣಿಮೆಯ ಬೆಳದಿಂಗಳು ಬೆಳಗುವಂತೆ ಮಾಡಿತ್ತು.

ತಾಯ್ತನದ ಬಯಕೆಗಳೆಲ್ಲ ತೃಪ್ತಿಗೊಂಡು, ಕರುಳಿನ ನಾಳನಾಳಗಳಲ್ಲಿಯೂ ಸಂತಸದ ತಣಿವೇರಿ ಅವಳ ಹೆಣ್ಣು ಜನ್ಮ ಸಾರ್ಥಕ್ಯ ಪಡೆದಿತ್ತು.

ಪುಟ್ಟ ಮಗುವನ್ನು ತೊಟ್ಟಲಲ್ಲಿ ಮಲಗಿಸಿ ಗೌರಿ ಮೈಮರೆತು ಜೋಗುಳ ಹಾಡುತ್ತಲಿದ್ದಳು. ಮರೆಯಲ್ಲಿ ನಿಂತು ಮಹಾರಾಜನು ಅದನ್ನು ಕೇಳಿ ಕಂಬನಿದುಂಬುತ್ತಲಿದ್ದ.

“ಲಾಲೀಯ ಹಾಡಿದರ ಲಾಲಿಸಿ ಕೇಳ್ಯಾನ
ತಾಯಿಹಂಬಲ ಮರೆತಾನ । ಕಂದನು ।
ತೋಳಬೇಡ್ಯಾನ ತೆಲೆಗಿಂಬ ॥

ತೊಟ್ಟಿಲೊಳಗಿನ ಕಂದ ತೋಳುಬೀಸುವ ಚಂದ
ರಟ್ಟೆನೊಂದಾವೋ ಎಲೆಕಂದ । ನಿಮ್ಮವ್ವ ।
ದೃಷ್ಟಿಮುರಿಲಾಕ ಅರಿಯಳು ॥

ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ ।
ಕೂಸು ಕಂದಯ್ಯ ಒಳಹೊರಗ । ಆಡಿದರ ।
ಬೀಸಣಿಕಿ ಗಾಳಿ ಸುಳಿದಾವ ॥
ಕಂದವ್ವ ಅತ್ತರ ಕಣಗೀಲ ಕಾತಾವ
ಒಣಗಿದ್ದ ಬಾಳಿ ಚಿಗತಾವ । ಬಾಲನ ।
ಬರಡಾಕಳೆಲ್ಲ ಹೈನಾಗೆ ॥

ತೂಗುತೊಟ್ಟಿಲಿಗೊಂದು ಪಾಗು ಪಟ್ಟಿಯ ಹಾಸಿ
ಮಾಗಾಯಿ ಮಗನ ಮಲಗಿಸಿ । ಅವರಮ್ಮ ।
ಜೋಗುಳ ಹಾಡಿ ಹಿಗ್ಗ್ಯಾಳ ॥

ಬಿಂದುಮತಿ

ಮಾಂಧಾತನ ರಾಜ್ಯದಲ್ಲಿ ಸೂರ್ಯಾಸ್ತವೇ ಆಗುತ್ತಿರಲಿಲ್ಲ. ಪೃಥಿವೀ ಆಪನ್ನು ಅಪ್ಪಿದಲ್ಲೆಲ್ಲ, ನೆಲ ತಲೆ ಎತ್ತಿದಲ್ಲೆಲ್ಲ ಅವನ ಶಾಸನವಿದ್ದುದರಿಂದ ಒಂದಿಲ್ಲ ಒಂದುಕಡೆ ಅವನ ರಾಜ್ಯದಲ್ಲಿ ಸೂರ್ಯ ತೊಳಗುತ್ತಲೇ ಇರುತ್ತಿದ್ದನು.

ರಾಜ್ಯಾರೋಹಣ ಮಾಡಿದಾಗ ಅವನಿಗೆ ಇನ್ನೂ ಶೈಶವ. ಹಾಲ್ಗಲ್ಲದ ಆ ಹಸುಳೆಯನ್ನು ಬಹು ಸುಲಭವಾಗಿ ಸೋಲಿಸಿ ಅವನ ವಿಶಾಲವಾದ ಸಾಮ್ರಾಜ್ಯವನ್ನು ತಾವು ವಶಪಡಿಸಿಕೊಳ್ಳಬಹುದೆಂಬ ದುರಾಶೆಯಿಂದ ಅನೇಕ ರಾಜ ಮಹಾರಾಜರು ಅವನ ಮೇಲೆ ಏರಿಬಂದರು.

ಆದರೆ ಸಿಂಹದ ಮರಿಯಂತಿದ್ದ ಮಾಂಧಾತನು ತನ್ನ ಅತುಲಬಲದಿಂದ ಅವರೆಲ್ಲರನ್ನೂ ಲೀಲಾಜಾಲವಾಗಿ ರಣರಂಗದಲ್ಲಿ ಸೋಲಿಸಿದ. ಚಿಕ್ಕತನದಲ್ಲಿಯೇ ಧ್ರುವ, ಪ್ರಲ್ಹಾದರಂತೆ ಭಗವಂತನನ್ನು ಆರಾಧಿಸಿ ತಪಃಪ್ರಭಾವದಿಂದ 'ಅಜಗವ' ಎಂಬ ಧನುಸ್ಸನ್ನೂ ಅನೇಕ ಶಸ್ತ್ರಾಸ್ತ್ರಗಳನ್ನೂ ಸಂಪಾದಿಸಿದ್ದನು. ಅವುಗಳ ಬಲದಿಂದ ದಂಡೆತ್ತಿ ಬಂದ ವೈರಿಗಳ ತಂಡವನ್ನೆಲ್ಲ ತುಂಡರಿಸಿ ಮೂರು ಲೋಕದ ಗಂಡನಾಗಿ ನಿಂತುಕೊಂಡ.

ಇವನ ಮೇಲೆ ದಾಳಿಮಾಡಿದ ಅಂಗಾರರಾಜನ ಮುಖವು ಅಂಗಾರದಂತೆ ಕಪ್ಪಿಟ್ಟಿತು.

ಮಲೆತುನಿಂತ ಮರುತ್ತನ ಮದವೆಲ್ಲ ಇಳಿದು ಮಾಂಧಾತನಿಗೇ ಶರಣು ಬರಬೇಕಾಯಿತು.

ಗುರುತರ ಗರ್ವೋದ್ರೇಕದಿಂದ ಗುಡುಗಾಡಿ ಏರಿಬಂದ ಗಯರಾಜನ ಸೇನೆ ಎಲ್ಲ ಆ ಅಭಿನವ ಅಭಿಮನ್ಯುವಿನ ಶರಪಂಜರದಲ್ಲಿ ಸೆರೆಸಿಕ್ಕು ತೊಳಲಾಡಿತು.

ಕೃಪಾಳುವಾದ ಬಾಲರಾಜ ಅವರೆಲ್ಲರನ್ನು ಕ್ಷಮಿಸಿ ಬಿಟ್ಟುಬಿಟ್ಟನು.

ಆದರೆ ಇವರೆಲ್ಲರಿಗಿಂತ ಪ್ರಚಂಡ ಪರಾಕ್ರಮಿಯಾದ ಬೃಹದ್ರಥನ ದಾಳಿ ಮಾತ್ರ ಉಗ್ರಭೀಷಣವಾಗಿತ್ತು. ಅವನ ಬಲಾಢ್ಯವಾದ ಸೇನಾಸಾಗರದ ತೊತ್ತುಳಿದಾಟಕ್ಕೆ ಭೂಮಿ ಬಿರಿಯುತ್ತಿತ್ತು. ಅವನ ಸೈನಿಕರ ರಣದುಂದುಭಿಯ ಮಂದ್ರನಾದ ಗಗನಗೋಪುರವನ್ನು ಭೇದಿಸಿತ್ತು. ಅವನ ಆ ಪ್ರಚಂಡ ಸಮರಸನ್ನಾಹವನ್ನು ನೋಡಿ ಮಾಂಧಾತನ ಸೇನಾಪತಿಗಳೆಲ್ಲ ಹೌಹಾರಿದರು.

ಆದರೆ ಮುಗ್ಧಮೂರುತಿಯಾದ ಮಗು ಮಾಂಧಾತ ಮಾತ್ರ ಆ ಸಂಗ್ರಾಮಸಂಭ್ರಮವನ್ನು ನೋಡಿಯೂ ನಿಶ್ಚಿಂತನಾಗಿದ್ದನು.

ಅವನ ಮುಗುಳುನಗೆಯ ಬಗೆಯಲ್ಲಿ ಮೇರುಧೈರ್ಯವಿತ್ತು. ವೀರವೃತ್ತಿಯಲ್ಲಿ ಸ್ಥಾಣು ಸ್ಥೈರ್ಯವಿತ್ತು.

ಅವನು ಒಮ್ಮೆ ಸಹಜವಾಗಿ ಊರಹೊರಗೆ ಬಂದು ಸರಿಯುವ ಬೆಟ್ಟದಂತೆ ದಟ್ಟೈಸಿ ಬರುತ್ತಲಿರುವ ವೈರಿಸೇನೆಯನ್ನು ನಿರೀಕ್ಷಿಸಿದನು.

ಆನೆಗಳ ಹಿಂಡನ್ನು ಕಂಡ ಕಂಠೀರವಕುಮಾರನಂತೆ ಅವನ ಮೈಯಲ್ಲಿ ವೀರಶ್ರೀ ಸಂಚಾರವಾಯಿತು.

ಕಣ್ಣು ಬಿರುಸಿನ ಕುಳ್ಳಿಯಾದವು.

ಹುಬ್ಬು ಹೆದೆಯೇರಿಸಿದ ಬಿಲ್ಲಿನಂತೆ ಬಿಗಿದುನಿಂತಿತು.

ರೋಮರೋಮಗಳಲ್ಲಿಯೂ ಮಿಂಚಿನ ಹೊಳೆ ತುಳುಕಾಡಿದಂತಾಗಿ ಹಣೆಯ ನರಗಳೆಲ್ಲ ಉಬ್ಬಿನಿಂತವು.

ಕೋಪಾಟೋಪದ ಸಂಭ್ರಮಕ್ಕೆ ಅಧರ ಅದರಿ ಉದುರೀತೆಂದು ಅವನ ಕೆಳದುಟಿಯನ್ನು ಮೇಲಿನ ಹಲ್ಲು ಕಚ್ಚಿಹಿಡಿದವು.

ಕ್ಷಣಾರ್ಧದಲ್ಲಿ ಬತ್ತಳಿಕೆಯಿಂದ ಬಾಣಗಳನ್ನು ಹಿರಿದು ಅಜಗವಕ್ಕೆ ಹೂಡಿದನು. ಕೆಂಗಿಡಿಗಳನ್ನು ಕಾರುತ್ತ ಬಂದು ಬಿದ್ದಬಾಣಗಳು ವೈರಿವ್ಯೂಹದಲ್ಲಿ ಅಗ್ನಿತಾಂಡವವನ್ನು ನಡೆಯಿಸಿದವು.

ಹಾ ಹಾ ಎನ್ನುವದರೊಳಗಾಗಿ ಸಾವಿರಾರು ಬಾಣಗಳನ್ನು ಬಿಟ್ಟು ಶತ್ರುದಳದ ಸುತ್ತಲೂ ಬೆಂಕಿಯ ಬಲೆಯನ್ನೇ ನೇಯ್ದನು.

ಆ ಅಗ್ನಿಪಂಜರದ ತುಂಬೆಲ್ಲ ಸಿಡಿಲುಮೊಗ್ಗೆಗಳು ಸಿಡಿದು ಸೈನಿಕರ ರೋಮರೋಮಗಳಿಗೂ ಪಂಜು ಹಚ್ಚಿದಂತಾಯಿತು.

ಅವರೆಲ್ಲರೂ ಶಸ್ತ್ರಾಸ್ತ್ರಗಳನ್ನು ಒಗೆದು ತಮ್ಮ ಸೇನಾಪತಿ ಹಾಗೂ ರಾಜನಾದ ಬೃಹದ್ರಥನನ್ನು ವಿಚಾರಿಸದೇ 'ತ್ರಾಹಿ ತ್ರಾಹಿ' ಎಂದು ಕೈಮುಗಿದರು, ಸೇನಾಪತಿಯಾದರೂ ಸುಡುವ ಶರೀರದಿಂದಲೇ ಇದ್ದಲ್ಲಿ ಸಾಷ್ಟಾಂಗ ಹಾಕಿದನು. ಬೃಹದ್ರಥನು ಆ ಬಾಣವೃಷ್ಟಿಯಿಂದ ಕ್ಷತವಿಕ್ಷತನಾಗಿ ಓಡಿ ಹೋಗಿ ಉಳಿದುಕೊಂಡನು.

ಸೇನಾದಳದ ಶೋಕ ಸಂಭ್ರಮಗಳನ್ನು ನೋಡಿ ನೊಂದ ಮಾಂಧಾತ ಮಹಾರಾಜ ತನ್ನ ಅಗ್ನ್ಯಸ್ತ್ರಗಳನ್ನೆಲ್ಲ ಉಪಸಂಹರಿಸಿದ. ಶರಣು ಬಂದವರಿಗೆಲ್ಲ ಅಭಯ ನೀಡಿದ. ಅವರಿಗೆಲ್ಲ ಉಪಚಾರ ಆದರಾತಿಥ್ಯ ಮಾಡಿ ಕೊಟ್ಟುಕಳಿಸಿದ.

ಕೊಲ್ಲುತ್ತೇವೆಂದು ಬಂದವರು ಅವನ ಪ್ರೇಮಾದರಗಳಿಗೆ ಸೋತು ಪ್ರೀತಿಯಿಂದ ಹಾಡಿ, ಹೊಗಳಿ, ಹರಸುತ್ತ ಹೋದರು.

ಅದೇ ಮಾಂಧಾತನ ಕೊನೆಯ ಯುದ್ಧವಾಯಿತು. ಇದಾದ ಬಳಿಕ ಅಹಿಂಸಾ ಪ್ರಿಯನಾದ ಮಹಾರಾಜನು ಎಂದೂ ಹೆದೆಯೇರಿಸಲಿಲ್ಲ. ಬಾಣ ಬಿಡಲಿಲ್ಲ. ಪ್ರಾಣ ತೆಗೆಯಲಿಲ್ಲ.

ಜಗತ್ತಿನಲ್ಲಿಯ ಸಾಮಂತ ಸೀಮಾಂತರಾಲದ ಎಲ್ಲ ರಾಜ–ಮಹಾರಾಜರು ಸ್ವಸಂತೋಷದಿಂದ ಅವನಿಗೆ ಹೇರಳವಾಗಿ ಕಪ್ಪುಕಾಣಿಕೆಗಳನ್ನು ತಂದು ಒಪ್ಪಿಸಿದರು. ಕೈಕಟ್ಟಿ ತಲೆಬಾಗಿ ನಿಂತುಕೊಂಡರು.

ಇದರಿಂದ ಉತ್ಸಾಹಿತನಾದ ಮಾಂಧಾತ ಒಂದುನೂರು ಅಶ್ವಮೇಧ ಯಾಗಗಳನ್ನು ಬ್ರಹ್ಮವೃಂದದ ನೇತೃತ್ವದಲ್ಲಿ ನೆರವೇರಿಸಿದ. ಶತಾಶ್ವಮೇಧದ ಅವಭೃತಸ್ನಾನ ಸಮಾರಂಭಕ್ಕೆ ದಿಗ್ದೇಶಗಳ ರಾಜ–ಮಹಾರಾಜ, ಮುನಿ ಮನುಜರೆಲ್ಲರೂ ಆಗಮಿಸಿದ್ದರು.

ಅದರಂತೆ ಸೋಮವಂಶ ಲಲಾಮನಾದ ಶಶಬಿಂದು ಮಹಾರಾಜನೂ ಸಕುಟುಂ ಸಪರಿವಾರವಾಗಿ ಆ ಅಶ್ವಮೇಧಿಕ ಮಹಾಪರ್ವದ ಸಮಾರಂಭಕ್ಕೆ ದಯಮಾಡಿಸಿದ್ದನು.

ಮಹಾಯೋಗಿಯಾದ ಶಶಬಿಂದುವಿಗೆ ಬಿಂದುಮತಿ ಎಂಬ ಕನ್ಯೆಯಿದ್ದಳು.

ತ್ರಿಭುವನದ ಸೌಂದರ್ಯವನ್ನೆಲ್ಲ ಆಿದು ಅವಳ ಅಂಗಾಂಗಗಳಲ್ಲಿ ಒಟ್ಟಿದಂತಿತ್ತು. ಅವಳ ಕಂಣ್ಣಂಚಿನ ಒಂದು ಕಿರಣದಿಂದಲೇ ಕಮಲ ಕುಮುದಗಳು ಅಭಿಭೂತವಾಗಿದ್ದವು. ಸಂಜೆದುಟಿಯ ಒಂದು ಮಂದಹಾದಿಂದಲೇ ಚಂದ್ರಜ್ಯೋತ್ಸ್ನೆಯನ್ನು ಅವಳು ನಿಷ್ಪ್ರಭಗೊಳಿಸಿದ್ದಳು. ಆದ್ದರಿಂದ ಅವಳ ಮುಖಕ್ಕೆ ಉಪಮೆಯೇ ಇಲ್ಲದಂತಾಗಿ ಕವಿಗಳು ' ಅನನ್ವಯ ' ಎಂಬ ಹೊಸ ಅಲಂಕಾರವನ್ನು ಹುಡುಕಿ ತೆಗೆದೇ ಅದನ್ನು ಬಣ್ಣಿಸಬೇಕಾಗಿ ಬಂದಿತ್ತು.

ಅದರಲ್ಲಿಯೂ ಪ್ರಾಯದ ಚೈತ್ರಕ್ಕೆ ಅವಳ ಕಾಯದ ಕಲ್ಪಲತೆಯಲ್ಲಿ ಚೆಲ್ವಿಕೆ ಚಿಗುರೊಡೆದಿತ್ತು. ಅವಳ ಈ ಅನಿಂದ್ಯಸೌಂದರ್ಯರಾಶಿಯನ್ನು ಬಯಸಿ ಅನೇಕ ರಾಜ ಕುಮಾರರು ಶಶಬಿಂದುವಿನ ಹತ್ತಿರ ವಿವಾಹದ ಪ್ರಸ್ತಾಪವನ್ನೆತ್ತಿದ್ದರು.

ಆದರೆ ವೀರಕುಮಾರಿಯಾದ ಅವಳ ಅಭಿಪ್ರಾಯದಂತೆ ಶಶಬಿಂದುವು ಅವಳ ಸ್ವಯಂವರಕ್ಕೆ ಒಂದು ಘೋರ ಪಣವನ್ನು ಇಟ್ಟಿದ್ದನು. ಅದನ್ನು ಕೇಳಿಯೇ ಚಂಡವಿಕ್ರಮರಾದ ಎಂಥ ರಾಜಕುಮಾರರೂ ನಿರಾಶರಾಗಿ ಮರಳಬೇಕಾಗುತ್ತಿತ್ತು.

ಯೋಗೀಶ್ವರನಾದ ಶಶಬಿಂದುವಿಗೂ ಮತ್ತು ಧರ್ಮಾತ್ಮನಾದ ಬೃಹ ಸ್ಪತಿಕುಮಾರ ಕುಶಧ್ವಜನಿಗೂ ಪರಮಸ್ನೇಹವಿತ್ತು. ಇಬ್ಬರೂ ಆಧ್ಯಾತ್ಮ ಪ್ರವಣಮಾನಸರಾದುದರಿಂದ ಮುನಿವೃತ್ತಿಯಿಂದ ಧ್ಯಾನಲೀನರಾಗಿ ಬ್ರಹ್ಮ ಚಿಂತನದಲ್ಲಿ ಕಾಲಕಳೆಯುತ್ತಿದ್ದರು.

ಶಶಬಿಂದುವಿಗೆ ಬಿಂದುಮತಿಯಿದ್ದಂತೆ ಬ್ರಹ್ಮರ್ಷಿ ಕುಶಧ್ವಜನಿಗೂ ಮಾಲಾವತಿ ಎಂಬ ಶೀಲವತಿಯಾದ ಭಾರ್ಯೆಯಲ್ಲಿ ವೇದವತಿ ಎಂಬ ಮಗಳು ಇದ್ದಳು.

ಹುಟ್ಟಿನಿಂದಲೇ ಚೆಲುವು ನಲಿವುಗಳನ್ನು ಉಡಿಯಲ್ಲಿ ಕಟ್ಟಿಕೊಂಡೇ ಬಂದ ವೇದವತಿಯನ್ನು ಕಂಡ ಜನರೆಲ್ಲ 'ಮೋಕ್ಷ–ಲಕ್ಷ್ಮಿಯೇ ನೆಲಕ್ಕಿಳಿದು ಬಂದಿದ್ದಾಳೆ' ಎಂದು ಹೇಳುತ್ತಿದ್ದರು.

ಕುಶಧ್ವಜನಾದರೂ ಅವಳ ವಿಶ್ವವಿಲಕ್ಷಣವಾದ ಮುಖಶ್ರೀ, ಮಧುರಾಲಾಪ, ಮತ್ತು ಮುಗ್ಧಗುಣಗಳನ್ನು ಕಂಡು ತ್ರಿಭುವನಲಕ್ಷ್ಮಿಯೇ ಸ್ವಭವನಲಕ್ಷ್ಮಿಯಾಗಿ ಬಂದಿದ್ದಾಳೆಂದು ಭಾವಿಸಿದ್ದನು.

ಕುಶಧ್ವಜ ಹಾಗೂ ಶಶಬಿಂದುವಿನ ಮಿಥಃಸೌಹಾರ್ದ್ರದಿಂದ ಅವರ ಮಕ್ಕಳಾದ ವೇದವತಿ ಮತ್ತು ಬಿಂದುಮತಿಯರಲ್ಲಿಯೂ ಶೈಶವ–ಸಖ್ಯವೇರ್ಪಟ್ಟಿತ್ತು.

ಆ ಬಾಲಮಿತ್ರೆಯರು ವಯಸ್ಸಿಗೆ ಬಂದ ಬಳಿಕಾದರೂ ಒಬ್ಬರನ್ನೊಬ್ಬರು ಬಿಟ್ಟಿರುತ್ತಿರಲಿಲ್ಲ. ಶಶಬಿಂದುವಿನ ರಾಜಧಾನಿಯ ಸಮೀಪದ ಕಾನನದಲ್ಲಿಯೇ ಕುಶಧ್ವಜನ ಆಶ್ರಮವಿದ್ದುದರಿಂದ ವನಿತೆಯರ ಸ್ನೇಹಸಮ್ಮೇಲನಕ್ಕೆ ಅನುಕೂಲವಾಗಿತ್ತು.

ಯೌವನ–ಪ್ರಭಾತದ ಸಂಧ್ಯಾರಾಗದಲ್ಲಿ ಅವರಿಬ್ಬರೂ ಸಖಿಯರು ತಮ್ಮ ಬಾಳಿನ ಹೊಂಗನಸುಗಳ ಶೃಂಗಾರ ಗೋಪುರಗಳನ್ನು ಪರಸ್ಪರ ತೋರಿಸಿ ಆ ಸ್ವಪ್ನಮಧುವಿಗಾಗಿ ಅದೆಷ್ಟೋಸಲ ಕನವರಿಸಿದ್ದರು.

ಹರೆಯದ ಹಗಲುಗನಸುಗಳನ್ನೆಲ್ಲ ಎಳೆ ಎಳೆಯಾಗಿ ಕೂಡಿಸಿ, ಜೋಡಿಸಿ ಬಂಗಾರಬಾಳಿನ ಶೃಂಗಾರಗೀತಗಳನ್ನಾಗಿ ಹೆಣೆದು ಹಾಡಿದ್ದರು.

ಒಂದು ಜೀವ ಎರಡು ಗೂಡುಗಳಲ್ಲಿ ಮಿಡಿಯುತ್ತಿತ್ತು. ಒಂದು ಭಾವ ಜೋಡುಜೋಕಾಲಿಯನ್ನು ತೂಗುತ್ತಿತ್ತು.

ವೇದವತಿಯ ಅಪರೂಪವಾದ ರೂಪ, ಲಲಿತವಾದ ಲಾವಣ್ಯ, ವಿಲಕ್ಷಣವಾದ ಶ್ರೀಲಕ್ಷಣ ಹಾಗೂ ಅತಿಮಾನುಷವಾದ ಮತಿವೈಭವ ಮತ್ತು ಗುಣಶೀಲಗಳನ್ನು ಕಂಡು ಕುಶಧ್ವಜನು ಅವಳು ಸಾಕ್ಷಾತ್ ಲಕ್ಷ್ಮಿಯೆಂದೇ ನಿರ್ಧರಿಸಿ ಅವಳನ್ನು ಭಗವಾನ್ ನಾರಾಯಣನಿಗೇ ಧಾರೆಯೆರೆದು ಕೊಡಬೇಕೆಂದು ನಿರ್ಧರಿಸಿದ್ದನು.

ಲೋಕಮಾತೆಯ ಅಂಶಸಂಭೂತಳಾದ ಅವಳಾದರೂ ಮನುಷ್ಯಲಿಂಗಿಯಾದ ಆ ಪರಬ್ರಹ್ಮನ ಹೊರತು ಬೇರೆಯವರ ಪಾಣಿಸ್ಪರ್ಶವನ್ನೂ ಮಾಡೆನೆಂದು ಪ್ರತಿಜ್ಞೆಗೈದಿದ್ದಳು. ಆ ಲೀಲಾಮಾನುಷವಿಗ್ರಹದ ಪಾಣಿಗ್ರಹಣ ಮಾಡುವ ತನ್ನ ಸಂಕಲ್ಪವನ್ನು ಬಾಲ್ಯಸ್ನೇಹಿತೆಯಾದ ಬಿಂದುಮತಿಯೆದುರಿಗೆ ತಿಳಿಸಿದ್ದಳು.

ವೇದಮಂತ್ರಗಳನ್ನು ಉಚ್ಚರಿಸುತ್ತಲೇ ನೆಲದ ಮೇಲೆ ಅವತರಿಸಿದ ವೇದವತಿಯ ಯೋಗ್ಯತೆ ಮತ್ತು ಮತಿ–ಮಹತಿಗಳನ್ನೆಲ್ಲ ಕಣ್ಣಾರೆ ಕಂಡು 'ಇವಳು ಸಾಕ್ಷಾತ್ ಜಗಜ್ಜನನಿಯೇ' ಎಂದು ತಿಳಿದುಕೊಂಡ ಬಿಂದುಮತಿ ಅವಳ

ಮನೋರಥವನ್ನು ಅಭಿನಂದಿಸಿ ಇಂಥ ಲೋಕಮಾತೆ ತನಗೆ ಜೀವದಗೆಳತಿಯಾಗಿ ದೊರೆತದ್ದು ತನ್ನ ಭಾಗ್ಯವೆಂದೇ ಬಗೆದಿದ್ದಳು.

ಜಗತ್ತಿನಲ್ಲಿ ಮನುಷ್ಯರು ಯೋಚಿಸುವದು ಒಂದು, ವಿಧಿ ಬಗೆಯುವದೇ ಮತ್ತೊಂದು.

ವೇದವತಿಯ ಅಂಗಾಂಗಣದಲ್ಲಿ ಪ್ರಾಯದ ವಾಸಂತಿಕ ಸ್ಪರ್ಶಕ್ಕೆ ಸೌಂದರ್ಯದ ಸಹಸ್ರಾರವೇ ಉನ್ಮೀಲನಗೊಂಡು ನಿಂತಿತ್ತು.

ಆ ರೂಪರಸಾಸವಕ್ಕೆ ತರುಣರಾಜನ್ಯರ ತಂಡ ತುಂಬಿಯ ದಂಡಿನಂತೆ ಮೋಹಿಸಿಬಂದಿತ್ತು.

ಅವರಿಗೆಲ್ಲ ಕುಶಧ್ವಜನ ಒಂದೇ ಉತ್ತರ ''ನನ್ನ ಮಗಳು ವರಿಸುವದು ನರನನ್ನಲ್ಲ ನಾರಾಯಣನನ್ನು''

ಇದರಿಂದ ರಾಜಕುಮಾರರೆಲ್ಲ 'ನಾರಾಯಣ ಬರಲಿಲ್ಲ ಇವಳ ಮದುವೆ ಯಾಗಲಿಲ್ಲ. ಇವಳೊಬ್ಬ ಆಜನ್ಮ ಕನ್ಯಾಕುಮಾರಿ' ಎಂದಂದು ನಿರಾಶರಾಗಿ ಹಿಂದಿರುಗಿದ್ದರು.

ಆದರೆ ಶಂಭು ಎಂಬ ಓರ್ವ ದೈತ್ಯರಾಜನು ಅವಳ ಲಾವಣ್ಯದ ಪ್ರಥೆಯನ್ನು ಕೇಳಿ ಕುಶಧ್ವಜನ ಕುಟೀರಕ್ಕೆ ಬಂದನು.

ಅಲ್ಲಿ ವೇದವತಿಯ ಲಲಿತಲಾವಣ್ಯ ಸ್ಫುರಿತ ತಾರುಣ್ಯಗಳನ್ನು ಕಂಡು ಉದ್ಭ್ರಾಂತನಾದ ಆ ರಕ್ಕಸನು ಅವಳನ್ನು ತನಗೇ ಕೊಡಬೇಕೆಂದು ಕುಶಧ್ವಜನನ್ನು ಕೇಳಿದ.

ಅದಕ್ಕೆ ನಾರಾಯಣನ ಹೊರತು ಬೇರಾರಿಗೂ ಇವಳನ್ನು ನಾನು ಕೊಡುವದಿಲ್ಲವೆಂದು ಹೇಳಲು ಕೋಪದಿಂದ ಕಿಡಿಕಿಡಿಯಾದ ಮಧಾಂಧ ದುರ್ದಾನವನು ತಕ್ಷಣದಲ್ಲಿಯೇ ಆ ಕುಶಧ್ವಜನನ್ನು ಸಂಹರಿಸಿ ಸಿಂಹನಾದ ಮಾಡಹತ್ತಿದನು.

ಇದನ್ನು ನೋಡಿ ದುಃಖಿತಳಾದರೂ ವಿವೇಕಜಾಗರೂಕಳಾದ ಮಾಲಾವತಿಯು ''ಏನಾದರೂ ವೇದವತಿಯನ್ನು ಈ ದಾನವನಿಗೆ ಕೊಡಬಾರದೆಂದು'' ಯೋಚಿಸಿ ಮಗಳೊಂದಿಗೆ ಅಲ್ಲಿಯೇ ಆಶ್ರಮದ ಬಂದು ತರುಲತಾಗುಲ್ಮಗಳ ಹೊದರಿನಲ್ಲಿ ತಲೆಮರೆಸಿಗೊಂಡಿದ್ದಳು.

ಆಶ್ರಮದಲ್ಲೆಲ್ಲ ಹುಡುಕಾಡಿ ಎಲ್ಲಿಯೂ ವೇದವತಿಯನ್ನು ಕಾಣದೇ ನಿರಾಶನಾದ ಆ ಶಂಭುದೈತ್ಯನು ಹಿಂತಿರುಗಿ ತನ್ನ ಊರಿಗೆ ಹೋದನು.

ಮಾಲಾವತಿಯು ಹೊರಬಂದು ಮಗಳಿಗೆ ಹಿಮಾಲಯದ ನರನಾರಾಯಣರ ಆಶ್ರಮಕ್ಕೆ ಹೋಗಿ ಭಗವಂತನನ್ನು ಕುರಿತು ತಪಸ್ಸು ಮಾಡೆಂದು ಹೇಳಿ ತಾನು ಕುಶಧ್ವಜನ ಶವದೊಂದಿಗೆ ಚಿತೆಯನೇರಿದಳು.

ಪತ್ಯಂತರ್ಗತ ಪರಮಾತ್ಮನನ್ನು ಸ್ಮರಿಸುತ್ತಲೇ ಅಗ್ನಿನಾರಾಯಣನ ಉರಿನಾಲಿಗೆಯ ಜ್ವಲಜ್ವಾಲೆಗಳಿಗೆ ಆತ್ಮದೇಹವನ್ನು ಅರ್ಪಿಸಿದಳು.

ಶಶಬಿಂದುಮಹಾರಾಜನಿಗೆ ಈ ಸಮಾಚಾರ ತಿಳಿದು ಕುಶಧ್ವಜನ ಆಶ್ರಮಕ್ಕೆ ಧಾವಿಸಿ ಬರುವಷ್ಟರಲ್ಲಿ ಕಾರ್ಯವು ಮಿಂಚಿಹೋಗಿತ್ತು.

ಬ್ರಹ್ಮರ್ಷಿ–ದಂಪತಿಗಳು ಭಸ್ಮಾವಶೇಷರಾಗಿ ಅವರ ನಂದಿನಿಯಾದ ವೇದವತಿಯೂ ತಪಸ್ವಿನಿಯ ವೇಷದಲ್ಲಿ ಹಿಮಾಚಲಕ್ಕೆ ಹೊರಟುನಿಂತಳು. ಅವಳಿಗೆ ರಾಜ–ರಾಣಿಯರು–

''ಬಿಂದುಮತಿಯೊಂದಿಗೆ ಅರಮನೆಯಲ್ಲಿಯೇ ನೀನೂ ಓರ್ವ ರಾಜ ಕುಮಾರಿಯಾಗಿ ಇರು ಈ ಚಿಕ್ಕವಯಸ್ಸಿನಲ್ಲಿ ಅಂಥ ಘೋರ ತಪ ಬೇಡ'' ಎಂದು ಬೇಕಾದಷ್ಟು ಹೇಳಿದರೂ ತಪೋನಿಷ್ಠಳಾದ ಅವಳು ಪರಾವೃತ್ತಳಾಗಲಿಲ್ಲ.

ಪ್ರಾಣಸಖಿಯಾದ ಬಿಂದುಮತಿಯಂತೂ ಬಾಷ್ಪಸಿಂಧುವನ್ನೇ ಹರಯಿಸಿ ಬೇಡಿಕೊಂಡರೂ ವೇದವತಿಯು ''ನಾನು ನನ್ನ ಪತಿಯಾದ ನಾರಾಯಣನನ್ನು ಹೊಂದಲು ಹೊರಟಾಗ ನೀವಾರೂ ನನ್ನ ಮಾರ್ಗದಲ್ಲಿ ವಿಘ್ನವಾಗತಕ್ಕದ್ದಲ್ಲ'' ಎಂದು ನಿಷ್ಠುರವಾಗಿ ಹೇಳಿ ಹೈಮಾಚಲದ ಶೈಲಶ್ರೇಣಿಗಳನ್ನು ಮೋಕ್ಷದ ಮೆಟ್ಟಲುಗಳಂತೆ ಸರಸರ ಏರಿದಳು.

ಅಲ್ಲಿ ಮಾನಸ – ಸರಸ್ತೀರದಲ್ಲಿ ಪರ್ಣಕುಟೀರವೊಂದನ್ನು ಕಟ್ಟಿಕೊಂಡು ದಾಕ್ಷಾಯಣಿಯಂತೆ ಉಗ್ರತಪವನ್ನು ಕೈಕೊಂಡಳು.

ಅವಳ ವಿಧಿ ಇನ್ನೂ ಬೆನ್ನು ಬಿಟ್ಟಿರಲಿಲ್ಲ. ಜೀವಲೋಕದ ಮೌನಮಂಜೂಷಿಕೆಯಂತಿದ್ದ ವಿಜನವನಾಂತರದ ನಿತಾಂತನೀರವತೆಯಲ್ಲಿ ಆ ಮಹಿಳಾ–ಮುನಿಯು ಮೌನ–ಧ್ಯಾನ–ಪರಾಯಣಳಾಗಿ ಯೋಗಾಸನದಲ್ಲಿ ಕುಳಿತುಕೊಂಡಾಗ ಲಂಕೇಶ್ವರನಾದ ರಾವಣನು ಅಲ್ಲಿಗೆ ಬೇಟೆಗಾಗಿ ಆಗಮಿಸಿದನು.

ಆರ್ದ್ರ–ವಸನಾಧಾರಿಣಿಯಾದ ಅವಳ ಅರ್ಧವ್ಯಕ್ತ ಮುಗ್ಧ–ಸೌಂದರ್ಯ ರಾಕ್ಷಸೇಶ್ವರನ ಇಪ್ಪತ್ತು ಕಣ್ಣುಗ್ಗಳಲ್ಲಿಯೂ ರಾಗ–ರಸವನ್ನು ಚಿಮ್ಮಿಸಿತು.

ಋಷಿವೇಷವು ಹಾಗೂ ಅವಳ ಜಟಾವಲ್ಕಲಗಳು 'ನಿಜವಾದ ಚೆಲುವು ಅವಿಕಾರಿ' ಎಂಬ ಸೌಂದರ್ಯ–ಸತ್ಯವನ್ನು ಎತ್ತಿ ಸಾರುತ್ತಲಿದ್ದವು.

ಸಾಂಗಮೂರ್ತಿಯಾದ ಕಾಮನನ್ನು ಪಡೆಯಬೇಕೆಂದು ಸಾಕ್ಷಾತ್ ರತಿದೇವಿಯೇ ತಪಸ್ಸಿಗೆ ಕುಳಿತಂತೆ ಸರ್ವಾಂಗ–ಮನೋಹರಳಾಗಿ ತೋರುವ ಆ

ವೇದವತಿಯನ್ನು ಕಂಡು ಅವನ ಹೃದಯ–ಕುಂಡದಲ್ಲಿ ಕಾಮಾಗ್ನಿ ಪ್ರಜ್ವಲಿಸಿತು.

ಅವನಲ್ಲಿಯ ರಾಕ್ಷಸೀವೃತ್ತಿಯು ಕಾಮುಪ್ರವೃತ್ತಿಯೊಂದಿಗೆ ಪುಟಿದೆದ್ದು ರಾಗೋದ್ರೇಕದಿಂದ ಮದಾಂಧನಾದ ಅವನು ಅವಳ ನೀಲ ನೀಳವಾದ ಕೇಶಪಾಶದ ಅಂಚನ್ನು ಹಿಡಿದನು.

ತಕ್ಷಣದಲ್ಲಿ ಕೆರಳಿದ ಕೇಸರಿಣಿಯಂತೆ ಘೂತ್ಕರಿಸಿ ಕೊಸರಿಕೊಂಡು ಫೂತ್ಕರಿಸುತ್ತ ಅವಳು ರಾವಣನು ಮುಟ್ಟಿದ ಕೂದಲದ ತುದಿಯ ಭಾಗವನ್ನು ಉಗುರಿನಿಂದ ಆಗಲೇ ಕತ್ತರಿಸಿ ಒಗೆದು ''ಚಂಡಾಲ ! ದೂರಸರಿ'' ಎಂದು ಗರ್ಜಿಸಿದಳು.

ಕ್ರುದ್ಧನಾಗಿಣಿಯಂತೆ ಫರಫರಾಡಿಸುವ ಅವಳ ಉಗ್ರರೂಪ ಹಾಗೂ ಘೋರಗುಡುಗುಗಳನ್ನು ಕೇಳಿದ ಲಂಕಾಪತಿಯೂ ಹಾವುತುಳಿದವರಂತೆ ಹೌಹಾರಿ ಹೆದರಿ ದೂರಸರಿದು ನಿಂತುಕೊಂಡನು.

ಆಗ ಅವಳು ''ಪಾಪಾತ್ಮ ! ಶ್ರೀ ಹರಿಗೆಂದು ಮೀಸಲಾಗಿಟ್ಟ ಈ ದೇಹವನ್ನು ಕೇಶಾಂತದಲ್ಲಿ ನೀನು ಮುಟ್ಟಿದ್ದರಿಂದ ನಾಯಿಮುಟ್ಟಿದ ಗಡಿಗೆಯಂತೆ ಇದು ಕೆಟ್ಟುಹೋಯಿತು. ಇಂಥ ಚಾಂಡಾಲನ ಹಸ್ತಸ್ಪರ್ಶವಾದ ಶರೀರವನ್ನು ಭಗವಂತನಿಗೆ ಸಮರ್ಪಿಸುವದು ಹೇಗೆ ? ನಿನ್ನ ಕೈತಾಗಿದ ಈ ಕೆಟ್ಟ ದೇಹವನ್ನು ಇಲ್ಲಿಯೇ ಸುಟ್ಟು ದೇಹಾಂತರದಿಂದ ಆ ಭಗವಂತನನ್ನು ಆರಾಧಿಸುವೆನು'',

ಎಂದು ಹೇಳಿ ರಾವಣನ ಎದುರೇ ಅಗ್ನಿಪ್ರವೇಶಮಾಡಿಬಿಟ್ಟಳು. ಅವನು ಮುಟ್ಟಿದ ತನ್ನ ದೇಹವನ್ನು ಬೆಂಕಿಯಲ್ಲಿ ಈಡ್ಯಾಡಿದಳು.

ಅವಳ ಪಾತಿವ್ರತ್ಯದ ಉಗ್ರತೆ, ಉಜ್ವಲತೆಗಳನ್ನು ಕಂಡು ನಾಚಿದ ರಾವಣನ ಮುಖದ ಮೇಲೆ ಅಂದೇ ಮೃತ್ಯುಚ್ಛಾಯೆ ಕಾಣಿಸಿಕೊಂಡಿತು.

ಈ ವಾರ್ತೆಯನ್ನು ಕೇಳಿ ಬಿಂದುಮತಿಗೆ ವಜ್ರಾಘಾತವಾದಂತಾಯಿತು. ತನ್ನ ಪ್ರಿಯಸಖಿಯ ಪ್ರಾಣದುರಂತವನ್ನು ಕೇಳಿ ದುಃಖದೀರ್ಣವಾದ ಅವಳಿಗೆ ಜಗತ್ತೇ ಒಂದು ಜೀರ್ಣಾರಣ್ಯದಂತೆ ಹೇಯವೆನಿಸಿತು. ಜೀವನದಲ್ಲಿಯೇ ಒಂದು ಜಿಹಾಸೆ ಮೂಡಿ ಬದುಕೇ ಬೇಸರವಾಯಿತು.

ತನ್ನ ಜೀವದ ಗೆಳತಿಯ ಜೀವನ–ನೌಕೆ ಸಂಸಾರ ಸಮುದ್ರದ ದಂಡೆಯಲ್ಲಿಯೇ ಹೆಬ್ಬಂಡೆಯೊಂದಕ್ಕೆ ಬಡೆದು ಒಡೆದು ಪುಡಿಪುಡಿಯಾದದ್ದನ್ನು ಕಂಡು ರೋಸಿಹೋದ ಅವಳು ತನ್ನ ತಂದೆಗೆ–

''ನಾನು ಮದುವೆಯನ್ನೇ ಆಗುವದಿಲ್ಲ, ಒಂದು ವೇಳೆ ಮದುವೆಯಾಗುವದೇ ಆದರೆ, ''ಗೆಳತಿಯ ಬದುಕನ್ನೇ ಮಣ್ಣುಗೂಡಿಸಿದ ಆ ಮದಾಂಧ ರಾವಣನ್ನು ಗೆದ್ದುತಂದು ಅವನಿಗೆ ಪಾಪದ ಪ್ರಾಯಶ್ಚಿತ್ತವನ್ನು ಮಾಡಿಸಿದ ವೀರವರೇಣ್ಯನನ್ನೇ

ವರಿಸುವೆ'' ಎಂದು ಸ್ಪಷ್ಟವಾಗಿ ಹೇಳಿಬಿಟ್ಟಳು. ಅವಳ ಈ ಪ್ರತಿಜ್ಞೆಯನ್ನು ಕೇಳಿಯೇ ಜಗತ್ತಿನಲ್ಲಿಯ ಎಲ್ಲ ತರುಣರಾಜಕುಮಾರರು ನಡುಗಿಹೋಗಿ ಅವಳನ್ನು ಮದುವೆಯಾಗುವ ಆಸೆಯನ್ನೇ ಬಿಟ್ಟಿದ್ದರು.

ಅವಳ ಉದ್ವಿಗ್ನ ಹಾಗೂ ಉದಸ್ತವಾದ ಮನಸ್ಸಿಗೆ ಹೊಸ ಹೊಸ ಜನರ ಸಂಪರ್ಕ ಹಾಗೂ ಉತ್ಸವಸಮಾರಂಭಗಳಿಂದ ತುಸು ನೆಮ್ಮದಿ ಯುಂಟಾಗಬಹುದೆಂದು ಬಗೆದು ಶಶಬಿಂದುವು ಅವಳನ್ನು ಕರೆದುಕೊಂಡು ಮಾಂಧಾತನ ಶತಾಶ್ವಮೇಧಿಕ ಮಹೋತ್ಸವಕ್ಕೆ ಬಂದಿದ್ದನು.

ಉತ್ಸವಕ್ಕೆ ಬಂದ ಲಕ್ಷಾವಧಿ ಹೆಂಗಳೆಯರಲ್ಲಿ ಬಿಂದುಮತಿಯ ಸೌಂದರ್ಯ ತರುಣ–ಮಾಂಧಾತನ ಲಕ್ಷ್ಯವನ್ನು ಸೆಳೆಯದೇ ಇರಲಿಲ್ಲ.

ಯೌವನದ ಚೈತ್ರ–ಚುಂಬನಕ್ಕೆ ಅವಳ ಮೈ–ಬಳ್ಳಿಯಲ್ಲಿ ಹೂತುನಿಂತ ಸೌಂದರ್ಯ–ಸೌಗಂಧಿಕದ ಕಂಪಿಗೆ ಅವನ ಕಾಮನಾ–ಸಂಪುಟದ ಮುಚ್ಚಳ ಮೊದಲಬಾರಿಗೆ ತೆರೆದಂತಾಗಿತ್ತು. ಗೆಳತಿಯ ವಿರಹದುಃಖದಿಂದ ನೊಂದು ಬೆಂದ ಅವಳ ಪೇಲವ–ಪ್ರಕೃತಿಯು ಕಂದಿ ಕುಂದಿಹೋಗಿದ್ದರೂ, ಅವಳ ಅವಯವ–ಸಂಸ್ಥಾನವೇ ಅವನಿಗೆ ಆಕರ್ಷಕವಾಗಿತ್ತು.

ಆ ಪ್ರಕ್ಷೀಣ–ಮುಖ–ಮಂಡಲದಲ್ಲಿಯೂ ಚೆಲುವಿಕೆ ತನ್ನ ಮುದ್ರೆಯನ್ನು ಭಧ್ರವಾಗಿ ಒತ್ತಿದಂತಿತ್ತು. ಅವಳ ನೀಲ–ನಯನಗಳು ದುಃಖಾಶ್ರುಗಳ ಆಳದಲ್ಲಿ ಮುಳುಗಿಹೋಗದಂತೆ ಕಮಲದ ಕಾಂತಿಯನ್ನು ಎತ್ತಿಹಿಡಿದಿದ್ದವು. ತುಟಿರಂಗು–ತಾಂಬೂಲಗಳಿಲ್ಲದಿದ್ದರೂ ಅವಳ ಬಿಂಬಾಧರದಲ್ಲಿ ಸಂಜೆಯ ಸೊಬಗು ರಂಜಿಸುತ್ತಲಿತ್ತು. ಅವಳ ಸಡಿಲಿದ ಜಡೆಯ ತುದಿಯ ಹಿಂದೆಯೇ ಗರಿಗೆದರಿದ ಚೆಲುವು ನಿರಂತರವೂ ತೂಗಾಡುತ್ತಲಿತ್ತು. ಕಿಂಬಹುನಾ ! ಅವಳ ಅಂಗರಾಗವೇ ಮಾಂಧಾತನಲ್ಲಿ ಅಂದು ಅನಂಗರಾಗವನ್ನು ಹುಟ್ಟಿಸಿತ್ತು.

ಇಂಥ ಚೆಲುವಿನ ಪುತ್ಥಳಿಯು ಅಂದಿನವರೆಗೆ ಯಾರನ್ನೂ ಮದುವೆಯಾಗದೆ ಪ್ರೌಢಳಾಗಿದ್ದರೂ ಅನೂಢಳಾಗಿಯೇ ಉಳಿದದ್ದನ್ನು ನೋಡಿ ಅವನಿಗೆ ಅತ್ಯಾಶ್ಚರ್ಯವಾಯಿತು. ಅಂತಃಪುರದ ನರ್ಮ–ಸಚಿವರಿಂದ ಅವಳ ಅಕಾಲಿಕ ನಿರ್ವೇದ ಹಾಗೂ ವೀರಪ್ರತಿಜ್ಞೆ ಮತ್ತು ಮದುವೆಯ ಪಣಗಳನ್ನು ಕೇಳಿದ ಬಳಿಕ ಅವನ ಹೃದಯದಲ್ಲಿ ಕಾಮದ ಸ್ಥಾನವನ್ನು ಕ್ರೋಧ ಆವರಿಸಿತು.

ಕುಲಕನ್ನಿಕೆಯರ ಮಾನಹಾನಿ ಮಾಡಿ ಸ್ತ್ರೀ–ಕುಲ–ಕಂಟಕನಾದ ಲಂಕೇಶ್ವರನನ್ನು ಗೆಲ್ಲದೇ ಅಥವಾ ಕೊಲ್ಲದೇ ರಾಜಧಾನಿಗೆ ಮರಳಿ ಬರುವದಿಲ್ಲವೆಂದು ಸಂಕಲ್ಪಿಸಿದನು.

ಯಜ್ಞಕ್ಕೆ ಬಂದ ಜನರನ್ನೆಲ್ಲ ಗೌರವಿಸಿ ಅವರವರ ಊರಿಗೆ ಕಳಿಸಿದ ಬಳಿಕ ಲಂಕೆಗೆ ದಾಳಿಯಿಟ್ಟ. ತನ್ನ ಚಂಡಪರಾಕ್ರಮದಿಂದ ಅಪರಂಪಾರ ರಾವಣಸೇನೆಯನ್ನೆಲ್ಲ ಸೋಲಿಸಿ ಕೊನೆಗೆ ಆ ದೈತ್ಯರಾಜನನ್ನೇ ಸಕುಟುಂಬ ಸೆರೆಹಿಡಿದನು.

ಲಂಕೆಯ ಅರಮನೆಯ ಮೇಲೆ ತನ್ನ ಸೂರ್ಯಾಂಕಿತವಾದ ಪತಾಕೆಯನ್ನು ನೆಟ್ಟು ರಾವಣನನ್ನು ಬಂದಿಯನ್ನಾಗಿ ಮಾಡಿಕೊಂಡು ತನ್ನ ರಾಜಧಾನಿಗೆ ಮರಳಿ ಹೊರಟನು.

ಅವನ ಈ ಅಸಮಸಾಹಸವನ್ನು ನೋಡಿ ದಾರಿಯಲ್ಲಿ ಊರೂರಿಗೆ ಜನರೆಲ್ಲ ಸೇರಿ ಸುಸ್ವಾಗತವನ್ನು ಕೋರಿ ಅಭಿನಂದಿಸಿ ವಂದಿಸಿ ಮುಂದೆ ಕಳಿಸುತ್ತಲಿದ್ದರು.

ಶಶಬಿಂದುಮಹಾರಾಜನೂ ಮಾಂಧಾತನನ್ನು ಅತ್ಯಾದರದಿಂದ ತನ್ನ ಊರಿಗೆ ಬರಮಾಡಿಕೊಂಡನು.

ತನ್ನ ಗೆಳತಿಯ ಮಾನವನ್ನು ಮಣ್ಣುಗೂಡಿಸಿ ಅವಳ ಬಾಳಿನಲ್ಲಿ ಮಸಣಗೀತವನ್ನು ಹೇಳಿದ ದುಷ್ಟರಾವಣನನ್ನು ಗೆದ್ದು ಸೆರೆಯಾಳಾಗಿ ಹಿಡಿದುಕೊಂಡು ಮಾಂಧಾತ ತಂದಿದ್ದಾನೆಂಬ ಸಮಾಚಾರ ಕೇಳಿ ಬಿಂದುಮತಿಯ ಹೃದಯದಲ್ಲಿ ಗೆಲುವಿನ ನಲಿವು ಲೀಲಾತಾಂಡವಾಡಿತು.

ಮೊದಲಿನ ಉತ್ಸಾಹ-ಉಲ್ಲಾಸಗಳು ಮತ್ತೆ ಅವಳ ಮನೋಭೂಮಿಕೆಯಲ್ಲಿ ಮರುಕಳಿಸಿ ಸುಳಿದಂತಾದವು. ಮರಗಟ್ಟ ಅವಳ ಮನಬನ ಚಿಗುರಿ ಹೊಗರೊಡೆಯಿತು. ಸಂತಸದ ಉಯ್ಯಾಲೆಗೆ ತಿರುಗುವ ಅವಳ ಹೃದಯ ಬಣ್ಣದ ಬುಗುರೆಯಾಯಿತು.

ಇಂಥ ವೀರವರೇಣ್ಯನಾದ ವರಣೀಯ ರಾಜಕುಮಾರನನ್ನು ಒಮ್ಮೆಯಾದರೂ ಚೆನ್ನಾಗಿ ನೋಡಬೇಕೆಂದು ಅವಳಿಗೆ ಕುತೂಹಲವುಂಟಾಯಿತು. ಎಷ್ಟೋ ವರುಷಗಳ ಮೇಲೆ ಅವಳಿಂದು ತನ್ನನ್ನು ಅಲಂಕಾರ ಮಾಡಿಕೊಂಡು ರಾಜನ ಮೆರವಣಿಗೆಯಲ್ಲಿ ಭಾಗವಹಿಸಲು ಸನ್ನದ್ಧಳಾದಳು.

ನಗರದ ರಾಜಬೀದಿಯಲ್ಲಿ ಶೂರಾಗ್ರಣಿಯಾದ ಮಾಂಧಾತನು ಸುವರ್ಣಸ್ಯಂದನದಲ್ಲಿ ಮೆರವಣಿಗೆಯೊಂದಿಗೆ ಸಾಗಿದ್ದನು.

ಹಿಂದಿನಿಂದ ಕೈ ಕಟ್ಟಿಕೊಂಡು ಬಂದಿಯಾದ ದಾನವೇಂದ್ರ ರಾವಣನು ನಾಚಿಕೆಯಿಂದ ತಲೆತಗ್ಗಿಸಿ ನಡೆದಿದ್ದನು.

ಮನೆಮನೆಗೆ ಸುವಾಸಿನಿಯರು ಮಹಾರಾಜನ ಹಣೆಗೆ ಕುಂಕುಮ ತಿಲಕವಿಟ್ಟು, ಅರಳು ಹಾರಿಸಿ, ಹೂ ತೂರಿ, ಆರತಿಯನ್ನು ಬೆಳಗುತ್ತಿದ್ದರು.

ಮೆರವಣಿಗೆ ಅರಮನೆಯ ಮುಂಭಾಗಕ್ಕೆ ಬಂದಾಗ ಶೃಂಗಾರವೇ ಸಾಕಾರವಾಗಿ ಬಂದಂತೆ ಬಿಂದುಮತಿಯು ಆರತಿಯನ್ನು ಹಿಡಿದುಕೊಂಡು ಸಖಿಯರೊಂದಿಗೆ ನಿಂತಿದ್ದಳು.

ವನಾಂತರದಿಂದ ವಸಂತನೇ ಎದ್ದುಬಂದಂತಿರುವ ಆ ಸುಕುಮಾರನನ್ನು ದೂರಿಂದ ನೋಡಿದಾಗಲೇ ಅವಳ ಕಣ್ಣು ಕದಲಾರತಿಯನ್ನೆತ್ತಿತ್ತು. ಮಂದಹಾಸವು ಮಂದಾರದ ಅರಳುಗಳನ್ನು ತೂರಿತ್ತು.

ಅವನು ಸಮೀಪಕ್ಕೆ ಬಂದು ಎದುರಿಗೆ ನಿಂತಾಗ ಅವಳ ಮೈಯೆಲ್ಲ ಆ ಕಂಪಿತವಾಗಿ ಕೈಯೊಳಗಿನ ಆರತಿಯ ತಟ್ಟೆ ನಡುಗಹತ್ತಿತು. ಸಾಂಪ್ರದಾಯಿಕವಾಗಿ ಪುರೋಹಿತರು ರಾಜನ ಹಣೆಗೆ ಕುಂಕುಮದ ತಿಲಕವನ್ನು ಇಡಹೇಳಿದಾಗ ಅವಳ ಬೆರಳು ಬೆವೆತುಹೋಯಿತು.

ಹೇಗೋ ಸಾವರಿಸಿಗೊಂಡು ಅವಳು ಆರತಿಯನೆತ್ತಿದಾಗ ಅವರಿಬ್ಬರ ಕಣ್ಣುಗಳೂ ಒಂದಾದವು. ಬಿಂದುಮತಿಯ ಎದೆಯ ತಂತಿಗಳೆಲ್ಲ 'ಝುಂ' ಎಂದವು ಮೈಯೆಲ್ಲ ಮುಳ್ಳಿನ ಕೊಂಪೆಯಾಗಿತ್ತು.

ಶಶಬಿಂದುವು ಮನೆಯಲ್ಲಿ ಬಂದು ಅವಳ ಎದುರಿಗೆ ಮಾಂಧಾತನೊಂದಿಗೆ ಮದುವೆಯ ಮಾತನ್ನೆತ್ತಿದಾಗ, ಅವಳ ಗಲ್ಲ ಗುಲಾಬಿಗೆ ಗುಲ್ಲು ಕೊಟ್ಟಂತೆ ಕೆಂಪಕೆಂಜಗವಾಯ್ತು. ಕೈಬೆರಳು ಸೀರೆಯ ಅಂಚನ್ನು ಗೀರಿದರೆ ಕಾಲ್ಬೆರಳು ನೆಲವನ್ನು ಕೆದರಿತ್ತು.

ಅವಳ ಭಾವವನ್ನು ತಿಳಿದ ಮಹಾರಾಜನು ಮಾಂಧಾತನ ಎದುರು ಆ ಪ್ರಸ್ತಾಪವನ್ನು ಎತ್ತಿದಾಗ ತಾನಾಗಿ ಯಾಚನೆಮಾಡುವ ಪ್ರಸಂಗ ತಪ್ಪಿತೆಂದು ಅವನಿಗೆ ಪರಮಾನಂದವಾಯಿತು.

ಬಿಂದುಮತಿ–ಮಾಂಧಾತರ ಸ್ವಯಂವರವು ಒಳ್ಳೇ ವೈಭವದಿಂದ ನೆರವೇರಿತು. ಇಬ್ಬರೂ ಮಹಾರಾಜರೂ ಸ್ಪರ್ಧೆಯಿಂದ ಬ್ರಾಹ್ಮಣರಿಗೆ ದಾನ ದಕ್ಷಿಣೆಗಳನ್ನಿತ್ತು ಬೊಕ್ಕಸಗಳನ್ನು ಬರಿದುಮಾಡಿಕೊಂಡರೂ ಆತ್ಮತೃಪ್ತಿಯ ಆನಂದದಿಂದ ಶ್ರೀಮಂತರಾಗಿ ಕೀರ್ತಿಶಾಲಿಗಳಾದರು.

ಮಾಂಧಾತನಿಗಂತೂ 'ಯೌವನದ ಉತ್ಸ್ವಪ್ನಗಳೂ ಸತ್ಯವಾಗುತ್ತವೆ' ಎಂಬ ಮಾತು ಅಂದು ನಿದರ್ಶನಕ್ಕೆ ಬಂದಿತು.

ಸ್ವರ್ಗಾಪವರ್ಗಗಳ ಸುಖಸಾರವೆಲ್ಲ ಅವನಿಗೆ ಬಿಂದುಮತಿಯ ಒಂದು ಮಂದಹಾಸದಲ್ಲಿಯೋ, ಮಧುರವಿಲಾಸದಲ್ಲಿಯೋ, ಸರಸಸಲ್ಲಾಪದಲ್ಲಿಯೋ ಅಡಕವಾದಂತೆ ತೋರುತ್ತಿತ್ತು.

ಅವಳ ಒಂದೊಂದು ಅವಯವದಲ್ಲಿಯೂ ಅವನಿಗೆ ಸೌಂದರ್ಯದ ಒಂದೊಂದು ಪರಿ ಬಗೆ ಬಿಚ್ಚುತ್ತಲಿರುವಂತೆ ಭಾಸವಾಗುತ್ತಲಿತ್ತು. ಬಿಂದುಮತಿಯೊಡನೆ ಆದ ತನ್ನ ಮದುವೆಯೊಂದು ಜೀವನದಲ್ಲಿ ತಾನು ಪಡೆದ ವಿಜಯಗಳೆಲ್ಲೆಲ್ಲ ಬಹಳ

ದೊಡ್ಡಗೆಲುವು ಎಂದು ಅವನು ಭಾವಿಸಿದ್ದ.

ಅವಳ ರೂಪ ಆವನ ಕಣ್ಣುಗಳನ್ನು ಸೂರೆಗೊಂಡಿದ್ದರೆ ಅವಳ ಗುಣ ಅವನ ಹೃದಯವನ್ನು ಸೆರೆಹಿಡಿದಿತ್ತು.

ಅವನು ತನ್ನ ಬಂದಿಮನೆಯಲ್ಲಿ ನವೆದುನಿಂದ ದಾನವೇಂದ್ರನನ್ನು ದೂರದಿಂದಲೇ ಬಿಂದುಮತಿಗೆ ತೋರಿದಾಗ ಅವಳ ಹೃದಯ ಸೇಡಿನಕಿಡಿಗಳನ್ನು ಉಗುಳಿತ್ತು, ಮಾತು ಮಿಂಚಿನ ಅಂಚಿಗೆ ಮಸೆದು ತರಹತ್ತಿದವು.

''ಪ್ರಭು ! ವೇದವತಿಯ ಬಾಳಿನ ಹಣತೆಯಲ್ಲಿ ಮಣ್ಣು ಹೊಯ್ದ ಈ ದುಷ್ಟನನ್ನು ಇಷ್ಟುದಿನ ಗಲ್ಲಿಗೇರಿಸದೆ ಕೊಲ್ಲದೇ ಇಟ್ಟಿದ್ದೇಕೆ ?

ಈ ವ್ರಾತ್ಯದೈತ್ಯನು ವೇದವತಿಯಂತೆ ಇನ್ನೂ ಎಷ್ಟುಜನ ಕುಲಕನ್ನಿಕೆಯರ ಸತೀತ್ವಕ್ಕೆ ಸಂಚಕಾರ ತಂದಿರುವನೋ ಯಾರಿಗೆ ಗೊತ್ತು ! ಗರತಿಯರ ಗೌರವವನ್ನೆಲ್ಲ ಹಾಳುಮಾಡಿ ಅವರ ಗೋರಿಗಳ ಮೇಲೆಯೇ ತನ್ನ ಗರ್ವದಗೋಪುರಕಟ್ಟಿದ ಈ ಪಾಪಿ–ಕೀಟ ಬದುಕಿರುವಷ್ಟು ದಿನ ಕುಲವಧುಗಳ ಮಾನ–ಮಾಂಗಲ್ಯಗಳಿಗೆ ಭದ್ರತೆಯಿಲ್ಲ.

ಇವನು ಭೂಮಿಯಲ್ಲಿ ಇಲ್ಲದಂತಾದಾಗಲೇ ನನ್ನ ಗೆಳತಿಯು ಆತ್ಮಕ್ಕೆ ತೃಪ್ತಿಯೆನ್ನಿಸುವದು.

ನನ್ನ ಜೀವಸಖಿಯ ಬಂಗಾರದಂಥ ಬದುಕನ್ನು ಮುರಿದು ಮೂರಾಬಟ್ಟೆ ಮಾಡಿದ ಈ ಚಂಡಪಾಪಿಯನ್ನು ಸದೆಬಡೆದು ಸೆರೆಹಿಡಿದು ತಂದ ವೀರ ವಿಕ್ರಮರೆಂದೇ ನಾನು ತಮ್ಮನ್ನು ಜಯಶ್ರೀಯೊಂದಿಗೆ ಅರಸಿ ಬಂದದ್ದು. ವರಿಸಿ ನಿಂದದ್ದು.

ಈ ಕಾರ್ಯವನ್ನಷ್ಟು ಪೂರ್ತಿಗೈದರೆ ನನ್ನ ಗೆಳತಿಗಾಗಿ ನಾನು ಮಾಡಬೇಕಾದ ಸಖೀಕರ್ತವ್ಯ ಪೂರ್ಣವಾದಂತಾಗುವದು'' ಎಂದು ಪತಿಗೆ ಬೇಡಿಕೊಂಡಳು.

ಅವಳ ಕಿಡಿನುಡಿಗಳನ್ನು ಕೇಳಿ ಮಾಂಧಾತನ ಕೋಪಾಗ್ನಿಯು ಭಗ್ಗ್ ಎಂದು ಹೊತ್ತಿ ಉರಿಯಹತ್ತಿತು. ತಕ್ಷಣದಲ್ಲಿ ರಾವಣನ ಹತ್ತೂತ್ತಲೆಗಳನ್ನು ಕತ್ತರಿಸಿಬಿಡಲು ನಿರ್ಧರಿಸಿ ಖಡ್ಗವನ್ನು ಹಿರಿದು ಝಳಪಿಸುತ್ತ ಸೆರೆಮನೆಯೆಡೆಗೆ ಹೆಜ್ಜೆಹಾಕಿದನು.

ದಶಕಂಠನ ಕಂಠಚ್ಛೇದನೆಗಾಗಿ ಮಹಾರಾಜನು ಹೊರಟ ಸಮಾಚಾರ ಹಾ ಹಾ ಎನ್ನುವಷ್ಟರಲ್ಲಿ ಊರಲ್ಲೆಲ್ಲ ಹಬ್ಬಿತು.

ತನ್ನ ಬಾಲಮಿತ್ರೆಯ ದುರಂತ–ಮರಣಕ್ಕೆ ಕಾರಣೀಭೂತನಾದ ಆ ಕಲಿ ಪುರುಷನ ದಾರುಣ–ಮಾರಣವನ್ನು ತನ್ನ ಕಣ್‌ತುಂಬ ನೋಡಬೇಕೆಂದು ಬಿಂದುಮತಿಯೂ ಬಂದಿಮನೆಯ ಬಾಗಿಲಿಗೆ ಬಂದಳು.

ಆದರೆ ಅಲ್ಲಿಯ ಕಾರಾಗೃಹದ ದೃಶ್ಯವೇ ವಿಚಿತ್ರವಾಗಿತ್ತು, ರಾವಣನ ಮೆಚ್ಚಿನಮಡದಿಯೂ ಸತೀ–ಕುಲ–ಮಂಡನ–ಮಣಿಯೂ ಆದ ಮಂಡೋದರಿಯು ಆ ದುರ್ವಾರ್ತೆಯನ್ನು ಕೇಳಿ ತಾನೇ ಮೊದಲು ಸಾಯಬೇಕೆಂದು ಗಂಡನೆದುರೇ ವಿಷದ ಬಟ್ಟಲನ್ನೆತ್ತಿದ್ದಳು.

ಬೇಡಿಗಳಿಂದ ನಿಗಡಿತವಾದ ತನ್ನ ಕೈಗಳಿಂದ ರಾವಣನು ಬೇಡವೆಂದು ತಡೆಯುತ್ತಲಿದ್ದರೂ ಅವಳು ಅದನ್ನು ಎತ್ತಿ ಕುಡಿಯಲು ಹವಣಿಸುತ್ತಲಿದ್ದಳು.

ಮಾಂಧಾತ ಮಹಾರಾಜನು ನಿಜವಾಗಿಯೂ ತನ್ನನ್ನು ಕೊಲ್ಲಬೇಕೆಂದು ಬಂದದ್ದನ್ನು ನೋಡಿ ''ಇನ್ನು ಇವಳನ್ನು ಬದುಕಿಸುವದರಲ್ಲಿ ಅರ್ಥವಿಲ್ಲವೆಂದು'' ತಿಳಿದು ರಾವಣನು ವಿಷ ಕುಡಿಯಹೊರಟ ಮಂಡೋದರಿಯ ಕೈಸಡಿಲು ಬಿಟ್ಟನು.

ಆಗ ಅವನ ಹೆಂಡತಿಯ ಕಣ್ಣೆದುರೇ ಆ ಭಂಡಗಂಡನ ರುಂಡಗಳನ್ನು ತುಂಡರಿಸಿ ಚೆಂಡಾಡಬೇಕೆಂದು ಮಾಂಧಾತನು ಅವಸರದಿಂದ ಕೃಪಾಣವನ್ನೆತ್ತಿದನು.

ಆಗ ಮಂಡೋದರಿಯು ಎದ್ದು ಮಾಂಧಾತನ ಪಾದಗಳಿಗೆ ಬಿದ್ದು ''ಅಣ್ಣಾ! ಎರಡು ನಿಮಿಷ ಮಾತ್ರ ನನ್ನ ಪತಿಗೆ ಜೀವದಾನ ನೀಡು. ಈ ವಿಷ ನನ್ನ ಪ್ರಾಣಹರಣ ಮಾಡಿದ ಮರುಚಣದಲ್ಲಿಯೇ ನಿನ್ನ ಮನಸ್ಸಿಗೆ ಬಂದಂತೆ ಮಾಡು. ನಿನ್ನ ತಂಗಿಗೆ ಮುತ್ತೈದೆತನದ ಮರಣ–ಮಾಂಗಲ್ಯವನ್ನು ಕರುಣಿಸಲಾರೆಯಾ ? '' ಎಂದು ಅಂಗಲಾಚಿದಳು.

ಆಗ ಮಾಂಧಾತನು ತುಸುತಡೆಯಲು ಅವಳು ರಾವಣನ ಪಾದಗಳನ್ನು ಕಣ್ಣೀರಿನಿಂದ ತೊಳೆದು ಅದರ ಹುಡಿಯನ್ನು ಹಣೆಮುಡಿಗಳಿಗಿಟ್ಟು ವಿಷದ ಚಷಕವನ್ನೆತ್ತಿ ತುಟಿಗಿಟ್ಟಳು.

ಆಗ ಬಿಂದುಮತಿಯು ಹಿಂದಿನಿಂದ ಬಿರುಗಾಳಿಯಂತೆ ಬೀಸಿಬಂದು ಮಂಡೋದರಿಯ ಕೈಯನ್ನು ಬಡೆದಳು.

ತುಂಬಿದ ಕಣ್ಣಿನ ರುದ್ಧ ಕಂಠದಿಂದ ಮಂಡೋದರಿಯನ್ನು ಎತ್ತಿಹಿಡಿದು ಬಿಗಿದಪ್ಪಿ ''ಅಕ್ಕ ಕ್ಷಮಿಸು'' ಎಂದು ಉದ್ಗರಿಸಿದಳು.

ತನ್ನ ಪತಿ ಮಾಂಧಾತಮಹಾರಾಜನ ಹತ್ತಿರ ಬಂದು ಬಾಗಿನಿಂದು ಮನದನ್ನನ ಮನಒಲಿಸುವ ಅನುನಯದ ಧಾಟಿಯಲ್ಲಿ ಬೇಡಿಕೊಂಡಳು–

''ಪ್ರಾಣನಾಥ! ದಯಮಾಡಿ ನನ್ನ ಅಕ್ಕ ಮಂಡೋದರಿಗೆ ಸೌಭಾಗ್ಯ ದಾನಮಾಡಿರಿ. ನನ್ನ ಮೇಲೆ ನಿಜವಾದ ಪ್ರೇಮವಿದ್ದರೆ ಈ ಖಡ್ಗವನ್ನು ಮೊದಲು ಒರೆಗಾಣಿಸಿರಿ. ನೂರಾರು ಮಾನಿನಿಯರ ಮಾನಹಾನಿಮಾಡಿದ ಈ ದೈತ್ಯನನ್ನು ಕೊಲ್ಲಬೇಕೆಂದು ನಾನೇ ಆಗ್ರಹ ಮಾಡಿದ್ದರೂ, ಆಗ ನನಗೆ ಇವನ ಹಿಂದೆ ಇವನ ಮರಣಕ್ಕಾಗಿ ಬೇಯುವ ಹೆಣ್ಣುಜೀವವೊಂದಿದೆಯೆಂಬ ಕಲ್ಪನೆ ಇರಲಿಲ್ಲ, ಪತಿಯ ಭಾವಿ

ಮರಣಕ್ಕಾಗಿ ಈಗಲೇ ಜೀವಕೊಡಹೊರಟಿರುವ ಈ ಹೆಣ್ಣಿನ ಕಣ್ಣೀರು ನನ್ನ ಸೇಡಿನ ಬುದ್ಧಿಯನ್ನೆಲ್ಲ ತೊಳೆದುಬಿಟ್ಟಿದೆ. ಯಾವ ಹೆಂಗಸಿನ ಮಂಗಲ್ಯ ಸೂತ್ರದ ಹುರಿ ಸಡಿಲಾದದ್ದನ್ನೂ ನಾನು ನೋಡಲಾರೆ. ಕೇಡಿಗೆ ಪ್ರತಿಕೇಡು ಬಗೆದು ಸೇಡು ತೀರಿಸಿಕೊಳ್ಳುವ ನನ್ನ ರಾಕ್ಷಸೀ ಬುದ್ಧಿಯು ಈ ಮಹಾತಾಯಿಯ ದೃಷ್ಟಿಪ್ರಸಾದದಿಂದಲೇ ಅಸ್ತಮಿತವಾಗಿದೆ. ಈ ಪಾಪಿಯನ್ನು ಕೊಂದರೆ ನನ್ನ ಮಂಡೋದರಿಯ ಸೌಭಾಗ್ಯವನ್ನು ಮಾತ್ರ ಕಸಿದುಕೊಂಡು ವೈಧವ್ಯದಾನಮಾಡಿದ ಪಾಪವನ್ನು ಪದರಿನಲ್ಲಿ ಕಟ್ಟಿಕೊಂಡಂತಾಗುವದು. ನಿಮ್ಮ ಕರುಣೆಯಿಂದ ಈ ಮುತ್ತೈದೆ ಸಾವಿತ್ರಿಯ ಕುಂಕುಮ ತಿಲಕ ಇವಳ ಹಣೆಯ ದಿಬ್ಬದಲ್ಲಿ ಹಬ್ಬಿ ನೋಡುವವರ ಕಣ್ಣಿಗೆ ನಿರಂತರವೂ ಹಬ್ಬವನ್ನುಂಟುಮಾಡಲಿ. ಇವಳ ಪಾತಿವ್ರತ್ಯತೀರ್ಥದಲ್ಲಿ ಮಿಂದು ಇವರ ಜೀವನ ಪಾವನವಾಗಲಿ'' ಎಂದು ಬಲವಂತದಿಂದ ಬಿನ್ನವಿಸಿಗೊಂಡು, ಮಂಡೋದರಿಯ ಮಾಂಗಲ್ಯತಂತುವಿಗೆ ಬಂದ ಗಂಡಾಂತರವನ್ನು ತಪ್ಪಿಸಿದಳು.

10. ಒಂದು ಕ್ಷಣ ಗೈದ ತಪ್ಪಿಗೆ...

ಅರ್ಬುದಾಚಲದ ಕಾಂತಾರಕಾವಣದಲ್ಲಿ ಮಹರ್ಷಿ ಕಶ್ಯಪರ ಪಾವನ-ಪರ್ಣಕುಟೀರ ಏಕಾಕಿಯಾಗಿ ನಿಂತುಕೊಂಡಿತ್ತು. ತುಂಗ ತರಂಗಿಣಿಯಾದ ಸಾಭ್ರಮತಿಯ ಶುಭ್ರಸ್ಪಟಿಕದಂತಿರುವ ನೀರು ಆಶ್ರಮದ ಅಂಗಳದ ತುಂಬ ತನ್ನ ತುಂತುರು ಹನಿಗಳನ್ನು ಸಿಂಪಡಿಸಿ ಮಣಿಮುತ್ತುಗಳನ್ನು ಎರಚಿದಂತೆ ಮಾಡಿತ್ತು.

ಪಡುವಲ ತಡಿಗಿಳಿದ ನೇಸರಿನ ಕುಂಕುಮಾರುಣ ಕಿರಣಗಳು ಗುಡಿಸಲಿನ ತುಂಬೆಲ್ಲ ಹೊನ್ನಿನ ಹುಡಿಯನ್ನು ಚಿಮುಕಿಸಿದ್ದವು. ಬಾನಿನಂಚಿನಲ್ಲಿ ಗರಿಗೆದರಿದ ಸಂಧ್ಯಾಸೌಂದರ್ಯಕ್ಕೆ ಆ ತಪೋವನವೆಲ್ಲವೂ ಮುಗ್ಧವಾಗಿ ಕನಕಕಾಂತಿಯಿಂದ ಅನುರಕ್ತವಾಗಿ ನಿಂತುಕೊಂಡಿತ್ತು.

ಇಂಥ ಪರಮ-ಪ್ರಶಾಂತ-ವಾತಾವರಣದಲ್ಲಿ ಸಾಭ್ರಮತಿಯ ಕೇಶರಂಧ್ರ ತೀರ್ಥದ ತೀರೋಪಾಂತರದ ಶಿಲಾಖಂಡವೊಂದರ ಮೇಲೆ ಬ್ರಹ್ಮರ್ಷಿ ಕಶ್ಯಪರು ಧ್ಯಾನ-ಮಗ್ನರಾಗಿ ಕುಳಿತುಕೊಂಡಿದ್ದರು.

ಅವರ ಮುಖ-ಮಂಜೂಷಿಕೆಯಲ್ಲಿ ತಳತಳಿಸುತ್ತಲಿರುವ ಬ್ರಹ್ಮವರ್ಚಸ್ಸಿಗೆ ಸಂಧ್ಯಾರಾಗದ ಸಿಂಧೂರ-ಕಾಂತಿಯಿಂದ ಸೌಂದರ್ಯದ ಸಹಸ್ರಾರವೇ ಉನ್ಮೇಷಿತಗೊಂಡತಿತ್ತು. ತೇಜಃಪುಂಜವಾದ ಅವರ ಕಣ್ಣಿನಂಚಲದಲ್ಲಿ ಮೂರುಲೋಕದ ಚೆಲುವನ್ನೆಲ್ಲ ಬಳಿದಿಟ್ಟಂತಿತ್ತು.

ಆಗ ಅವರ ನೆಚ್ಚಿನ ಮಡದಿಯಾದ ದಿತಿಯು ನೀರು ತರಲಿಕ್ಕೆಂದು ಆ ನದೀತಟಾಕಕ್ಕೆ ಬಂದಳು. ದಿತಿದೇವಿಯ ದಿವ್ಯಶರೀರದಲ್ಲಿ ತಾರುಣ್ಯವು ಶುದ್ಧಲಾವಣ್ಯವನ್ನು ಮೊದಲಸಲ ಭೇಟಿಮಾಡಿತ್ತು.

ಸಂಧ್ಯಾತಪದ ರಕ್ತ-ರಶ್ಮಿಗಳಲ್ಲಿ ಅವಳು ಉಟ್ಟ ನಾರುಬಟ್ಟೆ ಕೂಡ ಪೀತಾಂಬರದಂತೆ ರೇಶಿಮೆಯ ರಂಗವನಾಂತು ಅವಳ ಕಾಯಕಾಂತಿಯನ್ನು ಹೆಚ್ಚಿಸಿತ್ತು.

ಅವಳು ಮೊಳಕಾಲುಮಟ ನೀರಿನಲ್ಲಿ ನಿಂತು ತನ್ನ ಮಾರ್ತಿಕ ಕುಂಭವನ್ನು ತುಂಬುತ್ತಲಿರುವಾಗ ಅಲ್ಲಿಯೇ ಪಾಷಾಣಪೀಠದ ಮೇಲೆ ಧ್ಯಾನಾರೂಢರಾಗಿ ಕುಳಿತ ಕಶ್ಯಪರ ಕಡೆಗೊಮ್ಮೆ ಸಹಜವಾಗಿ ನೋಡಿದಳು.

ಸಂಧ್ಯಾರುಣನ ಕಿರಣಾಂಜಲಿಯಲ್ಲಿ ಕಿಂಜಲ್ಕ-ರಂಜಿತವಾದಂತಿರುವ ಅವರ ಮುಖ ಅವಳಿಗೊಂದು ಸೌಂದರ್ಯನಿಧಿಯಂತೆ ಕಂಡಿತು.

ಆ ಏಕಾಂತವನಾಂತ,ಸಂಜೆಯ ಸೊಬಗು, ಅಲ್ಲಿಯ ಪರಿಸರದ ಹಸಿರು, ಶಾದ್ವಲಗಳ ಕುಸುರು, ನದೀತಟಾಕ, ಶೀಕರಸ್ನಪಿತವಾದ ಆ ಪ್ರಸ್ತರಪೀಠ, ಅದರ ಮೇಲೆ ಸಂಜೆವೆಣ್ಣಿನ ಅಭಿಸಾರ ಸಂಕೇತಕ್ಕೆ ಕಾಯುತ್ತ ಕುಳಿತ ಮನ್ಮಥನ

ಮೂರ್ತಿಯಂತಿರುವ ಪತಿದೇವ, ಅವನ ಸೊಬಗು, ಮುಖದ ಸೊಗಸು, ಕಣ್ಣಿನಕಾಂತಿ, ತುಟಿಯ ಚೆಂಬೆಳಗು, ಹೃದಯದ ಹರವು ಇವೆಲ್ಲವೂ ದಿತಿಯ ಹೃದಯವನ್ನು ಸ್ವಪ್ನಲೋಕದ ಶೃಂಗಾರರಂಗಭೂಮಿಗೆ ಕರೆದೊಯ್ದವು.

ತಾನು ಈ ಕಶ್ಯಪರನ್ನು ಮದುವೆಯಾಗಿ ಇಷ್ಟುದಿನ ಸಂಸಾರಮಾಡಿದ್ದರೂ ಇಂದಿನ ಅವರ ಚೆಲುವು ಅವಳಿಗೆ ಅಪೂರ್ವ ಹಾಗೂ ಅನನುಭೂತಪೂರ್ವ ಎನಿಸಿತು.

ತಮ್ಮ ಸಂಸಾರದ ವಿರಕ್ತಜೀವನದಲ್ಲಿ ಒಮ್ಮೆಯೂ ಕಾಮಾಲಸವಾದ ಪ್ರೇಮಕಟಾಕ್ಷದಿಂದ ಮೋಹಾಂಧಳಾಗಿ ಅವರನ್ನು ನೋಡದಿದ್ದ ಅವಳಿಗೆ ತನ್ನ ಪತಿ ಇಂಥ ಸೌಂದರ್ಯದ ಖಣಿ ಎಂಬುದರ ಕಲ್ಪನೆಯೇ ಇರಲಿಲ್ಲ.

ಇಂಥ ಸೌಂದರ್ಯ–ಚಂದ್ರಿಕೆಯ ಚಾರು–ಚಂದ್ರಮನ ಅಂಕ–ಪರ್ಯಂಕದಲ್ಲಿಯೇ ಇಷ್ಟುದಿನವಿದ್ದರೂ ಕರ್ದಮದ ಕಮಲಿನಿಯಂತೆ ಕಣ್ಣು ಮುಚ್ಚಿಕೊಂಡೇ ಕುಳಿತ ತನ್ನ ಅರಸಿಕತನಕ್ಕೆ ತಾನೇ ನಕ್ಕಳು. ಈ ಚೆಲುವಿನ ತವನಿಧಿಯನ್ನು ಭೋಗಭಾಗ್ಯವನ್ನಾಗಿ ಪಡೆದ ತನ್ನ ನಾರೀತ್ವದ ಬಗ್ಗೆ ಅವಳಿಗೆ ಒಂದು ಕ್ಷಣ ಹೆಮ್ಮೆಯೂ ಎನಿಸಿತು.

ನೀರಿನಲ್ಲಿ ಪಡಿಮೂಡಿದ ತನ್ನ ಪ್ರತಿಬಿಂಬವನ್ನು ಕಂಡು 'ಕಾಮದೇವನಂತಿರುವ ಆ ಸಿರಿರಮಣನಿಗೆ ತಾನು ಯೋಗ್ಯಳಾದ ರತಿರಮಣಿ' ಎನ್ನಿಸಿತವಳಿಗೆ. ಎದೆಯಾಶೆಯನ್ನೆಲ್ಲ ಕಣ್ಣಿನಂಚಿನಲ್ಲಿ ತುಳುಕಿಸಿ ಎವೆಪಿಳಕಿಸದೆ ಅದೆಷ್ಟೋ ಹೊತ್ತು ಕಶ್ಯಪರನ್ನೇ ನೋಡುತ್ತ ನೀರಲ್ಲಿಯೇ ನಿಂತುಕೊಂಡಿದ್ದಳು. ಆಮೇಲೆ ಮೆಲ್ಲಮೆಲ್ಲನೇ ತುಂಬಿದ ಕುಂಭವನ್ನು ಬಗಲಲ್ಲಿರಿಸಿಗೊಂಡು ತೀರಕ್ಕೆ ಬಂದಳು.

ಅಲ್ಲಿಯೇ ಪರಿಸರದಲ್ಲಿ ಲಲಿತ–ಲತಾ–ಕುಂಜಗಳ ಮೇಲೆ ಅರೆಬಿರಿದ ಮೊಗ್ಗೆಗಳು ಗಂಧ–ಭಾರದಿಂದ ಮಗಮಗಿಸುತ್ತಲಿದ್ದವು. ಅವುಗಳನ್ನು ಕಂಡು ದಿತಿಯು ಕೈಯಲ್ಲಿಯ ಕೊಡವನ್ನು ಕೆಳಗಿಟ್ಟು ಸರಸರ ಆ ಅರಳು ಮಲ್ಲಿಗೆಗಳನ್ನೆಲ್ಲ ಕೊಯ್ದು ಸರವನ್ನಾಗಿ ಮಾಡಿ ಆ ದುಂಡುಮಲ್ಲಿಗೆಯ ದಂಡೆಯನ್ನು ತನ್ನ ಕೇಶಕಲಾಪದ ಮಂಡನವನ್ನಾಗಿ ಮಾಡಿಕೊಂಡಳು.

ಆ ಮಲ್ಲಿಗೆಯ ಮಾಲೆ ತನ್ನ ಧಮ್ಮಿಲ್ಲಭಾರದಲ್ಲಿ ಹೇಗೆ ಒಪ್ಪುವದೆನ್ನುವದನ್ನು ನೀರ್ಗನ್ನಡಿಯಲ್ಲಿ ನೋಡಿಕೊಳ್ಳಬೇಕೆಂದು ಅವಳು ಮತ್ತೆ ನದಿಯಲ್ಲಿ ನುಗ್ಗಿದಾಗ ಸಪ್ಪಳವಾಗಿ ಕಶ್ಯಪರು ಕಣ್ದೆರೆದರು.

ದಿತಿಗೆ ತನ್ನ ದೈವವೇ ಕಣ್ಣುತೆರೆದಂತಾಯಿತು.

ಅವಳು ತನ್ನ ಬಳ್ಳಿ–ಮೈಯನ್ನು ಶೃಂಗಾರ ವೈಯ್ಯಾರಗಳ ಉಯ್ಯಾಲೆಯ ತಾಲಕ್ಕೆ ಬಳುಕಿಸುತ್ತ ಆ ಶಿಲಾಪೀಠದ ಬಳಿಸಾರಿದಳು.

ನದೀ–ತರಂಗಗಳ ಚಾಂಚಲ್ಯವೇ ಮಿಂಚಿ ಬಂದಂತಿರುವ ತಮ್ಮ ಮಡದಿಯ ಕಾಮಾಲಸಕಟಾಕ್ಷ, ಹಾವಭಾವ, ಒನಪು, ಒಲುಮೆಗಳನ್ನು ಕಂಡ ಕಶ್ಯಪರಿಗೆ ದಿಗ್ಭ್ರಮೆಯಾಯಿತು. ಸತೀಶಿರೋಮಣಿಯಾದ ದಿತಿದೇವಿಯು ಈ ಸಂಧ್ಯಾಕಾಲದ ಅನುಷ್ಠಾನದ ವೇಳೆಯಲ್ಲಿ ಕುಡಿನೋಟದಲ್ಲಿ ಶೃಂಗಾರ ಭಾವವನ್ನು ಚಿಮ್ಮಿಸುತ್ತ ಬರುವದು ಅವರಿಗೆ ಬಹಳೇ ವಿಚಿತ್ರವೆನಿಸಿತು.

ಮಂದಹಾಸದಿಂದ ಸುಮಧುರವಾದ ಅವಳ ಎಸಳುದುಟಿಗಳಲ್ಲಿ ಕಾಮರಾಗ ಕಳಿತುನಿಂತಿತ್ತು, ಅವಳ ಅಂಗಾಂಗಗಳ ಭಾವ–ಭಂಗಿಗಳಲ್ಲೆಲ್ಲ ಅನಂಗರಾಗ ತರಂಗಿತವಾಗಿ ಶೃಂಗಾರಸಂಗೀತ ಅನಾದರೂಪದಲ್ಲಿ ತೇಲಿಬರುತ್ತಲಿತ್ತು, ಅದನ್ನು ಕಂಡು ಅಚ್ಚರಿಗೊಂಡ ಕಶ್ಯಪರು ಸಾವಧಾನರಾಗಿ ಕೇಳಿದರು,

''ದಿತಿದೇವಿ ! ಇದೇನು ಅಕಾಲ ಸಂಭ್ರಮ?

''ಪತಿದೇವ ! ಈ ದಾಸಿಯ ಬಯಕೆಯೊಂದನ್ನು ತಾವು ನಡೆಸಿಕೊಡಬೇಕು''.

–ಎಂದು ಬೊಗಸೆಗಂಗಳನ್ನು ತಿರುವುತ್ತ ಕೇಳಿದಳು ದಯಿತೆ ದಿತಿದೇವಿ.

''ದಿತಿ ! ನಿನ್ನ ಯಾವ ಬಯಕೆಯನ್ನು ನಾನು ಪೂರ್ಣಮಾಡಿಲ್ಲ ! ನೀನು ಧರ್ಮಾವಿರುದ್ಧವಾಗಿ ಏನು ಕೇಳಿದರೂ ಕೊಡಬಲ್ಲೆ''

–ಎಂದು ಅವಳ ಮಂದಹಾಸದ ಹಿಂದೆ ತೇಲಿಬರುವ ತರಳತೆಯನ್ನು ಕಟಾಕ್ಷಿಸುತ್ತ ಹೇಳಿದರು ಕಶ್ಯಪರು.

ಆದರೆ ದಿತಿಯು ''ಧರ್ಮಾವಿರುದ್ಧವಾಗಿ'' ಎಂಬ ಶಬ್ದವನ್ನು ಲೇಶತೊಽಪಿ ಗಮನಿಸದೆ 'ಏನು ಕೇಳಿದರೂ ಕೊಡಬಲ್ಲೆ' ಎಂಬ ಅವರ ಕೊನೆಯವಾಕ್ಯದಿಂದಲೇ ಉಲ್ಲಸಿತಳಾಗಿ ಸಮೀಪದಲ್ಲಿ ಸಾರಿಬಂದು ಹತ್ತಿರ ನಿಂತು–

''ಎನ್ನರಸ ನೀನು ಚಿನ್ನರಸ. ನಾನು ಕೇಳಿದ್ದನ್ನೆಲ್ಲ ಕೊಡುವೆನೆಂದು ಹೇಳುವ ತಮ್ಮಂಥ ಪತ್ನೀವಲ್ಲಭ ಪ್ರಾಣಕಾಂತನನ್ನು ಪಡೆದ ನಾನು ಧನ್ಯ. ಈ ಹೆಣ್ಣುಬಾಳು ಸಾರ್ಥ'' ಎಂದಂದು ಮುನಿಯ ಹತ್ತಿರ ಬಂದು ಅವರ ಬದ್ಧಪದ್ಮಾಸನದ ಮೇಲೆ ತಲೆಯನಿರಿಸಿದಳು.

ಅವಳ ಈ ಆತ್ಮ–ಸಮರ್ಪಣೆಯ ದೀನಭಾವ, ಪ್ರೇಮ–ನೈರ್ಭರ್ಯ, ಸೇವಾ ಕೈಂಕರ್ಯ, ಕಕುಲಾತಿಗಳನ್ನು ಕಂಡು ಕಶ್ಯಪರಲ್ಲಿ ಕಾರುಣ್ಯ ತುಳುಕಿತು.

ಅಂತಃಕರಣಪೂರ್ವಕವಾಗಿ ಅವರು ಅವಳ ಸ್ನೇಹ–ಸ್ನಾತವಾದ ಕುರುಳುಗಳಲ್ಲಿ ತಮ್ಮ ಬೆರಳುಗಳನ್ನು ತರವಿತರಳವಾಗಿ ಆಡಿಸುತ್ತ–

''ದಿತಿ ! ಕೇಳು. ನಿನಗೆ ಬೇಕಾದ ವರ ಕೇಳು'' ಎಂದು ಚವರಿ ಗೂದಲುಗಳಲ್ಲಿನ ಅವಳ ಮುಖವನ್ನು ಎತ್ತಿಹಿಡಿದು ಕೇಳಿದರು.

ಲಜ್ಜಾರಕ್ತವಾದ ಅವಳ ನೀಲನಯನಗಳು ಸ್ವಪ್ನಮಧುವನ್ನೂ ಗುಟಕರಿಸುತ್ತಲಿದ್ದವು.

"ಕೇಳಲಾ ಪ್ರಾಣನಾಥ!"

ಗಂಡನ ಪುಂಡರೀಕದ ಪಕಳೆಗಳಂತಿರುವ ಗಲ್ಲ, ಗದ್ದ, ತುಟಿಗಳನ್ನು ಆಶೆಗಣ್ಣಿನಿಂದ ನೋಡುತ್ತ ಕೇಳಿದಳು ಆ ಮುನಿಕಾಮಿನಿ.

ಅವಳ ಲೋಭನೀಯ ಲಾವಣ್ಯ ಒಂದುಕ್ಷಣ ಕಶ್ಯಪರನ್ನೂ ಮುಗ್ಧ ಮಾಡಿತ್ತು.

ಬೆಡಗು-ಬಿನ್ನಾಣಗಳಿಂದ ಕೂಡಿ ಕತ್ತು ಕೊಂಕಿಸಿ, ಹುಬ್ಬು ಕುಣಿಸಿ ಕುಡಿ ನೋಟಬೀರಿ, ಸ್ನೇಹಾರ್ದ್ರವಾದ ದನಿಯಲ್ಲಿ ಪ್ರೇಮ-ಪೂರ್ಣವಾಗಿ ಬಾಯಿ ತುಂಬ ಅವಳು 'ಪ್ರಾಣನಾಥ' ಎಂದು ತೇಲಿಸಿ ನುಡಿದ ನಾಲ್ಕು ಅಕ್ಷರಗಳು ಮುನಿ-ಮನದ ವಿರಾಗ-ವೇದಿಕೆಯಲ್ಲಿ ಕಾಂತಾ-ಸಮ್ಮಿತಿಯು ರಾಗಾರೂಢವಾಗುವಂತೆ ಮಾಡಿದವು

ತನ್ನ ಎದೆಯ ಬಯಕೆಯನ್ನು ತಿಳಿಸಲು ಇದೇ ಸುವರ್ಣ ಸಂದರ್ಭ ಎಂದು ತಿಳಿದು ರಾಗೋತ್ಥಾನವಾದ ಹೃದಯದಿಂದ ರುಚಿರ-ವಾಣಿಯಲ್ಲಿ ತನ್ನ ರಸಾಲ ಭಾವವನ್ನು ವ್ಯಕ್ತಗೊಳಿಸುತ್ತ ದಿತಿದೇವಿಯು-

"ಮನದನ್ನ ! ನಾನು ತಮ್ಮನ್ನು ಮದುವೆಯಾದ ಬಳಿಕ ಒಮ್ಮೆಯೂ ಇಂಥ ಮಾಂಜಿಷ್ಟ-ರಾಗ-ರಂಗುಗಳಿಂದ ರಂಜಿಸುವ ಸಂಜೆಯಲ್ಲಿ ಈ ಲತಾಕುಂಜಗಳಲ್ಲಿ ಮಧುಚಂದ್ರವಿಹಾರಮಾಡಿದ್ದು ನೆನಪಿಲ್ಲ. ಸಂಧ್ಯಾಸಮಯದ ಈ ಮೋಹಕ ವಾತಾವರಣವನ್ನು ಅಕೋ ಅಲ್ಲಿ ನೋಡಿರಿ............"

ಮುಗಿಲಮೋಡಗಳು ಗಿರಿಯ ಕೋಡುಗಲ್ಲುಗಳನ್ನು ಅಪ್ಪಿ ನಿಂತುಕೊಂಡಿವೆ. ದಿನಕರ-ಪ್ರಿಯಕರನು ಪಶ್ಚಿಮಾಂಗನೆಯ ಸಜ್ಜವನೆಯನ್ನು ಪ್ರವೇಶಿಸಿದ್ದಾನೆ. ಮಳ್ಳಗಾಳಿಯು ಬನಬಳ್ಳಿಗಳ ಜೊತೆಗೆ ಕಳ್ಳಕೇಲಿಯನ್ನು ನಡೆಸಿದೆ. ನದೀ-ನೀರೆಯರು ತಮ್ಮ ತೆರೆ-ತೋಳುಗಳಿಂದ ತೀರವನ್ನು ತಬ್ಬಿಕೊಂಡು ನಗೆ-ನೊರೆಯನ್ನು ಬೀರುತ್ತಲಿರುವರು. ಭೃಂಗಗಳು ಸರೋಜಿನಿಯ ಪಕಳೆದುಟಿಗಳನ್ನು ಕಚ್ಚಿ ಮಧುವನ್ನು ಹೀರುತ್ತಲಿವೆ. ಮಂದಮಾರುತನ ಗಂಧದಲೆಗಳು ಸರ್ವತ್ರ ಸ್ಮರ-ಸಂದೇಶವನ್ನು ಸಾರುತ್ತಲಿವೆ.

ನಾಥ ! ಇಂಥ ಮಧುರ-ಸನ್ನಿವೇಶದಲ್ಲಿ ನಿನ್ನಂಥ ಚೆಲುವಿನ ಚಂದ್ರಮನಾದ ಅಭಿರಾಮರಮಣನ ಸನ್ನಿಧಿಯಲ್ಲಿ ಯಾವ ಕಾಮಿನಿಯ ಚಿತ್ತ ಚಂಚಲಿಸಲಿಕ್ಕಿಲ್ಲ! ಹೃದಯ ಲೀಲಾಲಾಲಸವಾಗಲಿಕ್ಕಿಲ್ಲ !

ಆದುದರಿಂದ ಎದೆಯರಸ ! ನಾವು ಮಾನವರಾಗಿ ಹುಟ್ಟಿದ ಬಳಿಕ, ಗಂಡಹೆಂಡತಿಯರಾಗಿ ಕೈಹಿಡಿದ ಬಳಿಕ, ನಿಮ್ಮ ತಾರುಣ್ಯ ನನ್ನ ಲಾವಣ್ಯಗಳ ಚಾರುಚಿತ್ರಗಳನ್ನು ಮುಪ್ಪು ಮುರಿದು ಮುದ್ದೆಮಾಡುವದಕ್ಕಿಂತ ಮೊದಲು,

ಒಮ್ಮೆಯಾದರೂ ಈ ಸಾಭ್ರಮತಿಯ ತೀರೋಪಾಂತರದ ಲತಾಕುಂಜಗಳ ಹಾಸುಗಲ್ಲುಗಳ ಮೇಲೆ ಸತಿ–ಪತಿಯರಂತೆ ಕೂಡೋಣ. ಗಂಡಹೆಂಡಿರಂತೆ ನಗೋಣ. ರಮಣ–ರಮಣಿಯರಂತೆ ನಲಿಯೋಣ. ಇಲ್ಲಿಯ ತೀರತರುರಾಜಿಯ ಹೊಂದಳಿರ–ಹಂದಿರದ ಕೇಲಿ–ಮಂದಿರದಲ್ಲಿ ನಲ್ಲನಲ್ಲೆಯರಂತೆ ಇದೊಂದು ದಿನವಾದರೂ ಕುಳಿತು ಲಲ್ಲೆವಾತುಗಳನ್ನಾಡೋಣ. ಈ ವಿಜನವನಾಂತದ ಏಕಾಂತವನ್ನು ನಮ್ಮ ದಾಂಪತ್ಯಧರ್ಮದಿಂದ ಒಂದುಬಾರಿಯಾದರೂ ಸಾರ್ಥಕಗೊಳಿಸೋಣ. ಈ ದಂಡೆಯ ಮೇಲಿನ ಚಂಡಮಲ್ಲಿಗೆಯ ಬಳ್ಳಿಮಂಡಪದ ನಿತಾಂತ ಏಕಾಂತವು ಲೀಲಾವಿಹಾರಕ್ಕಾಗಿ ನಮ್ಮನ್ನು ಕರೆಯುತ್ತಲಿದೆ. ಅಲ್ಲಿಯ ಚಿಗುರುದಿಂಬಿನ ಹೂವಿನಹಾಸಿಗೆ...........

''ದಿತಿ ! '' ಅವಳ ಕಾಮಾವೇಗಸೂಚಕವಾದ ಪ್ರೇಮಾಲಾಪವು ಅಶ್ಲೀಲದ ಅಂಚಿಗೆ ಇಳಿಯುತ್ತಿರುವದನ್ನು ಕಂಡು ಕನಲಿ ಹೇಳಿದರು ಕಶ್ಯಪರು ''ನಿನ್ನ ಎಲ್ಲ ಮನೋಭಿಲಾಷೆಗಳನ್ನೂ ಶೃಂಗಾರವಾಸನೆಗಳನ್ನೂ ಪೂರ್ತಿಗೊಳಿಸಲು ನಾನು ಸಿದ್ಧನೂ ಇದ್ದೇನೆ ಆದರೆ ದೇವಿ..............

''ಮತ್ತೇಕೆ ಈ 'ರೆ' ? ಎಂದಿಲ್ಲ ಒಂದು ದಿನ ಗಂಡನೆದುರು ಮನದಾಸೆಯನ್ನು ಬಿಚ್ಚಿಹೇಳಿದರೆ ಈ ರೇಫಗಳ ರಗಳೆಯೇಕೆ !''

–ಅವರ 'ಆದರೆ'ದಲ್ಲಿಯ ರಕಾರವು ನಕಾರದ ಮುನ್ಸೂಚನೆಯೆಂದು ತಿಳಿದು ಉದ್ವಿಗ್ನಳಾಗಿ ಕೇಳಿದಳು ಆ ದಿತಿ.

ಅದಕ್ಕೆ ಪ್ರಶಾಂತ ಚಿತ್ತದ ಆ ಮಹರ್ಷಿಗಳು ನಿರ್ವಿಕಾರ ಮನಸ್ಸಿನಿಂದ ''ದೇವಿ! ಈಗಿನ ಸಂಧ್ಯಾಸಮಯವನ್ನು ಗಮನಿಸಿದ್ದೀಯಾ !''

''ನಾಥ ! ಈ ಸಂಧ್ಯೆಯನ್ನೂ ಗಮನಿಸಿದ್ದೇನೆ. ಈ ಸಂಧ್ಯಾರಾಗದಲ್ಲಿ ಮಿಂದುನಿಂತ ಈ ವನಾಂತ, ಅದರಲ್ಲಿಯ ಈ ಏಕಾಂತ, ಏಕಾಂತದಲ್ಲಿ ಕುಳಿತಿರುವ ನನ್ನ ಪ್ರಾಣಕಾಂತ, ಸಿಂಧೂರಸ್ನಪಿತವಾದಂತಿರುವ ಅವನ ಮುಖ, ಅದರ ಚೆಲುವು ಚಾರಿಮೆ, ಎಲ್ಲವನ್ನೂ ನಾನು ಗಮನಿಸಿದ್ದೇನೆ. ಆದರೆ ಅದಕ್ಕಾಗಿ ತುಡಿಯುವ ಈ ಹೆಣ್ಣು ಜೀವದ ಮಿಡಿಯುವ ಮನಸ್ಸಿನ ಆತುರ ಕಾತರಗಳನ್ನೂ ತಾವು ತುಸುವಾದರೂ ಗಮನಿಸಿದ್ದೀರಾ!''.

''ಚೆನ್ನಾಗಿ ಗಮನಿಸಿದ್ದೇನೆ ದಿತಿ ! ಆದರೆ ಇದು ಬ್ರಾಹ್ಮಣರು ಸಂಧ್ಯಾವಂದನೆ ಅಗ್ನಿಕಾರ್ಯ ದೇವತಾಸ್ತೋತ್ರಗಳನ್ನನ್ನುತ್ತ ಭಗವದಾರಾಧನೆಯನ್ನು ಮಾಡುವ ಸಂಧ್ಯಾಸಮಯ. ಸತಿಪತಿಗಳ ಸರಸ ಶೃಂಗಾರದ ಸಮಯವಲ್ಲ.

ಪರಮಪವಿತ್ರವಾದ ಈ ಸಂಧ್ಯಾಕಾಲದಲ್ಲಿ ಮಹಾನಟರಾದ ಪರಮೇಶ್ವರರು ತಮ್ಮ ಪಾರ್ಷದರೊಂದಿಗೆ ಲೋಕದಲ್ಲಿ ಸಂಚರಿಸುತ್ತಿರುತ್ತಾರೆ. ಆದುದರಿಂದ ಎಲ್ಲರೂ

ಈ ಸಾಯಂಕಾಲದಲ್ಲಿ ಭಕ್ತಿಯಿಂದ ಆ ಪಾರ್ವತೀಪತಿಯನ್ನು –

''ಧೃತಫಣಿಗಣಭೂಷಃಪಾತು ಮಾಂ ಪಾರ್ವತೀಶಃ'' ಎಂದು ಸ್ತುತಿಸಿ,

ಯಸ್ಯಾನವದ್ಯಾಚರಿತಂ ಮನೀಷಿಣೋ ।
ಗೃಣಂತ್ಯವಿದ್ಯಾಪಟಲಂ ಬಿಭಿತ್ಸವಃ॥
ನಿರಸ್ತಸಾಮ್ಯಾತಿಶಯೋಽಪಿ ಯಃ ಸ್ವಯಂ।
ಪಿಶಾಚಚರ್ಯಾಮಚರದ್ ಗತಿಃ ಸ್ವಯಂ ॥

ಬ್ರಹ್ಮಾದಯೋ ಯತತಸೇತುಪಾಲಾಃ
ಯತ್ಕಾರಣಂ ವಿಶ್ವಮಿದಂಚ ಮಾಯಾ ।
ಆಜ್ಞಾಕರೀ ತಸ್ಯ ಪಿಶಾಚಚರ್ಯಾ ।
ಅಹೋ ವಿಭೂಮ್ನಶ್ಚರಿತಂ ವಿಡಂಬನಮ್ ॥

ಎಂದು ಮುಂತಾಗಿ ಆ ಜಗದೀಶನ ಮಹಾಮಹಿಮೆಗಳನ್ನು ಕೊಂಡಾಡುತ್ತಾರೆ.

ಇಂಥ ಪರಮ ಮಂಗಲಕಾರಕದ ಸಮಯದಲ್ಲಿ ಸರ್ವಮಂಗಲೆಯ ಪತಿ ಬರುವ ಸಂದರ್ಭದಲ್ಲಿ ಅಜ್ಞರಾದ ಲಂಪಟ–ದಂಪತಿಗಳಂತೆ ನಾವು ಕಾಮಕೇಲಿ–ಲೀಲಾ–ಲೋಲರಾಗಿರುವದು ಸರಿಯಲ್ಲ.

ಸ್ವಲ್ಪಹೊತ್ತು ತಾಳು ಸತಿ ! ರಾತ್ರಿಯಾಗಲಿ. ನಿಶೀಥಿನಿಯ ಎರಡನೆಯ ಯಾಮದಲ್ಲಿ ಖಂಡಿತವಾಗಿಯೂ ಇಂದು ನಿನ್ನ ಮನೋರಥವನ್ನು ಪೂರ್ಣಮಾಡುತ್ತೇನೆ.

ಇಂದಿನ ಬೆಳದಿಂಗಳಿನ ರಮ್ಯರಜನಿಯಲ್ಲಿ, ಈ ಶೈಲಕುಂಜದ ರಸರಂಗದಲ್ಲಿ, ಈ ಸಾಭ್ರಮತಿಯ ತಟದುತ್ಸಂಗದಲ್ಲಿ ರೂಪ–ರಸಿಕ–ರಮಣಿಯಾದ ನಿನ್ನ ನಲ್ವಾಸೆ–ಚಲ್ವಾಸೆಗಳನ್ನೆಲ್ಲ ತಣಿಸುವೆ. ಅಲ್ಲಿಯವರೆಗೆ ಪ್ರೇಯಸಿ......

''ಕಾಂತ ! ಸಂಜೆಯ ಸೊಬಗಿಗೆ ಸಂಧ್ಯಾಕುಸುಮದಂತೆ ಅರಳಿದ ತಮ್ಮ ಮುಖದ ಚೆಲುವು ಕಂಡು ಈಗ ನನ್ನ ಮನಮರುಳು ಆದಾಗ, ಕಾಮ ಕೆರಳಿ ಹೋದಾಗ ಒಂದೊಂದು ನಿಮಿಷವೂ ಯುಗವಾಗುತ್ತಲಿದೆ. ವಿಲಂಬ ಮಾಡಿದರೆ ''ಕಾಲಃ ಪಿಬತಿ ತದ್ರಸಂ'' ಎಂಬಂತೆ ರಸಾಭಾಸವಾಗುವದು. ಒಂದು ಪ್ರಹರ ವಿಲಂಬವೆಂದರೆ ಸಾಮಾನ್ಯವೇ ! ಒಂದು ಪ್ರಹರಕ್ಕೆ ಮೂರು ಗಂಟೆ. ಒಂದು ಗಂಟೆಗೆ ಅರವತ್ತು ನಿಮಿಷ. ಒಂದು ನಿಮಿಷಕ್ಕೆ ಅರವತ್ತುಲವ. ಅರವತ್ತರವತ್ತರ ಮೂರಲೇ ದಷ್ಟು ನಿಮೇಷಗಳು ಅಬ್ಬ ! ಇಷ್ಟು ದೀರ್ಘಕಾಲ ನಾಥ ! ಮನದಾಸೆಯನ್ನು ತಡೆಯುವದು ಹೇಗೆ ಸಾಧ್ಯ!''

''ದಿತಿ ! ಈ ಪುಣ್ಯಕಾಲದಲ್ಲಿ ಗೈದ ಲೀಲಾ–ವಿಲಾಸಗಳಿಂದ ಶನಿಸಂತಾನ ಉದಯಿಸಿ ವಂಶಗೌರವವು ವಿನಾಶವಾಗುವದು. ಕಾಮಾಂಧಳಾಗಿ ವಾಮಾಚರಣಕ್ಕೆ

ಇಳಿಯಬೇಡ.

ಇಂದ್ರಿಯಗಳನ್ನು ಮನದಾಸೆಯನ್ನು ತಣಿಸುವ ಮಹಾರಾಯ ಮಾರಾಯ (ಮಾರರಾಯ) ಎಂದು ಬಂದಿದ್ದೇನೆ. ನನ್ನ ಮೇಲೆ ನಿಮಗೆ ನಿಜವಾದ ಪ್ರೇಮವಿದ್ದರೆ....'' ''ನನಗೆ ಅದರ ನಿದರ್ಶನಬೇಡ. ಈಗ ಅದರ ಪ್ರದರ್ಶನವೇ ಆಗಲಿ'' ಎಂದಂದು ಅವಳು ಕಾಮಾಂಧಳಾಗಿ ಕಶ್ಯಪರು ಉಟ್ಟ ವಲ್ಕಲದ ಅಂಚನ್ನು ಹಿಡಿದು ಜಗ್ಗಿದಳು.

ಈ ಅವಸ್ಥೆಗೆ ಬಂದುಮುಟ್ಟಿದ ಅವಳ ಉತ್ತಾನ–ಪ್ರೇಮದ ಭಾವೋದ್ರೇಕ ಹಾಗೂ ಶೃಂಗಾರ–ಚೇಷ್ಟೆಗಳನ್ನು ಕಂಡು ಕಶ್ಯಪರು ''ಇನ್ನು ಇಲ್ಲಿ ನಮ್ಮ ಉಪದೇಶಗಳು ನಾಟವು. ಹೆಣ್ಣು ಇಷ್ಟು ಉನ್ಮನಸ್ಕಳಾದಾಗ ಪತಿಯು ಅವಳಿಗೆ ಅನುಕೂಲನಾಗದಿದ್ದರೆ ಅದರ ಪರಿಣಾಮ ದುರಂತ ದಾರುಣವಾಗಬಹುದು'' ಎಂದು ಮನದಲ್ಲಿಯೇ ಅಂದು ನಿರುಪಾಯರಾಗಿ ತಾವು ಮಾಡುವ ಅಪರಾಧವನ್ನು ಕ್ಷಮಿಸೆಂದು ಭಗವಂತನಿಗೆ ಬೇಡಿಕೊಂಡು ಬದ್ಧಾಸನವನ್ನು ಬಿಚ್ಚಿ ಎದ್ದರು.

ಕೈಯ್ಯಲ್ಲಿಯ ಜಪಮಾಲೆಯನ್ನು ಕೆಳಗಿಟ್ಟು ದಿತಿದೇವಿಯ ಕೈಯಲ್ಲಿ ಕೈಯಿರಿಸಿ ಸಾಭ್ರಮತಿಯ ತೀರದಲ್ಲಿ ತುಂತುರು ಸ್ನಾನಮಾಡಿ ನಿಂತ ಕೇಲೀ ಕುಂಜಗಳ ಕುಸುಮವಾಟಿಯೆಡೆಗೆ ನಡೆದರು.

ಆಗ ಅಲ್ಲಿನ ಮಕರಂದ ತೀರ್ಥದಲ್ಲಿ ಮಿಂದು ಬಂದ ಮಂದಾನಿಲವು ಆ ದಂಪತಿಗಳಿಗೆ ಪನ್ನೀರು ಚಿಮುಕಿಸಿತು.

ಲತಾಮಂಡಪದ ಮೇಲೆ ಹೂತುನಿಂತ ಹೂಗಳು ಪರಾಗವನ್ನು ಎರಚಿದವು.

ಮಧುಮುದಿತವಾದ ಭೃಂಗಗಳು ತಮ್ಮ ಸಂಗೀತದಿಂದ ಸ್ವಾಗತ ನೀಡಿದವು.

ತಳಿರುಮಂಟಪದ ತುದಿಯಲ್ಲಿ ಕುಳಿತ ಹಕ್ಕಿಪಕ್ಕಿಗಳು ಹಸೆಕರೆದ ಹಾಡು ಹೇಳಿದವು.

ಅವರ ಪ್ರಣಯ–ಜೀವನದ ಶೃಂಗಾರ–ಸಂಗೀತಕ್ಕೆ ಸಾಭ್ರಮತಿಯ ತರಂಗಗಳು ಮೃದಂಗ ನುಡಿಸಿದವು.

ದಿತಿಯ ಹೃದಯ ಗರಿಗೆದರಿತ್ತು, ಮನಸ್ಸು ಮುದಿತವಾಗಿತ್ತು, ಭಾವ ಮದಿತವಾಗಿತ್ತು, ಬಗೆ ಬಾನಿಗೇರಿತ್ತು, ನಂದನ ನೆಲಕ್ಕಿಳಿದಿತ್ತು.

ಮುಂದೆ ಕೆಲವು ತಿಂಗಳು ಕಳೆದ ಬಳಿಕ ದಿತಿಯು ಗಂಡುಮಗುವನ್ನು ಹೆತ್ತಳು. ಮಗು ತುಸು ದೊಡ್ಡವನಾದ ಬಳಿಕ ಅವನ ಬಾಲ ಪರಾಕ್ರಮ ಶೈಶವದ ಸಾಹಸಗಳನ್ನು ಕೇಳಿ ದಿತಿಯು ಮಾತೃಹೃದಯ ಕೌತುಕದ ಕೊನೆಯೇರಿ ನಿಲ್ಲುತ್ತಿತ್ತು.

ಮುಂದೆ ಅವನು ಪ್ರಚಂಡಪರಾಕ್ರಮಿಯಾಗಿ ''ವಿಶ್ವವಿಜಯೀಭವ'' ಎಂದು ಎದೆತುಂಬಿ ಆಶೀರ್ವದಿಸಿದಳು.

ಆ ಸತೀಶಿರೋಮಣಿಯ ಆಶೀರ್ವಾದದ ವಜ್ರಕವಚವನ್ನು ತೊಟ್ಟುಕೊಂಡ ದಿತಿಕುಮಾರನಾದ ಹಿರಣ್ಯಾಕ್ಷನು ಹೋದಲ್ಲೆಲ್ಲ ಅವನ ಚಂಡವಿಕ್ರಮವು ಗೆಲುವಿನ ಗೋಪುರ ಕಟ್ಟುತ್ತಿತ್ತು.

ಅವನ ಪ್ರಚಂಡ ಗದಾಘಾತದಿಂದ ವೈರಿಗಳ ಮೈಮೂಳೆಗಳು ಮುರಿದು ಧೂಳೀ ಕಣವಾಗಿ ಹಾರುತ್ತಿದ್ದವು.

ದಿನಕ್ಕೊಂದು ದೇಶವನ್ನು ಗೆಲ್ಲುತ್ತ, ಎದುರುಬಂದವರನ್ನೆಲ್ಲ ಕೊಲ್ಲುತ್ತ ನಡೆದ ಅವನಿಗೆ ಪ್ರಪಂಚವೆಲ್ಲ ಪಾದಾಕ್ರಾಂತವಾಗಿಯಿತು. ಅವನು ಭೂಪಟವನ್ನು ತರಿಸಿ ನೋಡಿದ. ಅವನಿಗೆ ವಶವಾಗದ ರಾಷ್ಟ್ರವೇ ಇರಲಿಲ್ಲ.

ಆಗ ಅವನ ಮನಸ್ಸು ಊರ್ಧ್ವಗಾಮಿಯಾಯಿತು. ಕೈಯಲ್ಲಿ ಭೀಮಗದೆಯನ್ನು ತೆಗೆದುಕೊಂಡು ನಕ್ಷತ್ರಯಾತ್ರೆಯನ್ನು ಕೈಕೊಂಡ. ಅಂತರಿಕ್ಷದ ಲೋಕಗಳೂ ಅವನ ವಶವಾದವು.

ಕೊನೆಗೆ ಸ್ವರ್ಗಲೋಕಕ್ಕೆ ಬಂದು ಅಮರಾವತಿಯ ಅಗಸೆಯ ಬಾಗಿಲಿಗೆ ಗದೆಯನ್ನು ಅಪ್ಪಳಿಸಿದ. ಸುಧರ್ಮ ಸಭೆಯಲ್ಲಿ ನಿಂತು ಸಿಂಹನಾದ ಮಾಡಿದ.

ದೇವಸ್ತ್ರೀಯರ ಗರ್ಭನಿರ್ಭೇದವಾಯಿತು. ಇಂದ್ರಚಂದ್ರ ಮೊದಲಾದ ದೇವಧುರೀಣರೆಲ್ಲ ಸಪರಿವಾರವಾಗಿ ಭೂಗತರಾದರು. ಶೂನ್ಯವಾದ ಸ್ವರ್ಗ ರಾಜಧಾನಿಯಲ್ಲಿ ಹಿರಣ್ಯಾಕ್ಷನ ಅಟ್ಟಹಾಸದ ಅಲೆಗಳು ದಿಗ್‌ದಿಗಂತಗಳನ್ನೆಲ್ಲ ಪ್ರತಿಧ್ವನಿಸಿದವು. ಹೀಗೆ ತ್ರೈಲೋಕ್ಯ ಸಾಮ್ರಾಜ್ಯವನ್ನು ಗೆದ್ದುಕೊಂಡು ಜಯಭೇರಿಯನ್ನು ಹೊಡೆಯುತ್ತ ಮನೆಗೆ ಮರಳಿದ.

ಮಗನ ಈ ಸಾಹಸಪರಂಪರೆಗಳನ್ನು ಕೇಳಿ ದಿತಿಯ ಹೃದಯ ಉಲ್ಲಾಸದಿಂದ ಉಬ್ಬಿ ಪುಟಿಚಂಡಾಗಿತ್ತು. ಅದರಲ್ಲಿಯೂ ಅವಳಿಗೆ ತನ್ನ ಸವತಿಯ ಮಕ್ಕಳಾದ ದೇವತೆಗಳನ್ನು ಸೋಲಿಸಿ ಸ್ವರ್ಗಸಿಂಹಾಸನವನ್ನೂ ತನ್ನ ಮಗನು ಆಕ್ರಮಿಸಿ ಆಳಿಬಂದದ್ದು ಹೆಮ್ಮೆಯ ಹಮ್ಮುಗೆಗೆ ಕಾರಣವಾಗಿತ್ತು.

ಅವಳು ಆನಂದದಿಂದ ಪರ್ಣಕುಟೀರದಲ್ಲಿ ಪ್ರವಚನಾನಂತರದ ಕ್ಷಣಿಕ ವಿರಾಮದಲ್ಲಿರುವ ಕಶ್ಯಪರ ಸ್ವಾಧ್ಯಾಯ ಮಂಡಪಕ್ಕೆ ನುಗ್ಗಿದಳು.

''ಕೇಳಿದಿರಾ ನಿಮ್ಮ ಮಗನ ಶೌರ್ಯ–ಸಾಹಸಗಳನ್ನು '' ಎಂದು ಸುರುಮಾಡಿ ಹಿರಣ್ಯಾಕ್ಷನ ವಿಜಯವಾರ್ತೆಯನ್ನೆಲ್ಲ ಒಂದು ದೊಡ್ಡ ಕೌತುಕದ ಕತೆಯ್ನಾಗಿ ಮಾಡಿ ಹೇಳಿದಳು.

''ಇವೆಲ್ಲ ಅವನ ಶೌರ್ಯ–ಸಾಹಸಪರಂಪರೆಗಳ ಸಮಾಚಾರವನ್ನು ಕೇಳಿಯೂ

ನಾನು ಸಂತೋಷಪಡದಂತಾಗಿದೆ. ಯಾಕೆಂದರೆ ಇಂದ್ರಾದಿ ಸುರಸೋದರರನ್ನೆಲ್ಲ ಸೋಲಿಸಿ ಬಡೆದೋಡಿಸಿದ್ದಾನಂತೆ. ಸ್ವರ್ಗಸಿಂಹಾಸನ ಸುರಸಾಮ್ರಾಜ್ಯಗಳೆರಡನ್ನೂ ಪಾದಾಕ್ರಾಂತ ಮಾಡಿಕೊಂಡು ಬಂದಿರುವನು. ಇದರಿಂದ ಅಕ್ಕನಿಗೆ ಬಹಳ ದುಃಖವಾಗಿರಬಹುದು. ನಾನು ಅವನಿಗೆ ಚೆನ್ನಾಗಿ ಛೀಮಾಡಬೇಕೆಂದು ನಿರ್ಧರಿಸಿದ್ದೇನೆ'' ಎಂದು ಗೆಲವಿನ ನಲಿವಿನಲ್ಲಿ ತುಸು ನೋವನ್ನು ಬೆರೆಸಿದಂತೆ ಮಾಡಿ ಮಾತನಾಡಿದಳು ಧೂರ್ತಳಾದ ದಿತಿ.

ಅಷ್ಟರಲ್ಲಿ ಅಲ್ಲಿ ಒಂದು ಋಷಿಗಳ ಗುಂಪು ರಭಸದಿಂದ ಪ್ರವೇಶಿಸಿ ಕಶ್ಯಪರಿಗೆ ವಂದಿಸಿ,

''ಸ್ವಾಮಿ ! ನಿಮ್ಮ ಮಗನಾದ ಹಿರಣ್ಯಾಕ್ಷನ ಉಪದ್ರವವು ಮಿತಿ ಮೀರಿದೆ. ಋಷ್ಯಾಶ್ರಮಗಳನ್ನೆಲ್ಲ ಹಾಳುಮಾಡಿ ನಮ್ಮ ದಂಡಕಮಂಡಲಗಳನ್ನು ಮುರಿದೊಗೆದಿದ್ದಾನೆ. ಆಕಳುಗಳನ್ನು ಕೊಂದಿದ್ದಾನೆ. ಯಜ್ಞಕುಂಡದಲ್ಲಿ ಮಲಮೂತ್ರಗಳನ್ನು ಸುರಿಸಿದ್ದಾನೆ. ಹೋಮ–ಹವನಗಳನ್ನು ಪ್ರತಿಬಂಧಿಸಿದ್ದಾನೆ. ಎಷ್ಟೋ ಮುನಿಗಳ ಗಡ್ಡಜಡೆಗಳನ್ನೂ ಕಿತ್ತಿದ್ದಾನೆ.

ಇಂಥ ಚಂಡಾಲ ದೈತ್ಯನನ್ನು ಈ ಕ್ಷಣದಲ್ಲಿ ಸುಟ್ಟುಹಾಕುವ ಶಕ್ತಿ ನಮ್ಮಲ್ಲಿದೆ, ಆದರೆ ಅವನು ತಮ್ಮ ಮಗನೆಂದು ತಿಳಿದು ತಮಗೆ ಕೋಪ ಬಂದೀತೆಂದು ಬಗೆದು ಇಷ್ಟುದಿನ ಸುಮ್ಮನಿದ್ದೆವು. ಇನ್ನು ಮೇಲೆ ಮಾತ್ರ ನಮಗೆ ಪಾಪ–ಪುರುಷನ ಈ ಅತ್ಯಾಚಾರವನ್ನು ತಾಳುವದೂ ಆಗುವದಿಲ್ಲ, ಆ ಹತ್ಯಾಕಾಂಡವನ್ನು ನೋಡುವದೂ ಆಗುವದಿಲ್ಲ, ಕಾರಣ ತಾವು ಅವನಿಗೆ ಶಾಸನಮಾಡಿದರೆ ಸರಿ, ಇಲ್ಲದಿದ್ದರೆ ನಮ್ಮ ಬ್ರಹ್ಮದಂಡಕ್ಕೆ ಅವನು ಪಾತ್ರನಾಗುವದು ಖಂಡಿತ'' ಎಂದು ಖಡಾಖಂಡಿತವಾಗಿ ಹೇಳಿದರು.

ಆ ಬ್ರಹ್ಮರ್ಷಿ ವೃಂದಕ್ಕೆ ತಮ್ಮ ಮಗನಿಂದಾದ ಉಪಟಳ ಉಪದ್ರವವನ್ನು ಕೇಳಿ ಕಶ್ಯಪರ ಮನಸ್ಸು ಬಹಳ ವ್ಯಥೆಗೊಂಡಿತು. ಅವರಿಗೆ ಹೊಟ್ಟೆಯಲ್ಲಿ ವಿಚಿತ್ರ ಸಂಕಟವಾದಂತಾಯಿತು. ಏನುಮಾಡಬೇಕೋ ತಿಳಿಯದಾಯಿತು.

ಅವರಿಗೆ ತಿಳಿಯದಂತೆಯೇ ಅವರ ಹಣ್ಣೊಡೆದ ಕಣ್ಣೆವೆಗಳಿಂದ ಎರಡು ಹನಿಗಳು ಬಿಳಿಗಡ್ಡದಮೇಲೆ ಬಿದ್ದು ಎದೆಯ ಮೇಲೆ ಉರುಳಿದವು.

ಹತ್ತೆಂಟುಸಲ ತಾವು ಹೇಳಿದರೂ ತಮ್ಮ ಮಾತನ್ನೇ ಕೇಳದ ಉನ್ಮತ್ತ ಮಗನ ದುರ್ವರ್ತನೆಯಿಂದ ಅವರ ಹೃದಯದಲ್ಲಿ ದುಃಖಕಡಲಾಡಿ, ಕಿಚ್ಚು ಕುದಿದಾಡುವದು ಆ ಸಂಯಮಸ್ಮಿಮಿತವಾದ ಮುಖಮಂಡಲದಲ್ಲಿಯೂ ಸ್ಪಷ್ಟವಾಗಿ ಗೋಚರಿಸುತ್ತಿತ್ತು.

ನಂಜುಂಡನಂತೆ ನೋವಿನಗಡ್ಡೆಗಳನ್ನೆಲ್ಲ ದುಃಖದಿಂದ ಮೌನವಾಗಿಯೇ ನುಂಗುತ್ತಲಿರುವ ಪತಿಯನ್ನು ಕಂಡು ಮಹಾಸತಿಯಾದ ದಿತಿಯ ಮನಸ್ಸಿನಲ್ಲಿ

ಕಳವಳವಾಯಿತು. ಮಗನಮೇಲಿನ ಮಮತೆ ಗಂಡನಮೇಲಿನ ಭಕ್ತಿ ಇವೆರಡರ ನಡುವೆ ಸಿಕ್ಕು ಅವಳು ನುಚ್ಚುನೂರಾದಳು.

ಕೊನೆಗೆ ಅವಳು ಆ ಬ್ರಹ್ಮವೃಂದದವರಿಗೆ ವಂದಿಸಿ ''ನಾನು ಹೇಳಿ ಆ ಮಗನನ್ನು ನಿಗ್ರಹಮಾಡುತ್ತೇನೆ. ನೀವು ಗಾಬರಿಯಾಗಬೇಡಿರಿ'' ಎಂದು ಹೇಳಿ ಕಳಿಸಿದಳು.

ಕಶ್ಯಪರು ಬೇಡವೆಂದು ಹೇಳಿದರೂ ಕೇಳದೇ ಮದೋನ್ಮತ್ತನಾದ ದೈತ್ಯರಾಜ ಹಿರಣ್ಯಾಕ್ಷನ ಹತ್ತಿರ ಬಂದು ಬ್ರಹ್ಮದ್ರೋಹವನ್ನು ಮಾಡಬೇಡ ಎಂದು ಹೇಳಿದಳು. ಮದಾಂಧನಾದ ಆ ದುರುಳ ದಾನವನು ''ನಿಮ್ಮಂಥ ಮರುಳು ಹೆಣ್ಣು ಮಕ್ಕಳಿಗೆ ಏನು ತಿಳಿಯುತ್ತದೆ ಒಳಗೆ ಹೋಗು'' ಎಂದು ಗದರಿಸಿದನು. ಮತ್ತೆ ಋಷ್ಯಾಶ್ರಮಗಳನ್ನು ಕಿತ್ತಿ ಈಡ್ಯಾಡಲು ಹೊರಟನು.

ದಿತಿಗೆ ಬಹಳ ದುಃಖವಾಯಿತು. ಮಗನ ಜಯ–ಯಾತ್ರೆಯಲ್ಲಿ ಅವಳಿಗೆ ಅವನ ಪ್ರೇತಯಾತ್ರೆಯೇ ಕಂಡಿತು. ಅವನ ಮರಣವು ನಿಶ್ಚಿತವೆಂದು ಅವಳು ತಿಳಿದಳು.

ಅವಮಾನ ದುಃಖಗಳಿಂದ ಅಳುತ್ತ ಕಶ್ಯಪರ ಹತ್ತಿರ ಬಂದು ನಡೆದ ಸಮಾಚಾರವನ್ನೆಲ್ಲ ತಿಳಿಸಿದಳು. ''ತಮ್ಮಂಥ ಬ್ರಹ್ಮಜ್ಞಾನಿಗಳ ಹೊಟ್ಟೆಯಿಂದ ಇಂಥ ಬ್ರಹ್ಮದ್ರೋಹಿಯಾದ ಮಗ ಹೇಗೆ ಹುಟ್ಟಿದ'' ಎಂದು ಕೇಳಿದಳು.

ಆಗ ಶಾಂತಮೂರ್ತಿಗಳಾದ ಆ ಕುಲಪತಿಗಳು ಭೂತಾಕಾಶದಲ್ಲಿ ನೆನಹಿನ ದೀವಿಗೆಯನ್ನು ಹಿಡಿದುನೋಡಿ ಮೆಲ್ಲನೆ ನುಡಿದರು.

''ದಿತಿ ! ನಿನಗೆ ನೆನಪಿದೆಯೇ! ಇಂದಿಗೆ ಮೂವತ್ತು ವರುಷಗಳ ಹಿಂದಿನ ಮಾತು. ನಾನು ಒಂದುದಿನ ಸಂಧ್ಯಾಸಮಯದಲ್ಲಿ ಸಾಭ್ರಮತಿಯ ತೀರದಲ್ಲಿ ಸಂಧ್ಯಾವಂದನೆಮಾಡುತ್ತ ಕುಳಿತಾಗ ನೀನು ಕಾಮಾಂಧಳಾಗಿ ನನ್ನನ್ನು ದಾಂಪತ್ಯ ಧರ್ಮಕ್ಕೆ ಎಳೆದೆ. ಅದರಿಂದ ಮಹಾವ್ರಾತ್ಯ ಸಂತಾನ ಹುಟ್ಟುವದು ಎಂದು ನಾನು ನಿನಗೆ ಆಗಲೇ ಹೇಳಿದ್ದೆ, ಅದರೆ ಆಗ ನಿನಗೆ ಚಿಕ್ಕವಯಸ್ಸು, ತುಂಬುತಾರುಣ್ಯ ತುಳುಕುವ ಲಾವಣ್ಯ, ಉನ್ಮಾದಕ ವಾತಾವರಣ, ಉತ್ತೇಜಕ ಸಂಧ್ಯಾಸೌಂದರ್ಯ, ಮೋಹಕವಾದ ನನ್ನ ಯೌವನದ ಚೆಲುವು ಎಲ್ಲವೂ ಕೂಡಿ ನಿನ್ನ ತಲೆಕೆಡಿಸಿಬಿಟ್ಟವು. ನನ್ನನ್ನೂ ಒತ್ತಾಯಪಡಿಸಿದೆ. ಅದರ ದುಷ್ಟ ಪರಿಣಾಮವೇ ಈ ಹಿರಣ್ಯಾಕ್ಷ, ನಿನ್ನ ಪಾಪದ ಪಿಂಡ'' ಎಂದು ಹೇಳಿ ನಿಟ್ಟುಸಿರುಗರೆದರು.

ಆಗ ಪಶ್ಚಾತ್ತಾಪದಗ್ಧಳಾದ ದಿತಿದೇವಿಯು ಅವರಿಗೆ ''ನನಗೆ ಭಗವಂತನ ಸಾಕ್ಷಾತ್ಕಾರವಾಗುವಂಥ ಉಪಾಯವನ್ನು ಹೇಳಿರಿ'' ಎಂದು ಕೇಳಿದಳು.

ಆಗ ಅವರು ಅವಳಿಗೆ ಹರಿನಾಮವನ್ನು ಜಪಿಸಲಿಕ್ಕೆ ಹೇಳಿದರು.

ಆ ಬ್ರಹ್ಮರ್ಷಿಗಳ ಅಜ್ಞೆಯಂತೆ ಅವಳು ಅದೇ ಅರ್ಬುದಾಚಲದ ಆಧಿತ್ಯಕೆಯ

ಮೇಲೆ ಹರಿಯುವ ಸಾಭ್ರಮತಿ ತೀರದಲ್ಲಿಯ ಅದೇ ನೀರ್ಗಲ್ಲಿನ ಮೇಲೆ ನಿಶ್ಚಲಳಾಗಿ ಕುಳಿತು ಹರಿನಾಮವನ್ನು ಅವರು ಹೇಳಿದಂತೆ ಜಪಿಸಿದಳು.

ಅವಳ ಏಕಾಗ್ರಮನಸ್ಸಿನ ಜಪತಪೋನುಷ್ಠಾನಕ್ಕೆ ಪ್ರೀತಪ್ರಸನ್ನನಾಗಿ ಪರಮಾತ್ಮ ಬಂದು ''ದಿತಿ ! ಏನು ವರಬೇಕೋ ಬೇಡು ಕೊಡುತ್ತೇನೆ'' ಎಂದನು.

''ಭಗವನ್!'' ಭಕ್ತಿಭಾವದಿಂದ ಗದ್ಗದಾಯಮಾನವಾದ ರುದ್ಧ ಕಂಠದಿಂದ ದಿತಿ ಹೇಳಿದಳು. ''ನನ್ನ ಮಗನು ಬೇಗನೇ ಸಾಯುವಂತೆ ಒಂದು ವರಕೊಡು''.

ಅವಳ ಮಾತುಕೇಳಿ ಶ್ರೀಹರಿಯು ಆಶ್ಚರ್ಯಚಕಿತನಾಗಿ ನಿಂತುಕೊಂಡ.

''ದಿತಿದೇವಿ ! ಶಬ್ದವನ್ನು ನೀನು ತಪ್ಪಾಗಿ ಉಚ್ಚರಿಸಿದಂತೆ ತೋರುವದು. 'ಮಗನು **ಸಾಯದಂತೆ**' ಎನ್ನುವದರ ಬದಲು '**ಸಾಯುವಂತೆ**' ಎಂದು ಉಚ್ಚರಿಸಿರುವಿಯೋ ಏನೋ. ಇನ್ನೊಮ್ಮೆ ವಿಚಾರಮಾಡಿ ಬೇಡು'' ಎಂದು ನಾರಾಯಣನು ಅವಳಿಗೆ ಎಚ್ಚರಿಕೆಯನ್ನು ಕೊಟ್ಟನು.

''ಇಲ್ಲ ಸ್ವಾಮಿ!'' ಅಚಲನಿರ್ಧಾರದ ದನಿಯಲ್ಲಿ ಹೇಳಹತ್ತಿದಳು ಆ ದಿತಿ. ''ನನ್ನ ಮಗನು ಸಾಯುವಂತೆಯೇ ನನಗೆ ವರಬೇಕಾಗಿದೆ. ಅದು ಕೂಡ ನಿನ್ನ ಕೈಯಲ್ಲಿಯ ಸುದರ್ಶನ ಚಕ್ರದಿಂದಲೇ ಆದಷ್ಟು ಬೇಗ ಆ ದುಷ್ಟ ಪುತ್ರನು ಸಾಯುವಂತಾಗಲಿ. ಅದಕ್ಕಾಗಿಯೇ ನಾನೀಗ ತಪಸ್ಸನ್ನು ಕೈಕೊಂಡಿದ್ದು''.

ಅತ್ಯಂತ ವ್ರಾತ್ಯನಾದ ನನ್ನ ದೈತ್ಯಪುತ್ರ ಹಿರಣ್ಯಾಕ್ಷನು ಬ್ರಹ್ಮಹತ್ಯಾದಿ ಅನೇಕ ಮಹಾಪಾತಕಗಳನ್ನು ಮಾಡಿದ್ದರಿಂದ ''ಅತ್ಯುತ್ಕಟೈಃಪುಣ್ಯಪಾಪೈಃ ಇಹೈವ ಫಲಮಶ್ನುತೇ'' ಎಂಬಂತೆ ಸಾಯುವದಂತೂ ನಿಶ್ಚಿತ.

ಆದರೆ ಅವನು ಬ್ರಹ್ಮದಂಡಕ್ಕೆ ಪಾತ್ರನಾಗಿ ಭಕ್ತರ ಕೋಪಶಾಪದಿಂದ ಸುಟ್ಟುಹೋದರೆ ಜನ್ಮಜನ್ಮಾಂತರಕ್ಕೂ ಅವನಿಗೆ ಉದ್ಧಾರವಾಗುವದಿಲ್ಲ. ''ಅದಾಗಬಾರದೆಂದೇ ಭಗವಂತ ! ನಾನು ನಿನ್ನನ್ನು ಬೇಡಿಕೊಳ್ಳುತ್ತಲಿದ್ದೇನೆ. ನಿನ್ನ ಸುದರ್ಶನ ಚಕ್ರದಿಂದ ಮರಣಬಂದರೆ ಅವನಿಗೆ ಮುಂದಾದರೂ ಮುಕ್ತಿ ಲಬ್ಧವಾಗುವದು. ಆದುದರಿಂದ ನೀನು ಸ್ವಯಂ ನಿನ್ನ ಚಕ್ರದಿಂದ ಅವನನ್ನು ಸಂಹಾರ ಮಾಡು. ಇದಕ್ಕಾಗಿಯೇ ನಾನು ನಿನ್ನನ್ನು ಕುರಿತು ತಪಸ್ಸು ಮಾಡುತ್ತಲಿದ್ದುದು. ಇದೇ ನನಗೆ ಬೇಕಾದ ವರ'',

ಎಂದು ಹೇಳಿ ಭಕ್ತಿಯಿಂದ ವಂದಿಸಿ ನಿಂದಳು ದಿತಿದೇವಿ.

ಅವಳ ಜನ್ಮಾಂತರ–ಧಾವಿಯಾದ ಪುತ್ರ–ವಾತ್ಸಲ್ಯ, ವಚನ –ಕೌಶಲ್ಯ ಹರಿಭಕ್ತಿಗಳನ್ನು ಕಂಡ ಭಗವಂತನು ''ತಥಾಸ್ತು'' ನಿನ್ನ ಮಗನನ್ನು ನಾನೇ ಸುದರ್ಶನದಿಂದ ಸಂಹರಿಸುತ್ತೇನೆ'' ಎಂದು ಹೇಳಿದನು.

ಆಗ ದಿತಿಯು ''ಸ್ವಾಮಿ ! ಇನ್ನೂ ಒಂದು ವರವನ್ನು ದಯಪಾಲಿಸು.

''ಈ ಮಗನು ಹೀಗೆ, ಬ್ರಹ್ಮದ್ವೇಷಿಯಾದ ನನ್ನ ಇನ್ನೊಬ್ಬ ಮಗ ಹಿರಣ್ಯ ಕಶಿಪುವಂತೂ ಇವನಿಗಿಂತಲೂ ದುಷ್ಟ, ಭ್ರಷ್ಟ, ಹರಿದ್ವೇಶಿ, ಬ್ರಹ್ಮದ್ರೋಹಿ. ಇವನಂತೆ ಅವನಾದರೂ ಒಂದಿಲ್ಲ ಒಂದುದಿನ ನಿನ್ನ ಸುದರ್ಶನ ಚಕ್ರಕ್ಕೆ ಆಹುತಿಯಾಗುವವನೇ. ಸ್ವಾಮಿ ! ಹರೆಯದ ಹುಚ್ಚಿನಲ್ಲಿ ನಾನು ಮಾಡಿದ ಸಂಧ್ಯಾಸಮಯದ ಸಂಭೋಗಕ್ಕೆ ಸರಿಯಾಗಿ ಪ್ರಾಯಶ್ಚಿತ್ತ ದೊರೆತಂತಾಯಿತು.

ಈ ಮಕ್ಕಳ ಗತಿಯಂತೂ ಹೀಗಾಯಿತು. ಆದರೆ ಇನ್ನುಮುಂದಾದರೂ ಸಾತ್ವಿಕನೂ ನಿನ್ನ ಭಕ್ತನೂ ಕುಲಕೋಟಿಯನ್ನು ಉದ್ಧರಿಸುವವನೂ ಆದ ಓರ್ವ ಮೊಮ್ಮಗನನ್ನು ಕರುಣಿಸು. ಭಕ್ತಾಗ್ರೇಸರನಾದ ಅಂಥ ಮೊಮ್ಮಗನ ಮುಖವನ್ನು ನೋಡಿಯಾದರೂ ಮುಪ್ಪಿನಕಾಲದಲ್ಲಿ ಕಶ್ಯಪರ ದುಃಖದಾವಾಗ್ನಿ ಶಾಂತವಾಗಲಿ. ಮತ್ತು ಆ ಹರಿಭಕ್ತನಾದ ದೈತ್ಯಕುಮಾರನ ಪುಣ್ಯದಿಂದ ಅವನ ತಂದೆ ಕಕ್ಕಂದಿರು ಗೈದ ಪಾಪರಾಶಿಗಳೆಲ್ಲ ತೊಳೆದು, ದುರಿತದುಷ್ಕರ್ಮಗಳೆಲ್ಲ ಕಳೆದು, ನನ್ನ ಮಕ್ಕಳಾದ ಇವರಿಬ್ಬರಿಗೂ ಸದ್ಗತಿಯಾಗಲಿ, ಶುಭಲೋಕವಾಗಲಿ, ನಿನ್ನ ಪೂರ್ಣಅನುಗ್ರಹವಾಗಲಿ'' ಎಂದು ಬೇಡಿಕೊಂಡಳು.

ದಿತಿದೇವಿಯ ದೂರದರ್ಶಿತ್ವ, ಕುಲಕಲ್ಯಾಣಕಾಂಕ್ಷೆ, ತನ್ನ ಮನೋರಥವನ್ನು ಸಾಧಿಸುವಯುಕ್ತಿ, ಅದಕ್ಕೆ ಅನುಕೂಲವಾದ ಉಕ್ತಿ, ಸಂದರ್ಭಾನುಗುಣವಾಗಿ ಅವುಗಳ ಪ್ರಯುಕ್ತಿಗಳನ್ನು ಕಂಡು ಹೆಣ್ಣಿನ ಕೌಶಲ್ಯದ ಬಗ್ಗೆ ದೇವನಿಗೇ ವಿಸ್ಮಯವಾಯಿತು.

ಎಲ್ಲರನ್ನೂ ಉದ್ಧರಿಸಲೆಂದು ಕೇಳಿದ ಅವಳ ಎರಡನೆಯ ವರಕ್ಕೂ ''ಅಸ್ತು'' ಎಂದು ಹೇಳಿ ಭಗವಂತನು ಅದೃಶ್ಯನಾದನು.

ಇತ್ತ ದೈತ್ಯೇಶ್ವರನಾದ ಹಿರಣ್ಯಾಕ್ಷನು ಭೂಮ–ವ್ಯೋಮದ ರಾಜ್ಯ–ಸಾಮ್ರಾಜ್ಯಗಳನ್ನೆಲ್ಲ ಗೆದ್ದು ಸಲಿಲ–ಸಂಸಾರದ ಸಾರ್ವಭೌಮನಾದ ವರುಣನ ಜೊತೆಗೆ ಯುದ್ಧಮಾಡಬೇಕೆಂದು ಸಮುದ್ರದ ಅಂತರಾಳದಲ್ಲಿ ಧುಮುಕಿದನು. ವರುಣ ಲೋಕಕ್ಕೇ ಹೋಗಿ ಗುಡುಗುಹಾಕಿದನು.

ಈ ದೃಪ್ತದಾನವನ ಸಾಹಸ–ಸಂರಂಭಗಳನ್ನು ಕಂಡು, ಅವನ ಸಿಂಹನಾದ ಆರ್ಭಟಿಯನ್ನು ಕೇಳಿ ಸಂಭ್ರಾಂತನಾದ ಆ ನೀರಿನರಸನು ದಾನವನ ಹತ್ತಿರ ಬಂದು–

''ದಾನವೇಂದ್ರ ! ವಾರ್ಧಕ್ಯದ ಮೂಲಕ ದೀನದುರ್ಬಲನಾದ ನಾನು ಈ ಪ್ರಪಂಚವನ್ನು ಬಿಟ್ಟು ಪರಮಾರ್ಥದ ಮಾರ್ಗವನ್ನು ಹಿಡಿದಿದ್ದೇನೆ. ಇಂಥ ಉಪರತಿಯ ದಾರಿಯನ್ನು ಹಿಡಿದ ಕ್ಷೀಣತಾಪಸರನ್ನು ಗೆದ್ದರೂ ನಿನಗೆ ಶ್ರೇಯಸ್ಸಿಲ್ಲ, ಕೊಂದರೂ ಕೀರ್ತಿಯಿಲ್ಲ,

ವೀರ–ವರೇಣ್ಯನಾದ ದೈತ್ಯಪತೇ ! ನಿನಗೆ ನಿಜವಾಗಿ ಚಂಡ–ಭುಜ–ಬಲದ ಓರ್ವ ಗಂಡುಗಲಿಯೊಡನೆ ಕಾದುವ ಅಪೇಕ್ಷೆ ಇದ್ದರೆ ಇದೇ ಸಾಮುದ್ರ–ಸಲಿಲದಲ್ಲಿ ಶ್ರೀ ಹರಿಯು ವನವರಾಹ ರೂಪದಿಂದ ಪ್ರವೇಶಿಸಿದ್ದಾನೆ. ಅವನನ್ನು ಹೋಗಿ ಕೆಣಕು.

ಅವನು ದರ್ಪಾಂಧ್ಮಾತವಾದ ನಿನ್ನ ಈ ಟೊಂಗೆದೋಳುಗಳ ತೀಟೆಯನ್ನು ತೀರಿಸಬಲ್ಲನು'' ಎಂದು ಹೇಳಿ ಅವನ ಗರ್ವದುರಿಗೆ ಗಾಳಿ ಹಾಕಿ ಕಳಿಸಿದನು.

ವರುಣನ ವಾಕ್ಯದಿಂದ ಉತ್ತೇಜಿತನಾದ ಆ ಅಸುರಾಗ್ರಣಿಯು ಸಾಗರದ ಅಗಾಧ ನೀರಿನರಾಶಿಯ ಅಂತಸ್ಥಲದಲ್ಲಿ ಹೆಮ್ಮೊಸಳೆಯಂತೆ ಹೊಕ್ಕು ಹರಿದಾಡಿ ಹರಿಯನ್ನು ಹುಡುಕಹತ್ತಿದನು.

ಆಗ ಶ್ರೀ ಹರಿಯು ಆದಿವರಾಹ ವೇಷದಿಂದ ನೀರಿನಾಳದಲ್ಲಿ ಮುಳುಗಿದ ಭೂಮಿಯನ್ನು ತನ್ನ ಕೋರೆದಾಡೆಗಳ ಮೇಲೆ ಹೊತ್ತುಕೊಂಡು ಮೇಲೆ ಬರುತ್ತಲಿದ್ದನು.

ಅವನನ್ನು ಕಂಡು ಹಿರಣ್ಯಾಕ್ಷನು ಉತ್ಸಾಹದಿಂದ ಗದೆಯನ್ನು ಎತ್ತಿ ಹೊಡೆಯಹೋದನು. ವರಾಹರೂಪಿಯಾದ ವೀರನಾರಾಯಣನು ತನ್ನ ಕೋರೆದಾಡೆಯ ಮೇಲಿರುವ ಭೂಮಿಯನ್ನು ಒಂದೆಡೆ ಇರಿಸಿ, ದುಷ್ಟದಾನವನ ದರ್ಪವನ್ನು ಇಳಿಸಬೇಕೆಂದು ತಾನೂ ಗದಾಪಾಣಿಯಾಗಿ ಯುದ್ಧಕ್ಕೆ ಬಂದನು.

ಕೆಲಕಾಲ ಅವನೊಡನೆ ಕದನ ಕುತೂಹಲದಿಂದ ಕಾದಾಡಿ ಕೊನೆಗೆ ಆದಿಸೂಕರನು ಅವನ ತಾಯಿಯ ಅಪೇಕ್ಷೆಯಂತೆ ಸುದರ್ಶನದಿಂದ ಸಂಹಾರಮಾಡಿದನು.

ಅದನ್ನು ಕೇಳಿ ದಿತಿದೇವಿಗೆ ವಿಚಿತ್ರ ದುಃಖವಾಗಿ ಕರುಳು ಕುದಿದಂತಾದರೂ ಅಂದಿಗೆ ಸಂಧ್ಯಾಭೋಗದ ನಿಂದ್ಯಪಾಪ ತೊಳೆದುಹೋದಂತೆನಿಸಿತು.

ಮುಂದೆ ಕೆಲದಿನಗಳಲ್ಲಿ ಅವಳ ಸೊಸೆಯಾದ ಕಯಾಧು ಮಹಾರಾಣಿಯು ಪ್ರಲ್ಹಾದನೆಂಬ ಗಂಡು ಮಗುವನ್ನು ಹೆತ್ತ ಸಮಾಚಾರವನ್ನು ಕೇಳಿದಿತಿಯು ಮೊಮ್ಮಗನನ್ನು ಕಾಣಬೇಕೆಂದು ಧಾವಿಸಿ ಹಿರಣ್ಯಾಕ್ಷನ ಅಂತಃಪುರಕ್ಕೆ ಬಂದಳು.

ಹುಡುಗನ ಮುಖದ ಮೇಲಿನ ಸಾತ್ವಿಕ ಕಳೆಯನ್ನು ಕಂಡು ಇವನೇ ಮುಂದೆ ಹರಿಭಕ್ತನಾಗಿ ಕುಲೋದ್ಧಾರಕನಾಗಬಹುದೆಂಬ ಆಶೆ ಅವಳ ಮನದಲ್ಲಿ ಕುಡಿಯೊಡೆಯಿತು.

ಒಂದೊಂದು ಸಲ ಆ ಕೂಸು ಬಹಳ ಅಳಹತ್ತಿದಾಗ ಅದರ ಅಜ್ಜಿಯಾದ ದಿತಿದೇವಿಯು ಅದನ್ನು ಯಾರೂ ದೈತ್ಯರಿಲ್ಲದ ಏಕಾಂತದಲ್ಲಿ ಕರೆದೊಯ್ದು,

''ಹರಿನಾರಾಯಣ ದುರಿತನಿವಾರಣ

ವಿಶ್ವೋದ್ಧರಣ ಜನಿಮೃತಿಕಾರಣ

ಹರಿನಾರಾಯಣ ದುರಿತನಿವಾರಣ''॥

ಎಂದು ಹರಿನಾಮಸ್ಮರಣೆಯನ್ನು ಕಳ್ಳದನಿಯಲ್ಲಿ ಮಾಡುತ್ತಲಿದ್ದಳು. ಅದನ್ನು ಕೇಳಿ ಆ ದೈತ್ಯಶಿಶುವು ತಕ್ಷಣದಲ್ಲಿ ಅಳುವದನ್ನು ನಿಲ್ಲಿಸಿ ತನ್ನ ಪುಟ್ಟ ಕೈಗಳಿಂದ ಚಪ್ಪಾಳೆಯನ್ನು ಇಕ್ಕುತ್ತ ಆದರದಿಂದ ಆಲಿಸುತ್ತಿತ್ತು. ಅದನ್ನು ನೋಡಿ ದಿತಿಗೆ ತಮ್ಮ

ವಂಶೋದ್ಧಾರಕನಾದ ಸತ್ಪುತ್ರ ಇವನೇ ಎಂದು ಖಾತ್ರಿಯಾಯಿತು. ಮಗನಿಗೆ 'ಹರಿಭಕ್ತನಾಗು' ಎಂದು ಆಶೀರ್ವದಿಸಿ ಆಶ್ರಮಕ್ಕೆ ಮರಳಿದಳು.

ಮುಂದೆ ಕೆಲವರುಷಗಳು ಕಳೆದ ಬಳಿಕ ಒಂದುದಿನ ಸಂಧ್ಯಾಸಮಯ. ಅದೇ ಅರ್ಬುದಾಚಲದ ಸಾಭ್ರಮತಿಯ ದಂಡೆಯಲ್ಲಿ ಬಂಡೆಗಲ್ಲಿನ ಮೇಲೆ ಮಹರ್ಷಿ ಕಶ್ಯಪರು ಸಂಧ್ಯಾವಂದನೆಮಾಡುತ್ತ ಕುಳಿತುಕೊಂಡಿದ್ದರು.

ದಿತಿದೇವಿಯು ನೀರು ತರಲಿಕ್ಕೆಂದು ಬಿಂದಿಗೆಯನ್ನು ತೆಗೆದುಕೊಂಡು ನದಿಗೆ ಬಂದಳು. ಸಲಿಲಮಧ್ಯದ ಶಿಲಾಫಲಕದ ಮೇಲೆ ಕುಳಿತ ಮುನಿಯ ಮುಖಮಂಡಲವು ಸಂಧ್ಯಾರುಣನ ಸಿಂಧೂರಕಿರಣಗಳಿಂದ ರಂಜಿಸಿ ಇನ್ನೂ ಸುಂದರವಾಗಿ ಕಾಣುತ್ತಿತ್ತು.

ಅದನ್ನು ನೋಡಿ ದಿತಿಗೆ ಒಂದು ಕ್ಷಣ ಆಕರ್ಷಣೆಯೆನಿಸಿ ಕಣ್ಣು ಪಿಳಕಿಸದೆ ಅವರ ಮುಖವನ್ನು ನೊಡುತ್ತ ನಿಂತುಬಿಟ್ಟಳು. ಅಂಥ ಪತಿಯನ್ನು ಪಡೆದ ತಾನೇ ಧನ್ಯಳೆಂದುಕೊಂಡಳು.

ಆಗ ಅವಳಿಗೆ ತನ್ನ ಅರವತ್ತು ವರುಷದ ಹಿಂದಿನ ಇಂಥದೇ ಒಂದು ಸಂಧ್ಯಾಸಮಯದಲ್ಲಿ ಕಾಮಾಂಧಳಾಗಿ ತಾನು ಗೈದ ಅಚಾತುರ್ಯವೆಲ್ಲ ನೆನಪಿಗೆ ಬಂದು ನಾಚಿಕೆಯೆನಿಸಿತು. ಅಂದಿನ ಆ ವಿಷಗಳಿಗೆಯಲ್ಲಿ ತಾನು 'ಒಂದು ಕ್ಷಣಗೈದ ತಪ್ಪಿಗೆ' ತನಗೊದಗಿದ ಕುತ್ತು ಸಂತಾನನಾಶಗಳನ್ನು ನೆನೆದು ಅವಳ ಮೈ ಜುಮ್ಮೆಂದಿತು. ಆ ಅಪರಾಧಕ್ಕಾಗಿ ಮುನಿಯಲ್ಲಿ ಈಗ ಮತ್ತೊಮ್ಮೆ ಕ್ಷಮೆಯನ್ನು ಬೇಡಬೇಕೆನ್ನಿಸಿತು.

ಅಷ್ಟರಲ್ಲಿ ದೂರದಿಂದ ಚಿಕ್ಕಮಕ್ಕಳ ತಂಡವೊಂದು ನೀರು ಕುಡಿಯಲಿಕ್ಕೆಂದು ನದಿಗೆ ನುಗ್ಗಿತು. ಆ ತುಂಟ ಹುಡುಗರಲ್ಲಿ ಕೆಲವರು ನೀರುಕುಡಿದಾದ ಬಳಿಕ ತಮ್ಮ ಜಾತಿಸ್ವಭಾವಕ್ಕೆ ಅನುಸರಿಸಿ ದಂಡೆಯ ಮೇಲೆ ಕುಳಿತ ಮಹರ್ಷಿಗಳಿಗೆ ನೀರು ಉಗ್ಗಹತ್ತಿದರು.

ಆಗ ಅವರ ನಾಯಕನಾದ ಆರು ವರುಷದ ಓರ್ವ ಹುಡುಗನು ಅವರೆಲ್ಲರನ್ನು ಬೈದು ಬಿಡಿಸಿ, ಹಿಂದೆಸರಿಸಿ, ತಾನು ಮುಂದೆ ಬಂದು ಮುನಿಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ತನ್ನ ಗೆಳೆಯರು ಮಾಡಿದ ಅಪರಾಧವನ್ನು ಕ್ಷಮಿಸಬೇಕೆಂದು ಕೇಳಿಕೊಂಡನು ಮತ್ತು ತನ್ನ ಗೆಳೆಯರಿಗೆ ಇಂಥ ಬ್ರಹ್ಮರ್ಷಿಗಳಿಗೆ ಅಪಚಾರವೆಸಗಿದ್ದಕ್ಕಾಗಿ ನೀವೆಲ್ಲರೂ ಅವರಿಗೆ ನಮಸ್ಕಾರಹಾಕಿ ತಪ್ಪಾಯಿತೆಂದು ಹೇಳಿ ಆ ಪಾಪಪ್ರಕ್ಷಾಲನೆಗೆ ಹರಿನಾಮಸ್ಮರಣೆಯನ್ನು ಮಾಡಬೇಕೆಂದು ವಿಧಿಸಿದನು.

ಆ ದೈತ್ಯಕುಮಾರರೆಲ್ಲರೂ ತಮ್ಮ ತಪ್ಪು ಒಪ್ಪಿಕೊಂಡು ಮುನಿಗಳಿಗೆ ನಮಸ್ಕರಿಸಿ ಸಾಲಾಗಿ ದಂಡೆಯಮೇಲೆ ಬಂದು ಕುಳಿತರು. ಆ ಬಾಲಕನಾಯಕನು ಅವರೆಲ್ಲರಿಗೂ ಕೈಮುಗಿಯ ಹೇಳಿ–

''ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ ।
ಪ್ರಣತಃಕ್ಲೇಶನಾಶಾಯ ಗೋವಿಂದಾಯ ನಮೋನಮಃ ।

ನಮಃ ಪಂಕಜನಾಭಾಯ ನಮಃ ಪಂಕಜಮಾಲಿನೇ
ನಮಃ ಪಂಕಜನೇತ್ರಾಯ ನಮಸ್ತೇ ಪಂಕಜಾಂಘ್ರಯೇ'' ॥

ಎಂದು ಸ್ತೋತ್ರಪಠಿಸಲು ಹೇಳಿದನು. ಆವನು ಹೇಳಿದ ಸ್ತೋತ್ರವನ್ನು ಆ ಬಾಲಕರೆಲ್ಲರೂ ಕೂಡಿ ಅನ್ನಹತ್ತಿದ್ದರು. ಅದರಿಂದ ಅರ್ಬುದಾಚಲದ ದರಿಕೊರೆಗಳೆಲ್ಲ ಹರಿನಾಮ ಸ್ಮರಣೆಯಿಂದ ಪ್ರತಿಧ್ವನಿತವಾದವು.

ಆಗ ಹೃದಯದಲ್ಲಿ ಸಂತೋಷ ಉಕ್ಕಿದ ಕಶ್ಯಪರ ಕೈಯ್ಯಲ್ಲಿಯ ಜಪ ಮಾಲೆಯು ತಾನಾಗಿ ಕೆಳಗೆ ಬಿದ್ದಿತು. ಅವರು ಎವೆಯಿಕ್ಕದೆ ಆ ಅಸುರ ಬಾಲಕನ ತೇಜಸ್ವೀ ಮುಖಮಂಡಲವನ್ನು ನೋಡುತ್ತ ತಮ್ಮ ಜಪತಪಗಳನ್ನೂ ಮರೆತು ಕುಳಿತುಬಿಟ್ಟರು. ಬಾಲಕರ ಭಜನೆ ಮುಗಿದಬಳಿಕ ಅವರು ಆ ದಾನವಕುಮಾರನನ್ನು ಹತ್ತಿರ ಕರೆದರು.

ಅವನು ಅವರ ಬಳಿ ಬಂದು ಬಾಗಿ ವಂದಿಸಿ, ಕೈಮುಗಿದು ನಿಂತುಕೊಂಡ.

''ಮಗು ನೀನು ಯಾರು ?''

–ಅಂತಃಕರಣತುಂಬಿ ಕೇಳಿದರು ಕಶ್ಯಪರು.

''ನಾನು ದೈತ್ಯರಾಜನಾದ ಹಿರಣ್ಯಕಶಿಪುವಿನ ಮಗ ಪ್ರಲ್ಹಾದ''

–ಎಂದು ವಿನಯದಿಂದ ಹೇಳಿದ ಆ ಕುಮಾರ. ಅದನ್ನು ಕೇಳಿ ಅಪ್ರತಿಭರಾಗಿ ಬೆಚ್ಚಿಬಿದ್ದರು, ಮುನಿಗಳು.

ಕುತೂಹಲಭರಿತವಾದ ಕಣ್ಣುಗಳಿಂದ ಅವರು, ಅಲ್ಲಿಯೇ ಅರ್ಧತುಂಬಿದ ಕೊಡವನ್ನು ಹಾಗೆಯೇ ಹಿಡಿದುಕೊಂಡು ನಿಂತ ದಿತಿಯೆಡೆಗೆ ನೋಡಿದರು. ಹರ್ಷಾಶ್ರು ಗದ್ಗದಳಾಗಿ ಅವಳೂ ಆ ಮಗುವಿನಡೆ ನೋಡುತ್ತ ನಿಂತುಕೊಂಡಿದ್ದಳು.

ಆಗ ಕಶ್ಯಪರು ಸಂತಸವುಕ್ಕಿ ಆ ಮಗುವನ್ನು ಎತ್ತಿ ಅಪ್ಪಿಕೊಂಡರು. ಅವರ ಬಿಳಿಗಡ್ಡದ ಮೇಲಿಂದ ಎರಡು ಕಣ್ಣೀರಿನ ಹನಿಗಳು ಉದುರಿ ಆ ಹುಡುಗನ ಬೆನ್ನಮೇಲೆ ಬಿದ್ದವು.

''ವತ್ಸ ! ಶತಾಯುಷೀ ಭವ''.

–ಗದ್ಗದ ಕಂಠದಿಂದ ಬ್ರಹ್ಮರ್ಷಿ ಕಶ್ಯಪರು ಆಶೀರ್ವದಿಸಿದರು.

''ವತ್ಸ ! ಭಗವದ್ಭಕ್ತೋ ಭವ''.

–ಎಂದು ಅಜ್ಜಿ ದಿತಿದೇವಿಯೂ ದನಿಗೂಡಿಸಿದಳು.

"ಅಗ್ನಯೇ ಸ್ವಾಹಾ"

ಆದಿರಾಜನಾದ ವೈವಸ್ವತಮನುವಿನ ಹತ್ತುಜನ ಮಕ್ಕಳು ಜಗದಾರಂಭದ ಸಂಭ್ರಮದ ಸಮಯದಲ್ಲಿ ದಶಕುಮಾರರೆಂದು ವಿಖ್ಯಾತರಾಗಿದ್ದರು.

ಇವರೆಲ್ಲರೂ ದಾಸದಾಸಿಯರ ತೋಳತೊಟ್ಟಿಲ ತೂಗಿ, ತೊಡೆಮಂಚಗಳ ಜೀಕಿ, ಹೆಗಲಕುದುರೆಯನೇರಿ, ಅಂಗೈಅರಗಿಣಿಯಾಗಿ ಬೆಳೆದರು.

ಬೆಳ್ಳಿಯ ಚಮಚೆಯನ್ನು ಬಾಯಲ್ಲಿ ಇಟ್ಟುಕೊಂಡೇ ಹುಟ್ಟಿಬಂದಿರುವ ಅವರ ಬಂಗಾರದ ಬಾಳಬಟ್ಟಲಲ್ಲಿ ಮಧುಪೂರಣ ಮಾಡಲು ರಾಜಸಿರಿ ಸಿದ್ಧಳಾಗಿ ನಿಂತುಕೊಂಡಿದ್ದಳು.

ಎಷ್ಟೋ ದಿನಗಳವರೆಗೆ ಅವರಿಗೆ ಬದುಕಿನದಾರಿಯಲ್ಲಿ ಬಿಸಿಲಿನ ಭೇಟ್ಟಿಯೇ ಆಗಲಿಲ್ಲ. ಅವರ ಬಾಳಿನ ಅಂಗಳದಲ್ಲಿ ಎಂದಿಗೂ ಬೆಳದಿಂಗಳು ಮರೆಯಾಗಲಿಲ್ಲ.

ಅಂದಿನ ವೈದಿಕಯುಗದಲ್ಲಿ ಬಾಲಕರನ್ನು ವಿದ್ಯಾವ್ಯಾಸಂಗಕ್ಕಾಗಿ ಗುರು ಕುಲಕ್ಕೆ ಕಳಿಸುವ ಸಂಪ್ರದಾಯವಿದ್ದರೂ ಪುತ್ರಲೋಭಿಯಾದ ತಂದೆ ಎಲ್ಲಿಯೂ ಕಳಿಸಲಿಲ್ಲ.

ಆಗಿನಕಾಲದ ಗುರುಕುಲದಲ್ಲಿ ಶಿಷ್ಯಪರೀಕ್ಷೆ ಒಂದು ಅಗ್ನಿಪರೀಕ್ಷೆಯಂತೆ ನಡೆಯುತ್ತಲಿತ್ತು.

ಆಶ್ರಮದಲ್ಲಿ ಗುರುಪ್ರಸಾದವಾಗುವವರೆಗೆ ಎಂಥ ರಾಜಕುಮಾರನಾದರೂ ತನ್ನ ಹಮ್ಮು-ಬಿಮ್ಮುಗಳನ್ನು ಬಿಟ್ಟು ದನಗಾಹಿಯಾಗಿ ದುಡಿಯಬೇಕು. ಅಜಾಪಾಲನಾಗಿ ಅಡವಿ ಅಡವಿ ಅಲೆಯಬೇಕು.

ಹಗಲಿರುಳು ಹೊಲಗಳಲ್ಲಿ ಬೆವರು ಸುರಿಸಬೇಕು. ಕಟ್ಟಿಗೆ ಕಡಿಯಬೇಕು. ಭಿಕ್ಷೆ ಬೇಡಬೇಕು. ಬಂದದ್ದನ್ನೆಲ್ಲ ಗುರುಗಳಿಗೆ ಒಪ್ಪಿಸಬೇಕು. ಅವರು ಕೊಟ್ಟಷ್ಟು ಉಣಬೇಕು. ಕೊಟ್ಟರೇ ಉಣಬೇಕು. ಇಲ್ಲದಿದ್ದರೆ ಉಪವಾಸವಿದ್ದೇ ಸೇವೆಯನ್ನು ಮಾಡಬೇಕು.

ಹೀಗೆ ಹತ್ತಿಪ್ಪತ್ತು ವರುಷ ಸೇವೆಯನ್ನು ಮಾಡಿದ ಬಳಿಕ ಇವನ ಶ್ರದ್ಧಾ ಜಾಡ್ಯವನ್ನು ಕಂಡು ಗುರುಗಳು ಅವನ ಮೇಲೆ ಪ್ರಸನ್ನರಾಗಿ ಮನಸ್ಸು ಬಂದರೆ ಆತ್ಮವಿದ್ಯೆಯನ್ನು ಉಪದೇಶಿಸುತ್ತಿದ್ದರು.

ಇಂಥ ಅಸಿಧಾರಾವ್ರತವನ್ನು ಕೈಕೊಂಡು ಆ ಅಧ್ಯಯನವೂ ಬೇಡ ಆ ವಿದ್ಯೆಯೂ ಬೇಡ ಎಂದು ಆ ಅರಸುಗುವರರು ಇದ್ದೂರಲ್ಲಿಯೇ ಪುರೋಹಿತರಿಂದ ಕಲಿತಷ್ಟೇ ಸಾಕೆಂದು ಸುಖವಾಗಿ ಇದ್ದುಬಿಟ್ಟರು.

ಆದಿರಾಜನಾದ ವೈವಸ್ವತಮನುವಿನ ದಶಕುಮಾರರಲ್ಲಿ ನಡುವಿನವನಾದ ಪೃಷಧ್ರನಿಗೆ ಮಾತ್ರ ಜ್ಞಾನದ ಹಸಿವು ಬಹಳ. ಗ್ರಾಮಪುರೋಹಿತರಾಗಲಿ ಊರ ಉಪಾಧ್ಯಾಯರಾಗಲೀ ಹೇಳಿದ್ದೆಲ್ಲ ಅವನಿಗೆ ಹಗಲು 'ಮುಗಿಲಿನಲ್ಲಿ ಅರುಂಧತೀ

ದರ್ಶನ' ಮಾಡಿಸಿದಂತಾಗಿತ್ತು.

ಆ ಅಪಾರ ಸಾರಸ್ವತ ತರಂಗದಂತರಂಗದ ಆಳದಲ್ಲಿ ಇಳಿದು ಮೌನಮುದ್ರಾಲೀನವಾದ ತತ್ವದ ಮಣಿಮುತ್ತುಗಳನ್ನು ತನ್ನ ತಿಳಿವಿನ ತಟ್ಟೆಯಲ್ಲಿ ತರಬೇಕೆಂದು ಬಯಸುವ ಅವನಿಗೆ ಇದ್ದೂರಲ್ಲಿಯ 'ಬುದ್ಧಿವಂತರಿತ್ತ ಜ್ಞಾನೋದಧಿಯ ಮೇಲಿನ ಕೇವಲ ಕವಡೆ, ಕಪ್ಪೆಚಿಪ್ಪು, ಶಂಖಸಿಂಪುಗಳಿಂದ ಹೇಗೆ ತೃಪ್ತಿಯಾಗಬೇಕು?'

ತಿಳಿವಿನ ತಾರಾಪಥದಲ್ಲಿ ತೊಳಗುವ ಅಸಂಖ್ಯ ಜ್ಯೋತಿಷ್ಕೋವುಗಳು ರಹಸ್ಯೋದ್ಭೇದನಕ್ಕಾಗಿ ಅವನನ್ನು ಕೈಬೀಸಿ ಕರೆಯುತ್ತಲಿದ್ದವು.

ಜ್ಞಾನಪ್ರಪಂಚದ ಅಗಾಧತೆ ಅನಂತತೆಗಳು ಅವನ ಬುದ್ಧಿಶಕ್ತಿಗೊಂದು ಆಹ್ವಾನವನ್ನಿತ್ತಿದ್ದವು.

ವೇದಾಂತ ವಿಜ್ಞಾನಗಳ ಈ ಕರೆಯನ್ನು ಕಡೆಗಣಿಸುವದು ಅವನಿಗೆ ಶಕ್ಯವೇ ಇರಲಿಲ್ಲ.

ಅದಕ್ಕಾಗಿ ಅವನು ಮಹರ್ಷಿ ಆಪೋದರ ಆರಣ್ಯಕ ಆಶ್ರಮಕ್ಕೆ ಹೋಗ ಬೇಕೆಂದು ನಿರ್ಧರಿಸಿದನು.

ಬ್ರಹ್ಮರ್ಷಿ ಆಪೋದರು ಜ್ಞಾನ-ವಿಜ್ಞಾನಗಳ ಸಪ್ತಸಾಗರಗಳನ್ನೆಲ್ಲ ಏಕಾಪೋಶನಮಾಡಿದ ಅಭಿನವ ಅಗಸ್ತ್ಯ. ಅರಿವಿನ ಆಗರ. ಜ್ಞಾನದ ನಿಧಿ.

ಆದರೆ ಆ ನಿಧಿ ಎಲ್ಲರಿಗೂ ಸುಲಭವಾಗಿದ್ದಿಲ್ಲ. ಆ ಅಮೃತಕುಂಡದಿಂದ ಒಂದು ಗಿಂಡೆಯನ್ನು ತುಂಬಿಕೊಂಡು ಹೋಗುವದೆಂದರೂ ಒಂದು ಅಗ್ನಿದಿವ್ಯವನ್ನು ಮಾಡಿದಂತೆಯೇ ಸರಿ.

ಎಷ್ಟೋ ಜನ ಗಟ್ಟಿ ಶಿಷ್ಯರು ಅಗ್ನಿಕಾಷ್ಠಭಕ್ಷಣಮಾಡಿ ಅವರ ಚಿರಂತನ ಸೇವೆಶುಶ್ರೂಷೆಗಳಿಂದ ಕೊನೆಗೆ ಬ್ರಹ್ಮಜ್ಞಾನವನ್ನು ಪಡೆದುಕೊಂಡು ಹೋಗಿದ್ದರು.

ಇದನ್ನೆಲ್ಲ ಕೇಳಿ ತಿಳಿದ ರಾಜಕುಮಾರ ಪೃಷಧ್ರನು ರಾಜ್ಯ, ಭೋಗ, ಬಂಧು ಪರಿವಾರವನ್ನೆಲ್ಲ ಬಿಟ್ಟು ಬ್ರಹ್ಮರ್ಷಿ ಆಪೋದರ ಆಶ್ರಮದ ದಾರಿಯನ್ನು ಹಿಡಿದನು.

ಮಹೇಂದ್ರಪರ್ವತದ ಶೈಲಶಿಖರವೊಂದರಲ್ಲಿ ಪುಣ್ಯಪಯಸ್ವಿನಿಯ ತಟಾಕದ ವಿವಿಕ್ತ-ರಮಣೀಯವಾದ ಕಾಂತಾರದ ಏಕಾಂತದಲ್ಲಿ ಆ ಮುನಿಗಳು ತಮ್ಮ ಆಶ್ರಮವನ್ನು ಕಟ್ಟಿಕೊಂಡಿದ್ದರು.

ದುರ್ಗಮವಾದ ಆ ವನಮಾರ್ಗವನ್ನು ದಾಟಿಕೊಂಡು, ಕ್ರೂರಶ್ವಾಪದಗಳ ಘೋರಗರ್ಜನೆಯಿಂದ ಭೀಕರವಾದ ಘಟ್ಟ ಬೆಟ್ಟಗಳನ್ನು ಏರಿ, ಆ ಪುಣ್ಯಾಶ್ರಮಕ್ಕೆ ಬರುವದೆಂದರೆ ಮಹಾಸಾಹಸವೇ ಆಗಿತ್ತು.

ಆದರೂ ತನ್ನ ನಿರ್ಣಯನಿಶ್ಚಲನಾದ ಪೃಷಧ್ರನು ಧೈರ್ಯದಿಂದ ಆ ಕಾಂತಾರ ಮಾರ್ಗದ ದರೀ-ಝರೀ, ಹಳ್ಳ-ಕೊಳ್ಳ, ಬೆಟ್ಟ ಮೆಟ್ಟಲುಗಳನ್ನೆಲ್ಲ ಹತ್ತಿ ಇಳಿದು ಸುತ್ತು

ಬಳಸಿ ಹೇಗೋ ಆಶ್ರಮಕ್ಕೆ ಬಂದು ಮುಟ್ಟಿದನು.

ಏಕಾಕಿಯಾಗಿ ಆ ಆಶ್ರಮಕ್ಕೆ ಬರುವದೆಂದರೇ ಅಲ್ಲಿಯ ಪ್ರವೇಶ ಪರೀಕ್ಷೆಯನ್ನು ಪಾಸಾದಂತಾಗಿತ್ತು.

ಅವನು ಅಲ್ಲಿಗೆ ಬಂದಾಗ ಸೂರ್ಯನು ಪಡುವಲ ಕಡಲತಡಿಗೆ ಇಳಿದಿದ್ದನು. ಸೂರ್ಯನ ಅರುಣ ಕಿರಣಗಳು ಆಶ್ರಮದ ಅಂಗಳದಲ್ಲಿ ಒಣಹಾಕಿದ ನೀವಾರಗರಿಗಳಿಗೆ ಜಟಾಮಂಡಲದ ಪಿಂಗಟ ಬಣ್ಣವನ್ನು ಬಳೆದಿದ್ದವು.

ಅಂಗಣದಲ್ಲಿಯ ತುಲಸೀ ವೃಂದಾವನದ ಎದುರಿಗಿನ ಶಿಲಾವೇದಿಕೆಯ ಮೇಲೆ ಕುಳಿತು ಋಷಿಗಳು ಆಶ್ರಮದ ಹರಿಣಗಣಗಳಿಗೆ ಶ್ಯಾಮಾಕಧಾನ್ಯವನ್ನು ಮುಷ್ಟಿಯಲ್ಲಿ ಹಿಡಿದು ತಿನ್ನಿಸುತ್ತಲಿದ್ದರು.

ಅವರೆದುರೇ ಅಂಗಳದ ಅಕ್ಕಪಕ್ಕಗಳಲ್ಲಿ ನಾಲ್ಕಾರು ಹುಲಿ–ಸಿಂಹಗಳು ಋಷಿಯ ದೃಷ್ಟಿಪ್ರಸಾದಕ್ಕಾಗಿ ಕಾದುಕೊಂಡು ಬಿದ್ದಿದ್ದವು.

ಪೃಷಧ್ರನನ್ನು ಕಂಡಕೂಡಲೇ ಅವೆಲ್ಲವೂ ಗುರಗುರಾಡಿಸಹತ್ತಿದವು. ಅದನ್ನು ನೋಡಿ ಗಾಬರಿಗೊಂಡ ಅವನು ಅಂಗಳದ ಆಚೆಗೆ ನಿಂತುಕೊಂಡನು.

ಆಗ ಮುನಿಗಳು ಅಪರಿಚಿತರಾರು ಬಂದರೆಂದು ಕಣ್ಣೆತ್ತಿ ನೋಡಿ ನಡುಗುತ್ತ ನಿಂತ ಅವನಿಗೆ–

''ವತ್ಸ ! ಅಂಜಬೇಡ. ಅವು ಆಶ್ರಮದ ಅಹಿಂಸಾ ವ್ರತವನ್ನು ಹಿಡಿದ ಪ್ರಾಣಿಗಳು. ಏನೂ ಮಾಡುವದಿಲ್ಲ, ಒಳಗೆ ಬಾ'' ಎಂದು ಆಜ್ಞಾಪಿಸಿದರು.

ಪೃಷಧ್ರ ಒಳಗೆ ಬಂದು ಮುನಿಗಳಿಗೆ ಸಾಷ್ಟಾಂಗ ವಂದಿಸಿ ಕೈಮುಗಿದು ನಿಂತುಕೊಂಡ. ''ಪೃಷಧ್ರ !''

ತಮ್ಮ ದಿವ್ಯದೃಷ್ಟಿಯಿಂದ ಅವನಾರು ಮತ್ತು ತಮ್ಮಲ್ಲಿ ಬಂದ ಉದ್ದೇಶವೇನು ಎನ್ನುವದನ್ನೆಲ್ಲ ತಿಳಿದು ಅವನ ಜಿಜ್ಞಾಸೆಯ ತೀವ್ರತೆಯನ್ನು ಪರೀಕ್ಷಿಸಬೇಕೆಂದು ಕರ್ಕಶಕಂಠದಿಂದಲೇ ಮುನಿಗಳು ಹೇಳಹತ್ತಿದರು. ಮಾತು ಬಿರುಸಾಗಿಯೇ ಬರುತ್ತಿದ್ದವು.

''ನೀನು ತಿಳಿದುಕೊಂಡಷ್ಟು ಬ್ರಹ್ಮವಿದ್ಯೆ ಸುಲಭಸಾಧ್ಯವಲ್ಲ. ನೀನು ರಾಜಕುಮಾರ ಎನ್ನುವದನ್ನು ಸಂಪೂರ್ಣವಾಗಿ ಮರೆತುಬಿಡಬೇಕು. ನೀನಿಲ್ಲಿ ಆಶ್ರಮದ ಓರ್ವ ಸಾಮಾನ್ಯ ಛಾತ್ರಮಾತ್ರ.

ನಾಳಿನಿಂದ ನೀನಿಲ್ಲಿ ಕಟ್ಟಿಗೆ ಕಡೆಯುವದು, ಕುಳ್ಳು ಆಯುವದು, ನೀರು ತರುವದು, ಹೊಲ ನೊಲಗಳಲ್ಲಿ ಹಕ್ಕಲದೆನೆಗಳನ್ನು ಆರಿಸಿಗೊಂಡು ಬರುವದು, ಆಕಳ ಕಾಯುವದೇ ಮೊದಲಾದ ಅನೇಕ ಕಾರ್ಯಗಳನ್ನು ನಿರಲಸ ವೃತ್ತಿಯಿಂದ

ಮಾಡಬೇಕಾಗುವದು. ಛಳಿ, ಮಳೆ, ಬಿಸಿಲು ಗಾಳಿ, ಉಪವಾಸ, ವನವಾಸಗಳ ಕ್ಲೇಶ–ತ್ರಾಸುಗಳನ್ನು ನಿನ್ನ ಈ ಸುಕುಮಾರ ರಾಜಪಿಂಡ ಸಹಿಸಬಹುದೇ ?

ನಿಮ್ಮ ಅರಮನೆಯ ಪರಿಚಾರಕರಿಗೂ ಕೂಡ ಅವಮಾನಕರವೆನ್ನಿಸಬಹುದಾದ ಈ ಪರಿಚರ್ಯಾವೃತ್ತಿ ಹಾಗೂ ಸೇವಾಭಾವಗಳಿಗೆ ನಿನ್ನ ಕ್ಷತ್ರಿಯರಕ್ತ ಸನ್ನದ್ಧವಾಗಬಹುದೇ ?

ಅದೂ ಕೂಡ ಅಪರಿಮಿತ ಅವಧಿಯವರೆಗೆ–

ಇಂತಿಷ್ಟೇ ದಿನಕ್ಕೆ ಅಥವಾ ವರ್ಷಕ್ಕೆ ಬ್ರಹ್ಮಾಪರೋಕ್ಷವಾದೀತೆಂಬ ನಿಯಮವಿಲ್ಲ. ಒಂದೊಂದು ಜನ್ಮವೇ ಹೋದರೂ ಹೋದೀತು.

ಮತ್ತು ಇಲ್ಲಿಯ ಆಶ್ರಮ ಧರ್ಮಗಳಿಗೆ ಏನಾದರೂ ವ್ಯತ್ಯಾಸವಾಗಿ ನೀನು ನಡೆದರೆ ಶಾಪಕೋಪಗಳಿಗೆ ಬಲಿಯಾಗಬೇಕಾಗಬಹುದು.

ನೋಡು, ಇದನ್ನೆಲ್ಲ ವಿಚಾರಿಸಿ, ಮತ್ತೊಮ್ಮೆ ಮನಸ್ಸಿನಲ್ಲಿ ಆಲೋಚಿಸಿ, ನಾಳೆ ಬೆಳಿಗ್ಗೆ ನಿನ್ನ ನಿರ್ಧಾರವನ್ನು ತಿಳಿಸು''.

–ಎಂದು ಹೇಳಿ ಸಾಯಂಸಂಧ್ಯಾವಂದನೆಗೆಂದು ಪಯಸ್ವಿನೀ ತೀರಕ್ಕೆ ಹೊರಟರು ಆ ತಾಪಸ ಶಾರ್ದೂಲರು.

ಸಿಂಹ – ಶಾರ್ದೂಲ–ಶಾವಕಗಳು ಬಾಲ ಅಲ್ಲಾಡಿಸುತ್ತ ಮುನಿಯ ಹತ್ತಿರ ಬಂದವು. ವಾತ್ಸಲ್ಯತರಂಗಿತವಾದ ದೃಷ್ಟಿಯಿಂದ ಒಮ್ಮೆ ನೋಡಿ ಅವುಗಳ ಆಯಾಲಗಳ ಮೇಲೆ ಋಷಿಗಳು ಅಂತಃಕರಣದಿಂದ ದರ್ಭದಂತುರವಾದ ಬೆರಳುಗಳನ್ನಾಡಿಸಿದಾಗ ಆ ಕ್ರೂರ ಶ್ವಾಪದಗಳ ರುದ್ರಾಕ್ಷಿಗಳಲ್ಲಿಯೂ ಸೌಮ್ಯಶಾಂತಿಯ ಗುರುತು ತೋರಿತ್ತು.

ಅವರು ನಾಕು ಹೆಜ್ಜೆ ಮುಂದೆ ನಡೆದು ನದೀತೀರದ ಬಳಸುದಾರಿಗೆ ಬಂದಾಗ ಆ ನಿರ್ಜನ ವನಪ್ರದೇಶದಲ್ಲಿ ಹರಿದಾಡುವ ಹಾವುಗಳೆಲ್ಲ ಹೆಡೆ ಎತ್ತಿ ಮಣಿದು ನಮಿಸಿ ಬದಿಗಾಗುತ್ತಲಿದ್ದವು.

ಮೂಕಮಂಥರನಾದ ಪೃಷಧ್ರನು ಭಯಭ್ರಾಂತನಾದರೂ ಆಶ್ಚರ್ಯ ಚಕಿತನಾಗಿ ಅವರನ್ನು ಹಿಂಬಾಲಿಸಿ ತಾನೂ ನದಿಗೆ ನಡೆದ.

ಪುಣ್ಯಪಯಸ್ವಿನಿಯ ತೀರಕ್ಕೆ ಅವರು ಬಂದಾಗ ಅದೇ ವಾರಿವಿಹಾರದಿಂದ ಮೇಲಕ್ಕೆದ್ದ ಆನೆಗಳ ಹಿಂಡು, ಮುನಿಯನ್ನು ಕಂಡಕೂಡಲೇ ತಮ್ಮ ಸೊಂಡೆಗಳನ್ನು ಕುಂಡಲಾಕಾರವಾಗಿ ಮಾಡಿ ವಂದಿಸಿ ಮುಂದೆ ಹೋದವು.

ಅವರು ಅವಗಾಹನಕ್ಕಾಗಿ ನಡುಮಟ ನೀರಿನಲ್ಲಿ ನಿಂತುಕೊಂಡಾಗ ಮತ್ಸ್ಯ ಕಚ್ಛಪಗಳು ಬಂದು ದೂರಿಂದ ಸುತ್ತಿ ಒಂದೊಂದು ಪ್ರದಕ್ಷಿಣೆ ಹಾಕಿ ಹೋದವು.

ಗುರುಮಹಿಮೆಯ ಈ ಗಾರುಡಿಯನ್ನು ನೋಡಿ ಮಂತ್ರಮುಗ್ಧ

ನಾದ ಪೃಷಧ್ರ, ''ಎಷ್ಟೇ ಕಷ್ಟ ಕ್ಲೇಶಗಳಾದರೂ ಚಿಂತೆಯಿಲ್ಲ. ಈ ಜನ್ಮದಲ್ಲಿ ಒಮ್ಮೆಯಾದರೂ ಈ ವಿಶ್ವವಶೀಕರಣಕಾರಿಯಾದ ಬ್ರಾಹ್ಮೀಶಕ್ತಿಯನ್ನು ಸಂಪಾದಿಸಲೇಬೇಕು'' ಎಂದು ಧೇನಿಸುತ್ತ ನಿಂತುಕೊಂಡನು.

ಸ್ನಾನಾನಂತರ ಮುನಿಗಳು ಅರ್ಘ್ಯಪ್ರದಾನಕ್ಕಾಗಿ ಪಶ್ಚಿಮಾಭಿಮುಖರಾದಾಗ ದಿನಮಣಿಯ ಸಂಧ್ಯಾರುಣ ಕಿರಣಗಳು ಅವರ ಕಾಲಮೇಲೆ ಬಿದ್ದು ಪಾದಪೂಜೆ ಮಾಡುತ್ತಲಿರುವಂತೆ ತೋರುತ್ತಲಿತ್ತು.

ಅಲ್ಲಿಯೇ ತೀರೋಪಾಂತದ ತುಂತುರು ಹನಿಗಳಿಂದ ಆರ್ದ್ರಾರ್ದ್ರವಾದ ಪ್ರಸ್ತರ ಪೀಠವೊಂದನ್ನು ಏರಿ ಅವರು ಕಣ್ಣುಮುಚ್ಚಿ ಜಪಾನುಷ್ಠಾನದಲ್ಲಿ ಲೀನರಾದರು.

ಪಯಸ್ವಿನಿಯ ವಾಚಾಲ–ವೀಚಿಗಳ ಮಂದ್ರನಾದ, ಅವರ ಮೌನ ಸಂಗೀತಕ್ಕೆ ಶ್ರುತಿಹಿಡಿದಿತ್ತು, ಸಂಧ್ಯಾರಾಗದ ಸಾಂದ್ರತೆಯಿಂದ ಸಿಂದೂರ ಸ್ನಪಿತವಾದಂತಿರುವ ಆ ನದೀತೀರದ ಪರಿಸರವೆಲ್ಲ ಅಂದು ಒಂದು ಸ್ವರ್ಣ ದ್ವೀಪದಂತೆ ಸುಂದರವಾಗಿ ತೋರುತ್ತಲಿತ್ತು.

ಇಂಥ ಸ್ವರ್ಗೀಯ ಸನ್ನಿವೇಶದ ಉನ್ಮಾದಕ ವಾತಾವರಣದಲ್ಲಿಯೂ ಅತ್ಯಂತ ವಶಿಷ್ಠರಾಗಿ ಕುಳಿತ ಆ ಮುನಿಗಳು ಆಮೀಲಿತಲೋಚನರಾಗಿ ಆಸೀನರಾಗಿದ್ದರು.

ಕಣ್ಣುಕಾಣುವವರೆಗೆ ಪೃಷಧ್ರನು ಅವರ ಭಾಸುರ ಮುಖಮಂಡಲವನ್ನು ನೋಡುತ್ತ ನಿಂತುಕೊಂಡನು.

ಎವೆಗಳನ್ನು ಮುಚ್ಚಿದರೂ ತೇಜೋಗೋಲಕದಂತಿದ್ದ ಅವರ ಕಣ್ಣುಗಳು ಉದರ್ಚಿಷೋಜ್ಜ್ವಲವಾಗಿಯೇ ಹೊಳೆಯುತ್ತಲಿದ್ದವು. ಅವರನ್ನು ನೋಡಿದಷ್ಟೂ ಅವನಿಗೆ ಭಕ್ತಿಶ್ರದ್ಧೆಗಳು ಇಮ್ಮಡಿಸುತ್ತಲಿದ್ದವು.

ರಾತ್ರಿಯ ಮೊದಲಿನ ಯಾಮಾವಸಾನದಲ್ಲಿ ಅವರು ಪ್ರಾಣಾಯಾಮದ ಉಚ್ಛ್ವಾಸಕ್ರಮದಲ್ಲಿ ಒಮ್ಮೆ ಅರ್ಧ ಕಣ್ಣು ತೆರೆದಾಗ, ಅವರ ಮುಂದೆಯೇ ಜಾನುದಘ್ನವಾದ ನೀರಿನಲ್ಲಿ ಕೈಮುಗಿದು ನಿಂತುಕೊಂಡ ನವೀನ ಶಿಷ್ಯ ಕಾಣಿಸಿಕೊಂಡ.

ಆಗ ಅಚ್ಚರಿಯಿಂದ ಅವರು ಕಣ್ಣೆವೆಗಳನ್ನು ಪೂರ್ಣವಾಗಿ ಬಿಡಿಸಿ –

''ಇದೇನು ಪೃಷಧ್ರ ! ನೀರಿನಲ್ಲೇಕೆ ನಿಶ್ಚಲನಾಗಿ ನಿಂತುಕೊಂಡೆ ? ಈ ಪರಿಯಿಂದ ಕೈಮುಗಿದು ನನ್ನನ್ನೇನು ನೋಡುತ್ತಲಿರುವಿ ? ನೀನು ನೋಡಬೇಕಾದ ವಸ್ತು ಹೊರಗಿಲ್ಲ, ಒಳಗೇ ಇದೆ. ಅದನ್ನು ನೋಡಬೇಕಾದರೆ ಕಣ್ಣು ತೆರೆಯಬೇಕಾಗಿಲ್ಲ, ತೆರೆದ ಹೊರಗಣ್ಣನ್ನು ಮುಚ್ಚ ಬೇಕಾಗುವದು. ಒಳಗಣ್ಣನ್ನು ತೆರೆದು ಆ ಗುಹೇಶ್ವರನನ್ನು ಕಾಣಬೇಕು.

ಇರಲಿ ನನಗೆ ನೀನು ಬಂದದ್ದು ಸ್ಮರಣವೇ ಇಲ್ಲ. ನೀನು ಅರಮನೆಯಲ್ಲಿ ಐದುದಿನಗಳ ಹಿಂದೆ ಊಟ ಮಾಡಿ ಬಿಟ್ಟ ಬಳಿಕ ಈ ಹೊತ್ತಿನವರೆಗೆ ಉಂಡದ್ದೇ ಇಲ್ಲ.

ಅತಿಥಿಯನ್ನು ಉಪವಾಸ ಕೂಡಿಸಿ ನನ್ನ ಆನ್ಹಿಕ ನಡೆದಿದೆ. ಪ್ರಮಾದವಾಯಿತು. ಮಗು ! ನಡೆ ಮನೆಗೆ''.

–ಎಂದೆಂದು ಎದ್ದರು.

''ಸದ್ಗುರು ! ನಾನು ತಮಗೆ ಅತಿಥಿಯಲ್ಲ ಶಿಷ್ಯ, ಸೇವಕ. ಆ ಭಾವದಿಂದ ಸೇವೆಮಾಡಲಿಕ್ಕೆ ಈ ಬಡಭಕ್ತನಿಗೆ ಅವಕಾಶ ಕೊಟ್ಟು ಅನುಗ್ರಹಿಸಬೇಕು.''

–ಎಂದು ಮೆಲ್ಲನೇ ನುಡಿದ ಪೃಷಧ್ರ, ಕುಸಿಯುವ ಧ್ವನಿಯನ್ನು ಹೇಗೋ ಸರಿಪಡಿಸಿಗೊಂಡು.

''ಸರಿ.ಅದು ನಾಳೆ, ನಿನ್ನ ವಿಜ್ಞಾಪನೆಯನ್ನು ನಾವು ಪರಿಶೀಲಿಸಿದ ಮೇಲೆ ನಿರ್ಧರಿಸಬೇಕಾದ ವಿಷಯ.

ಈಗಂತೂ ನೀನು ನಮ್ಮ ಅತಿಥಿ. ರಾಜಕುಮಾರ. ನಮ್ಮ ಸುದಾಮಸತ್ಕಾರವನ್ನು ಗುಡಿಸಲಿನಲ್ಲಿ ಸ್ವೀಕರಿಸು, ನಡೆ''.

–ಎಂದು ಪ್ರಸನ್ನಮುಖದಿಂದ ಹೇಳಿ ಮುಂದಾದರು.

ಮನೆಯಲ್ಲಿಯಾದರೂ ತನಿವಣ್ಣು, ಗೋಕ್ಷೀರ, ಗಡ್ಡೆಗೆಣಸುಗಳ ಸಾತ್ವಿಕ ಉಪಹಾರವು ಆ ರಾಜ–ಸುಕುಮಾರನಿಗೆ ಮುನಿಗಳ ಮಧುರಾಲಾಪದೊಂದಿಗೆ ಒಳ್ಳೇ ಸ್ವಾದಿಷ್ಟವೆನ್ನಿಸಿತು.

ಅವನ ಪಾಂಚರಾತ್ರಿಕವಾದ ಉಪೋಷಣೆಯ ಹಸಿವು ಅವನು ತಿನ್ನುವ ಪ್ರತಿಯೊಂದು ಕವಲವೂ ಮಧುಪಾಕಕ್ಕಿಳಿಯುವಂತೆ ಮಾಡಿತ್ತು.

ಉಪಹಾರಾನಂತರಲ್ಲಿ ವೈತಾನಿಕ–ವೇದಿಕೆಯ ಬಲಭಾಗದಲ್ಲಿ ಹಂಸ ದುಪ್ಪಳದಂತೆ ಮೃದುಲ ಚಿಗರೆಚರ್ಮವೊಂದರ ಮೇಲೆ ಆ ರಾಜತನುಜನು ಮುನಿಯ ಅಣತಿಯಂತೆ ಪವಡಿಸಿದನು.

'ಮುನಿವರ್ಯರು ಮರುದಿನ ತನ್ನನ್ನು ಶಿಷ್ಯನೆಂದು ಪರಿಗ್ರಹಿಸುವರೋ ಇಲ್ಲವೋ' ಎಂಬ ಚಿಂತೆ ತೂಲಕಲ್ಪವಾದ ಆ ಚಿಗರೆದೊಗಲಿನ ಹಾಸಿಗೆಯನ್ನೂ ಅವನಿಗೆ ಶರತಲ್ಪವನ್ನಾಗಿ ಮಾಡಿತ್ತು.

ರಾಜ್ಯಭೋಗಗಳನ್ನೆಲ್ಲ ಬಿಟ್ಟು ಬಂದ ಆ ರಾಜವತ್ಸನು ವನವಾಸಿಯೋರ್ವನ ದಾಸ್ಯ, ಶಿಷ್ಯತ್ವಗಳಿಗಾಗಿ ಹಂಬಲಿಸಿ ಹೊಯ್ದಾಡುತ್ತಲಿದ್ದ, ಚಿಂತಿಸಿ ಕೊರಗುತ್ತಲಿದ್ದ.

ಮರುದಿನ ಪಂಚಪಂಚಉಷಃಕಾಲದಲ್ಲಿ ಎದ್ದ ಆ ತಾಪಸವೃದ್ಧರ ಮಂಗಳಾಷ್ಟಕದ ಮಂಜುಘೋಷವು ಆ ರಾಜಕುಮಾರನಿಗೆ ಪ್ರಬೋಧಗೀತವನ್ನು ಹೇಳಿತ್ತು.

ಎದ್ದು ಸ್ನಾನಮಾಡಿಕೊಂಡು ಶುಚಿರ್ಭೂತನಾಗಿ ಬಂದು ಭಕ್ತಿ ಭಾರದಿಂದ ಬಾಗಿನಿಂತ ಪೃಷಧ್ರನು ಗುರುಗಳ ಚರಣಗಳನ್ನು ಹಿಡಿದು ವಂದಿಸಿ ರುದ್ಧಕಂಠದಿಂದ–

"ಗುರುದೇವ ! ಎಂಥ ಕಷ್ಟನಷ್ಟಗಳು ಬಂದರೂ ನಾನು ತಮ್ಮ ಶಿಷ್ಯನಾಗಿ ಈ ಆಶ್ರಮದಲ್ಲಿ ಓರ್ವ ಸಾಮಾನ್ಯ ಸೇವಕನಾಗಿಯೇ ಇರುವೆನು" ಎಂದು ತನ್ನ ಅಚಲನಿರ್ಧಾರವನ್ನು ತಿಳಿಸಿ "ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್" ಎಂದು ಅಂಗಲಾಚಿದ.

ಉದಯರವಿಯ ಪಲ್ಲವಾರುಣ – ಕಿರಣ ಸಾಕ್ಷಿಯಾಗಿ ಅಂದು ಬ್ರಹ್ಮರ್ಷಿ ಆಪೋದರು ಕ್ಷತ್ರಜಾತನಾದ ಪೃಷಧ್ರನನ್ನು ಶಿಷ್ಯನೆಂದು ಸ್ವೀಕರಿಸಿದರು.

ಆಶ್ರಮವೃಕ್ಷಗಳ ಕೋಟರ–ಕುಟೀರದ ರೆಕ್ಕೆಯ ಋಷಿಗಳು ತಮ್ಮ ಮಧುರಧ್ವನಿಯಿಂದ ಅವರ ಗುರು ಶಿಷ್ಯಭಾವವನ್ನು ಅನುಮೋದಿಸಿದವು.

ಉಷಃಸೂಕ್ತದೊಡನೆ ಎದ್ದುಬಂದ ಧೀರಸಮೀರನ ಕಂಪಿನಲೆಗಳಲ್ಲಿ ಈ ವಾರ್ತಾಗಂಧವು ವಿಸರಣಹೊಂದಿ–

"ನಮೋ ಬ್ರಹ್ಮಣೇ ನಮಸ್ತೇ ಬ್ರಹ್ಮವರ್ಚಸೇ"

ಎಂಬ ಛಾಂದಸಪಲ್ಲವಿಯು ದಿಗ್‌ದಿಗಂತಾಲದಲ್ಲಿ ಪ್ರತಿಧ್ವನಿತವಾಗಿ ನಿಂತುಕೊಂಡಿತ್ತು.

ಪಯಸ್ವಿನಿಯ ವಾಚಾಲ–ವೀಚೀ–ಕಲಾಪಗಳು ಊರೂರಿನ ತೀರದ ತರುರಾಜಿಗೆ ಪಿಸುದನಿಯಲ್ಲಿ ಈ ಸಮಾಚಾರವನ್ನು ಸಾರುತ್ತ ನಡೆದಿದ್ದವು.

ಅಂದಿನಿಂದ ಆ ಮನುಕುಮಾರನ ಆರಣ್ಯಕಜೀವನವು ಪ್ರಾರಂಭವಾಯಿತು.

ಚಿಕ್ಕಂದಿನಿಂದ ಭೋಗವಿಲಾಸಗಳ ಸುಖಾಸಿಕೆಯ ಉತ್ಸಂಗ–ರಂಗದಲ್ಲಿ ಸ್ವಚ್ಛಂದದಿಂದ ಬೆಳೆದವನಾದರೂ ಆ ತರುಣರಾಜಗುವರ ನಾಲ್ಕೇದಿನಗಳಲ್ಲಿ ಈ ತಾಪಸ ಜೀವನದ ಕಷ್ಟನಿಷ್ಠುರಗಳಿಗೆ ಹೊಂದಿಕೊಂಡುಬಿಟ್ಟ.

ಅರಮನೆಯ ಅಸೂರ್ಯಂಪಶ್ಯ–ವಾತಾವರಣದಿಂದ ಒಮ್ಮೆಲೆ ಈ ವಿದ್ಯಾರಣ್ಯದ ಕಂದರಮಂದಿರಕ್ಕೆ ಇಳಿದು ಬಂದ ಅವನು ಕೂಡಲೇ ಬೆಟ್ಟಬಯಲುಗಳ ಪರಿಚಯಮಾಡಿಕೊಂಡ. ಬಿಸಿಲಿನೊಡನೆ ಕುಶಲವಾಡಿ, ಗಾಳಿಯೊಡನೆ ಗೆಳೆತನ ಬೆಳೆಸಿ, ನೀರಿನೊಡನೆ ಚಲ್ಲಾಟವಾಡಲು ಕಲಿತುಕೊಂಡ.

ಎಂಥ ಛಳಿಯಲ್ಲಿಯೂ ಮೈಛಳಿಬಿಟ್ಟು ಅವನು ಮೀನ–ಮಕರಗಳಂತೆ ಪಯಸ್ವಿನಿಯಲ್ಲಿ ಮೀಯುತ್ತಲಿದ್ದ. ಮಳೆಗಾಳಿಗಳ ದಾಳಿಗಳಿಗಂತೂ ಹಿಮಮಾನವನಂತೆ ಅವನ ದೇಹ ಅನಾವತ ಅವಸ್ಥೆಯಲ್ಲಿಯೇ ಒಗ್ಗಿ ಹೋಯಿತು. ಪ್ರತಿನಿತ್ಯ ಮನೆಯಲ್ಲಿ ಗುರುಗಳು ಹೇಳಿದ ಮಂತ್ರವರ್ಣಗಳ ಅರ್ಥ ಅವನಿಗೆ ಹೊರಗೆ ಪ್ರಕೃತಿಪರ್ಯಂಕದಲ್ಲಿ ಬಂದಾಗ ಆಗುತ್ತಿತ್ತು.

ಹಕ್ಕಿಗಳ ಚಕ್ಕಂದ, ಚಿಕ್ಕೆಗಳ ಉಕ್ಕಂದ, ತೊರೆತೆರೆಗಳ ಸ್ವಚ್ಛಂದದಲ್ಲಿ ಅವನಿಗೆ ಯಾವುದೋ ಒಂದು ಅವ್ಯಕ್ತ ಶಕ್ತಿಯ ಪ್ರೇರಣೆ ಪರಿಸ್ಪಂದಿಸುವಂತೆ ತೋರುತ್ತಲಿತ್ತು.

ದಿನದಿನವೂ ಸಂಜೆಮುಂಜಾವುಗಳಲ್ಲಿ ಬಣ್ಣಬಣ್ಣದ ಕುಂಚವಿಡಿದು ಕ್ಷಿತಿಜದ ಅಂಚಿನಲ್ಲಿ ಸೌಂದರ್ಯ–ಸಂಹಿತೆಯನ್ನು ಬರೆಯುವ ಸಂಧ್ಯಾಶಿಲ್ಪಿಯ ದೇವಭಾವವು **''ಸಂಧ್ಯಾಯೈ ನಮಃ ಸಾವಿತ್ರ್ಯೈ ನಮಃ''** ಎಂದು ಅನ್ನುವಾಗ ಅವನ ಅನುಸಂಧಾನಕ್ಕೆ ಬರುತ್ತಿತ್ತು.

ಮುಂಗಾರು ಮುಗಿಲಿನ ಗರ್ಜನೆಯ ಗಡಗಡಾಟ, ಶ್ರಾವಣದ ಸಿಂಧುಗಳ ಭೀಷ್ಮಪ್ರವಾಹದ ಬೊಬ್ಬಿರಿದಾಟ, ಹಾಗೂ ಆಷಾಢ–ಪ್ರಭಂಜನದ ಭೋರಾಟಗಳನ್ನು ಕೇಳಿದಾಗಲೆಲ್ಲ ಅವನಿಗೆ **''ಓಂ ಪ್ರಾಣಃ ತಥಾನುಗಮಾತ್''**ಎಂಬ ಬ್ರಹ್ಮಸೂತ್ರ ಪಾಠ ಹೇಳುವಾಗ ಗುರುಗಳು ಉದಾಹರಿಸಿದ **''ಸರ್ವೇ ಘೋಷಾಃ ಸರ್ವೇ ವೇದಾಃ ಏಕೈವ ವ್ಯಾಹೃತಿಃ ಪ್ರಾಣ ಏವ''** ಎಂಬ ಉಪನಿಷನ್ ಮಂತ್ರದ ಅರ್ಥ ನಿಚ್ಚಳವಾಗಿ ಆಗುತ್ತಲಿತ್ತು.

ಅಂತೂ ಪ್ರಕೃತಿ–ಪುಸ್ತಕದ ಪುಟಪುಟಗಳಲ್ಲಿಯೂ ಅವನಿಗೆ ಬ್ರಹ್ಮರ್ಷಿ ಆಪೋದರ ಬ್ರಹ್ಮವಿದ್ಯೋಪದೇಶದ ಪ್ರತಿಧ್ವನಿ ಕೇಳಿಬರುತ್ತಲಿತ್ತು.

ಈ ದೃಶ್ಯಾದೃಶ್ಯ– ಪ್ರಪಂಚವೆಲ್ಲವೂ ಪರಾತ್ಪರ–ವಸ್ತುವಾದ ಆ ಪರಮಾತ್ಮನ ಪ್ರತಿಷ್ಠಾಪೀಠ, ಅಥವಾ ಆಡುಂಬೊಲ, ಕ್ರೀಡಾರಂಗ, ಎನ್ನುವ ಬೀಜಮಾತು ಅವನ ಹೃದಯದಲ್ಲಿ ಹೂತು ರೋಮರೋಮಗಳಲ್ಲಿಯೂ ಅದರ ಭಾವಸೌರಭವು ಪರಿಮಳಿಸಿ ನಿಂತಿತ್ತು.

ಒಮ್ಮೆ ಕುಲಪತಿಗಳಾದ ಆ ಋಷಿಗಳು ಪರ್ವಕಾಲಸ್ನಾನಕ್ಕೆಂದು ಗಂಗಾತೀರಕ್ಕೆ ಹೊರಟರು. ಹೋಗುವಾಗ ಅವರು ಶಿಷ್ಯ ಪೃಷಧ್ರುವನ್ನು ಕರೆದು–

''ಪೃಷಧ್ರ ! ನಾನು ಆಶ್ರಮದಲ್ಲಿ ಇಲ್ಲದಾಗ ನಮ್ಮ ಆಕಳ ಹಿಂಡನ್ನು ರಕ್ಷಿಸುತ್ತಲಿರು. ಗೋಮಾತೆಯೇ ನಮ್ಮ ಮುಖ್ಯ ಧನ. ಪೂಜ್ಯದೇವತೆ. ಆದ್ದರಿಂದ ಬಹಳ ಲಕ್ಷ್ಯಪೂರ್ವಕವಾಗಿ ಇವುಗಳನ್ನು ರಕ್ಷಿಸು. ಜೋಕೆ'' ಎಂದು ಹೇಳಿ ಹೋದರು.

'ರಕ್ಷಿಸು' ಎಂದು ಹೇಳಿದಕೂಡಲೇ ಅವನ ಕ್ಷತ್ರಸಂಸ್ಕಾರ ಖಡ್ಗಕ್ಕೆ ಕೈಹಾಕಿತು. ಕೈಯಲ್ಲಿ ಖಡ್ಗವಿಲ್ಲದೇ ಸಂರಕ್ಷಿಸುವದು ಹೇಗೆ ಎಂದಂದು ಅಂದು ರಾತ್ರಿ ಪೃಷಧ್ರನು ನಿಶಿತವಾದ ಖಡ್ಗವನ್ನು ಕೈಯಲ್ಲಿ ಹಿಡಿದುಕೊಂಡೇ ವೀರಾಸನದಲ್ಲಿ ಕುಳಿತುಕೊಂಡನು.

ಹನ್ನೆರಡು ವರುಷದ ಮೇಲೆ ಮತ್ತೆ ಇಂದು ಅವನ ಕೈಯಲ್ಲಿ ಕ್ರೌರ್ಯ ಹಿಂಸೆಗಳ ಸಂಕೇತವಾದ ಕರಾಲ ಕರವಾಲ ಬಂದಿತ್ತು. ಅದರ ತೀಕ್ಷ್ಣವಾದ ಧಾರೆಯನ್ನು ನೋಡಿದ ಕೂಡಲೇ ಅವನ ಕ್ಷತ್ರಿಯ ರಕ್ತ ಮಸಗಿ ಒಂದು ಕ್ಷಣ ಜಿಗೀಷಾವೃತ್ತಿ ಜಾಗೃತವಾಯಿತು.

ಆ ಗಾಢಾಂಧಕಾರದಲ್ಲಿ ಮಿಂಚಿನ ಅಲಗಿನಂತೆ ಚಂಚಲಿಸುವ ಆ ಚಂದ್ರಹಾಸವನ್ನು ಒಮ್ಮೆ ಅಂಗೈಯಲ್ಲಿ ಬಲವಾಗಿ ಹಿಡಿದು ಝಳಪಿಸಿದಾಗ ಅವನ ಮೈಯ್ಯಲ್ಲಿ ಕ್ಷಾತ್ರಶ್ರೀ ಸಂಚಾರವಾಗಿ ಮೈತುಂಬ ವಿದ್ಯುತ್‌ಪ್ರವಾಹ ಹರಿದಂತಾಯಿತು.

ಹಿಂದಿನ ಸಂಸ್ಕಾರದಿಂದ ಅವನು ಅದನ್ನು ಸಹಜವಾಗಿ ಬೀಸಿದಾಗ ಕತ್ತಲೆಯ ನೆತ್ತಿಯನ್ನು ಸೀಳಿದಂತೆ ಬೆಳಕಿನ ಬಳ್ಳಿಯೊಂದು ಮಿಂಚಿ ಹೋಯಿತು. ಅದನ್ನು ಹಾಗೆಯೇ ಬೀಸುತ್ತ ಹೋಗಿ ಯಾರನ್ನಾದರೂ ಕೊನೆಗೆ ಕಾಡುಮಿಕಗಳನ್ನಾಗಲೀ ಕೊಲ್ಲಬೇಕೆಂದು ಅನಿಸಹತ್ತಿತು.

ಆದರೆ ಮರುಚಣದಲ್ಲಿಯೇ ಅವನಿಗೆ ನಾಚಿಕೆಯೆನಿಸಿತು. ಹನ್ನೆರಡು ವರುಷಗಳಿಂದ ಯೋಗ ಮಾರ್ಗದಲ್ಲಿ ಸಾಧನಮಾಡಿ ಮುನಿವೃತ್ತಿಯಿಂದಿದ್ದು ಹಿಂಸಾವೃತ್ತಿಯಿಂದ ಪರಾಙ್ಮುಖನಾಗಿದ್ದರೂ ಒಂದು ನಿಮಿಷದ ಖಡ್ಗದ ಸಂಪರ್ಕ ಮತ್ತೆ ಅವನಲ್ಲಿ ರಣರಂಗದ ವೀರರಸವನ್ನು ಉಕ್ಕಿಸಿತ್ತು.

''ಛೀ ಧಿಕ್ಕಾರವಿರಲಿ ನನ್ನ ಈ ಕ್ಷತ್ರಿಯ ರಕ್ತಕ್ಕೆ'' ಎಂದಂದು ಕೈಯಲ್ಲಿದ್ದ ಖಡ್ಗವನ್ನು ದೂರ ಎಸೆದುಬಿಟ್ಟನು. ಆಗ ಅವನ ಮನಸ್ಸಿಗೆ ಸಮಾಧಾನವೆನ್ನಿಸಿತು.

ಆದರೆ ಅಷ್ಟರಲ್ಲಿ ಒಂದು ಹುಲಿಯ ಘೋರಗರ್ಜನೆ ಆ ಗಭೀರ ರಾತ್ರಿಯ ಗೂಢಮೌನವನ್ನು ಸೀಳಿಕೊಂಡು ತಂದಿತು.

ಅದರ ಭೀಕರ ಗುಡುಗಾಟ ವನಕಂದರಗಳಲ್ಲಿ ಪ್ರತಿಧ್ವನಿತವಾಗಿ ಆ ಗಿರಿಗರ್ಭವನ್ನೆಲ್ಲ ನಡುಗಿಸಿಬಿಟ್ಟಿತು. ಆದರಿಂದ ಭಯಭ್ರಾಂತವಾದ ಆಶ್ರಮದ ಗೋವತ್ಸಗಳೆಲ್ಲ ನಿಂತಲ್ಲಿಯೇ ಉದ್ಭ್ರಾಂತವಾಗಿ ಗರ್ಭಗಲಿತವಾಗಿ ಚೀರಹತ್ತಿದವು.

ಅಷ್ಟರಲ್ಲಿ ಮೃತ್ಯುರೂಪಿಯಾದ ಆ ಉಗ್ರವ್ಯಾಘ್ರವು ಆಶ್ರಮದ ಗೋಷ್ಠಕ್ಕೆ ಬಂತು. ಗುರುಗಳ ಮಾತು ನೆನಪಾಗಿ ಖಡ್ಗವನ್ನು ಕತ್ತಲೆಯಲ್ಲಿ ಎಲ್ಲಿಯೋ ಎಸೆದದ್ದು ತಪ್ಪಾಯಿತೆನ್ನಿಸಿತು.

ಗಡಿಬಿಡಿಯಿಂದ ತನ್ನ ಕೃಪಾಣವನ್ನು ಹುಡುಕಹತ್ತಿದ. ಕೃಪಾಣದ ಹೊರತು ಅವನಿಗೆ ರಕ್ಷಣೆಯ ದಾರಿಯೇ ಹೊಳೆಯಲಿಲ್ಲ.

ಇತ್ತ ಕ್ರೂರವಾದ ಆ ಹೆಬ್ಬುಲಿಯು ದನಗಳ ಕೊಟ್ಟಿಗೆಗೆ ಹಾರಿಬಂದು ಒಂದು ಕರುವನ್ನು ಎತ್ತಿಕೊಂಡು ಹೋಯಿತು. ಆ ಕರುವಿನ ಕರುಣೆಯ ಕೂಗು ಪೃಷಧ್ರನ ಕಿವಿಯನ್ನು ಕೊರೆಯಿತು. ಎದೆಯನ್ನು ಇರಿಯಿತು.

ಖಡ್ಗವನ್ನು ಹುಡುಕಿಕೊಂಡು ಅವನು ಬರುವಷ್ಟರಲ್ಲಿ ಹುಲಿಯು ಕರುವಿನೊಂದಿಗೆ ವನಾಂತರಾಲದ ಗಾಢಾಂಧಕಾರದಲ್ಲಿ ಓಡಹತ್ತಿತು.

ಕರುವಿನ ದನಿಯನ್ನು ಅನುಸರಿಸಿ ಹುಲಿಯ ಬೆನ್ನು ಹತ್ತಿ ಪೃಷಧ್ರನು ಓಡಿದ. ಆದರೆ ಅವನಿಗೆ ಗಿಡಗಂಟಿ, ಕಲ್ಲು-ಬಂಡೆಗಳಲ್ಲಿ, ಕತ್ತಲೆಯಲ್ಲಿ ಹುಲಿಯು ಹಾರುಗಾಲಿನಿಂದ ಓಡುವಾಗ ಅದನ್ನು ಇನ್ನು ಬೆನ್ನಟ್ಟುವದು ತನಗೆ ಸಾಧ್ಯವಿಲ್ಲವೆಂದೆನಿಸಿತು.

ಕರು ಇನ್ನೂ ಕೆಟ್ಟದನಿಯಿಂದ ಚೀರುತ್ತಲೇ ಇತ್ತು, ಇದನ್ನು ತಿಳಿದು

ಶಬ್ದವೇಧಿಯಾದ ಆ ರಾಜಕುಮಾರನು ಕರುವಿನ ದನಿ ಬರುವ ನಿಟ್ಟಿಗೆ ಗುರಿಯಿಟ್ಟು ಖಡ್ಗವನ್ನು ಬೀಸಿ ಒಗೆದನು.

ದುರ್ದೈವದಿಂದ ಆ ಖಡ್ಗವು ಆ ಹುಲಿಯು ಬಾಯಲ್ಲಿ ಹಿಡಿದ ಕರುವಿಗೇ ತಾಕಿ ಅದು ಎರಡು ಹೋಳಾಗಿ ಕತ್ತರಿಸಿಬಿದ್ದಿತು. ಹುಲಿಗೂ ಆ ಖಡ್ಗದ ತುದಿತಾಕಿ ಗಾಯವಾಗಿ ರಕ್ತಸುರಿಸುತ್ತ ಅದು ಕಾಡಿನಲ್ಲಿ ಓಡಿಹೋಯಿತು.

ದಟ್ಟವಾದ ಕತ್ತಲೆಯಲ್ಲಿ ಪೃಷಧ್ರನಿಗೆ ಏನಾಯಿತು ತಿಳಿಯಲೇ ಇಲ್ಲ. ಬೆಳಗಾದ ಬಳಿಕ ಎರಡು ತುಂಡಾಗಿಬಿದ್ದ ಕರುವನ್ನು ನೋಡಿ ಅವನಿಗೆ ತನ್ನ ಪ್ರಮಾದದ ಅರಿವಾಯಿತು. ದುಃಖದಿಂದ ನಿಟ್ಟುಸಿರಿಡುತ್ತ ಆಶ್ರಮಕ್ಕೆ ಮರಳಿದ.

ಮರುದಿನ ಅಪೋದರು ಬಂದ ಬಳಿಕ ತನ್ನಿಂದಾದ ಅಚಾತುರ್ಯವನ್ನು ದೀನನಾಗಿ ನಿವೇದಿಸಿದ. ಆಗ ಕೋಪಾಂಧರಾದ ಅವರು–

''ಜಿಜ್ಞಾಸುವಾದ ನೀನು ಹಿಂಸೆಯಿಂದಲೇ ಹಿಂಸ್ರಗಳನ್ನು ಎದುರಿಸಹೋದದ್ದೇ ಮಹಾತಪ್ಪು. ಒಂದು ಜೀವಕ್ಕೆ ನೀನು ಎರಡು ಜೀವ ತೆಗೆದುಕೊಂಡೆ. ನಿನ್ನ ಖಡ್ಗದ ತುದಿತಾಕಿ ಹುಲಿಯೂ ಎಲ್ಲಿಯೋ ಬಿದ್ದು ಸತ್ತಿರಬಹುದು. ಅಹಿಂಸಾ ಧರ್ಮದ ಆತ್ಮವಿಶ್ವಾಸದ ಆಧ್ಯಾತ್ಮಿಕ ಧೈರ್ಯದಿಂದ ಎದುರಿಸಿದ್ದರೆ ಆ ಕ್ರೂರ ಹುಲಿಯೂ ಈಲಾಗಿ ನಿನಗೆ ವಂದಿಸಿ ಹೋಗುತ್ತಲಿತ್ತು, ಅದಕ್ಕೆ ಅಂಥ ಪ್ರಾಣಾಂತಿಕ ಹಸಿವಾಗಿದ್ದರೆ ದಿಲೀಪಮಹಾರಾಜನಂತೆ ನಿನ್ನ ದೇಹವನ್ನಾದರೂ ಒಡ್ಡಿ ಗೋವತ್ಸವನ್ನು ರಕ್ಷಿಸಬೇಕಾಗಿತ್ತು, ನಿನ್ನ ಹುಟ್ಟಿದಗುಣ ಹನ್ನೆರಡು ವರುಷವಾದರೂ ನಿನ್ನನ್ನು ಬಿಟ್ಟುಹೋಗಿಲ್ಲ. ಆಶ್ರಮ ವಿರುದ್ಧ ವ್ಯಾಪಾರವನ್ನು ಮಾಡಿ ಎರಡು ಜೀವಹತ್ಯೆಯನ್ನು ಮಾಡಿದ್ದರಿಂದ ನೀನಿನ್ನು ಬ್ರಹ್ಮಜ್ಞಾನಿಯಾಗಲಾರೆ'' ಎಂದು ಶಾಪಕೊಟ್ಟರು.

ದೀನದುಃಖಿತನಾದ ಪೃಷಧ್ರನು ಗುರುಶಾಪಕ್ಕೆ ಪ್ರತಿಯಾಗಿ ಚಕಾರ ಶಬ್ದವನ್ನೂ ಆಡಲಿಲ್ಲ, ಅವನ ಹೃದಯದ ಶೋಕ ಬಾಷ್ಪ–ಭಾಷೆಯಲ್ಲಿ ಕರುಣಾಕಲ್ಲೋಲಿನಿಯಾಗಿ ಹರಿಯಿತು.

ಅವನ ಹನ್ನೆರಡು ವರುಷದ ತಪಃಸಾಧನೆಯೆಲ್ಲ ಒಳ್ಳೇ ಫಲಕಾಲದಲ್ಲಿಯೇ ವಿಫಲವಾಗಿ ಆಯುಷ್ಯವೇ ವ್ಯರ್ಥವಾದಂತೆನಿಸಿತು.

ಯೋಗ ಮಾರ್ಗದ ಸಾಧನಾನುಷ್ಠಾನದ ಸೋಪಾನ ಶ್ರೇಣಿಗಳನ್ನೆಲ್ಲ ಬಹುಪ್ರಯಾಸದಿಂದ ಏರಿ ಸಿದ್ಧಿಯ ಶೃಂಗವನ್ನು ಮುಟ್ಟಬಂದಾಗ ಕೊನೆಯ ತುದಿಪಾವಟಿಗೆಯಿಂದ ಕಾಲುಜಾರಿ ಪಾತಾಳಕ್ಕೆ ಉರುಳಿದಂತಾಯಿತು.

ಯಾವ ಬ್ರಹ್ಮಜ್ಞಾನಕ್ಕಾಗಿ ಅವನು ರಾಜ್ಯದ ಭೋಗ–ಭಾಗ್ಯಗಳನ್ನೆಲ್ಲ ಬಿಟ್ಟು, ಹನ್ನೆರಡು ವರುಷ ಅಗ್ನಿಕಾಷ್ಠ ಭಕ್ಷಣಮಾಡಿ, ಶರೀರವನ್ನು ಸವೆಯಿಸಿ ಸಣ್ಣಮಾಡಿದ್ದನೋ, ಯಾವುದಕ್ಕಾಗಿ ತರುಣ ವಯದಲ್ಲಿಯೇ ತನ್ನ ಪಂಚಪ್ರಾಣಗಳನ್ನು ತೇದಿದ್ದನೋ, ಆ

ದಿವ್ಯಜ್ಞಾನ ಇನ್ನು ಈ ಜನ್ಮದಲ್ಲಿ ಸಿಗುವದೋ ಇಲ್ಲವೋ ಎಂಬ ಸಂದೇಹವುಂಟಾಗಿ ಅವನು ಬೆದರುಗಂಗಳಿಂದ ಆಪೋದರತ್ತ ದೀನವಾಗಿ ನೋಡಿ ನಡುಗುತ್ತ ನುಡಿದ–

"ಗುರುದೇವ ! ಹಾಗಾದರೆ ನನಗಿನ್ನೆಂದು ಆ ಬ್ರಹ್ಮಜ್ಞಾನ........"

"ಈ ಜನ್ಮದಲ್ಲಿಯಂತೂ ನೀನು ಗೋಹತ್ಯೆಯಿಂದ ವ್ರಾತ್ಯನಾದಿ. ನಿನಗೆ ಬ್ರಹ್ಮಜ್ಞಾನವಿಲ್ಲ. ಸುಕೃತವಿಶೇಷವಿದ್ದರೆ ಜನ್ಮಾಂತರದಲ್ಲಿಯೇ ಆ ಬ್ರಹ್ಮಾಪರೋಕ್ಷ ನಿನಗಾಗಬಹುದು."

–ಎಂದು ಉಸುರುವಾಗ ಕೋಪಶೇಷದಿಂದ ಅಪೋದರ ಅಧರ ಇನ್ನೂ ಅದರುತ್ತಲಿತ್ತು.

"ಛೀ, ಹಾಗಾದರೆ ಏತಕ್ಕೆ ಈ ಬರಡು ಬಾಳು" ಎಂದು ಅನ್ನುತ್ತಲೇ ಪೃಷಧ್ರ ಅಲ್ಲಿಂದ ಹುಚ್ಚನಂತೆ ಹೊರಬಿದ್ದ.

ದಾರುಣವಾದ ದುಃಖ ಅವನ ಮಿದುಳಿನಲ್ಲಿ ಹೆಪ್ಪುಗಟ್ಟಿ ಮುಖ ಕಪ್ಪಿಟ್ಟಿದ್ದಿತು. ಎಲ್ಲಿ ಹೋಗಬೇಕೆನ್ನುವ ವಿಚಾರವಿಲ್ಲದೇ ಕಾಲು ಎಳೆದತ್ತ ಅವನು ಓಡತೊಡಗಿದ್ದ.

ಕಲ್ಲು–ಮುಳ್ಳುಗಳನ್ನು ತುಳಿಯುತ್ತ, ಹೆಬ್ಬಂಡೆ ಹೆಮ್ಮರಗಳಿಗೆ ಹಾಯುತ್ತ, ಹಳ್ಳ–ಕೊಳ್ಳಗಳನ್ನು ದಾಟುತ್ತ, ಬೆಟ್ಟದ ಶೀಳುದಾರಿಗಳನ್ನು ಹಾದು ಅವನು ಗುರಿಯಿಲ್ಲದ ಓಟ ಓಡಿದ.

ಮೈಬೆವತು, ಬಾಯಾರಿ, ಬಟ್ಟೆಹರಿದು, ಕಾಲು ಒಡೆದು, ಬೆರಳು ಜಜ್ಜಿ, ರಕ್ತಸುರಿಯುತ್ತಲಿದ್ದರೂ ಅವನಿಗೆ ಎಚ್ಚರವೇ ಇರಲಿಲ್ಲ.

ಬದುಕಿನಿಂದ, ಈ ಸಂಸಾರದಿಂದ ದೂರ ಬಹುದೂರ ಎಲ್ಲಿಯೋ ಓಡಿಹೋಗಬೇಕೆಂದು ಅವನು ಹೊರಟಿದ್ದ. ಜೀವನದಲ್ಲಿಯೇ ಒಂದು ಜಿಗುಪ್ಸೆಮೂಡಿದ ಅವನು ಪ್ರಪಂಚವನ್ನೇ ಪರಿತ್ಯಾಗ ಮಾಡಬೇಕೆಂದು ನಾಗಾಲೋಟ ಕಿತ್ತಿದ್ದನು.

ಅವನ ಧಾವನದ ವೇಗಕ್ಕೆ ಎಷ್ಟೋ ಬೆಟ್ಟ–ಬಯಲು ಗಿರಿದರಿಗಳು ಹಿಂದೆ ಸರಿದರೂ ಮತ್ತೆ ಹೊಸ ಹೊಸ ಶೈಲಶ್ರೇಣಿಗಳು ಸಾಲುಗೊಂಡು ತಲೆ ಎತ್ತಿ ನಿಲ್ಲುತ್ತಲೇ ಇದ್ದವು.

ಮಧ್ಯಾಹ್ನದ ನಡುನೆತ್ತಿಗೆ ಸೂರ್ಯ ಬಂದಾಗ ಬೆಟ್ಟಘಟ್ಟಗಳೆಲ್ಲ ಬಿಸಿಲಿನ ಬೋಗೋಣಿಯಲ್ಲಿ ಕುದಿಯಲಿಟ್ಟಂತೆ ಝಳದಿಂದ ಬೇಯುತ್ತಲಿದ್ದವು.

ಬಿಸಿಲುಗುದುರೆಯ ಬೆನ್ನುಹತ್ತಿ ನೀರಿನಾಸೆಯಿಂದ ಓಡುತ್ತಲಿರುವ ಚಿಗರೆಗಳ ಹಿಂಡು ತಮಗಿಂತ ಚಪಲಚರಣದಿಂದ ಧಾವನಗೈಯುವ ಪೃಷಧ್ರನನ್ನು ನೋಡಿ ಗಾಬರಿಗೊಂಡು ಓಡುವದನ್ನು ಬಿಟ್ಟು, ನಿಂತು ನೋಡಹತ್ತಿದವು.

ಜಲವಿಹಾರಕ್ಕೆ ಹೊರಟ ಆನೆಯ ಹಿಂಡು ನಿಬ್ಬೆರಗಿನಿಂದ ನಿಟ್ಟಿಸುತ್ತ ನಿಂತುಕೊಂಡಿತು.

ಹಾರುವ ಹಕ್ಕಿಗಳಿಗೂ, ಜಿಗಿಯುವ ವಾನರಗಳಿಗೂ, ಓಡುವ ಮಿಕಗಳಿಗೂ, ಇವನ ವೇಗ ಉದ್ವೇಗಗಳು ದಿಗ್ಭ್ರಮೆಗೊಳಿಸಿದ್ದವು.

ಪ್ರಪಂಚದ ಆಚೆಯ ಅಂಚನ್ನು ಸಂಜೆಯೊಳಗಾಗಿ ಮುಟ್ಟಹೊರಟ ಶರತ್ತಿನ ಕುದುರೆಯಂತೆ ಅವನ ನಿರ್ನಿಮಿತ್ತ ಪಲಾಯನ ಸಾಗಿತ್ತು.

ಆದರೆ ಒಂದು ನಿಬಿಡಾರಣ್ಯದ ನಡುವೆ ಬಂದಾಗ ಅವನ ಕಾಲ್ಕುದುರೆಗಳು ಒಮ್ಮೆಲೇ ಗಕ್ಕನೆ ನಿಂತುಬಿಟ್ಟವು.

ಮುಂದೆ ಮೂರು ಮಾರಿನಾಚೆ ಕಾಡ್ಗಿಚ್ಚು ಹೊತ್ತಿಕೊಂಡು ತನ್ನ ಉರಿ ನಾಲಿಗೆಯಿಂದ ಆ ಅರಣ್ಯದ ನಾಡಿಗಳಂತಿರುವ ಗಿಡಗಂಟಿಗಳನ್ನೆಲ್ಲ ಕಬಳಿಸುತ್ತಲಿತ್ತು.

ಆ ದಳ್ಳುರಿಯ ಜ್ವಾಲೆ–ಮಾಲೆಗಳ ಝಳ ತಾಗಿ ಪಶು–ಪಕ್ಷಿಗಳ ಹಿಂಡು ಪಾರಾಗಲು ಧಾವಿಸಿ ಓಡುತ್ತಲಿದ್ದವು. ಎತ್ತ ಓಡಿದರೂ ಜ್ವಾಲಾಜಾಲವನ್ನು ಬೀಸಿ ಸುತ್ತಿಬರುವ ಆ ದಾವಾಗ್ನಿಯ ಬಾಯಿಗೆ ಬಿದ್ದು ಎಷ್ಟೋ ಪ್ರಾಣಿಗಳು ಬೇಯುತ್ತಲಿದ್ದವು.

ಪೃಷಧ್ರನು ದೂರನಿಂತು ಆ ಅಗ್ನಿಯ ಲೀಲಾತಾಂಡವವನ್ನು ಪರಿಕಿಸಿದ.

ಆ ಅಗ್ನಿಪುರುಷನಲ್ಲಿ ಆವನಿಗೆ ಸಾವಿನ ಸಾಕ್ಷಾತ್ಕಾರವಾದಂತೆನ್ನಿಸಿತು.

ಜ್ವಾಲಾಮುಖಿಯ ಹೊಂಡದ ಒಂಡು ಒಡೆದಂತೆ, ಕಿಚ್ಚಿನ ಕರುಳು ಕೆದರಿದಂತೆ, ಸಿಡಿಲಿನಗೂಡಿಗೇ ಮದ್ದಿಟ್ಟಂತೆ, ಪ್ರಳಯಾಗ್ನಿಯನ್ನೇ ಪುಟವಾಡಿದಂತೆ ಅಲ್ಲಿ ವೈಶ್ವಾನರನು ತನ್ನ ವಿಶ್ವರೂಪವನ್ನು ತೋರಿಸಿ ಬೆಟ್ಟವನ್ನೆಲ್ಲ ಬಲಿಗೊಳ್ಳುತ್ತಲಿದ್ದನು.

''ವೇದವೇದಾಂತ ಜಿಜ್ಞಾಸೆ ಮಾಡಿ ಬ್ರಹ್ಮಜ್ಞಾನವನ್ನು ಪಡೆಯಲಾರದ ಈ ಜನ್ಮವನ್ನು ತೆಗೆದುಕೊಂಡಾದರೂ ಮಾಡುವದೇನು ? ಜ್ಞಾನಶೂನ್ಯವಾದ ಈ ದೇಹವನ್ನಿಟ್ಟಾದರೂ ಪ್ರಯೋಜನವೇನು ? ಅಜ್ಞಾನಘನವಾದ ಈ ಪೀನ ಶರೀರ ಅಗ್ನಿನಾರಾಯಣನಿಗಾದರೂ ಆಹುತಿಯಾಗಿ ಕಿಂಚಿತ್ ಸಾರ್ಥಕ್ಯ ಪಡೆಯಲಿ'' ಎಂದು ಯೋಚಿಸಿ ಅವನು ಕಾಡ್ಗಿಚ್ಚಿನ ಬೆಂಕಿಯಲ್ಲಿ ಬೀಳಲೆಂದು ಒಮ್ಮಿಂದೊಮ್ಮೆಲೇ ಮುಂದೆಸರಿದನು.

''ಅಗ್ನಯೇ ಸ್ವಾಹಾ ಅಗ್ನಯೇ ಇದಂ ನ ಮಮ''

ಎಂದು ಅನ್ನುತ್ತಲೇ ಉರಿಯತೆರೆಗಳ ನಡುವೆ ಧುಮುಕಿದನು.

ಅಲ್ಲಿ ಒಳಗೆ ಹೋದ ಬಳಿಕ ಅವನಿಗೊಂದು ಭೀಕರ ದೃಶ್ಯವು ಕಣ್ಣಿಗೆ ಬಿದ್ದಿತು. ಅವನಿಂದ ಮುಂದೆ ಹತ್ತೇ ಹೆಜ್ಜೆಯಲ್ಲಿ ಆಕಳುಗಳ ಹಿಂಡೊಂದು ನಡುವೆ ಸಿಕ್ಕು ಒದ್ದಾಡುತ್ತಲಿದ್ದವು.

ಸುತ್ತಲೂ ಬೆಂಕಿಯಜ್ವಾಲೆ ಹಬ್ಬಿದ್ದರಿಂದ ಅವುಗಳಿಗೆ ಹೊರಬರಲು ಮಾರ್ಗವೇ ಇಲ್ಲದೆ ಹೊಗೆಗೆ ಕಣ್ಣುಮುಚ್ಚಿ ಅವು ಧಡಪಡಿಸುತ್ತಲಿದ್ದವು.

ಪಾರಾಗಲು ಇದ್ದ ಒಂದೇ ಒಂದು ಕಣಿವೆಯ ಇಕ್ಕಟ್ಟಿನ ಮಾರ್ಗಕ್ಕೆ ಅಡ್ಡವಾಗಿ ಗಿಡದ ಬೊಡ್ಡೆಯೊಂದು ಉರುಳಿ ಬಿದ್ದು ಉರಿಯುತ್ತಲಿತ್ತು.

ಐದುನಿಮಿಷಗಳಲ್ಲಿ ಆ ಆಕಳುಗಳ ತಂಡವೆಲ್ಲ ಆ ಕಾಡ್ಗಿಚ್ಚಿಗೆ ಬೆಂದು ಗೋಗ್ರಾಸವಾಗುತ್ತಲಿತ್ತು.

ಅದನ್ನು ಕಂಡು ಎದೆ ಕರಗಿದ ಪೃಷಧ್ರನು ತನ್ನ ಸಾವಿನ ನಿರ್ಣಯವನ್ನು ಬದಲಿಸಿ ಅಲ್ಲಿಗೆ ಧಾವಿಸಿದ.

ಕಣಿವೆಯ ಮಾರ್ಗಕ್ಕೆ ಅಡ್ಡವಾಗಿ ಬಿದ್ದ ಆ ಉರಿಯುವ ಕೊಡ್ಡವನ್ನು ಕೈಯಿಂದ ಎತ್ತಿ ಎದೆಕೊಟ್ಟು ಆಚೆ ನುಗಿಸಿದ. ಆಕಳ ಹಿಂಡೆಲ್ಲವೂ ಧಾವಿಸಿ ಓಡಿ ಕಣಿವೆಯ ಮಾರ್ಗಕ್ಕಿಳಿಯಿತು.

ಆದರೆ ಪೃಷಧ್ರನ ಮೈಕೈಗಳೆಲ್ಲ ಝಳತಾಕಿ ಬೆಂದುಹೋಗಿದ್ದವು ಉಟ್ಟುಕೊಂಡ ಬಟ್ಟೆಗೆಲ್ಲ ಉರಿತಗಲಿ ಮೈಗೆಲ್ಲ ಝಳ ತೆಗೆದುಕೊಳ್ಳಹತ್ತಿತು.

ಆದರೂ ಕಣಿವೆಯ ಮಾರ್ಗಕ್ಕಿಳಿದು ಸುರಕ್ಷಿತವಾಗಿ ಪಾರಾಗಿ ಹೊರಹೊರಟ ಧೇನುವೃಂದವನ್ನು ಕಂಡು ಅವನ ಹೃದಯಕ್ಕೆ ಚಂದನ ಲೇಪವಾದಂತೆ ತಂಪೆನಿಸಿತು.

ಅವನು ಉರಿಯುವ ತನ್ನ ಎರಡೂ ಕೈಗಳನ್ನು ಎತ್ತಿ ''ಗೋವಿಂದ ! ಗೋವರ್ಧನ ! ಗೋಪಾಲಾ ! ಪ್ರೀತನಾಗು'' ಎಂದು ಹೇಳಿ ಮತ್ತೆ ಉರಿಯ ಕಡೆಗೆ ಅಗ್ನಿನಾರಾಯಣನಿಗೆ ಆತ್ಮಾಹುತಿಯನ್ನೀಯಲು ತಿರುಗಿದ.

ಮೊದಲು ಆಕಳುಗಳು ನಿಂತಸ್ಥಳಕ್ಕೆಲ್ಲ ಅಗ್ನಿಯ ವಲಯ ಕಟ್ಟಿ, ಕಿಚ್ಚನ್ನು ಒಟ್ಟಿದಂತಾಗಿತ್ತು.

ಆ ಅಗ್ನಿ–ಸ್ಥಂಡಿಲದಿಂದ ದೊಡ್ಡ ದೊಡ್ಡ ಆಕಳುಗಳೆಲ್ಲ ಪಾರಾಗಿ ಹೋಗಿದ್ದರೂ ಒಂದು ಆಕಳುಕರು ಮಾತ್ರ ದಿಕ್ಕುಗಾಣದೇ ತುಸು ದೂರದಲ್ಲಿ ಓಡುತ್ತಲಿತ್ತು. ಅದರ ತುದಿಬಾಲಕ್ಕೆ ಬೆಂಕಿ ತೆಗೆದುಕೊಂಡದ್ದರಿಂದ ಆ ಜ್ವಾಲಾರಂಗದಲ್ಲಿ ಅದು ಹುಚ್ಚೆದ್ದು ಕುಣಿಯುತ್ತಲಿತ್ತು.

ಅದರ ಚೀತ್ಕಾರ ಬೆಂಕಿಯುನ್ನು ಅಪ್ಪಿಕೊಂಡ ಪೃಷಧ್ರನ ಕರುಳಿಗೆ ಕೊಳ್ಳೆಯಿಟ್ಟಂತಾಯಿತು. ತಾನು ಅಡವಿಯಲ್ಲಿ ಹಿಂದಿನ ರಾತ್ರಿ ಕೊಂದ ಆಕಳಕರುವೇ ಕೂಗಿದಂತಾಯಿತು.

ಅವನು ತಕ್ಷಣದಲ್ಲಿ ಕರುವಿದ್ದಲ್ಲಿಗೆ ಹಾರಿ ಬಂದು ಅದನ್ನು ಉಳಿಸಬೇಕೆಂದು ಎತ್ತಿ ಹೊತ್ತುಕೊಂಡು, ಉರಿಯ ತೆರೆಗಳಲ್ಲಿ ಹಾಯ್ದು ಕಣಿವೆದಾರಿಯೆಡೆಗೆ ಬರಹತ್ತಿದನು.

ಅಷ್ಟರಲ್ಲಿ ಬೆಂಕಿಯ ಬೇಲಿ ಆ ಸ್ಥಳದ ಸುತ್ತಲೂ ಹತ್ತಿಕೊಂಡು ಉರಿಯಹತ್ತಿತ್ತು.

ಇನ್ನು ಈ ಕರುವನ್ನು ಪಾರುಮಾಡುವದು ಸಾಧ್ಯವಿಲ್ಲವೆಂದು ಅವನಿಗೆ ಅನ್ನಿಸಿತು.

ಆದರೂ ಆಗ ನಿಂತಲ್ಲಿಂದಲೇ ಅವನು ಆ ಕರುವನ್ನು ಎರಡೂ ಕೈಗಳನ್ನು ಮೇಲೆಮಾಡಿ ಕಣಿವೆಯ ಮಾರ್ಗದತ್ತ 'ಆಯುಷ್ಯವಿದ್ದರೆ' ಬದುಕಲಿ ಎಂದು ತೂರಿ ಒಗೆದನು.

ಅದು ಸುದೈವದಿಂದ ಆಲ್ಲಿಯ ಸೂಸುಮಣ್ಣಿನ ಮೇಲೆ ಬಿದ್ದು ಹೊರಳಾಡಿತು. ಅದರ ಮೈ ಉರಿಯೆಲ್ಲ ಶಾಂತವಾಗಿ ''ಹಂಬಾ'' ಎನ್ನುತ್ತ ಅದು ಆಕಳ ಗುಂಪಿನೆಡೆಗೆ ಓಡಹತ್ತಿತು.

ದೂರಿಂದಲೇ ಅದನ್ನು ನೋಡಿದ ಪೃಷಧ್ರನಿಗೆ ಹಿಂದಿನ ರಾತ್ರಿ ತಾನು ಗೋವತ್ಸವನ್ನು ಕೊಂದ ಪಾಪ ತೊಳೆದು ಹೋದಂತೆನಿಸಿತು.

ಅವನು ಆನಂದದಿಂದ ತನ್ನ ದೇಹವನ್ನು ಬೆಂಕಿಯ ಬಾಯಿಗೆ ನೀಡಿ–

''ಅಗ್ನಯೇ ಸ್ವಾಹಾ ಅಗ್ನಯೇ ಇದಂ ನ ಮಮ''

ಎಂದು ನುಡಿದು ಅಗ್ನಿ ನಾರಾಯಣನಿಗೆ ಆಹುತಿಯಾದನು.

ಆ ಪುಣ್ಯಶರೀರವನ್ನು ವಹ್ನಿಜ್ವಾಲೆಗಳು ನಾಮುಂದೆ ತಾಮುಂದೆ ಎಂದು ಪ್ರೀತಿಯಿಂದ ನಿಶ್ಶೇಷಗೊಳಿಸಿದವು.

ಇತ್ತ ಆಪೋದರು ಪೃಷಧ್ರನು ಎದ್ದು ಹೋದಬಳಿಕ, ದನಕಟ್ಟುವ ಕೊಟ್ಟಿಗೆಗೆ ಬಂದು ಕರುವನ್ನು ಕಳೆದುಕೊಂಡ ತಾಯಿಧೇನುವಿನ ಹತ್ತಿರ ನಿಂತು ಅದರ ಮೈಮೇಲೆ ಕೈಯಾಡಿಸಿದರು.

ಆ ಮೂಕಪ್ರಾಣಿಯ ಕಣ್ಣೀರಿನಿಂದ ಗೋಷ್ಠದ ಅಂಗಳವೆಲ್ಲ ತೊಯ್ದು ಹೋಗಿತ್ತು, ಅದರ ಹೃದಯದ ಮೂಕವೇದನೆಯೆಲ್ಲ ಅದರ ಕಾತರ ನೋಟದಲ್ಲಿ ತುಳುಕಿ ನಿಂತಿತ್ತು.

ಹಸಿರು ಹುಲ್ಲನ್ನು ಅದಕ್ಕೆ ಮುನಿಗಳು ತಿನಿಸಹೋದಾಗ ಅದು ಬಾಯಿ ಮುಚ್ಚಿ ದೀನವಾಗಿ ಅವರನ್ನು ನೋಡಿ ಪಳಪಳ ಕಣ್ಣೀರು ಉದುರಿಸಿತು.

ಆ ತಾಯ್ಗರುಳಿನ ದುಃಖವನ್ನು ನೋಡಲಾರದೇ ಮುನಿಗಳು ಒಳಗೆ ಬಂದರು.

ಆಶ್ರಮದ ಅಂಗಳದಲ್ಲಿ ವೃಂದಾವನ ಕಟ್ಟೆಯ ಎದುರು ಆಪೋದರ ಸೌಭಾಗ್ಯವತಿಯಾದ ವೇದವಲ್ಲಿಯು ಕಣ್ಣೀರುದುರಿಸುತ್ತ ಕುಳಿತಿದ್ದಳು.

ಹನ್ನೆರಡು ವರುಷ ಹೊಟ್ಟೆಯ ಮಗನಂತೆ ಆಶ್ರಮದಲ್ಲಿ ಬೆಳೆದ ಪೃಷಧ್ರ ಆಶ್ರಮಬಿಟ್ಟು ಶಪಿತನಾಗಿ ಹೋದದ್ದು ಆ ತಾಯ್ಗರುಳಿಗೆ ಬರೆಯೆಳೆದಂತಾಗಿತ್ತು.

ಅಂದು ಪತಿ ಆಡಿದ ಮಾತು ಅತಿಯಾಯಿತೆಂದು ಅನಿಸಿದರೂ ಅವಳಿಗೆ ಪತಿಯೆದುರು ಪ್ರತಿಮಾತನಾಡುವ ಧೈರ್ಯವಿರಲಿಲ್ಲ.

ಆಗಿನ ಅವಳ ಆ ದೀನಮುಖವನ್ನು ನೋಡಿಯೇ ಆಪೋದರು ಅವಳ ದುಃಖದ ಆಳವನ್ನು ತಿಳಿದುಕೊಂಡರು.

ಅವರಿಗೂ ಬಹಳ ಪಶ್ಚಾತ್ತಾಪವಾಗಿತ್ತು.

ಸ್ನಾನಾನ್ಹಿಕವೆಲ್ಲ ಮುಗಿದು ಎಲೆಯ ಮೇಲೆ ಕುಳಿತಾಗ ಮಹರ್ಷಿಗಳಿಗೆ ಪ್ರಿಯ ಶಿಷ್ಯನ ನೆನಪಾಗಿ ತುತ್ತು ಗಂಟಲಲ್ಲಿ ಇಳಿಯದೇ ತುಂಬಿದೆಲೆಯನ್ನು ಬಿಟ್ಟು ಹಾಗೆಯೇ ಎದ್ದುಬಿಟ್ಟರು ಗುರುಪತ್ನಿಯಂತೂ ಎಲೆಯ ಮೇಲೆಯೇ ಕೂಡಲಿಲ್ಲ.

ಇಬ್ಬರ ಹೃದಯಗಳೂ ದುಃಖದಿಂದ ಅಂಚುಮಟ ತುಂಬಿದ್ದರಿಂದ ಇಬ್ಬರೂ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ.

ಪೃಷಧ್ರನು ಈಗ ಮರಳಿರಬಹುದೆಂದು ಗಾಳಿಗೆ ಎಲೆಸದ್ದುಮಾಡಿದಾಗೊಮ್ಮೆ ಮುನಿಗಳು ಎದ್ದು ಹೋಗಿ ವನವೀಥಿಗಳು ಕಾಣುವವರೆಗೂ ಹುಬ್ಬು ಹಚ್ಚಿ ನೋಡಿ ಬರುತ್ತಲಿದ್ದರು.

ವೇದವಲ್ಲಿಯಂತೂ ಶಿಷ್ಯನ ದಾರಿಯುನ್ನು ನೋಡುತ್ತ ಹೊರಗಿನ ತುಲಸೀಕಟ್ಟೆಯಮೇಲೆಯೇ ಹಣೆಗೆ ಕೈಹಚ್ಚಿಕೊಂಡು ಕುಳಿತಿದ್ದಳು.

ಹನ್ನೆರಡು ವರುಷ ಆ ರಾಜಕುಮಾರ ಮಾಡಿದ ಸೇವೆ, ಶುಶ್ರೂಷೆ, ಅವನ ಸೌಶೀಲ್ಯ, ಸೌಜನ್ಯ, ಗುರುಭಕ್ತಿ ಮೊದಲಾದ ಎಲ್ಲ ಗುಣಗಳೂ ಅವಳ ಕಣ್ಣೆದುರು ಒಂದೊಂದಾಗಿ ಸುಳಿದುಹೋಗುತ್ತಲಿದ್ದವು.

ಏನೇ ಆದರೂ ಅವನು ತಮ್ಮನ್ನು ಬಿಟ್ಟು ಬಹಳ ಹೊತ್ತು ನಿಲ್ಲಲಾರನೆಂದು ಆ ಮಾತೃ ಹೃದಯಕ್ಕೆ ಅನಿಸುತ್ತಲಿತ್ತು.

ಅಪರಾಹ್ನದ ಇಳಿಹೊತ್ತಿನ ಮುಂದೆ ಆಶ್ರಮದ ಒಳಗೆ ಖಿನ್ನಮನಸ್ಸಿನಿಂದ ಏನೇನೋ ಧೇನಿಸುತ್ತ ಕುಳಿತ ಆಪೋದರು, ''ಅಯ್ಯೋ ಪೃಷಧ್ರ!'' ಎಂದೆಂದು ಒಮ್ಮೆಲೇ ಕೆಟ್ಟದನಿಯಿಂದ ಚೀರಿದರು.

ವೇದವಲ್ಲಿ ಗಾಬರಿಯಾಗಿ ಒಳಗೆ ಓಡಿಹೋಗುವಷ್ಟರಲ್ಲಿ ಅವರ ವಕ್ಷ ಸ್ಥಲದ ಮೇಲೆ ಕಣ್ಣೀರಿನ ಕೊಡವೇ ಉರುಳಿದಂತಾಗಿತ್ತು, ಮೈಯೆಲ್ಲ ಥರ ಥರ ನಡುಗುತ್ತಿತ್ತು.

ವೇದವಲ್ಲಿ ಹೋಗಿ ಮೈಹಿಡಿದು ಅವರನ್ನು ಅಲುಗಿಸಿ ''ಪೃಷಧ್ರನೆಲ್ಲಿ''? ಎಂದು ಕೇಳಿದಾಗ ದುಃಖೋಪಹತರಾದ ಆ ವೃದ್ಧ ತಾಪಸರು ಅವರುದ್ಧಕಂಠದಿಂದ–

''ವೇದವಲ್ಲಿ ! ಇನ್ನೆಲ್ಲಿಯ ಪೃಷಧ್ರ ! ಅಂಥ ಪುಣ್ಯಾತ್ಮನನ್ನು ಇಟ್ಟುಕೊಳ್ಳಲು ಭೂಮಿಗೆ ಭಾಗ್ಯವಿಲ್ಲ.

ನಮಗೆ ದೈವವಿಲ್ಲ

ಆ ತ್ಯಾಗಿಯಾದ ಯೋಗಿಯು ಸುದೂರ ವನಾಂತರದಲ್ಲಿ–

''ವಾಸುದೇವೇ ಭಗವತಿ ಸರ್ವಾತ್ಮನಿ ಪರೇಽ ಮಲೇ
ಏಕಾಂತಿತ್ವಂ ಗೋ ಭಕ್ತ್ಯಾ ಸರ್ವಭೂತ ಸುಹೃತ್ ಸಮಃ
ಏವಂ ವೃತ್ತೋವನಂ ಗತ್ವಾ ದೃಷ್ಟ್ವಾ ದಾವಾಗ್ನಿಮುಥ್ಥಿತಂ
ತೇನೋಪಯುಕ್ತಕರಣಃ ಬ್ರಹ್ಮಪ್ರಾಪಪರಂ ಮುನಿಃ''

ಎಂದಂದು ಮೂರ್ಛಿತರಾದರು.

''ಅಯ್ಯೋ ಮಗು ಬೆಂಕಿಯ ಬಾಯಿಗೆ ಬಿದ್ದೆಯಾ'' ಎಂದಂದು ವೇದವಲ್ಲಿಯೂ ನಿಶ್ಚೇಷ್ಟಳಾಗಿ ಆಪೋದರ ಕಾಲಿನ ಮೇಲೆ ಉರುಳಿದಳು.

ಮರುದಿನ ಬೆಳಿಗ್ಗೆ ಆಶ್ರಮದ ಚಿಗರೆಗಳು ನೀವಾರ ಮುಷ್ಟಿಗಾಗಿ ಮುನಿಗಳನ್ನು ಹುಡುಕಿಕೊಂಡು ಬಂದಾಗ ಆ ಋಷಿದಂಪತಿಗಳ ಮುಖದ ಮೇಲೆ ರವಿಕಿರಣಗಳ ಜೊತೆಗೆ ಚಿರಶಾಂತಿ ತಾಂಡವವಾಡುತ್ತಿತ್ತು.

(ಮು ಗಿ ದು ದು)

ಪುಸ್ತಕ ಸಿಗುವ ಸ್ಥಳ :

ಪಂ. ಗುರುಪ್ರಸಾದಾಚಾರ್ಯ
ಪಂ. ಬದರಿಆಚಾರ್ಯ
ಪೂರ್ಣಪ್ರಜ್ಞ ವಿದ್ಯಾಪೀಠ
ಬೆಂಗಳೂರು.
ಫೋನ್ : 0836-26797143

ಮಾಧವ ಗಲಗಲಿ
ಮ. ನಂ. 159, 1ನೇ ಮುಖ್ಯ, 4ನೇ
ಅಡ್ಡರಸ್ತೆ, ರಾಮಾಂಜನೇಯ ನಗರ,
ಕೆ.ಎಸ್.ಆರ್.ಟಿ.ಸಿ. ಲೇಔಟ್,
ಬೆಂಗಳೂರು-560061.
ಇ-ಮೇಲ್ : mgalagali@gl.com

ಪಂ. ಮುರಳಿಧರಾಚಾರ್ಯ ಗಲಗಲಿ
ಮ. ನಂ. 7/5/311 ಜವಾಹರ ನಗರ,
ರಾಯಚೂರ-584101
ದೂರವಾಣಿ : 08532-240578

ವೆಂಕಟೇಶ ಮನ್ನಾರಿ
ಧಾರವಾಡ
ದೂರವಾಣಿ : 9243264064
9035405094

ಗೋಪಿನಾಥ ಗಲಗಲಿ
gopeenath@gmail.com
U.S.A

ಡಾ॥ ವೆಂಕಟೇಶನರಸಿಂಹಾಚಾರ್ಯ
ಗುಡೇಬೆಲ್ಲೂರ
ಧಾರವಾಡ
ದೂರವಾಣಿ : 9880429716

ಬೆಲೆ

ರೂ. ೧೦೦/-

$ 5.00

ಮುದ್ರಕರು :
ರಾಘವೇಂದ್ರ ಪ್ರಿಂಟರಿ,
ನೆಹರು ಸ್ಟೇಡಿಯಂ ಹತ್ತಿರ, ಹುಬ್ಬಳ್ಳಿ-೨೦.